UNIVERSAL
LIBRARY
OU_200268
UNIVERSAL
LIBRARY

...03
S52R Checked 1969 K 5015

శంకరం. రా.

రంగవల్లికలు 1955

2.7.58 P 483

12[?] 2-58 P 216

OSMANIA UNIVERSITY LIBRARY

Call No. K83/S52R Accession No. K501

Author

Title

This book should be returned on or before the date last marked below.

ಕನ್ನಡ ಕಾವ್ಯಮಾಲೆ

# ರಂಗಭೂಮಿ

ಕೆ. ಶಂಕರ

ಮೈಸೂರು
ಕಾವ್ಯಾಲಯ : : ಪ್ರಕಾಶಕರು

ಮೊದಲನೆಯ ಮುದ್ರಣ : ೧೯೫೫

K 5015

All Rights Reserved

ಎಲ್ಲ ಹಕ್ಕುಗಳನ್ನೂ ಕಾದಿರಿಸಿದೆ

ಬೆಲೆ: ರೂ ೧–೮–೦ (೩–೦–೦)

ಪ್ರಕಾಶಕರು :

ಕೂಡಲಿ ಚಿದಂಬರಂ,

ಕಾವ್ಯಾಲಯ, ಮೈಸೂರು.

ಮುದ್ರಣಕಾರರು:

ಜಿ. ಎಚ್. ರಾಮರಾವ್, ಬಿ. ಎಸ್‌ಸಿ.

ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್,

ಮೈಸೂರು

# ಅರಿಕೆ

ಇದು ರಂಗಭೂಮಿ?............ ...

ಪರದೆ ಮೇಲಕ್ಕೆದ್ದಾಗ ನಾಟಕ ಪ್ರಾರಂಭವಾಗುತ್ತದೆ. ನೋಡಿ ನಗಬಹುದು, ಅಳಬಹುದು, ಸಹಾನುಭೂತಿ ವ್ಯಕ್ತಪಡಿಸಬಹುದು ಅಥವಾ ಹಣಹಾಳು ನಿದ್ರೆಗೇಡು ಎಂದು ಗೊಣಗುತ್ತಾ ಹೊರಗೆ ಬಂದರೂ ಆಶ್ಚರ್ಯವೇನಿಲ್ಲ.

ಏನೇ ಆಗಲಿ; ಹೊರಗಿನಿಂದ ನೋಡಿದ ಮೇಲೆ ಒಳಗೇನಿದೆಯೆಂಬ ಕುತೂಹಲ ಕೆರಳದಿರುವುದಿಲ್ಲ. ದುಡ್ಡು ಕೊಟ್ಟರೂ ನೋಡಲಾರದ ರಹಸ್ಯ ಅದು.

ಅದನ್ನು ತೋರಿಸುವ ಪ್ರಯತ್ನವೇ ಈ ಕಾದಂಬರಿ.

ಅಂದಮಾತ್ರಕ್ಕೆ ಇದೇ ರಂಗಭೂಮಿಯ ಸಮಗ್ರ ಚಿತ್ರವಲ್ಲ. ಇರುವುದು ಒಂದೇ ಸಮುದ್ರವಾದರೂ, ಅದರ ಯಾವುದೋ ಒಂದು ಭಾಗದಲ್ಲಿ ನಿಂತಾಗ, ಕಣ್ಣಿಗೆ ಕಾಣುವಷ್ಟು ದೂರಮಾತ್ರ ಗೋಚರಿಸುವಂತೆ....ಇಲ್ಲಿ ರಂಗಭೂಮಿಯ ನಟೀನಟರ ಜೀವನದ ಒಂದು ಮುಖವನ್ನು ಮಾತ್ರ ಕಾಣಬಹುದು.

ಇದರ ಮತ್ತೊಂದು ಮುಖ...."ಪ್ರೇಮಪ್ರಕರಣ."

ಆ ಕಾದಂಬರಿಗೆ ವಾಚಕರಿಂದ, ವಿದ್ವಾಂಸರಿಂದ, ಹಿರಿಯ—ಕಿರಿಯ ಮಿತ್ರರಿಂದ ಬಂದ ಮೆಚ್ಚಿಗೆಯ ಮಾತುಗಳು, ಮತ್ತೂ ಬರೆಯಿರೆಂಬ ಅವರ ಪ್ರೋತ್ಸಾಹದ ಪತ್ರಗಳು ಈ "ರಂಗಭೂಮಿ...." ಹೊರಗೆ ಬರಲು ಪ್ರೇರಕ!

ಅವರೆಲ್ಲರ ಅಭಿಮಾನ, ಆಶೀರ್ವಾದ ಮತ್ತು ಪ್ರೋತ್ಸಾಹಗಳಿಗಾಗಿ ನಾನು ಕೃತಜ್ಞ.

ಮೊದಲಿನದನ್ನು ಪ್ರಕಟಿಸಿ, ಮತ್ತೊಂದನ್ನು ನಿರೀಕ್ಷಿಸಿ, ನನಗೇ ಇಲ್ಲದ ಭರವಸೆಯನ್ನು ನನ್ನಲ್ಲುಂಟುಮಾಡಿದವರು ಪೂಜ್ಯ ಚಿದಂಬರಂರವರು. ಅವರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಮತ್ತೊಂದು ಮಾತು. ಅದು—ಮೊದಲ ಪುಸ್ತಕದಲ್ಲೇ ಬರೆಯ ಬೇಕಿತ್ತು; ಆಗ ಸ್ವಾಭಿಮಾನವಾದೀತೆಂಬ ಅಂಜಿಕೆಯಾಯಿತು; ಈಗ ಕರ್ತವ್ಯವೆಂದು ಅನ್ನಿಸುತ್ತಿದೆ:

ನನ್ನ ಕನ್ನಡಕ್ಕೊಂದು ರೂಪಕೊಟ್ಟು—ಮೊದಲಿನಿಂದಲೂ ಬರೆಯುವ ಅಭಿರುಚಿಯನ್ನು ನನ್ನಲ್ಲಿ ಬೆಳೆಸಿದ ನಮ್ಮ ಪೂಜ್ಯ ತಂದೆಯವರೂ, ನಮ್ಮ ಕನ್ನಡದ ಗುರುಗಳೂ ಆದ ಕ. ನರಸಿಂಹಶಾಸ್ತ್ರಿಗಳವರಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ.

೧೫_೮_೫೫
ಶ್ರೀ ಶಾರದಾ ಕೃಷಿನಿಲಯಂ
ತೀರ್ಥಹಳ್ಳಿ.

**ಕಮುಕೋಡು ಶಂಕರ.**

# ರಂಗಭೂಮಿ

# ಮೊದಲನೆಯ ಭಾಗ

# ೧

ಆ ದಿನ!....

ಜೀವನದಲ್ಲಿ ಮರೆಯಲಾರದ ದಿನ!....

ಕಲೆಗಾಗಿ ಕಾಲೇಜನ್ನು ತೊರೆದ ಮಹಾದಿನ!....

ಶ್ರೀಧರನ ಜೀವನದಿ ದಿಕ್ಕು ತಿರುಗಿದ ಪರ್ವದಿನ!....

ರೈಲಿನೊಡನೆ, ರೈಲಿಗಿಂತಲೂ ವೇಗವಾಗಿ ಓಡುತ್ತಾ, ಭವ್ಯಭವಿಷತ್ತಿನ ಸುಂದರ ಸ್ವಪ್ನಗಳನ್ನು ಕಾಣುತ್ತಾ ಕುಣಿದಾಡುತ್ತಿತ್ತು ಅವನ ಮನಸ್ಸು.

ಶ್ರೀಧರ....ಜೇಬಿನಲ್ಲಿದ್ದ ಪರಿಚಯ ಪತ್ರವನ್ನು ಹೊರತೆಗೆದ. ತಾನು ಕಲಾವಿದನಾಗಬೇಕೆಂಬ ಬಯಕೆಗೆ ಬೆಂಬಲವಿತ್ತು ರಘುರಾಮಯ್ಯ ವಿಶ್ವಾಸದಿಂದ ಬರೆದುಕೊಟ್ಟ ಪರಿಚಯ ಪತ್ರ.

ಅದೂ ಯಾರಿಗೆ?....

ಕರ್ನಾಟಕದ ಸುಪ್ರಸಿದ್ಧ ನಟ—ಅನೇಕ ವರ್ಷಗಳಿಂದಲೂ ಕಂಪೆನಿಯನ್ನು ನಡೆಸಿಕೊಂಡು ಬಂದ ವಿಖ್ಯಾತ ಕಲಾವಿದ ದೊಡ್ಡಣ್ಣನವರಿಗೆ.

ಅಂದಮೇಲೆ ತನ್ನ ಭಾಗ್ಯಕ್ಕೆ ಮಿತಿಯುಂಟೆ?

ಅಂದೇ ಕೊನೆಯದಾಗಿ ತನ್ನ ಭವಿಷ್ಯವನ್ನು ನಿರ್ಧರಿಸಿದ್ದ. ತನ್ನಲ್ಲಿದ್ದ ಕಲೆಯ ಹಂಬಲಕ್ಕೆ ಕಾಲೇಜು ಕಹಿಯಾಗಿ ಕಾಣತೊಡಗಿತು.

ಕಾಲೇಜಿನಲ್ಲಿ ಓದಿಯಾದರೂ ಮಾಡಬೇಕೇನು ?

ಮೆಟ್ರಿಕ್ ಪರೀಕ್ಷೆ ಮುಗಿಸಿಕೊಂಡು, ತಿಂಗಳಿಗೆ ನಲವತ್ತು ರೂಪಾಯಿ ಸಂಬಳ ಪಡೆವ ಯೋಗ್ಯತೆಯುಳ್ಳ "ಗುಮಾಸ್ತ"ನಾಗಲು ಅರ್ಹನಾಗಿದ್ದಾನೆಂದು ಮೊಹರೊತ್ತಿಸಿಕೊಂಡು ಹೊರಬಿದ್ದುದು ಸಾಲದೇ ?

ಇದಕ್ಕಿಂತಲೂ ಇನ್ನೂ ಹೆಚ್ಚು ಅರ್ಹತೆ ಪಡೆಯುವ ಹುಚ್ಚು ಹಂಬಲ ತನಗೇಕೆ?

ಕಾಲೇಜಿನ ಫೀಸು—ರೈಲುಛಾರ್ಜಿಗಾಯಿತು.

ದೊಡ್ಡಣ್ಣನವರ ನಾಟಕದ ಕಂಪೆನಿ ಬೆಂಗಳೂರಿನಲ್ಲಿದೆಯೆಂದು ಶ್ರೀಧರ ಪತ್ರಿಕೆಗಳಲ್ಲಿ ಓದಿದ್ದ. ತಾನು ಉನ್ನತ ಕಲಾವಿದನಾಗಬೇಕಾದರೆ

ಅಂಥವರ ಕೈಕೆಳಗೇ ನುರಿಯಬೇಕೆಂದು ಅಪೇಕ್ಷಿಸಿದ್ದ.

ದೊಡ್ಡಣ್ಣನವರಿಗೆ ತನ್ನ ಪರಿಚಯವನ್ನು ಮಾಡಿಕೊಡುವವರು ಯಾರು? ಅದಕ್ಕಾಗಿ ಅವನು ಯೋಚಿಸುತ್ತಿರುವಾಗಲೇ ಅವನ ಸ್ನೇಹಿತ ನೊಬ್ಬ ರಘುರಾಮಯ್ಯನ ವಿಚಾರ ತಿಳಿಸಿದ್ದ.

ರಘುರಾಮಯ್ಯ ದೊಡ್ಡಣ್ಣನವರ ಕಂಪೆನಿಯಲ್ಲಿದ್ದ. ಅವನು ಎಷ್ಟು ದಿನ ಇದ್ದ? ಏನು ಮಾಡುತ್ತಿದ್ದ? ಏತಕ್ಕಾಗಿ ಬಿಟ್ಟ? ಇದಾವುದೂ ಶ್ರೀಧರನಿಗೆ ತಿಳಿದಿರಲಿಲ್ಲ. ಯಾರಾದರೂ ಸರಿಯೇ—ಅವನಿಗೆ ಬೇಕಾದದ್ದು ಪರಿಚಯ ಪತ್ರ.

ರಘುರಾಮಯ್ಯನಿಗೂ ಸಂತೋಷವಾಯಿತು.

ತಾನು ನಾಲ್ಕುಕಾಲ ಕಂಪೆನಿ ಉಪ್ಪು ಉಂಡಿದ್ದಕ್ಕೆ ಸಾರ್ಥಕವಾಯಿತು ಎಂದುಕೊಂಡ. ದೊಡ್ಡಣ್ಣನವರಿಗೊಂದು ದೀರ್ಘವಾದ ಪತ್ರವನ್ನು ಬರೆದು ಶ್ರೀಧರನ ಕೈಮೇಲಿಟ್ಟ.

ಶ್ರೀಧರನಿಗೆ ಇದೇ ಭವಿಷ್ಯದ ಅಡಿಗಲ್ಲಾಗಿತ್ತು. ಮತ್ತೆ ಮತ್ತೆ ಪತ್ರ ವನ್ನು ಓದತೊಡಗಿದ.

ವೇದಬ್ರಹ್ಮ ದೊಡ್ಡಣ್ಣನವರಿಗೆ....ನಿಮ್ಮ ಕಂಪೆನಿಯಲ್ಲಿದ್ದ ರಘು ರಾಮಯ್ಯನೆಂಬುವನು ಬೇಡಿಕೊಳ್ಳುವ ಆಶೀರ್ವಾದಗಳು........

ಆ ತರುವಾಯ ನಾವೆಲ್ಲರೂ ಕುಶಲ. ತಮ್ಮ ಕ್ಷೇಮ ಸಮಾಚಾರಕ್ಕೆ ಆಗಾಗ ಪತ್ರಬರೆಯುತ್ತಿರಬೇಕಾಗಿ ವಿನಂತಿ.

ಈ ಕಾಗದ ಬರೆಯಲು ಕಾರಣ ಏನೆಂದ್ರೆ....ಈಚೀಟಿ ತರುವ ಹುಡುಗ ನನಗೆ ತುಂಬಾ ಪರಿಚಯದವನಿದ್ದಾನೆ, ಮತ್ತು ಯೋಗ್ಯನೂ ಹೌದು.

ಪ್ರಕೃತ ಪರಿಸ್ಥಿತಿಯಲ್ಲಿ ಕಾಲೇಜನ್ನು ಬಿಟ್ಟು ಕಂಪೆನಿ ಸೇರಲು ಇಷ್ಟ ವುಳ್ಳವನಾಗಿದ್ದಾನೆ. ತಾವು ಸೇರಿಸಿ ಕೊಳ್ಳಬೇಕಾಗಿ ವಿನಂತಿ.

ನನ್ನ ಪರಿಚಯವನ್ನು ನೀವು ಮರೆತಿರಬಹುದು. ಕಾರಣ....ಕಂಪೆನಿ ಬಿಟ್ಟು ಆಗಲೇ ಐದಾರುವರ್ಷಗಳಾಗಿಹೋಯಿತು. ರೇಷ್ಮೆ ಆಫೀಸಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೇನೆ. ಈಗ ಅನುಕೂಲವಾಗಿದ್ದೇನೆ.

ನಿಮ್ಮ ಜೊತೆಯಲ್ಲಿ ನಾನಿದ್ದಾಗ ನನ್ನನ್ನು ನೀವು "ರಘು" ಅನ್ನುತ್ತಿ ದ್ದಿರಿ. ಸದಾರಮೆ ನಾಟಕದಲ್ಲಿ ನೀವು ಕಳ್ಳನನ್ನು ಮಾಡಿದಾಗ....ಒಂದು

ದಿನ ನಾನು ಕಲಹಂಸನ ಪಾರ್ಟು ಮಾಡಿದ್ದೆ. ನನ್ನ "ಸಾಬಿ" ಪಾರ್ಟಿಗೆ ನೀವು ತುಂಬಾ ಮೆಚ್ಚಿಗೆ ನೀಡಿ ಬೆನ್ನು ತಟ್ಟಿದ್ದಿರಿ.

ಆದರೇನು ಮಾಡಲಿ? ಕಲಾದೇವಿಗೂ ನನಗೂ ಕಂಕಣ ಕೂಡಿಬರಲಿಲ್ಲ. ದುರದೃಷ್ಟದಿಂದ ಕಂಪೆನಿ ಬಿಡಬೇಕಾಯಿತು.

ಈ ಹುಡುಗನಿಗೆ ದಯವಿಟ್ಟು ನಿಮ್ಮಲ್ಲಿ ಅವಕಾಶ ಕೊಡಿ. ಬಹಳ ಬುದ್ಧಿವಂತ. ಸ್ಕೂಲಿನಲ್ಲೂ ಸಹ ಚೆನ್ನಾಗಿ ನಂಬ್ರ ತೆಗೆದುಕೊಂಡು ಮೊದಲನೇ ತರಗತಿಯಲ್ಲಿ ತೇರ್ಗಡೆಯಾಗಿದ್ದಾನೆ.

ಹೆಚ್ಚೇಕೆ?....ಒಂದೇ ಮಾತಿನಲ್ಲಿ ಹೇಳುವುದಾದರೆ ಅವನೂ ನಮ್ಮವನೇ....

ದಯವಿಟ್ಟು ಉತ್ತರ ಬರೆಯಿರಿ.

ಇಂತಿ ಸಾಷ್ಟಂಗ ಪ್ರಣಾಮಗಳು
ರಘುರಾಮಯ್ಯ

ಶ್ರೀಧರನಿಗೆ ಕಾಗದ ಓದಿದಷ್ಟೂ ನಗುಬರುತ್ತಿತ್ತು. ಈಕಾಗದ ಕೊಡಬೇಕೇ ಬಿಡಬೇಕೇ ಎಂಬ ಸಂಶಯವೂ ಮೂಡದಿರಲಿಲ್ಲ. ನೋಡೋಣ ಸಮಯ ಬಂದರೆ ಕೊಡುವುದು....ನಾನೇ ಮಾತನಾಡಿ ಕೆಲಸ ಆಗುವುದಾದಲ್ಲಿ ಇದನ್ನು ಹೊರತೆಗೆಯುವುದೇ ಬೇಡ ಎಂದು ಕೊಂಡ.

ರಘುರಾಮಯ್ಯನ ಒಕ್ಕಣೆ ನಗುವಂತಿದ್ದಿತಾದರೂ, ಕನ್ನಡದಲ್ಲಿ ಅಷ್ಟರಮಟ್ಟಿಗೆ ಬರೆದಿದ್ದಾರಲ್ಲ ರೇಷನ್ ಆಫೀಸಿನ ಗುಮಾಸ್ತರು ಎಂಬ ಸಮಾಧಾನವೂ ಆಯಿತು.

ಶ್ರೀಧರ ಬೆಂಗಳೂರಿನ ನಿಲ್ದಾಣದಲ್ಲಿಳಿದ....

ದಟ್ಟವಾದ ಜನಸಂದಣಿಯಲ್ಲಿ ತೂರಿಕೊಂಡು ನುಗ್ಗುತ್ತಿರುವಾಗ, ದೂರದಿಂದಲೇ ಯಾರನ್ನೋ ಕಂಡ ಹಾಗಾಯಿತು. ಸ್ವಲ್ಪ ನಿಂತು ದೃಷ್ಟಿಸಿ ನೋಡಿದ....

"ಹೌದು!........ಅವರೇ...."

ತಾನು ಯಾರನ್ನು ಕಾಣಲಿಕ್ಕಾಗಿ ನೂರಾರು ಮೈಲಿಗಳಿಂದ ತಪಸ್ಸು ಮಾಡುತ್ತಾ ಬಂದಿದ್ದನೋ, ಅದೇ ವ್ಯಕ್ತಿ ತನ್ನ ಎದುರಿನಲ್ಲೇ ಬರುತ್ತಿದೆ. ತನ್ನ ಕಾರ್ಯ ಕೈಗೂಡುವ ಶುಭಸೂಚನೆ ಇರಬೇಕು.

ದೊಡ್ಡಣ್ಣನವರ ಸುತ್ತ ಸಣ್ಣ ಟೋಳಿಯೇ ನೆರೆದಿತ್ತು. ಅವರು ಎತ್ತ ತಿರುಗಿದರತ್ತ ಹಿಂಬಾಲಿಸುತ್ತಿತ್ತು ಈ ಟೋಳಿ. ನಿರುದ್ಯೋಗಿಗಳಂತೆ ಕಾಣುವ ಈ ತಂಡದ ಬಳಿ ಹೋದ ಶ್ರೀಧರ.

ಶ್ರೀಧರ ತಮ್ಮ ಬಳಿಯೇ ಬರುತ್ತಿರುವುದನ್ನು ಕಂಡು ಟೋಳಿಯಲ್ಲೊಬ್ಬರು ಮುಂದೆ ಬಂದರು—

"ಏನಾಗಬೇಕಿತ್ತು" —ಅವರು ಪ್ರಶ್ನಿಸಿದರು.

"ದೊಡ್ಡಣ್ಣನವರನ್ನು ಕಾಣಬೇಕು" —ಶ್ರೀಧರನೆಂದ.

"ಏಕೆ ?"

"ಸ್ವಲ್ಪ ಕೆಲಸವಿದೆ."

"ಅವರು ನಿಮಗೆ ಸಿಗುವಂತಿಲ್ಲ."

"ಎದುರಿಗೇ ಇದ್ದಾರಲ್ಲ."

"ನಿಮಗೆ ಅವರ ಪರಿಚಯವಿದೆಯೇ ?"

"ಇಲ್ಲ!....ಆದರೂ ನಾಟಕಗಳಲ್ಲಿ ನೋಡಿದ್ದೇನಾದ್ದರಿಂದ ಗುರುತು ಹಿಡಿಯಬಲ್ಲೆ. ನೀಲಿ ಕೋಟು ಹಾಕಿಕೊಂಡಿರುವವರು ದೊಡ್ಡಣ್ಣನವರಲ್ಲವೇ ?"

"ಹೌದು! ಅವರೀಗ ನಿಮ್ಮೊಡನೆ ಮಾತನಾಡುವಂತಿಲ್ಲ."

"ಕಾರಣ !"

—ಶ್ರೀಧರ ಕುತೂಹಲದಿಂದ ಕೇಳಿದ.

"ಸುಮ್ಮನೆ ಹೇಳಿದಷ್ಟು ಕೇಳಿ. ಹೊರಟುಹೋಗಿ ಮೊದಲು."

—ವ್ಯಕ್ತಿ ಬಿರುಸಾಗಿ ಮಾತನಾಡಿದ.

ಸಭ್ಯತೆಯನ್ನೇ ಅರಿಯದ ವ್ಯಕ್ತಿಯೊಡನೆ ಮಾತು ಬೆಳಸಿ ಪ್ರಯೋಜನವೇನು? ಅವನನ್ನು ಬಿಟ್ಟು ಎರಡು ಹೆಜ್ಜೆ ಮುಂದೆ ನಡೆದ ಶ್ರೀಧರ.

ದೊಡ್ಡಣ್ಣನವರ ತೀಕ್ಷ್ಣ ದೃಷ್ಟಿ ಶ್ರೀಧರನ ಕಡೆ ಹರಿಯಿತು. ಶ್ರೀಧರ ಬೆಚ್ಚಿಬಿದ್ದ.

ಉರಿಯುವ ಕೆಂಡದಂತಿದ್ದ ಆ ಕೆಂಗಣ್ಣುಗಳ ಹಿನ್ನೆಲೆಯಲ್ಲಿ, ಕಲೆ ಅಡಗಿದೆಯೆಂದು ಭಾವಿಸುವುದೂ ಕಠಿಣವಾಗಿತ್ತು. ಹಾಗಿತ್ತು ಆ ನೋಟ !

"ನಮಸ್ಕಾರ !...."

—ಶ್ರೀಧರ ಕೈಜೋಡಿಸಿ ಹೇಳಿದ.

ದೊಡ್ಡಣ್ಣನವರ ಗಮನ ಆಗಲೇ ಜೇಬಿನ ಕಡೆ ಹರಿದಿತ್ತು. ಜೇಬಿನಿಂದ ಪ್ರಯಾಸಪಟ್ಟು ಸಿಗರೇಟನ್ನು ಹೊರತೆಗೆದರು. ಅದನ್ನು ತುಟಿಯ ಮಧ್ಯೆಸೇರಿಸಿ ಪಟ್ಟಣಕ್ಕಾಗಿ ತಡಕಾಡತೊಡಗಿದರು.

"ತೆಗೆದುಕೊಳ್ಳಿ ಸಾರ್"

—ಠೋಳಿಯಲ್ಲಿದ್ದ ಒಬ್ಬರು ಬೆಂಕಿಪಟ್ಟಣವನ್ನು ಕೊಟ್ಟರು.

ದೊಡ್ಡಣ್ಣನವರು ಪಟ್ಟಣ ತೆಗೆದುಕೊಂಡರು. ಕಡ್ಡಿ ಗೀರಿದರು. ಪಟ್ಟಣ ಒಂದು ಕಡೆ ಕಡ್ಡಿಯೊಂದುಕಡೆ ಆಗಿ ಗಾಳಿಯಲ್ಲಿ ತೂರಿತ್ತು ಕೈ.

ಮತ್ತೆ ಗೀರಿದರು. ಕಡ್ಡಿ ಪಟ್ಟಣಕ್ಕೆ ತಗುಲಿ ಬೆಂಕಿ ಹತ್ತಿತ್ತು. ಪುನಃ ಅದನ್ನೇ ಗೀರಿದರು. ಹತ್ತಿದ್ದೂ ಆರಿಹೋಯಿತು. ಮತ್ತೆಷ್ಟು ಬಾರಿ ಪ್ರಯತ್ನಿಸಿದರೂ ಆ ಕಡ್ಡಿಗೆ ಬೆಂಕಿ ಹತ್ತಲಿಲ್ಲ.

ಈ ಅಧ್ವಾನವನ್ನು ನೋಡಿ ಠೋಳಿಯಲ್ಲಿದ್ದ ಇನ್ನೊಬ್ಬರು ಮುಂದೆ ಬಂದರು. ಕಡ್ಡಿ ಗೀರಿ ಸಿಗರೇಟಿಗೆ ಹಿಡಿದರು. ದೊಡ್ಡಣ್ಣನವರ ಬಾಯಿನಿಂದ ಹೊಗೆ ಹೊರಟಿತು.

ಈಗ ಶ್ರೀಧರನಿಗೆ ಅಲ್ಲಿ ನಿಲ್ಲುವುದು ಉಚಿತವೆನ್ನಿಸಲಿಲ್ಲ. ತಾನು ಮಹತ್ತಾಗಿ ಗಣಿಸಿದ ವ್ಯಕ್ತಿಯ ಮೊದಲ ದರ್ಶನ ಈ ರೀತಿಯಲ್ಲಿ ದೊರೆಯಬಹುದೆಂದು ಅವನೆಂದೂ ಎಣಿಸಿರಲಿಲ್ಲ.

ದೊಡ್ಡಣ್ಣನವರ ದೃಷ್ಟಿ ತನ್ನ ಕಡೆ ಹರಿದಾಗ ಮತ್ತೊಮ್ಮೆ ಹೇಳಿದ–

"ನಮಸ್ಕಾರ!...."

ಪ್ರಶ್ನಾರ್ಥಕ ದೃಷ್ಟಿಯಿಂದೊಮ್ಮೆ ಅವರು ಶ್ರೀಧರನನ್ನು ನೋಡಿದರು.

"ಬಹಳ ದೂರದಿಂದ ತಮ್ಮನ್ನು ಕಾಣಲು ಬಂದಿದ್ದೇನೆ...."

—ಶ್ರೀಧರ ಮಾತು ಪ್ರಾರಂಭಿಸಿದ್ದನಷ್ಟೆ. ಮುಂದೆ ಮಾತಿಗೆ ಅವಕಾಶವಿಲ್ಲದಂತೆ, ಅರಳು ಹುರಿದಂತೆ ಸ್ಫುಟವಾಗಿ ಹೇಳಿದರು ದೊಡ್ಡಣ್ಣನವರು—

"ನಾನೀಗ ಮೈಸೂರಿಗೆ ಹೊರಟಿದ್ದೇನೆ."

ಇಂತಹ ಸಮಯದಲ್ಲೂ ಅವರ ವಾಕ್‌ಶುದ್ಧಿಯನ್ನು ಕಂಡು ಬೆರಗಾದ ಶ್ರೀಧರ. ಅವರ ಮೇಲಿದ್ದ ಎಲ್ಲ ದುರ್ಭಾವನೆಗಳನ್ನೂ ಮರೆಸಿತು ಆ ಧ್ವನಿ.

ನಿರಾಶನಾಗದೆ ಮತ್ತೆ ಕೇಳಿದ—

"ನಾನೂ ಮೈಸೂರಿಗೆ ಬರಲೇ?...."

"ಬನ್ನಿ....ರಾತ್ರಿ ಬೇಡ.... ಬೆಳಗ್ಗೆ."

ದೊಡ್ಡಣ್ಣನವರು ಮುಂದೆ ಹೊರಟರು. ಶೋಲಿಯೂ ಹಿಂಬಾಲಿಸಿತು. ಎಲ್ಲರ ಹೆಜ್ಜೆಗಳೂ ತಪ್ಪು ತಪ್ಪಾಗಿ ಬೀಳುತ್ತಿದ್ದುವು.

ಶ್ರೀಧರ ಮೈಸೂರಿಗೆ ಟಿಕೆಟ್ ತೆಗೆದುಕೊಂಡ.

## ೨

ಬೆಳಗ್ಗೆ ಬೇಗನೇ ಎದ್ದ. ರಾತ್ರಿ ನಿದ್ರೆಯೂ ಬಂದಿರಲಿಲ್ಲ. ಮೈಸೂರಿಗೆ ಬಂದವನೇ ಕೊಠಡಿಯೊಂದನ್ನು ಬಾಡಿಗೆಗೆ ಪಡೆದಿದ್ದ. ನಾಳಿನ ಕನಸು ರಾತ್ರಿಯ ನಿದ್ರೆಗೆ ಭಂಗತಂದಿತ್ತು.

ಸ್ನಾನಮಾಡಿ ಬಂದು, ಅಗಸನಿಂದ ಮಡಿಕೆಯಾಗಿ ಬಂದ ಶುಭ್ರ ವಸ್ತ್ರಗಳನ್ನು ಧರಿಸಿದ. ತನ್ನ ಮುಖ ಎಂದಿಗಿಂತಲೂ ಸುಂದರವಾಗಿ ಕಾಣುವಂತೆ ಪ್ರಯತ್ನಿಸಿದ. ಮುಖ ಲಕ್ಷಣವೇ ಕಾರ್ಯ ಸಿದ್ಧಿಯ ಮೂಲವೆಂದು ಭಾವಿಸಿದ್ದ.

ಹಿಂದಿನರಾತ್ರಿ ರೈಲಿನಿಂದಿಳಿದೊಡನೆಯೇ ದೊಡ್ಡಣ್ಣನವರ ಮನೆಯೆಲ್ಲಿದೆಯೆಂದು ವಿಚಾರಿಸಿದ್ದ.

"ಮೈಸೂರು ಬ್ಯಾಂಕಿನ ಬಳಿ"—ಎಂದುತಿಳಿದು ಬಂದಿತ್ತು. ಕಾಫಿಯನ್ನು ಕುಡಿದರೂ ಸಮಯ ಮೀರಬಹುದೆಂದು ಬಗೆದು ಸರಸರನೆ ಆ ಮಾರ್ಗದಲ್ಲೇ ಮುನ್ನಡೆದ.

ಮನೆ ಅದೊಂದು ಗಲ್ಲಿಯಲ್ಲಿತ್ತು. ಮನೆಯಬಾಗಿಲು ಮುಚ್ಚಿತ್ತು. ಬೀದಿಯಬಾಗಿಲ ಕೆಳಗೇ ಚರಂಡಿಯ ನೀರು ಹರಿಯುತ್ತಿತ್ತು.

'ಮನೆಯಮುಂದೆ ವರಾಂಡವಿರಬಹುದು. ನಾಲ್ಕಾರಾದರೂ ಹೂಗಿಡಗಳಿರಬಹುದು. ಇತರ ಯಾರ ಮನೆಯೂ ಅಂಟಿಕೊಂಡಿರದೆ ಸ್ವತಂತ್ರವಾಗಿರಬಹುದು' ಎಂಬ ಶ್ರೀಧರನ ಕಲ್ಪನೆ ಮಾಯವಾಯಿತು.

ರಸ್ತೆಯಿಂದಲೇ ಮೆಟ್ಟಲು. ಮೆಟ್ಟಲಿನ ತುದಿಯಲ್ಲೇ ಬಾಗಿಲು.

ಶ್ರೀಧರನಿಗೆ ನಂಬಲಾಗಲಿಲ್ಲ. ಇಷ್ಟೊಂದು ಹೆಸರಾಂತ ಕಲಾವಿದ ಇಷ್ಟು ಸಂಕುಚಿತ ಸ್ಥಳದಲ್ಲಿ ಜೀವಿಸಬಲ್ಲನೆಂದು ಅವನ ಅಂತರಂಗ ಒಪ್ಪಲಿಲ್ಲ. ಹಾಗೆಯೇ ಮುಂದೆ ನಡೆದ. ಹಾದಿಯಲ್ಲಿ ಸುಳಿದಾಡುವವರೊಬ್ಬರನ್ನು ವಿಚಾರಿಸಿದ—

"ಇದು ದೊಡ್ಡಣ್ಣನವರ ಮನೆ ಹೌದೆ?"

"ಹೌದು. ಏಕೆ?"

"ಅವರನ್ನು ಕಾಣಬೇಕು"

"ಮನೆಗೆ ಬಂದಂತಿಲ್ಲ".

"ನಾನು ಬಂದ ರೈಲಿನಲ್ಲೇ ಬಂದರು. ಮೈಸೂರಿಗೆ ಬಂದಿದ್ದಾರೆ".

"ಅಲ್ಲಿನೋಡಿ. ಅವರ ಹೆಂಡತಿಯಿದ್ದಾರೆ ವಿಚಾರಿಸಿ"

—ದೊಡ್ಡಣ್ಣನವರ ಮನೆಯಬಾಗಿಲಕಡೆ ಸೂಚಿಸಿ ಹೇಳಿದರು.

ಮನೆಯ ಬಾಗಿಲು ಈಗ ತೆರೆದಿತ್ತು. ಪ್ರಾಯಮೀರಿದಂತೆ ಕಾಣುವ ಮಧ್ಯವಯಸ್ಸಿನ ಹೆಂಗಸು ತಂಬಿಗೆಯಲ್ಲಿ ನೀರನ್ನು ಹಿಡಿದು ಮನೆಯ ಮುಂಭಾಗದಲ್ಲಿ ಚಿಮುಕಿಸುತ್ತಿದ್ದರು. ನೆಲಹೊಸಿಲ ಮೇಲೆ ರಂಗೋಲಿಯ ಬಟ್ಟಲು ಕಾಣಿಸಿತು.

ಶ್ರೀಧರ ಬಳಿ ಸಾರಿದ. ಅವರ ಮುಖ ಸ್ಪಷ್ಟವಾಗಿ ಕಂಡಿತು.

ಆ ಮುಖದ ಮೇಲೆ ಬಿದ್ದ ಗೆರೆಗಳು ಆಳವಾದ ಹೃದಯವೇದನೆಯನ್ನು ರೂಪಿಸಿದ್ದುವು.

"ಇಂಥವರಿಗೂ ಅದೇನು ಕೊರತೆಯೋ?"

—ಶ್ರೀಧರ ಮನಸ್ಸಿನಲ್ಲೇ ಅಂದುಕೊಂಡ.

"ಅಂಥವರ ನಿಃಸ್ವಾರ್ಥ ತ್ಯಾಗಜೀವನದಿಂದಲೇ ದೊಡ್ಡಣ್ಣನವರ ವ್ಯಕ್ತಿತ್ವ ಬೆಳಕು ಕಂಡಿದೆಯೆಂದು ಅವನ ಎಳೆಯ ಮನಸ್ಸಿಗೆ ಹೊಳೆಯದಿರಲಿಲ್ಲ.

ಶ್ರೀಧರ ಅವರನ್ನು ವಿಚಾರಿಸಿದ.

"ಇಷ್ಟುಬೇಗ ಏಕೆ ಬಂದಿರಿ?"

—ಅವರು ಆಶ್ಚರ್ಯದಿಂದ ಕೇಳಿದರು.

ಶ್ರೀಧರ ಮಂಕಾದ. ಸ್ವಲ್ಪ ಮುಂಚೆ ಪಕ್ಕದ ಮನೆಯ ಗಡಿಯಾರ ಢಣ್! ಢಣ್! ಎಂದು ಎಂಟು ಬಾರಿಸಿತ್ತು. ಏನು ಹೇಳಲೂ ತಿಳಿಯದೇ ನಿಂತುಬಿಟ್ಟ. ಮತ್ತೆ ಅವರೇ ಹೇಳಿದರು—

"ಅವರಿನ್ನೂ ಎದ್ದೇ ಇಲ್ಲ".

"ಎಷ್ಟು ಹೊತ್ತಿಗೆ ಏಳುತ್ತಾರೆ?"

"ಸುಮಾರು ಹತ್ತೂವರೆ ಹನ್ನೊಂದಕ್ಕೆ ಏಳಬಹುದು".

"ಅಬ್ಬ!....ಅಷ್ಟು ಹೊತ್ತು ಅದೇನು ನಿದ್ರೆಯೋ?"

—ಎಂದು ಬಿಡುತ್ತಿದ್ದ ಶ್ರೀಧರ–ಇದೇ ಉತ್ತರವನ್ನು ಬೇರೆ

ಯಾರಾದರೂ ಕೊಟ್ಟಿದ್ದರೆ. ಅಷ್ಟರಲ್ಲೇ ಅವನ ಮನಸ್ಸಿಗೆ ಹೊಳೆಯಿತು—
"ಇದೇ ನಾಟಕದವರ ಬಾಳು"—ಅಂತ.

ಗಂಟೆ ಹನ್ನೊಂದು ಬಾರಿಸಿತು....

ಶ್ರೀಧರ ಪುನಃ ಮನೆಯ ಬಾಗಿಲಿಗೆ ಬಂದ. ಬಾಗಿಲು ತೆರೆದೇ ಇತ್ತು. ನಿಧಾನವಾಗಿ ಮೆಟ್ಟಿಲನ್ನೇರಿದ. ಬಾಗಿಲ ಬಳಿ ನಿಂತುಕೊಂಡ.

ಅಮಲ್ದಾರರ ಮನೆಯ ಮುಂದೆ ಕೈಕಟ್ಟಿಕೊಂಡು ಅಪ್ಪಣೆಗಾಗಿ ಕಾದು ನಿಂತ ಜವಾನನ ನೆನಪಾಯಿತು. ಮತ್ತೊಬ್ಬರ ಬಳಿ ಕೆಲಸ ಕೇಳಲು ಹೋಗುವಾಗ ಇಷ್ಟು ಸಂಕೋಚವಾಗಬಹುದೆಂದು ಈವರೆಗೂ ಅನ್ನಿಸಿರಲಿಲ್ಲ. ಅವನ ಸ್ವಾಭಿಮಾನ ಅವನನ್ನು ಹಿಂದಕ್ಕೆಳೆಯಿತು. ಕಲಾಭಿಮಾನ ನಿಲ್ಲಲು ಚೈತನ್ಯವನ್ನಿತ್ತಿತು.

ಮಹಡಿಯಿಂದ ದಢದಢನೆ ಇಳಿದುಬರುವ ಶಬ್ದವನ್ನು ಕೇಳಿ ತಲೆ ಯೆತ್ತಿದ ಶ್ರೀಧರ. ಬಾಗಿಲೆದುರೇ ಅಟ್ಟದಿಂದಿಳಿಯುವ ಅಟ್ಟಹಾಸವನ್ನು ನೋಡಿ ಬೆದರಿದ.

ಅದೇ ಕೆಂಗಣ್ಣು!....ಅದೇ ಬಿರುಸಿನ ನೋಟ!

ತಲೆಯ ಮೇಲಿನ ಬಿಳಿಯ ಕ್ರಾಪು ಅಸ್ತವ್ಯಸ್ತವಾಗಿ ಹರಡಿಕೊಂಡಿತ್ತು. ಪ್ರತಿನಿತ್ಯವೂ ಬಣ್ಣ ಬಳಿದು ಬಳಿದು ಕಪ್ಪಿಟ್ಟ ಕೆನ್ನೆಗಳ ಮೇಲೆ ದಟ್ಟವಾಗಿ ಮೊಳೆಯುತ್ತಿತ್ತು ಬಿಳಿಯ ಕೂದಲು. ಒಳ ಅಂಗಿ ಚಡ್ಡಿಗಳನ್ನು ಮಾತ್ರ ಧರಿಸಿದ ಈ ವ್ಯಕ್ತಿತ್ವ ಶ್ರೀಧರನಲ್ಲಿದ್ದ ಎಲ್ಲ ಕಲ್ಪನೆಗಳನ್ನೂ ಮರೆ ಮಾಡಿಸಿ ಬಿಟ್ಟಿತ್ತು.

ಶ್ರೀಧರ ಪ್ರಯತ್ನಪೂರ್ವಕವಾಗಿ ಕೈಜೋಡಿಸಿದ.

"ಯಾರು ನೀವು?"—ಅವರೆಂದರು.

ಧ್ವನಿ ಗಡುಸಾಗಿತ್ತು. ಈ ಪ್ರಶ್ನೆಯನ್ನೇ ನಿರೀಕ್ಷಿಸಿರಲಿಲ್ಲ ಶ್ರೀಧರ. ಅವನ ಕೈಬೆರಳುಗಳು ತನ್ನಷ್ಟಕ್ಕೆ ತಲೆಯ ಕೂದಲನಡುವೆ ಆಡತೊಡಗಿದುವು.

"ನಿನ್ನೆ ತಮ್ಮನ್ನು ಕಂಡಿದ್ದೆ".

"ಎಲ್ಲಿ?"

"ಬೆಂಗಳೂರು ರೈಲ್ವೆ ಸ್ಟೇಷನ್ನಿನಲ್ಲಿ."

"ಹಾಗೋ!....ಏನು ವಿಚಾರ?"

ಶ್ರೀಧರನಿಗೆ ಮಾತು ಹೊರಡಲಿಲ್ಲ. ಕಾಗದ ಕೊಡದೆ ವಿಧಿಯಿಲ್ಲ ವಾಯಿತು—

"ತಮ್ಮ ಪರಿಚಯದವರೊಬ್ಬರು ಒಂದು ಕಾಗದ ಕೊಟ್ಟಿದ್ದಾರೆ. ರಘು ರಾಮಯ್ಯ ಅಂತ ಅವರ ಹೆಸರು."

"ನನಗೆ ಅವರ ಪರಿಚಯವೇ ಇಲ್ಲ."

"ಚಿಂತೆಯಿಲ್ಲ. ಈ ಕಾಗದವನ್ನಾದರೂ ನೋಡಿ."

"ನನಗೆ ಕಾಗದ ಗೀಗದ ಒಂದೂ ಬೇಕಾಗಿಲ್ಲ. ನೀವು ಏಕೆ ಬಂದಿದ್ದೀರಿ ಅಂತ ತಿಳಿಸಿಬಿಡಿ."

ಶ್ರೀಧರ ಸುಧಾರಿಸಿಕೊಳ್ಳಬೇಕಾಯಿತು. ನಡುಗುವ ಧ್ವನಿಯಲ್ಲಿ ಕೇಳಿಕೊಂಡ—

"ನನಗೆ ತಮ್ಮಲ್ಲಿ ಕೆಲಸ ಮಾಡುವ ಅವಕಾಶಕೊಡಬೇಕು."

"ಇಷ್ಟೇ ವಿಚಾರ ತಾನೆ...."—ದೊಡ್ಡಣ್ಣನವರು ತಾತ್ಸಾರದಿಂದ ನುಡಿದರು—"ನಾನು ಕಂಪೆನಿ ನಿಲ್ಲಿಸಿಬಿಡುತ್ತೇನೆ, ಸದ್ಯ".

"ತಾವು ಅಷ್ಟೊಂದು ಬೇಸರ ಪಟ್ಟುಕೊಂಡು ಮಾತನಾಡಬಾರದು. ಮೊದಲಿನಿಂದಲೂ ನನಗೆ ಕಲೆಯಲ್ಲಿ ಅಭಿಮಾನ...."

"ಇರಬಹುದು. ನಿಮ್ಮ ಅಭಿಮಾನ ಕಟ್ಟಿಕೊಂಡು ನಾನೇನು ಮಾಡಲಿ. ನನಗೀಗ ಇರೋ ಜನಾನೇ ಬಿಡೋಣ ಅನ್ನಿಸಿದೆ."

"ತಮ್ಮಂಥವರ ಕೈಕೆಳಗೆ ಕಲಿಯಬೇಕು ಅಂತ ನನ್ನ ಇಷ್ಟ."

ಕಲಿಯೋದು ಹೆಚ್ಚಾಗಿಯೇ ಕಲ್ತೋರೆಲ್ಲ ಮರೆಯೋ ಹಾಗೆ ಆಗ್ತಾ ಇದೆ ಈಗ."

"ತಾವು ದೊಡ್ಡ ಮನಸ್ಸು ಮಾಡಬೇಕು."

"ತಾವು ದಯವಿಟ್ಟು ದಯಮಾಡಿಸಬೇಕು."

ಶ್ರೀಧರನಿಗೆ ಮುಖದ ಮೇಲೆ ಮಣ್ಣೆರಚಿದಂತಾಯಿತು. ಅವರ ಅಸಭ್ಯವರ್ತನೆಯಿಂದ, ಕಠಿಣ ಮನೋವೃತ್ತಿಯಿಂದ ಅವನ ಮನಸ್ಸು ಮುರಿಯಿತು. ಸರಸರನೆ ಮೆಟ್ಟಿಲನ್ನಿಳಿದು ರಸ್ತೆಗೆ ಬಂದ. ಮನಸ್ಸು ಅನ್ನುತ್ತಿತ್ತು—

"ನಿಮ್ಮ ಕಲೆಗೆ ನನ್ನ ನಮಸ್ಕಾರ! ನಿಮ್ಮ ನಡತೆಗೆ ಧಿಕ್ಕಾರ!"

## ೩

ಮೈಸೂರಿಗಂತೂ ಬಂದಿದ್ದಾಯಿತು. ಮನಸ್ಸಿನ ಕಲ್ಪನೆಗಳೂ ಮಾಯವಾಯಿತು. ಮುಂದೇನು ಮಾಡಬೇಕೆಂಬ ಪ್ರಶ್ನೆ ಮಾತ್ರ ಉಳಿಯಿತು. ತಿಂಗಳಿಗಾಗುವ ಊಟದ ಹಣ ಮತ್ತು ಕಾಲೇಜಿನ ಫೀಸು ಇನ್ನೆಷ್ಟು ದಿನಗಳಿಗೆ ಬಂದೀತು?

ಕಾಲೇಜಿಗೇ ಹಿಂದಿರುಗಲೇ? ಕಲಿಗಾಗಿ ಕಂಕಣತೊಟ್ಟು ಇಷ್ಟು ಜಾಗ್ರತೆ ಸೋತು ಓಡುವುದೇ?....ಛೆ!....ನಾಚಿಕೆಗೇಡು.

ಮನೆಗೆ ಕಾಗದ ಬರೆಯಲೇ?....

ಕೇಳಿದಷ್ಟು ಕಳಿಸಲು ಕೂಡಿಟ್ಟ ಆಸ್ತಿಯಿಲ್ಲ. ಅತ್ತುಕರೆದು ಅಲ್ಪಸ್ವಲ್ಪ ತರಿಸಿಕೊಳ್ಳಬಹುದಾದರೂ, ಅದರಿಂದ ತನಗಾಗುವ ಉಪಕಾರಕ್ಕಿಂತಲೂ ಮನೆಯವರಿಗಾಗುವ ಹಿಂಸೆಯೇ ಹೆಚ್ಚು.

ದುಡಿಯುವ ಗಂಡಸಾಗಿ ಮನೆಗೇಕೆ ಕೈಯೊಡ್ಡಬೇಕು. ತನಗೆ ಅನುಕೂಲವಾಗುವ ಯಾವುದಾದರೊಂದು ಕೆಲಸವನ್ನು ಸದ್ಯಕ್ಕೆ ನೋಡಿಕೊಂಡರಾಯಿತು.

ರಸ್ತೆಯ ಮೇಲೆ ನಡೆಯುವಾಗೊಮ್ಮೆ ಶ್ರೀಧರನ ಕಣ್ಣು ಪಕ್ಕದಲ್ಲಿರುವ ಪತ್ರಿಕೆಗಳ ಅಂಗಡಿಯತ್ತ ಹೊರಳಿತು.

ಬಣ್ಣಬಣ್ಣದ ಮುಖಚಿತ್ರಗಳು ಅವನನ್ನು ಅಂಗಡಿಯಬಳಿ ಆಕರ್ಷಿಸಿದುವು.

"ಏನು ಕೊಡಲಿ ಸಾರ್?"

—ಪತ್ರಿಕೆಯವನು ಕೇಳಿದ.

"ಸ್ವಲ್ಪ ಇರಿ....ನೋಡಿ ಹೇಳುತ್ತೇನೆ".

"ತಾಯಿನಾಡು....ವಿಶ್ವಕರ್ನಾಟಕ....ದೇಶಬಂಧು."

"ಅವೆಲ್ಲ ಓದಿಬಿಟ್ಟದ್ದೇನೆ ಬೆಳಿಗ್ಗೆ."

"ಪ್ರಜಾಮತ....ಚಿತ್ರಗುಪ್ತ".

"ಅದೂ ಹಳತಾಗಿದೆ".

"ವಿನೋದ...."

ಚಕಿತನಾದ ಶ್ರೀಧರ. ಈ ಹೆಸರನ್ನೇ ಅವನು ಕೇಳಿರಲಿಲ್ಲ. ಪತ್ರಿಕೆಯನ್ನೂ ನೋಡಿರಲಿಲ್ಲ.

"ತೆಗೆದುಕೊಳ್ಳಿ ಸಾರ್! ಮೈಸೂರಲ್ಲೇ ಪಬ್ಲಿಷ್ ಆಗುತ್ತೆ, ಕೇವಲ ನಾಲ್ಕಾಣೆ!....ಬರೇ ಫಿಲಂ ನ್ಯೂಸ್!"

"ಮೈಸೂರಿನಲ್ಲೇ ಪಬ್ಲಿಷ್ ಆಗುತ್ತಿದೆ!....ಅದೂ ಫಿಲಂ ನ್ಯೂಸ್."

—ಅದು ಹೇಗಿರುತ್ತೆಯೋ ಎಂದು ಕುತೂಹಲವಾಯಿತು ಶ್ರೀಧರನಿಗೆ. ನಾಲ್ಕಾಣೆಯನ್ನು ಕೊಟ್ಟು ಪತ್ರಿಕೆ ಕೊಂಡುಕೊಂಡ.

ಹೊರಗೆ, ಒಳಗೆ, ಮುಂದೆ, ಹಿಂದೆ ಪದೇಪದೇ ತಿರುಗಿಸಿನೋಡಿದ....

"ಹಾಲಿವುಡ್ ತಾರೆಯ ಮನೆಯಲ್ಲಿ ಐವತ್ತು ಪೌಂಡುಕ ಳ್ಳತನ! ....ಜಪಾನಿನಲ್ಲಿ ನಾಯಿಗಳ ಸ್ವಾಮಿನಿಷ್ಠೆ!...."ಮುಂತಾದ ಶಿರೋನಾಮೆಗಳ ಕೆಳಗಡೆ ಚಿತ್ರಿತವಾದ ಅದ್ಭುತವಿಚಾರಗಳು ತುಂಬಿ ಕೊಂಡಿದ್ದವು ಪತ್ರಿಕೆಯ ತುಂಬಾ.

ಊದುಬತ್ತಿ ಜಾಹೀರಾತುಗಳ ನಡುವೆ "ಬೇಕಾಗಿದ್ದಾರೆ" ಎಂಬ ದಪ್ಪ ದಪ್ಪ ಅಕ್ಷರಗಳನ್ನು ನೋಡಿ, ಓಡುವ ಕಣ್ಣುಗಳನ್ನು ತಡೆಹಿಡಿದ—

"ನಮ್ಮ ಕಛೇರಿಯಲ್ಲಿ ಕೆಲಸಮಾಡಲು ಯೋಗ್ಯರಾದ ವಿದ್ಯಾವಂತ ತರುಣರು ಬೇಕಾಗಿದ್ದಾರೆ. ಉಚಿತಸಂಭಾವನೆ. ಕೂಡಲೇ ಬಂದು ಕೆಳಕಂಡ ವಿಳಾಸಕ್ಕೆ ಭೇಟಿಯಾಗಿ—

ಸಂಪಾದಕ....ವಿನೋದ....ಮೈಸೂರು."

ಕೊಟ್ಟನಾಲ್ಕಾಣೆ ಈಗ ದಕ್ಕಿತು. ಅವನಿಗೆ ಬೇಕಾದ್ದು ಸಿಕ್ಕಿತು. ಸಂಪಾದಕರ ಕಛೇರಿಯ ಕಡೆ ತಿರುಗಿದ.

# ೪

ಅದೊಂದು ಹಳೆಯ ಮಹಡಿಯಮನೆ. ಮನೆಯೆದುರಿನ ಕಂಬಗಳು ಟಿಪ್ಪೂಸುಲ್ತಾನನ ಅರಮನೆಯಿಂದ ಕದ್ದುತಂದು, ಅದೇರಾತ್ರಿಯೇ ಅವಸರದಿಂದ ಜೋಡಿಸಿದಂತಿತ್ತು. ಮಹಡಿಯ ಮುಂಭಾಗದ ಕಟಕಟೆಯ ಮೇಲೆ—

"ವಿನೋದ....ಸಚಿತ್ರಸಪ್ತಾಹಿಕ"—ದ ಬೋರ್ಡು ತೂಗಾಡುತ್ತಿತ್ತು.

ಯಾರನ್ನಾದರೂ ಕೇಳಿ ಒಳಗೆ ಹೋಗೋಣವೆಂದು ಸ್ವಲ್ಪ ಸಮಯ ಶ್ರೀಧರ ಬಾಗಿಲಿನಲ್ಲೇ ನಿಂತ. ಯಾರೂ ಬರುವಸೂಚನೆಯೇ ಕಾಣಲಿಲ್ಲ.

ಪತ್ರಿಕಾಕಛೇರಿ ಒಂದು ಸಾರ್ವಜನಿಕ ಸ್ಥಳ. ಅನೇಕರು ಬಂದು ಹೋಗುತ್ತಾರಾದ್ದರಿಂದ ತಾನು ಒಳಗೆ ಹೋಗುವುದರಲ್ಲಿ ಯಾವ ಅಪರಾಧವೂ ಇಲ್ಲವೆಂದು ಒಳಗೆ ದಾಟಿದ.

ಕತ್ತಲು ಕತ್ತಲಾದ ಈ ವಿಶಾಲವಾದ ನಡುಮನೆ ನಿರ್ಜನವಾಗಿದ್ದುದು ಮಾತ್ರವಲ್ಲದೆ ಭಯಂಕರವಾಗಿಯೂ ಇತ್ತು. ಎತ್ತ ತಿರುಗಿದರೂ ಏನೂ ಕಾಣಿಸುತ್ತಿರಲಿಲ್ಲ. ಶೂನ್ಯತೆಯ ರುದ್ರತೆ ಎದೆನಡುಗಿಸುವಂತಿತ್ತು.

ಮೇಲುಗಡೆ ಜೇಡರಬಲೆಗಳು. ಕೆಳಗಡೆ ದಪ್ಪನಾದ ಧೂಳು. ಶ್ರೀಧರ ಬಾಗಿಲು ಕಡೆ ತಿರುಗಿ ನೋಡಿದ—ತಾನು ಬಂದಷ್ಟು ದೂರ ತನ್ನ ಹೆಜ್ಜೆಗಳ ಅಚ್ಚು ನೆಲದ ಮೇಲೆ ಮುದ್ರಿತವಾಗಿತ್ತು.

ಇದು ಭೂತದ ಮನೆಯೋ ಏನೋ?....ಇದರಲ್ಲಿ ಈ ಸಂಪಾದಕರು ಎಲ್ಲಿ ಅಡಗಿದ್ದಾರೆಂದು ಹುಡುಕಬೇಕು. ಯಾರನ್ನೂ ಕೇಳದೇ ಮುಂದೆ ಹೋಗುವುದು ಯೋಗ್ಯವಲ್ಲವೆಂದು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ, ಸದ್ದಿಲ್ಲದೆ ಹೇಗೆ ಹೋದನೋ ಹಾಗೆಯೇ ಹಿಂದಿರುಗುತ್ತಿದ್ದ.

"ಯಾರಪ್ಪ ಅದು?........"

ಮನೆಯಲ್ಲಿ ಎಲ್ಲಿಂದಲೋ ಯಾರೋ ಕೂಗಿದಂತಾಯಿತು. ಅನೇಕ ವರುಷಗಳ ಗೂರಲುವ್ಯಾಧಿಯಿಂದ ನರಳಿದಂತೆ ತೋರುವ ಈ ಧ್ವನಿ ಬಂದ ದಿಕ್ಕಿನಲ್ಲಿ ಶ್ರೀಧರ ಕಣ್ಣುಗಳನ್ನು ಹೊರಳಿಸಿದ.

"ವಿನೋದ ಪತ್ರಿಕೆ ಆಫೀಸು ಇದೇಯೇನು?"

"ಆ್ಞ.....ಏನಂದ್ರಿ?"—ಪುನಃ ಅದೇ ಧ್ವನಿ.

"ಪೇಪರ್ ಆಫೀಸು ಇಲ್ಲಿ ಎಲ್ಲಿದೆ ಅಂತ ಕೇಳ್ದೆ"

—ಮೊದಲಿಗಿಂತಲೂ ಗಟ್ಟಿಯಾಗಿ ಕೇಳಿದ ಶ್ರೀಧರ.

"ಇಲ್ಲೇ ಮಹಡಿ ಮೇಲಿದೆ".

"ಅಲ್ಲಿಗೆ ಹೋಗೋದಕ್ಕೆ ದಾರಿ?"

"ಇಲ್ಲೆಲ್ಲೂ ಇಲ್ಲ. ಬಲಗಡೆ ಪಕ್ಕದಲ್ಲಿ ಓಣಿಯಿದೆ. ಅಲ್ಲಿಂದ ಹೋಗಿ ನೋಡಿ ಮೆಟ್ಟಲು ಕಾಣಿಸುತ್ತೆ"

ಶ್ರೀಧರ ಮನೆಯಿಂದ ಹೊರಗೆಬಂದ.

* * * *

ಈ ಮೈಸೂರುನಗರ ರಾಜಧಾನಿಯೂ ಹೌದು, ಕಿಷ್ಕಿಂಧಾ ಪಟ್ಟಣವೂ ಹೌದು ಎನ್ನಿಸಿತು ಈಓಣಿಯಲ್ಲಿ ಹಾದು ಹೋಗುವಾಗ. ಎರಡೂ ಸಾಲಿನ ಮನೆಗಳ ಕೊಳಕುನೀರಿನಿಂದ ಸಕಲಚರಾಚರ ಸೂಕ್ಷ್ಮಜಂತುಗಳ ಆವಾಸ ಸ್ಥಾನವಾಗಿತ್ತು ಆ ಓಣಿ. ತನ್ನ ಕರವಸ್ತ್ರವನ್ನು ಮೂಗಿಗೆ ಅಡ್ಡಲಾಗಿ ಹಿಡಿದು ಮುಂದುವರಿದ. ಮೆಟ್ಟಲನ್ನೇರಿ ಮಹಡಿಗೆ ಬಂದಾಗ ಇಷ್ಟೂ ಹೊತ್ತು ಬಿಗಿಹಿಡಿದ ಉಸಿರಿಗೆ ಸ್ವಾತಂತ್ರ್ಯ ಕೊಡುವಂತಾಯಿತು.

ಸಂಪಾದಕರು ಏನನ್ನೋ ಬರೆಯುತ್ತಿದ್ದರು. ಅವರ ಮೇಜಿನ ಮೇಲೆ ಅನೇಕ ಕಾಗದಗಳ ನಡುವೆ "Editor" ಅನ್ನುವ ಬೋರ್ಡು ಕಾಣಿಸಿ ಕೊಳ್ಳುತ್ತಿತ್ತು. ಇಲ್ಲಿಯವರೆಗೂ ಬರಲು ಶ್ರೀಧರನಿಗೆ ಯಾರ ತಡೆಯೂ ಇರಲಿಲ್ಲ.

ಕೊಠಡಿಯ ಬಾಗಿಲ ಬಳಿ ಬಂದು ನಿಂತುಕೊಂಡ.

ಸಂಪಾದಕರು ತಲೆಯೆತ್ತಿದರು. "ಬನ್ನಿ" ಎಂದು ಸಂಜ್ಞೆ ಮಾಡಿದರು.

ಶ್ರೀಧರ ಅವರ ಬಳಿ ಹೋದ. "ಕುಳಿತುಕೊಳ್ಳಿ"—ಎನ್ನುವಷ್ಟು ಧಾರಾಳ ಅವರಲ್ಲಿರಲಿಲ್ಲ.

ಶ್ರೀಧರ ನಿಂತೇ ಇದ್ದ. ಸ್ವಲ್ಪ ಹೊತ್ತಿನನಂತರ ಸಂಪಾದಕರು ತಲೆ ಯೆತ್ತಿದರು—"ಏನು ಬಂದಿರಿ?"

—ಅವರು ಪ್ರಶ್ನಿಸಿದರು.

"ಈವಾರದ ತಮ್ಮ ಪತ್ರಿಕೆಯಲ್ಲಿನ ಜಾಹೀರಾತನ್ನು ನೋಡಿದೆ".

"ನೀವೂ ಏನಾದ್ರೂ ಜಾಹೀರಾತು ಕೊಡುತ್ತೀರೇನು?....ನಿಂತೇ ಇದ್ದೀ

ರಲ್ಲ ಕುಳಿತುಕೊಳ್ಳಿ".

—ಈಗ ಸಂಪಾದಕರಿಗೆ ಸೌಜನ್ಯತೆಯ ಅರಿವಾಯಿತು.

"ತಮ್ಮಲ್ಲಿ ಕೆಲಸ ಖಾಲಿಯಿದೆ ಅಂತ ಓದಿದೆ."

ಸಂಪಾದಕರ ಮುಖ ಪೆಚ್ಚಾಯಿತು. ಜಿಗುಪ್ಸೆಯಿಂದ ಹೇಳಿದರು—

"ಕೆಲ್ಸ ಇರೋದೇನೋ ನಿಜ. ಆದರೆ ನಿಮ್ಮಂಥ ನ್ಯೂ-ಹ್ಯಾಂಡುಗಳಿಂದ ಪ್ರಯೋಜನವಿಲ್ಲ ನನಗೆ."

"ತಮಗೆ ತೃಪ್ತಿಯಾಗುವಂತೆ ಕೆಲಸ ಮಾಡುತ್ತೇನೆ."

"ಇಂಗ್ಲೀಷ್ ಬರುತ್ತೋ?"

"ಕಾಲೇಜಿನ ಮೆಟ್ಟಲು ಹತ್ತಿ ಇಳಿದಿದ್ದೇನೆ".

"ಕನ್ನಡದಲ್ಲಿ ಕಾವ್ಯಭಾಷೆಯ ಅಭ್ಯಾಸವಿದೆಯೋ?"

"ಕನ್ನಡ.... ನನ್ನ ಮೆಚ್ಚಿನ ವಿಷಯ".

ಸಂಪಾದಕರು ಸ್ವಲ್ಪಹೊತ್ತು ತಮ್ಮ ಲೇಖನಿಯನ್ನು ಮೇಲ್ದಿವಿಯ ಮಧ್ಯೆ ಆಡಿಸುತ್ತಾ ಕುಳಿತರು. ನಂತರ ಕೇಳಿದರು—

"ಹಾಲಿವುಡ್ ತಾರೆ ಗ್ರೇಟಾಗಾರ್ಬೋ ಅಭಿನಯಿಸಿದ ಮೊದಲನೆಯ ಚಿತ್ರ ಯಾವುದು?"

ಪ್ರೈಮರಿ ಸ್ಕೂಲಿನಲ್ಲಿ ದಪ್ಪ ರುಮಾಲಿನ ಮೇಷ್ಟರು ಭೂಗೋಳದ ಪ್ರಶ್ನೆ ಕೇಳಿದಾಗಲೂ ಇಷ್ಟುಗೋಳಾಗಿರಲಿಲ್ಲ ಶ್ರೀಧರನಿಗೆ. ಅವನು ಪೆಚ್ಚಾಗಿ ಹೇಳಿದ—

"ನನಗೆ ಗೊತ್ತಿಲ್ಲ".

ಸಂಪಾದಕರ ಮುಖದ ಮೇಲೆ ಗೆಲುವಿನ ಬೆಳಕುಮೂಡಿತು. ಮತ್ತೆ ಕೇಳಿದರು—

"ರೀಟಾ ಹೇವರ್ತಳಿಗೆ ಇದು ಎಷ್ಟನೆಯ ಮದುವೆ?"

"ಅದೂ ನನಗೆ ತಿಳಿಯದು".

"Nonsense!....Worldly Knowledge ಏ.... ಇಲ್ಲ".

ಶ್ರೀಧರ ಉತ್ತರ ಕೊಡಲಿಲ್ಲ.

"ನಿಮಗೆ ಪ್ರಪಂಚಾನೇ ಗೊತ್ತಿಲ್ಲ. ಹೋಗಲಿ ಬಿಡಿ ನಮ್ಮ ದೇಶದ ವಿಚಾರವನ್ನಾದ್ರೂ ತಿಳಿದು ಕೊಂಡಿದೀರಾ ನೋಡೋಣ—

—ಲೀಲಾ ಚಟ್ನೀಸಳಿಗೆ ಎಷ್ಟು ಜನ ಮಕ್ಕಳು?"

"ಗೊತ್ತಿಲ್ಲ".

"ಗೊತ್ತಿಲ್ಲ.......ಕನ್ನಡ ಕನ್ನಡ ಅಂತ ಒದ್ದಾಡ್ತೀರಲ್ಲ ಕನ್ನಡಿಗರ ವಿಚಾರವಾದ್ರೂ ತಿಳಿದಿದೆಯೇ?"

"ಅಲ್ಪ ಸ್ವಲ್ಪ ತಿಳಿದುಕೊಂಡಿದ್ದೇನೆ".

"ಕನ್ನಡದಲ್ಲಿ ತಯಾರಾದ ಮೊದಲಚಿತ್ರ ಯಾವುದು?"

"ತಿಳಿಯದು".

"ಸುಬ್ಬಯ್ಯ ನಾಯ್ಡು ಎಲ್ಲಿದ್ದಾರೆ? ಏನುಮಾಡ್ತಾ ಇದ್ದಾರೆ?"

"ಗೊತ್ತಿಲ್ಲ".

"ಸಂಸಾರ ನೌಕ ಫೇಮ್, ಮೀನಾಕ್ಷಿಮಧುಗಿರಿ ಗೊತ್ತೆ?"

"ಗೊತ್ತು."

—ಶ್ರೀಧರ ಉತ್ಸುಕತೆಯಿಂದ ಹೇಳಿದ.

"Very good. ಅದನ್ನಾದರೂ ತಿಳಿದು ಕೊಂಡಿದ್ದೀರಲ್ಲ."

—ಸಂಪಾದಕರು ಮೇಜಿನ ಮೇಲೆ ಗುದ್ದಿದರು.

"ಅವಳೀಗ ಎಲ್ಲಿದ್ದಾಳೆ?...."

"ಅದುಮಾತ್ರ ಗೊತ್ತಿಲ್ಲ. ನಾನು ಅವರನ್ನು ಸಿನಿಮಾದಲ್ಲಿ ನೋಡಿದ್ದೇನೆ ಅಷ್ಟೆ."

"ಕಾಲೇಜು ಓದಿದ್ದೇನೆ ಅಂತೀರಾ!....ಏನೂ ಗೊತ್ತಿಲ್ವಲ್ರಿ ನಿಮಗೆ."

"ಕಾಲೇಜಿನಲ್ಲಿ ಇದನ್ನೆಲ್ಲಾ ಹೇಳಿಕೊಡೊಲ್ಲ"

—ಅನ್ನಬೇಕು ಅನ್ನಿಸಿತು ಶ್ರೀಧರನಿಗೆ. ಅದು ಉದ್ಧಟತನವಾದೀತೆಂದು ಸುಮ್ಮನಾದ.

"ಇವೆಲ್ಲ ವಿಚಾರಗಳನ್ನು ತಿಳಿದುಕೊಳ್ಳುವ ಅಗತ್ಯವಿದೆ ಅಂತ ನನಗೆ ಅನ್ನಿಸಿರಲಿಲ್ಲ. ಅಗತ್ಯವಿದ್ದರೆ ತಿಳಿದು ಕೊಳ್ಳುವ ಪ್ರಯತ್ನ ಮಾಡುತ್ತೇನೆ."

"ಎಷ್ಟಾದರೂ ನಿಮಗೆ ಜನರಲ್ ನಾಲೆಡ್ಜೇ ಸಾಲದು. ಕಾಲೇಜಿನ ಹುಡುಗರು ಎಂದರೆ ಎಷ್ಟು ಚುರುಕಾಗಿರುತ್ತಾರೆ. ಇಂತಹ ಪ್ರಶ್ನೆಗಳಿಗೆ ಸಟ ಸಟನೆ ಉತ್ತರ ಕೊಟ್ಟುಬಿಡುತ್ತಾರೆ".

"ಈ ವಿಷಯಗಳಲ್ಲಿ ನನ್ನ ಅನುಭವ ಕಡಿಮೆ ಅಂತ ಒಪ್ಪಿಕೊಳ್ಳುತ್ತೇನೆ."

"ನಮಗೆ ಬೇಕಾಗಿರೋದೆಲ್ಲ ಇಂತಹ ವಿಚಾರಗಳೇ. ಅದೂ ನಮ್ಮ ಪತ್ರಿಕೆ ಕೇವಲ ಚಲನಚಿತ್ರಗಳಿಗಾಗಿಯೇ ಮೀಸಲಾಗಿರೋದು. ಕಲಾ ಸೇವೆಯೇ ನಮ್ಮ ಧ್ಯೇಯ!

ಯಾವಯಾವ ನಟರು ಯಾರ ಯಾರನ್ನ 'Love' ಮಾಡ್ತಾ ಇದ್ದಾರೆ.? ನಟಿಯರುಗಳ ಸ್ಪೆಷಲ್ ಟೇಸ್ಟ್ ಯಾವುದು? ಅಡಿಗೆ ಮಾಡೋದಕ್ಕೆ ಬರುತ್ತೆಯೇ? ........ ಕಸೂತಿ ಕಲ್ತಿದಾರೆಯೇ? ಮದುವೆ ಮಾಡಿಕೊಳ್ಳೊ ಮನಸ್ಸಿದೆಯೇ?....

—ಅಂತ ತಿಳಿದುಕೊಂಡು ಅವೆಲ್ಲದರ ಮೇಲೆ 'ರಿವ್ಯೂ' ಬರೆಯಬೇಕು."

"ಅವನ್ನೆಲ್ಲಾ ಅಭ್ಯಾಸ ಮಾಡಿಕೊಳ್ಳುತ್ತೇನೆ".

"ಒಳ್ಳೆಯದು, ನಿಮಗೆ ಮದುವೆ ಆಗಿದೆಯೇ?"

"ಇಲ್ಲ".

"ಮಕ್ಕಳು?"

ಶ್ರೀಧರ ಅವಾಕ್ಕಾದ. ಮತ್ತೊಮ್ಮೆ ಹೇಳಿದ—

"ನನಗೆ ಮದುವೆಯೇ ಆಗಿಲ್ಲ".

"ಸಾರಿ! ಏನೋ ಯೋಚನೆಯಲ್ಲಿ ಕೇಳಿಬಿಟ್ಟೆ. ಹೋಗಲಿ ಬಿಡಿ. ಈಗ ನೀವು ಎಲ್ಲಿದ್ದೀರಿ ?"

"ಬೇರೆ ರೂಮು ಮಾಡಿ ಕೊಂಡಿದ್ದೇನೆ".

"ಊಟಕ್ಕೆ?"

"ತಿಂಗಳ ಮಟ್ಟಿಗೆ ಬೇರೆ ವ್ಯವಸ್ಥೆ ಮಾಡಿ ಕೊಂಡಿದ್ದೇನೆ."

"ಒಳ್ಳೆಯದೇ ಮಾಡಿದಿರಿ. ಸಧ್ಯಕ್ಕೆ ಈ ಒಂದು ತಿಂಗಳು ನನ್ನ ಆಫೀಸಿನಲ್ಲಿ ಕೆಲಸಮಾಡಿಕೊಂಡಿರಿ. ಇದು 'ಪ್ರೊಬೇಷನರಿ ಪೀರಿಯಡ್'. ಕ್ವಾಲಿಟಿ ಆಫ್ ವರ್ಕ್ ತಿಳಿದುಕೊಂಡು ನಂತರ ಸಂಬಳ ನಿರ್ಧರಮಾಡೋಣ....ಹೇಗೆ ?"

"ಕೆಲಸ ಖಾಯಂ ಆಗುವುದಾದರೆ ಪ್ರಯತ್ನಿಸುತ್ತೇನೆ."

"ಚೆನ್ನಾಗಿಮಾಡಿದರೆ ಖಾಯಂ ಖಂಡಿತ. ನಾಳೆಯಿಂದಲೇ ಬಂದು ಬಿಡಿ."

"ಆಗಲಿ."

—ಎಂದು ಒಪ್ಪಿಕೊಂಡು ಹಿಂದಿರುಗಿದ ಶ್ರೀಧರ. ಸಂಬಳದ ವಿಚಾರ ಹೇಗೂ ಇರಲಿ ಕನ್ನಡದ ಸೇವೆ ಮಾಡುವ ಅವಕಾಶ ಸಿಕ್ಕಿದ್ದಕ್ಕಾಗಿ ಸಮಾಧಾನಪಟ್ಟುಕೊಂಡ. ಅವನ ಮನಸ್ಸು ಅಂದುಕೊಂಡಿತು—

"ಅವರಿಗಿಂತಲೂ ಇವರು ಮೇಲು."—

ಮರುದಿನ ಮುಂಚಿತವಾಗಿ ಊಟ ಮಾಡಿಕೊಂಡು ಆಫೀಸಿಗೆ ಹೋದ. ತನ್ನ ಹೊಸ ಉದ್ಯಮದ ಮೊದಲ ದಿನದ ಹುಮ್ಮಸ್ಸು ಕಾಲುಗಳನ್ನು ಜಾಗ್ರತೆ ಓಡಿಸಿಕೊಂಡು ನಡೆದಿತ್ತು.

ಕಚೇರಿಯ ಮೆಟ್ಟಲು ಹತ್ತಿದ. "ಈ ಓಣಿ ನಿನ್ನೆಗಿಂತಲೂ ಇವತ್ತು ವಾಸಿ" ಅಂದುಕೊಂಡ. ಹೀಗೆಂದು ಮನಸ್ಸಿಗೆ ಸಮಾಧಾನ ತಂದುಕೊಂಡ. ದಿನೇ ದಿನೇ ರೂಢಿಸಿಕೊಂಡ ಹೊರತು, ತಾನು ಅಲ್ಲಿ ತಿರುಗಾಡುವುದು ಅಸಾಧ್ಯವೆನ್ನಿಸಿತ್ತು.

ಸಂಪಾದಕರೂ ನಿನ್ನೆಗಿಂತಾ ಹೆಚ್ಚು ನಯವಾಗಿ ಮಾತನಾಡಿದರು. ಶ್ರೀಧರ ಹೋದೊಡನೆಯೇ ಅವರೇ ಕುರ್ಚಿಯಿಂದ ಮೇಲಕ್ಕೆದ್ದರು. ಶ್ರೀಧರ ನಮಸ್ಕರಿಸಿದ.

"ಆ ಸ್ಟೂಲನ್ನು ಎಳೆದುಕೊಳ್ಳಿ"

—ಸಂಪಾದಕರು ಗೋಡೆಯ ಮೂಲೆಯಲ್ಲಿದ್ದ ಸ್ಟೂಲನ್ನು ತೋರಿಸಿ ಹೇಳಿದರು.

ಅನೇಕ ತಿಂಗಳುಗಳಿಂದಲೂ ಆ ಸ್ಟೂಲಿನಮೇಲೆ ಗುಬ್ಬಿ, ಬಾವಲಿಗಳ ಹೊರತಾಗಿ ಮತ್ತೆ ಯಾರೂ ಕುಳಿತ ಗುರುತು ಕಂಡುಬರಲಿಲ್ಲ. ಶ್ರೀಧರನಿಗೆ ಸ್ಟೂಲನ್ನು ಒರೆಸಿಕೊಳ್ಳುವುದು ಅಸಹ್ಯವಾಯಿತಾದರೂ ಮಾಡಲೇ ಬೇಕಾಯಿತು.

"ಊರಲ್ಲಿ ರಂಗ, ಪರ ಊರಲ್ಲಿ ಮಂಗ" — ಅನ್ನುವ ಗಾದೆ ಈಗ ನೆನಪಿಗೆ ಬಂತು.

ಸಂಪಾದಕರು ಮೇಜಿನ ಮೇಲೆ ಎರಡು ಉದ್ದುದ್ದ ಪುಸ್ತಕಗಳನ್ನೆಸೆದರು.

"ಇದು ನೋಡಿ, To....ರಿಜಿಸ್ಟರ್, ಇದು From....; ನಿಮಗೆ To and From ಮಾಡೋದಕ್ಕೆ ಬರುತ್ತೇನು ?"

"ನಾನು ಕಲಿತಿಲ್ಲ."

"ನಿಮಗೆ ಎಲ್ಲವನ್ನೂ ಹೇಳಿಕೊಡಬೇಕು. ಇಂಗ್ಲಿಷಿನಲ್ಲಿ ಇಪ್ಪತ್ತಾರು

ಅಕ್ಷರಗಳೂ ಬರುತ್ತವೆಯೋ....ಅಥವಾ ಅದನ್ನೂ ಹೇಳಿಕೊಡಬೇಕೋ ?"

"ನಿನ್ನ ಕೆಲಸವಿಲ್ಲದಿದ್ದರೆ ಅಷ್ಟೇ ಹೋಯಿತು. ತಲೆಹರಟೆ ಮಾಡಬೇಡ."—ಅನ್ನಬೇಕು ಅನ್ನಿಸಿತು ಶ್ರೀಧರನಿಗೆ.

"ಜೀವನದಲ್ಲಿ ಇದೂ ಒಂದು ರೀತಿಯ ಅನುಭವ. ಬೇಡವಾದ ದಿನ, ಎದ್ದು ಹೋಗು ಅಂದರೆ ಒದ್ದು ಹೋಗೋಣ, ಮಾತನಾಡಿ ಪ್ರಯೋಜನವೇನು"—ಎಂದುಕೊಂಡು ಸುಮ್ಮನಾದ.

"ಇದು ನೋಡಿ ಚಂದಾದಾರರ ಪಟ್ಟಿ. ಮಂಡ್ಯದಲ್ಲಿ ಮೂವತ್ತು ಜನ, ಬೆಂಗಳೂರಲ್ಲಿ ಹದಿನೈದು, ಮೈಸೂರಿನಲ್ಲಿ ಹತ್ತು, ಕೊಳ್ಳೆಗಾಲ....ಕುಣಿಗಲುಗಳಿಂದ ನಾಲ್ಕು ನಾಲ್ಕು ಜನ ಇದ್ದಾರೆ. ಇವರೆಲ್ಲರ ವಿಳಾಸಕ್ಕೂ ಪ್ರತಿವಾರವೂ ತಪ್ಪದೆ ಪತ್ರಿಕೆ ಕಳಿಸಬೇಕು."

"ಅರವತ್ತು ಮೂರೇಜನವೇ ನಿಮ್ಮ ಪತ್ರಿಕೆ ಬೇಕಾದವರು ?"

—ಅಂದು ಬಿಡಬೇಕೆನ್ನುವಷ್ಟು ಕೋಪ ಬಂದಿತ್ತು ಶ್ರೀಧರನಿಗೆ ಸಂಪಾದಕರ ಅಸಹ್ಯವರ್ತನೆಯಿಂದ.

"ಮದರಾಸಿನ ಭಾನುವಾರದ ಹಿಂದೂ, ಬೊಂಬಾಯಿನ ಫಿಲಂ ಇಂಡಿಯಾ ಪತ್ರಿಕೆಗಳನ್ನು ನೀವು ಸಾಯಂಕಾಲ ಬಿಡುವಾದಾಗ, ಯಾವುದಾದರೂ ಪಬ್ಲಿಕ್ ಲೈಬ್ರರಿಗಳಲ್ಲಿ 'ಫಾಲೋ' ಮಾಡ್ತಾ ಇರಬೇಕು. ಇಂಪಾರ್ಟೆಂಟ್ ಫಿಲಂ ನ್ಯೂಸಿದ್ದರೆ ಕಾಪಿಮಾಡಿ ಕನ್ನಡದಲ್ಲಿ ಬರೀಬೇಕು."

"ಸಾಕಪ್ಪಾ !...."—ಎನ್ನಿಸಿತು ಶ್ರೀಧರನಿಗೆ.

"ಪ್ರೆಸ್ಸಿಗೆ ಹೋಗಿ ಪ್ರೂಫ್ ನೋಡಬೇಕು, ಪೇಪರ್ ತರಬೇಕು, ಪೋಸ್ಟ್‌ಮಾಡಬೇಕು. ಸಮಯ ಬಿದ್ರೆ ಮನೆ-ಮನೆಗೂ ಹೋಗಿ ಲೋಕಲ್ ಡಿಲೆವರೀನೂ ಕೊಡಬೇಕು ಸಾ....ರ್."

ಈ "ಸಾರು" ಬಹಳ ಉದ್ದವಾಗಿತ್ತು. ಶ್ರೀಧರ ಬಾಗಿಲ ಕಡೆ ನೋಡಿದ. ಹೇಳದೇ ಕೇಳದೇ ಎದ್ದು ಓಡುವುದೇ ಒಳ್ಳೆಯದೆನ್ನಿಸಿತು.

ಅಷ್ಟರಲ್ಲಿ ಸಂಪಾದಕರು ಜೇಬಿನಿಂದ ನಾಲ್ಕು ಕವರುಗಳನ್ನು ಹೊರ ತೆಗೆದರು—

"To....ರಿಜಿಸ್ಟರ್ ತೆಗೆದುಕೊಳ್ಳಿ. ಈ ಕಾಗದಗಳನ್ನು To.... ಮಾಡಿ, ಹೇಳಿಕೊಡುತ್ತೇನೆ.

ಶ್ರೀಧರ ಪುಸ್ತಕ ತೆರೆದ. ಯಾರಿಗೆ? ಯಾವಾಗ? ಏನು ವಿಚಾರ? ಎಲ್ಲವನ್ನೂ ಬರೆದುಕೊಂಡ.

ಸಂಪಾದಕರು ಅಂಟಿನ ಬಟ್ಟಲನ್ನು ಮುಂದೆ ಮಾಡಿದರು—

"ಇದಕ್ಕೆ ಗಮ್‌ಮಾಡಿ, ಪೋಸ್ಟ್‌ಮಾಡಿ ಬನ್ನಿ."

ಶ್ರೀಧರ ಅಂಟು ಹಚ್ಚಿದ. ಮೇಲಕ್ಕೆದ್ದ. ಕವರನ್ನು ಹಿಂದೆ ಮುಂದೆ ತಿರುಗಿಸಿ ನೋಡಿದ. ಸ್ಟ್ಯಾಂಪೇ ಇರಲಿಲ್ಲ.

"ಸ್ಟ್ಯಾಂಪೇ ಹಚ್ಚಿಲ್ಲ...." —ಅವನೆಂದ.

"ಸ್ಟ್ಯಾಂಪು ಸ್ಟಾಕಿಲ್ಲ. ಖಾಲಿಯಾಗಿ ಬಿಟ್ಟಿದೆ. ನೀವೇ ಹಚ್ಚಿ ಪೋಸ್ಟ್ ಮಾಡಿಬಿಡಿ."

"ದುಡ್ಡು !...."

—ಎಂದು ಕೇಳಬೇಕೆಂದಿದ್ದ ಶ್ರೀಧರ. ಮತ್ತೆ ದಡ್ಡನಾಗುವುದು ಬೇಡವೆನ್ನಿಸಿತು.

"ಹ್ಞೂ.... ಹೊರಡಿ ಮತ್ತೆ" —ಸಂಪಾದಕರೆಂದರು.

ಕವರನ್ನು ತೆಗೆದು ಮುಖದ ಮೇಲೆ ಎಸೆಯಬೇಕೆನ್ನುವಷ್ಟು ಕೋಪ ಬಂದಿತ್ತು ಶ್ರೀಧರನಿಗೆ. ಆದರೂ ತಾಳಿಕೊಂಡ.

"ಕೆಲ್ಸ ಮಾಡೋದಕ್ಕೆ ಅವಮಾನವೇ ಸಾರ್ !"

—ಸಂಪಾದಕರು ಚುಚ್ಚಿ ನುಡಿದರು.

"ನಿನ್ನಲ್ಲಿ ಬಿಟ್ಟಿಗೆಯ್ಯೋದಕ್ಕೆ ನಿನ್ನ ಅಪ್ಪ ಆಸ್ತಿ ಬರೆದು ಕೊಟ್ಟಿಲ್ಲ ನನಗೆ."

—ಎನ್ನಬೇಕೆಂದು ಬಾಯಿ ತವಕಪಡುತ್ತಿತ್ತು. ಅಷ್ಟು ಒರಟಾಗಿ ಉತ್ತರಿಸುವ ಇಷ್ಟವಿಲ್ಲದೇ ಮನಸ್ಸಿಗೆ ಶಾಂತಿ ತೆಗೆದುಕೊಂಡ. ಸಂಪಾದಕರು ಕೊಟ್ಟ ಕವರುಗಳನ್ನು ಅವರ ಮೇಜಿನ ಮೇಲಿಟ್ಟ. ತನ್ನ ಎರಡೂ ಕೈಗಳನ್ನೂ ಜೋಡಿಸಿ ಹೇಳಿದ—

"ದಯವಿಟ್ಟು ಕ್ಷಮಿಸಿ. ನಿಮ್ಮ ಕೆಲ್ಸ ಮಾಡೋದಕ್ಕೆ ನಾನು ಖಂಡಿತಾ ಯೋಗ್ಯನಲ್ಲ."

ಹಿಂದೆಮುಂದೆ ನೋಡದೇ ಬಾಗಿಲ ಬಳಿ ಬಂದ.

"ಕೆಲ್ಸ ಬೇಡ್ವೆ ಮಿಸ್ಟರ್ ?...."

—ಎಂದರು ಸಂಪಾದಕರು ವಿಕಟವಾಗಿ ನೋಡುತ್ತಾ.

ಕೇಳಿಯೂ ಕೇಳದವನಂತೆ ಬೇಗ ಬೇಗ ಮೆಟ್ಟಿಲಿಳಿದು ಬಂದು, ಗಲ್ಲಿಯಿಂದ ತೂರಿ ಬೀದಿಗೆ ಹಾರಿಕೊಂಡ.

"ಅದು ಹುಲಿ, ಇದು ಹಾವು. ಹಾವಿನೊಡನೆ ಸರಸವಾಡುವುದಕ್ಕಿಂತಾ ಹುಲಿಯೊಡನೆ ಹೋರಾಡುವುದೇ ಲೇಸು"—ಎನ್ನಿಸಿತು ಶ್ರೀಧರನಿಗೆ.

## ೬

ಮುಂದೇನು ಮಾಡಬೇಕು ? ಮತ್ತೆ ಅದೇ ಪ್ರಶ್ನೆ. ಕುಳಿತು ತಿಂದರೆ ಕುಡಿಕೆ ಹೊನ್ನಾದರೂ ಸಾಲದೆಂಬುದು ದಿನೇದಿನೇ ಅನುಭವಕ್ಕೆ ಬರುತ್ತಿತ್ತು. ಹೀಗೇ ಮುಂದುವರೆಯುತ್ತಾ ಹೋದರೆ ಕೊನೆಗೊಂದುದಿನ ತುತ್ತು ಅನ್ನಕ್ಕಾಗಿ ಉಡುಪಿ ಬ್ರಾಹ್ಮಣರನ್ನು ಆಶ್ರಯಿಸಬೇಕಾಗಿ ಬಂದೀತು.

ಶ್ರೀಧರ ಯೋಚಿಸುತ್ತಿರುವಲ್ಲಿ ಒಂದು ದಿನ ರಸ್ತೆಯಮೇಲೆ ವೆಂಕಟೇಶಯ್ಯನ ದರ್ಶನವಾಯಿತು.

ವೆಂಕಟೇಶಯ್ಯನ ಖ್ಯಾತಿ ಬಹುದೂರ ಹಬ್ಬಿತ್ತು. ಬಾಲ್ಯದಿಂದಲೂ ನಾಟಕದ ಕಂಪೆನಿಗಳಲ್ಲಿ ಅಭಿನಯಿಸಿ ಅವರ ಬಾಳು ಅದಕ್ಕೆ ಹೊಂದಿಕೊಂಡಿತ್ತು. ಈ ಬಾಳಿನಲ್ಲಿ ಏನೂ ಸುಖವಿಲ್ಲವೆಂಬುದು ಅವರ ನಿತ್ಯದ ಅನುಭವವಾದರೂ, ಇದಕ್ಕಿಂತಲೂ ಸುಖವಾದ ಮತ್ತೆಯಾವ ಮಾರ್ಗವೂ ಅವರಿಗೆ ಗೋಚರಿಸಿರಲಿಲ್ಲ.

ಹೀಗಾಗಿ ನಾಟಕ ಅನೇಕ ವರ್ಷಗಳಿಂದಲೂ ಅವರ ವೃತ್ತಿಯಾಗಿತ್ತು.

ಶ್ರೀಧರನಿಗೆ ವೆಂಕಟೇಶಯ್ಯ ಹಿಂದಿನಿಂದ ಪರಿಚಿತರು. ನಾಟಕದ ಕಂಪೆನಿಯೊಂದರಲ್ಲಿ ಶ್ರೀಧರನ ಊರಿಗೆ ವೆಂಕಟೇಶಯ್ಯ ಬಂದಾಗ, ಅವನು ಇವರ ಅಭಿನಯಕ್ಕೆ ಮಾರುಹೋಗಿದ್ದ. ಅವರ ಪರಿಚಯವನ್ನೂ ಮಾಡಿಕೊಂಡಿದ್ದ.

ಆ ಪರಿಚಯ ಈಗ ಉಪಯೋಗಕ್ಕೆ ಬರುವಂತಾಯಿತು.

ಮೈಸೂರಿನ ಬೀದಿಯಲ್ಲಿ ಶ್ರೀಧರನನ್ನು ಕಂಡು ಆಶ್ಚರ್ಯವಾಯಿತು ವೆಂಕಟೇಶಯ್ಯನಿಗೆ.

"ಯಾವಾಗ ಬಂದೆಯಪ್ಪಾ....ಮೈಸೂರಿಗೆ"

—ವೆಂಕಟೇಶಯ್ಯ ಹಿರಿತನದ ವಾತ್ಸಲ್ಯದಿಂದ ಪ್ರಶ್ನಿಸಿದರು.

"ಆಗಲೇ ಬಹಳ ದಿನಗಳಾಯಿತು"—ಶ್ರೀಧರ ನಗುತ್ತ ಉತ್ತರವಿತ್ತ.

"ಕಾಲೇಜಿಗೆ ಸೇರಿದ್ದೀಯೇನು?"

"ಕಾಲೇಜನ್ನು ಬಿಟ್ಟುಬಿಟ್ಟೆ".

"ಏಕಪ್ಪಾ?"—ಗಾಬರಿಯಿಂದ ಕೇಳಿದರು ವೆಂಕಟೇಶಯ್ಯ.

"ಕಾಲೇಜಿನಿಂದ ಯಾವ ಸುಖವಿದೆ ವೆಂಕಟೇಶಯ್ಯ? ನಾವು ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಓದಿ, ಮುಂದೇನು ಮಾಡ ಬೇಕು ಹೇಳಿ?"

"ಹಾಗೆಂದರೆ ಹೇಗೆ? ನಾಲ್ಕು ವರ್ಷ ಓದಿ, ಎರಡು ಅಕ್ಷರ ಕೈಗೆ ಬಂದರೆ, ಏನೂ ಆಗಬಹುದು. ಅಮಲ್ದಾರನಾಗಬಹುದು, ಡಿ.ಸಿ. ಆಗ ಬಹುದು, ಸಮಯಬಂದರೆ ಮಂತ್ರಿಯೂ ಆಗಬಹುದಲ್ಲಾ!"

"ಅಷ್ಟೇ ತಾನೇ...."—ಶ್ರೀಧರ ತಾತ್ಸಾರದಿಂದ ನುಡಿದ.

"ಆ ಯಾವ ಹುದ್ದೆಗಳೂ ನನಗೆ ಇಷ್ಟವಿಲ್ಲ."

"ಮತ್ತೆ ಏನಾಗಬೇಕೆಂದು ನಿನ್ನ ಅಭಿಪ್ರಾಯ?"

"ನಾನೊಬ್ಬ ಕಲಾವಿದನಾಗಬೇಕು. ಅನೇಕರು ನನ್ನನ್ನು ಕಂಡು ತಲೆದೂಗುವಂತಾಗ ಬೇಕು."

"ಹುಚ್ಚು ಹುಡುಗ........"—ಎಂದು ನಕ್ಕು ಬಿಟ್ಟರು ವೆಂಕಟೇಶಯ್ಯ.

"ಕಲೆ ಅಂದರೆ ಏನು ಅಂತ ತಿಳಿದುಕೊಂಡಿದ್ದೀಯಾ?"

ಶ್ರೀಧರ ಉತ್ತರ ಕೊಡಲಿಲ್ಲ. ಕೊಡುವ ಸಾಮರ್ಥ್ಯವೂ ಇರಲಿಲ್ಲ.

"ಸುಖವಾಗಿ ಜೀವನ ಮಾಡಿಕೊಂಡಿರೋದೇ ಕಲೆ. ಅದನ್ನು ಬಿಟ್ಟು ಕಲೆಗಾಗಿ ಜೀವನವನ್ನು ಮುಡಿಪಾಗಿ ಇಡಹೋದರೆ, ಆ ಕೊಳೆಯಲ್ಲಿ ನಾವೂ ಒಂದಾಗಿ, ಈಹುಚ್ಚು ಹೊಳೆಯಲ್ಲಿ ತೇಲಿಹೋಗುತ್ತೇವೆ."

ವೆಂಕಟೇಶಯ್ಯನಿಗೆ ಉತ್ತರ ಕೊಡುವುದು ಈಗಲೂ ಸಾಧ್ಯವಿರಲಿಲ್ಲ.

ಸ್ವಲ್ಪ ಹೊತ್ತು ಇಬ್ಬರೂ ಮೌನ.

ನಂತರ ಹೇಳಿದ ಶ್ರೀಧರ—

"ಅದೇನೇ ಇರಲಿ", ಅಷ್ಟು ದೊಡ್ಡ ಮಾತುಗಳು ಸಧ್ಯದಲ್ಲಿ ನನ್ನ ತಲೆಗೆ ಹಿಡಿಯುವುದು ಕಷ್ಟ. ನಾನೀಗ ಕಾಲೇಜು, ಮನೆ, ಎಲ್ಲವನ್ನೂ ಬಿಟ್ಟು ಬಂದಿದ್ದೇನೆ. ನನ್ನ ಈ ಹಂಬಲಕ್ಕೆ ನೀವು ಆಶ್ರಯ ಕೊಡಲೇ ಬೇಕು".

ವೆಂಕಟೇಶಯ್ಯನಿಗೆ ಯೋಚನೆಗಿಟ್ಟು ಕೊಂಡಿತು.

ಶ್ರೀಧರನ ಅಂಗಸೌಷ್ಠವ, ಮುಗ್ಧವದನ ಅವರ ಮನಸ್ಸನ್ನೂ ಸೆಳೆದಿದ್ದುವು. ನಾಟಕಗಳಲ್ಲಿ ಇಂಥವರು ಅಪರೂಪರೆಂದೂ ಅರಿತಿದ್ದರು. ಅವಕಾಶ

ಸಿಕ್ಕಿದರೆ ಅಭಿವೃದ್ಧಿಗೆ ಬರುವ ಎಲ್ಲ ಗುಣಗಳನ್ನೂ ಶ್ರೀಧರನಲ್ಲಿ ಕಂಡು ಕೊಂಡರಾದರೂ, ಕಲೆಗಾಗಿ ಕಾಲೇಜನ್ನು ತೊರೆಯುವ ಇಚ್ಛೆ ಅವರಿಗೆ ಒಪ್ಪಿತ ವಾಗಲಿಲ್ಲ.

"ನೀನು ಕಾಲೇಜಿಗೆ ಹಿಂದಿರುಗಲೇಬೇಕು"

—ವೆಂಕಟೇಶಯ್ಯ ಸ್ಪಷ್ಟವಾಗಿ ಹೇಳಿದರು.

"ಏಕೆ?"

"ಈ ಮಾರ್ಗ ನೀನು ತಿಳಿದು ಕೊಂಡಂತೆ ಸುಗಮವಾಗಿಲ್ಲ. ಬೆಂಕಿಗೆ ಬೀಳುವ ಪತಂಗಗಳಂತೆ ಅನೇಕರು ಹಾರಿ ಬಿದ್ದು ತಮ್ಮ ರೆಕ್ಕೆಯನ್ನು ಸುಟ್ಟು ಕೊಳ್ಳುತ್ತಾರೆ. ಇದರಲ್ಲಿ ಹೋರಾಡಿ, ಉಳಿದು, ಯಶಸ್ಸನ್ನು ಗಳಿಸುವವರು ಅತಿವಿರಳ. ಸಾವಿರಕ್ಕೊಬ್ಬ ಮಾತ್ರ."

"ಆ ಸಾವಿರದಲ್ಲಿ ಒಬ್ಬನಾಗಿ ನಾನೇಕೆ ಆಗಬಾರದು."

"ಈ ಹಿನ್ನೆಲೆಯಲ್ಲಿನ ಒಂಬೈನೂರ ತೊಂಬತ್ತೊಂಬತ್ತು ಮಂದಿಯ ಗತಿ?

....ಅದೂ ನಿನ್ನ ಗಮನದಲ್ಲಿರಬೇಕು."

"ಪ್ರಯತ್ನ ಮಾಡುವುದರಲ್ಲಿ ಬಾಧಕವಿದೆಯೇ."

"ಪ್ರಯತ್ನಿಸು...."

ಶ್ರೀಧರನಿಗೆ ಇಷ್ಟು ಹೇಳಿದರೆ ಸಾಕಿತ್ತು. ವೆಂಕಟೇಶಯ್ಯನ ಜೊತೆ ಯಲ್ಲಿ ಮರುದಿನವೇ ಬೆಂಗಳೂರಿನ ರೈಲನ್ನು ಹತ್ತಿದ.

# ೭

"ಕಲಾಸೇವಕ ನಾಟಕಮಂಡಳಿ"ಯವರು, ಬೆಂಗಳೂರಿನ ಬಾಡಿಗೆ ಥಿಯೇಟರೊಂದರಲ್ಲಿ ನಾಟಕಗಳನ್ನಭಿನಯಿಸುತ್ತಾ ಕೆಲವು ದಿನಗಳು ಕಳೆದು ಹೋಗಿತ್ತು.

ಹೊಸ ನಾಟಕ....ಸುಧಾರಿಸಿದ ನಟರಿಂದ ಕಳೆಗಟ್ಟುತ್ತಾದ್ದರಿಂದ, ದಿನೇ ದಿನೇ ಯಶಸ್ವಿಯಾಗಿ ನಡೆದುಬರುತ್ತಿತ್ತು. ಇಂತಹ ಕಡೆ ಶ್ರೀಧರನಿಗೆ ಅವಕಾಶ ಸಿಕ್ಕಿದ್ದು ಜಾಗ್ರತೆ ಬೆಳಕಿಗೆ ಬರಲು ಅನುಕೂಲವಾಗುವಂತಿತ್ತು.

ಎರಡುದಿನ, ನಾಲ್ಕುದಿನ, ಉಳಿದೆಲ್ಲ ನಟರು ಶ್ರೀಧರನನ್ನು ಕಂಡು ಮೂಗು ಮುರಿಯುತ್ತಿದ್ದರು. ಐದನೆಯ ದಿನದಿಂದ ಶ್ರೀಧರನ ಸೌಜನ್ಯದ ಅರಿವಾಗಿ, ಎಲ್ಲರಿಗೂ ಬೇಕಾದವನಾಗಿ ಸೇರಿಹೋದ.

ನಟರೆಲ್ಲರಿಗೂ ಹೋಟಲಿನಲ್ಲಿ ಊಟಕ್ಕೆ ಏರ್ಪಾಡು ಮಾಡಿದ್ದರು. ಪ್ರೊಪ್ರೈಟರರ ಅದೃಷ್ಟದಿಂದಲೋ, ಊಟ ಮಾಡುವ ನಟರ ಪುಣ್ಯಪ್ರಭಾವದಿಂದಲೋ, ಹೋಟಲು ಮಾಲೀಕ....ದರದಲ್ಲಿ ಸ್ವಲ್ಪ ರಿಯಾಯಿತಿ ಮಾಡಿ, ಪ್ರಮಾಣದಲ್ಲಿ ಕೊಂಚ ಕಡಿಮೆಮಾಡಿಬಿಟ್ಟಿದ್ದ.

ರೇಷನ್ಕಾಲ ಅದು; ಮೂರು ಮುಷ್ಟಿಯಷ್ಟು ಹುಡಿಯಗುಳನ್ನು ತುಂಬಿ, ಬಟ್ಟಲಿನಲ್ಲಿ ಅಳೆದು, ತರಗೆಲೆಯಮೇಲೆ 'ಕೊಟ್' ಎಂದು ಕುಟ್ಟುವಾಗ, ಊಟಕ್ಕೆ ಕುಳಿತವರ ದೃಷ್ಟಿ ಬಡಿಸುವವನ ತಲೆಯಮೇಲೆ ಹರಿದು, ಈ ಶಬ್ದ ಅಲ್ಲಾಗಿದ್ದರೆ?....ಎಂದು ಬಯಸುತ್ತಿತ್ತು.

ಬೇರಿನಿಂದ ಕುಡಿಯವರೆಗೆ ಪೂರ್ಣವಾಗಿರುವ ಹರಿವೆಯ ದಂಟು ಅಕಸ್ಮಾತ್ ಬಡಿಸುವವನ ಕೈಜಾರಿ ಎಲೆಗೆ ಬಿದ್ದರೆ, ಅದು ಊಟಮಾಡುವವನ ಭಾಗ್ಯ! ಅನ್ನಪೂರ್ಣೆಯ ಪೂರ್ಣ ಕಟಾಕ್ಷ.

ಸಾಲದ್ದಕ್ಕೆ ಎರಡು ಪೂರಿ....

ಹಿಟ್ಟಿನದೋ, ಹೊಟ್ಟಿನದೋ, ಅಥವಾ ಮನುಷ್ಯರ ಸತ್ವಪರೀಕ್ಷೆಗಾಗಿ ಆಹಾರ ಸಂಶೋಧನಾ ಇಲಾಖೆಯವರ ನವೀನ ಆವಿಷ್ಕಾರವೋ ಆದ ಈ ಪೂರಿ ಅನ್ನಿಸಿಕೊಳ್ಳುವ ಪದಾರ್ಥ ಅಗಿದಷ್ಟೂ ಒದಗಿಬರುತ್ತಿತ್ತು.

ಇಷ್ಟಿದ್ದರೂ ಚಿಂತೆಯಿರಲಿಲ್ಲ. ಸ್ಟೇಜಿನ ಬಸಪ್ಪನಿಗೆ ಮತ್ತೊಂದು

ಸಮಸ್ಯೆಯಿತ್ತು—

"ಹೋಟೆಲಿನ ಊಟ ನನ್ನ ಹೊಟ್ಟೆಗೆ ಸಾಲದು. ನನಗೆ ನೀವು ಎರಡು ಊಟ ಒಟ್ಟಿಗೇ ಕೊಡಿಸಬೇಕು."

—ಎಂದು ಹಟಹಿಡಿದುಬಿಟ್ಟ.

ಪ್ರೊಪ್ರೈಟರರಿಗೆ ತಾಪತ್ರಯಕ್ಕಿಟ್ಟು ಕೊಂಡಿತು.

ಉಳಿದ ಕೆಲಸದವರೂ ಬಸಪ್ಪನೊಂದಿಗೆ ಹಠ ಹಿಡಿದರು.

"ಒಬ್ಬೊಬ್ಬರು ಎರಡೆರಡು ಊಟ ಮಾಡಿದರೆ ನನ್ನ ಗತಿಯೇನು?"

—ಪ್ರೊಪ್ರೈಟರರು ಗಾಬರಿಯಿಂದ ಕೇಳಿದರು.

"ಕೈತುಂಬಾ ಸಂಬಳವಂತೂ ಇಲ್ಲ. ಹೊಟ್ಟೆತುಂಬಾ ಊಟವೂ ಇಲ್ಲದ ಮೇಲೆ ನಮಗೆ ಯಾಕೆ ಸ್ವಾಮಿ ಈ ಕೆಲ್ಸ?"

ಈಗ ವೆಂಕಟೇಶಯ್ಯ ಮುಂದೆಬಂದರು. ಕುಳಿತು ಊಟಮಾಡು ವವರಿಗೇ ಒಂದು ಬಟ್ಟಲು ಸಾಲದಾದಾಗ, ದೇಹಶ್ರಮದ ಕೂಲಿಯವರಿಗೆ ಯಾವ ಮೂಲೆಗೂ ಸಾಲದೆಂಬುದು ಅವರಿಗೆ ತಿಳಿದಿತ್ತು.

ಎರಡು ಊಟ ಒಟ್ಟಿಗೆ ಮಾಡುತ್ತಾ ಹೋದರೆ ಪ್ರೊಪ್ರೈಟರ ಗತಿ ಏನಾಗಬಹುದೆಂದೂ ಊಹಿಸದಿರಲಿಲ್ಲ.

"ಎಲ್ಲರೂ ಒಟ್ಟಿಗೇ ಊಟಕ್ಕೆ ಹೋಗೋಣ. ನಮ್ಮ ಭಾಗದ ಅನ್ನ ವನ್ನು ಅವನು ಒಟ್ಟಿಗೆ ಅಳಿದುಹಾಕಲಿ....ನಂತರ ನಮಗೆ ಬೇಕಾದಂತೆ ಬಡಿಸಿಕೊಳ್ಳೋಣ"—ಅವರೆಂದರು.

"ನಿಮಗೆಲ್ಲಾ ಆಗ ಒಂದೂಟಾನೂ ಪೂರ್ತಿ ಸಿಗೊಲ್ಲ-ನಾವೊಲ್ಲೆ ಬಿಡಿ,"

—ಅಂದುಬಿಟ್ಟ ಬಸಪ್ಪ.

ಅದಕ್ಕೆ ಸಮಾಧಾನವಾಗದಿದ್ದುದು ಮತ್ತೂ ಯೋಚನೆಮಾಡುವಂತಾ ಯಿತು. ವೆಂಕಟೇಶಯ್ಯ ಕೊನೆಗೊಂದು ತೀರ್ಮಾನಕ್ಕೆ ಬಂದರು—

"ಊಟ ಸಾಲದೆ ಬಂದವರು ಇಬ್ಬಿಬ್ಬರು ಒಟ್ಟಾಗಿ ಹೋಟಲಿಗೆ ಹೋಗಿ. ಮೂರು ಊಟ ತೆಗೆದುಕೊಂಡು ಹಂಚಿಕೊಂಡುಬಿಡಿ."

"ಒಂದೂವರೆ ಊಟವಾದರೂ ಸಿಕ್ಕಿತಲ್ಲಾ–" ಎಂದು ಸಂತೃಪ್ತನಾದ ಬಸಪ್ಪ.

ಈ ಅನ್ನದ ಸಮಸ್ಯೆಯನ್ನು ಕಂಡು ಬೆರಗಾದ ಶ್ರೀಧರ.

# ೮

ಪ್ರೊಪ್ರೈಟರ್ ಶೇಷಪ್ಪನವರದು ಕುಳ್ಳಾದ ಬಡಕಲು ಶರೀರ. ವ್ಯಂಗ್ಯ ಚಿತ್ರಗಾರ ಅವರ ಮುಖವನ್ನು ಚಿತ್ರಿಸುವುದಾದರೆ ಅತಿ ಸುಲಭ. ಮುಖಕ್ಕೆಲ್ಲಾ ಪ್ರಧಾನವಾಗಿ ಕಾಣುವ ಮೂಗನ್ನು ಒಂದುಕಡೆ ಗುರುತಿಸಿ, ಅದರ ಮೇಲೆ ದಪ್ಪ ಕನ್ನಡಕವನ್ನಿಟ್ಟು, ಹಳ್ಳದ ದಂಡೆಯ ಜೊಂಡುಹುಲ್ಲನ್ನು ತಂದು ತಲೆಯ ಮೇಲೆಳೆದರೆ ತೀರಿತು.

ಇದು ಶೇಷಪ್ಪನವರ ತದ್ರೂಪು—ಇದೇ ಅವರ ಯಥಾ ನಕಲು.

ಶೇಷಪ್ಪನವರು ರಸ್ತೆಯ ಮೇಲಿರುವಾಗ ಅವರ ಕಣ್ಣು ಕಾಲುಬುಡವನ್ನು ನೋಡುತ್ತಿರಲಿಲ್ಲ. ಒಂದು ಫರ್ಲಾಂಗ್ ದೂರದಿಂದಲೂ ಎದುರು ಬರುತ್ತಿರುವ ಜನಗಳ ಕಡೆ ಅವರ ದೃಷ್ಟಿಯಿರುತ್ತಿತ್ತು.

ಸಂಬಳ ಕೇಳುವ ಕಂಪೆನಿಯ ಜನಗಳಾಗಲೀ, ಕೊಟ್ಟ ಸಾಲವನ್ನು ಹಿಂದಿರುಗಿಸಿರೆಂದು ಕೇಳುವ ಸಾಲಿಗನಾಗಲೀ ಎದುರು ಬಂದಾಗ, ಅವರ ಈ ದಪ್ಪ ಕನ್ನಡಕ ಆಪದ್ಬಾಂಧವ. ಅವರ ಕೈಕೂಡಲೇ ಚುರುಕಾಗುತ್ತಿತ್ತು. ಈ ಕನ್ನಡಕ ಜೇಬಿಗಿಳಿಯುತ್ತಿತ್ತು. ಕೋಟಿನ ಕೆಳಜೇಬಿನಲ್ಲಿ ಸದಾ ಸಿಕ್ಕಿಸಿಕೊಂಡ ಟೋಪಿ ತಲೆಗೇರುತ್ತಿತ್ತು. ನಡಿಗೆ ವಕ್ರವಾಗುತ್ತಿತ್ತು.

ಪಂಚೆಯ ಸೆರಗನ್ನೆತ್ತಿ ಕೈಯಲ್ಲಿ ಹಿಡಿದುಕೊಂಡು, ಹೊತ್ತಾಯಿತೆಂದು ಹೆದರಿ ಅಠಾರಾ ಕಛೇರಿಗೆ ಓಡುವ ಬಡಗುಮಾಸ್ತನಂತೆ, ಗಡಿಬಿಡಿಯಿಂದ ಓಡಿಬಿಡುತ್ತಿದ್ದರು.

ಎದುರು ಬಂದವರು—"ಯಾರೋ" ಎಂದು ಕೂಗಿಕೊಂಡು, ಈ ವಿಕಾರ ವದನವನ್ನು ನೋಡಲೂ ಇಷ್ಟವಿಲ್ಲದವರಾಗಿ, ತಲೆ ತಗ್ಗಿಸಿಕೊಂಡು ಮುಂದೆ ನಡೆಯಬೇಕು.

ಆಗ ಪುನಃ ಇವರ ಕನ್ನಡಕ ಮೂಗಿಗೇರುತ್ತಿತ್ತು. ಟೋಪಿ ಜೇಬಿಗಿಳಿಯುತ್ತಿತ್ತು. ನಡಿಗೆ ನೆಟ್ಟಗಾಗುತ್ತಿತ್ತು.

ಶೇಷಪ್ಪನವರು ನಾಟಕದ ಕಂಪೆನಿಯ ಮಾಲಿಕರು ಮಾತ್ರವಲ್ಲ. ಬಸ್ ಕಂಪೆನಿಯೊಂದರ ಉನ್ನತ ಹುದ್ದೆಯಲ್ಲೂ ಕೆಲಸಮಾಡುತ್ತಿದ್ದರು. ನಾಟಕ ಸಧ್ಯದಲ್ಲಿ ಅವರ ಸಹ ಉದ್ಯೋಗ.

ಬೆಂಗಳೂರಿನಲ್ಲಿ....ನಡೆದಷ್ಟು ದಿನ ನಡೆಯಬೇಂದು, ನಟರನ್ನು ಕೂಡಿಸಿ, ಕಂಪೆನಿ ವ್ಯವಸ್ಥೆ ಮಾಡಿದ್ದರು.

ಕಾಸು ಕೂಡಿತು. ಕೈಬಲವಾಯಿತು. ಮೂರು ನಾಲ್ಕು ತಿಂಗಳು ಯಶಸ್ವಿಯಾಗಿ ನಡೆದುಬಿಟ್ಟಿತು.

ಮುಂದೆ?........

ಬೇರೆ ಊರಿಗೆ ಕಂಪೆನಿ ಕಟ್ಟಿಕೊಂಡು ಹೋಗುವ ಅನುಕೂಲವಿರಲಿಲ್ಲ. ಆವಶ್ಯಕತೆಯೂ ಕಾಣಲಿಲ್ಲ. ಇಷ್ಟೊಂದು ಹಣವನ್ನು ದೋಚಿ ನಟರೆಲ್ಲರನ್ನೂ ಒಮ್ಮೆಗೇ ಕೈಬಿಡುವುದೂ ಯುಕ್ತವಾಗಿ ಕಾಣಲಿಲ್ಲ. ಹೀಗೆ ಮಾಡಿ ಬೆಂಗಳೂರಿನಲ್ಲಿ ನಿಷ್ಠುರಕ್ಕೆ ಗುರಿಯಾಗುವುದಕ್ಕಿಂತ, ಯಾವುದಾದರೂ ಸಮೀಪದ ಊರಿಗೆ ಕ್ಯಾಂಪ್ ಹಾಕಿಸಿ, ಕೈತೊಳೆದುಕೊಳ್ಳುವುದೇ ಲೇಸೆನ್ನಿಸಿತು.

ಒಂದು ದಿನ ವೆಂಕಟೇಶಯ್ಯನನ್ನು ಕರಸಿಹೇಳಿದರು.—

"ಬೆಂಗಳೂರಿನಲ್ಲಿ ಕಲೆಕ್ಷನ್ ಬಿದ್ದುಹೋಗಿದೆ. ಬೇರೆ ಎಲ್ಲಾದರೂ ಕ್ಯಾಂಪ್ ಹಾಕಬೇಕು."

"ಆಗಲಿ ಸ್ವಾಮಿ! ಹೋಗೋಣ."—ಎಂದರು ವೆಂಕಟೇಶಯ್ಯ.

"ಆನೆಕಲ್ಲಿನಲ್ಲಿ ನನ್ನ ಬಂಧು ಒಬ್ಬನಿದ್ದಾನೆ. ಬನ್ನಿ ಎಂದು ಬರೆದಿದ್ದಾನೆ. ಹೇಗೆ ನಿಮ್ಮ ಅಭಿಪ್ರಾಯ?"

ವೆಂಕಟೇಶಯ್ಯನವರಿಗೆ ಈ ಸಲಹೆ ಅಷ್ಟಾಗಿ ಸರಿಕಾಣಲಿಲ್ಲ. ಅವರು ಆನೆಕಲ್ಲನ್ನು ಬಿಟ್ಟು ಇನ್ನೂ ಐದಾರು ತಿಂಗಳೂ ಕಳೆದಿರಲಿಲ್ಲ. ಒಂದು ಕಂಪೆನಿ ಹೋದ ತರುಣದಲ್ಲಿ ಮತ್ತೊಂದನ್ನು ತೆಗೆದುಕೊಂಡು ಹೋಗುವುದು ಹಿತವಾಗಿರಲಿಲ್ಲ.

" ಬೇಡ ಸ್ವಾಮಿ! ಅಲ್ಲಿ ತೆಗೆದುಕೊಂಡುಹೋಗಿ ನಮ್ಮನ್ನು ಕೊಳೆ ಹಾಕಬೇಡಿ"—ಎಂದರು ವೆಂಕಟೇಶಯ್ಯ.

"ಅದೇನು ಹೀಗೆ ಹೇಳುತ್ತೀರಿ?....ತಾಲ್ಲೂಕು ಮುಖ್ಯ ಸ್ಥಳ".

"ನಿಜ....ಆದರೂ ನಾವು ಅಲ್ಲಿಂದ ಬಂದು ಇನ್ನೂ ಆರು ತಿಂಗಳೂ ಆಗಿಲ್ಲ."

"ಹೊಸ ಕಂಪೆನಿಗೆ ಕಲೆಕ್ಷನ್ ಆಗಿಯೇ ಆಗುತ್ತೆ".

"ನಿಜ, ಕಲೆಕ್ಷನ್ ಆಗೋದು ನಾಲ್ಕು ನಾಟಕಕ್ಕೆ. ನಂತರ ಕೂಡಲೇ ಕಾಲು ಕೀಳೋದು ಎಲ್ಲಿಗೆ?"

ಶೇಷಪ್ಪನವರು ಯೋಚಿಸತೊಡಗಿದರು.

"ಅಷ್ಟುಮಾತ್ರ ಅಲ್ಲ ಸ್ವಾಮಿ. ಈ ಸಣ್ಣ ಸಣ್ಣ ಊರುಗಳಲ್ಲಿ ಪರ ಸ್ಥಳದವರಿಗೆ ಬಹಳ ಕಷ್ಟ. ಅಲ್ಲಿಯೋ ಊರಿಗೆಲ್ಲಾ ಇರುವುದು ಒಂದೇ ಸಿಹಿನೀರಿನ ಕೆರೆ. ಎಲ್ಲಾ ಅಲ್ಲೇ ಆಗಬೇಕು. ಗಾಡಿ ನೀರಿಗೆ ಆರಾಣೆ ಕೊಟ್ಟು ಕೊಂಡು ನಾವು ಕಂಪೆನಿ ನಡೆಸೋದು ನಿಜವೇ?

"ಭಾವಿ ನೀರಿನಲ್ಲಿ ಬೇಳೇನೂ ಬೇಯೊಲ್ಲ. ಉಪ್ಪು ನೀರು ತಲೆಗೆ ಹಾಕಿಕೊಂಡು ಸೋಪು ಉಜ್ಜಿದರೆ....ಜಿಗುಟಾಗಿ ಅಂಟಿಕೊಂಡು ಕೂದಲೇ ಕಿತ್ತು ಬರುತ್ತದೆ.

ಈ ಕಡೆ ಯಥೇಚ್ಛವಾಗಿ ಸಿಹಿ ನೀರನ್ನು ಬಳಸಿದ ನಮಗೆ ಅಲ್ಲಿ ಹೋದಾಗ ಮರಳುಕಾಡಿನ ಮಧ್ಯೆ ಇರುವಂತೆನ್ನಿಸುತ್ತದೆ."

"ಹಾಗಾದರೆ ಒಂದು ಕೆಲಸ ಮಾಡೋಣ. ಈ ಯಾವ ತಾಪತ್ರಯಗಳೂ ಬೇಡ. ಅಷ್ಟು ದೂರ ಹೋಗುವುದೂ ಬೇಡ. ಕೃಷ್ಣರಾಜಪುರ ಇಲ್ಲೇ ಸಮೀಪದಲ್ಲಿದೆ. ಅಲ್ಲಿ ರೈತರು, ಕಾರ್ಮಿಕರು ಬಹು ಮಂದಿಯಿದ್ದಾರೆ. ಖರ್ಚೂ ಹೆಚ್ಚು ಬೀಳೊಲ್ಲ. ಹದಿನೈದು ಇಪ್ಪತ್ತು ದಿನದ ಮಟ್ಟಿಗೆ ಅಲ್ಲಿ ಕ್ಯಾಂಪ್ ಹಾಕೋಣ."

"ಹದಿನೈದು ಇಪ್ಪತ್ತು ದಿನಗಳು ಮಾತ್ರ—"

—ಎಂದು ಒತ್ತಿ ಹೇಳಿದರು ವೆಂಕಟೇಶಯ್ಯ.

ಶೇಷಪ್ಪನವರು ಕೃಷ್ಣರಾಜಪುರದಲ್ಲಿ ಥಿಯೇಟರ್ ಹಾಕಿಸಲು ಏರ್ಪಾಡು ಮಾಡಿದರು.

೬

ಕಲಾಸೇವಕ ನಾಟಕಮಂಡಲಿಯ ಪ್ರಮುಖ ನಟಿ ಅನಸೂಯ. ಬೆಂಗಳೂರಿನ ಪ್ರೇಕ್ಷಕರಿಗೆ ಅನಸೂಯ ಹೊಸಬಳೇನಲ್ಲ. ಯಾವ ಅಮೆಚೂರು ಕಂಪೆನಿಗಳವರು ನಾಟಕವಾಡಿದರೂ, ಅನಸೂಯಳನ್ನು ಸೇರಿಸಿಕೊಳ್ಳದಿರುತ್ತಿರಲಿಲ್ಲ....ಕಸಬುದಾರಿ ಕಂಪೆನಿಗಳವರಾದರೂ, ಕ್ಯಾಂಪಿಗೊಂದು ಹೆಣ್ಣನ್ನು ಹುಡುಕುವ ದುರವಸ್ಥೆಯ ದೆಸೆಯಿಂದಾಗಿ, ಬೆಂಗಳೂರಿನವರೆ ಆದರೆ ಅನುಕೂಲವೆಂದು, ಈ ಹಾದಿಯನ್ನೇ ಹಿಡಿಯುತ್ತಿದ್ದರು.

ಅನಸೂಯಳ ತಾಯಿ ಲಕ್ಷ್ಮೀದೇವಮ್ಮ. ಅವರ ಗಂಡ ತೀರಿಹೋದ ಕೆಲವು ದಿವಸಗಳ ನಂತರ ಹುಟ್ಟಿದವಳು ಅನಸೂಯ. ಲಕ್ಷ್ಮೀದೇವಮ್ಮ ಬದುಕಿಯೂ ಸತ್ತಂತೆ ಎಂದು ಭಾವಿಸಿ ಬಂಧುಗಳು ಘಟಶ್ರಾದ್ಧವನ್ನಾಚರಿಸಿದರು.

ಬಲಾತ್ಕಾರವಾಗಿ ಊರುಬಿಟ್ಟಳು ಲಕ್ಷ್ಮೀದೇವಿ. ಕೆಟ್ಟಮೇಲೆ ಪಟ್ಟಣಕ್ಕೆ ಸೇರಿದಳು. ಕೆಟ್ಟು ಬಾಳಿದಳು. ಅನಸೂಯಳನ್ನು ಸಾಕಿ ಬೆಳೆಸಿದಳು.

ಅನಸೂಯ ದೊಡ್ಡವಳಾದಂತೆ, ನಾಟಕಗಳಲ್ಲಿ ಪಾತ್ರವಹಿಸಲಾರಂಭಿಸಿದಳು.

ಅನಸೂಯ ಕೋಗಿಲೆಯಂತೆ ಹಾಡುತ್ತಿರಲಿಲ್ಲ. ನವಿಲಿನಂತೆ ನರ್ತಿಸುತ್ತಿರಲಿಲ್ಲ. ಗಿಳಿಯಂತೆ ಮಾತನಾಡಲೂ ಬಲ್ಲವಳಲ್ಲ. ಅವಳಲ್ಲಿನ ಯಾವ ಪ್ರತಿಭೆಯನ್ನೂ ಕಂಡು ಯಾರೂ ಅವಳನ್ನು ರಂಗಭೂಮಿಯ ಮೇಲೆ ಏರಿಸಿರಲಿಲ್ಲ.

ನಾಟಕದವರಿಗೆ ಆಗಬೇಕಾದದ್ದು "ಹೆಣ್ಣು."

ಈ ಎರಡು ಅಕ್ಷರಗಳಿಗೆ ಹೋಲುವಂತಿದ್ದು, ಧೈರ್ಯವಾಗಿ ಬಂದು, ನಾಲ್ಕು ಜನರೆದುರು ನಿಲ್ಲುವಂತಿದ್ದರೆ ಸಾಕು.—ನಮ್ಮ ಕಂಪೆನಿಯಲ್ಲೂ ಹೆಂಗಸರಿದ್ದಾರೆ ಅಂತ ಹೇಳಿಕೊಳ್ಳಬಹುದು.

ಕಾಸು ಕೊಡುವ ಜನ, ಬೋರ್ಡಿನ ಮೇಲೆ ಹೆಣ್ಣ ಹೆಸರನ್ನು ನೋಡಿ, ಗೋಡೆಯ ಮೇಲೆ ಹೆಣ್ಣು ಮುಖವನ್ನು ಕಂಡು, ಮುಂದೆ ನಡೆಯುವ ತಮ್ಮ ಮನಸ್ಸನ್ನು ಬದಲಾಯಿಸಿ, ಬುಕಿಂಗ್ ಆಫೀಸಿನ ಕಡೆ ತಿರುಗಿ

ದರೆ ಸಾಕು. ಇದಕ್ಕಿಂತಲೂ ಹೆಚ್ಚಿನ ಪ್ರಯೋಜನ ಮತ್ತೇನೂ ಇಲ್ಲ ನಾಟಕದವರ ಭಾಗಕ್ಕೆ.

ಇಷ್ಟಾದರೂ ಅನಸೂಯ ಮಾತ್ರ ತಾನು ಉನ್ನತ ನಟಿಯೆಂದೇ ಭಾವಿಸಿದ್ದಳು. ವಿಲಾಸೀ ಪ್ರೇಕ್ಷಕರು ಕೆಲವರಿಂದ ಬರುವ ಬಹುಮಾನ, ಅದರ ಜೊತೆಯಲ್ಲೇ ಇಟ್ಟ ತುಂಡು ಕಾಗದ, ನಂತರ ಪ್ರಣಯಭಿಕ್ಷೆಗಾಗಿ ಬೆನ್ನಹಿಂದಲೆಯುವ ಪ್ರಣಯಿಗಳು, ಇವುಗಳಿಂದ ಜನ ತನ್ನ ಕಲೆಗೆ ಮಾರು ಹೋಗಿದ್ದಾರೆಂದೇ ಅವಳ ಭಾವನೆ.

"ನಾಟಕದವರು ತನ್ನ ಬಳಿ ಬರುತ್ತಿರುವುದು, ತನ್ನಲ್ಲಿನ ಕಲೆಗಾಗಿ ಯಲ್ಲ...ಬೇರೆ ಗತಿಯಿಲ್ಲದೆ."—ಎಂದು ಅವಳು ಎಂದೂ ತಿಳಿದುಕೊಂಡಿರಲಿಲ್ಲ.

ಅವಳೊಡನೆ ಒಪ್ಪಂದಕ್ಕೆ ಹೋದಾಗ, ಅವಳ ಠೀಕು, ಬೆಡಗು, ಜಬರದಸ್ತುಗಳನ್ನು ನೋಡಿದರೆ—

"ಈಗಿನ ಕಾಲದಲ್ಲಿ ಬೈತಲೆಗಿರೋ ಬೆಲೆ ಮೀಸೆಗಿಲ್ಲಾ ಕಣ್ರೋ...."

—ಅಂತ ಅನುಭವಿಸಿ ಅಭಿನಯಿಸುತ್ತಿದ್ದ ಪೂಜ್ಯ ಹಿರಿಯಣ್ಣಯ್ಯ ನವರ ಮುಸುಕಿನೊಳಗಿನ ಗುದ್ದು ಅನುಭವಕ್ಕೆ ಬರುತ್ತಿತ್ತು.

ಈ ಬಣ್ಣದ ಬೊಂಬೆಯನ್ನು ಕಂಡು ಬೇಸರಗೊಂಡ ಶ್ರೀಧರ ಒಮ್ಮೆ ವೆಂಕಟೇಶಯ್ಯನನ್ನು ಕೇಳಿದ—

"ಇಂಥ ಹೆಣ್ಣುಗಳಿಗೆ ಹಣ ತೆತ್ತು, ಕಲೆಗೆ ದ್ರೋಹವನ್ನೆಸಗುವುದ ಕ್ಕಿಂತಾ, ಗಂಡಸರೇ ಟೋಪ್ಫ ಹಾಕಿಕೊಂಡರೆ ಮೇಲಲ್ಲವೇ?"

"ಬಂದು ನೋಡುವ ಭೂಪತಿ ಬೇಕಲ್ಲ"—ಎಂದರು ವೆಂಕಟೇಶಯ್ಯ ನಿರುತ್ಸಾಹದಿಂದ.

"ಹೆಂಗಸೇ ನಾರದನ ಪಾರ್ಟನ್ನೂ ಮಾಡಬೇಕು, ಹೆಂಗಸೇ ಕೃಷ್ಣನ ಪಾರ್ಟನ್ನೂ ಮಾಡಬೇಕು ಅಂತ ನಮ್ಮ ಜನ ಬಯಸುತ್ತಿರುವಾಗ, ಗಂಡು ಹೆಣ್ಣಾಗಿ ಬಂದರೆ ಒಪ್ಪಿಯಾರೆ?"

"ಇದು ನಮ್ಮ ಪ್ರೇಕ್ಷಕರ ತಪ್ಪೇ?"

"ಅಲ್ಲ!....ಪ್ರತಿಯೊಂದರಲ್ಲೂ ವಿಲಾಸವನ್ನೇ ಬಯಸುತ್ತ ಬೆಳೆದು ಬಂದ ನಮ್ಮ ಮನೋಭಾವದ ತಪ್ಪು."

ಸ್ವಲ್ಪ ಹೊತ್ತು ಮೌನವಾಗಿದ್ದು ಶ್ರೀಧರ ಪುನಃ ಕೇಳಿದ—

"ನಮ್ಮಲ್ಲಿ ಉತ್ತಮಕಲಾವಿದೆಯರೇ ಇಲ್ಲವೇ?"

"ಇದ್ದಾರೆ.... ಬೆರಳೆಣಿಸುವಷ್ಟು ಮಾತ್ರ."

"ಅಂಥವರನ್ನೇ ಏಕೆ ಕರೆತರಬಾರದು?"

"ಅವರು ಕೇಳುವಷ್ಟು ಹಣವನ್ನು ಈ ಬಡ ಕಂಪೆನಿಗಳು ಎಲ್ಲಿಂದ ಒದಗಿಸಬೇಕು? ಹಾಗೂ ಕೊಟ್ಟು ತರೋಣವೆಂದರೆ, ಅಂತಹ ಹೆಣ್ಣುಗಳ ಮೇಲೆ ಹಣದ ರಾಶಿಯನ್ನು ಸುರಿದು, ಸ್ವಾರ್ಥದ ಮುಸುಕನ್ನೆಳೆದು, ಮರೆ ಮಾಡಿಬಿಡುತ್ತಾರೆ ನಮ್ಮ ಬಂಡವಾಳಗಾರರು."

"ಇಲ್ಲಿಯೂ ಬಂಡವಳಗಾರರ ಪ್ರಭಾವವೇ?"

"ಎಲ್ಲೆಲ್ಲಿಯೂ ಅವರದೇ ಇಟ್ಟ ಹೆಜ್ಜೆ. ನಮ್ಮ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕಾಣಿಸಿಕೊಳ್ಳುವ ಈ ಉನ್ಮತ್ತ ಸರ್ಪಗಳು ಕಲಾರಂಗದಲ್ಲೂ ತಲೆಯಿಟ್ಟವೆ. ಕಲೆಯನ್ನೇ ಕೊಳ್ಳಲೆತ್ನಿಸುತ್ತಿವೆ".

"ಕಲೆ ಕೊಳ್ಳುವ ವಸ್ತುವೇ?"

"ಎಂದೆಂದಿಗೂ ಅಲ್ಲ. ಕಲೆ ಕೊಳ್ಳುವ ವಸ್ತುವೂ ಅಲ್ಲ. ಮಾರುವ ವಸ್ತುವೂ ಅಲ್ಲ. ರಸಿಕ ಹೃದಯ ಅನುಭವಿಸುವ ವಸ್ತು".

"ಮತ್ತೆ ನಿಮ್ಮ ಮಾತಿನ ಅರ್ಥ?"

"ಕಾಡಿನಲ್ಲಿ ಆಡಿಕೊಳ್ಳುವ ಗಿಳಿಯನ್ನು ಕಂಡು ಮೋಹಿತರಾಗಿ, ಅದನ್ನು ಹಿಡಿದು ಬಂಗಾರದ ಪಂಜರದಲ್ಲಿಟ್ಟು ನೋಡುವ ರಸಿಕರೇ ನಮ್ಮಲ್ಲಿ ಬಹುಮಂದಿ. ಇಂದಿನ ನಮ್ಮ ಕಲಾಭಿಮಾನಿ ಬಂಡವಾಳ ಗಾರರೂ ಇಂತಹ ಮನೋಭಾವದವರೇ".

—ವೆಂಕಟೇಶಯ್ಯ ವೇದನೆಯಿಂದ ಹೇಳಿದರು.

ಶ್ರೀಧರ ಮಾತನಾಡಲಿಲ್ಲ. ಕಲೆಯ ಈ ದುರವಸ್ಥೆಗಾಗಿ ಅವನ ಹೃದಯ ಮಿಡಿಯುತ್ತಿತ್ತು.

# ೧೦

ನಾಟಕ ಬಿಟ್ಟಮೇಲೆ ಎಲ್ಲರೂ ಬಣ್ಣ ಅಳಿಸಲು ಕುಳಿತಿದ್ದರು. ನರೇಂದ್ರನೂ ಶ್ರೀಧರನ ಪಕ್ಕದಲ್ಲೇ ಕುಳಿತಿದ್ದ. ಬಣ್ಣ ಅಳಿಸುವಾಗ ಉಂಗುರಕ್ಕೆ ಕೊಳೆ ತಗುಲಬಾರದೆಂದು ಅದನ್ನು ಕಳಚಿ ಕನ್ನಡಿಯ ಎದುರಿಗಿಟ್ಟಿದ್ದ.

ಮುಖ ಒರೆಸಿಕೊಳ್ಳುತ್ತಿರುವಾಗೊಮ್ಮೆ, ಶ್ರೀಧರನ ದೃಷ್ಟಿ ಉಂಗುರದ ಮೇಲೆ ಹೊರಳಿತು. ನರೇಂದ್ರ ನಿತ್ಯವೂ ಹಾಕಿಕೊಳ್ಳುವ ಉಂಗುರ ಅದಾಗಿರಲಿಲ್ಲ. ಶ್ರೀಧರನ ಕುತೂಹಲ ಕೆರಳಿತು.

"ನಿನ್ನ ಉಂಗುರವೆಲ್ಲಿದೆ?"—ಅವನು ಕೇಳಿದ.

"ಇಲ್ಲೇ ಇದೆಯಲ್ಲ"—ಕನ್ನಡಿಯ ಮುಂದಿಟ್ಟ ಉಂಗುರದ ಕಡೆ ಬೆರಳುಮಾಡಿ ತೋರಿಸಿದ ನರೇಂದ್ರ.

"ಇದು ನಿನ್ನದಲ್ಲ".

"ನನ್ನದೇ".

"ಸುಳ್ಳು...."

ನರೇಂದ್ರನಿಗೆ ಈಗ ಜ್ಞಾಪಕವಾಯಿತು. ಶ್ರೀಧರನೊಡನೆ ಯಾವ ವಿಚಾರವನ್ನೂ ಮುಚ್ಚಿಡುವ ಅಗತ್ಯಕಾಣದೇ ಹೇಳಿದ—

"ನಿಜ! ಇದು ನನ್ನದಲ್ಲ."

"ಮತ್ತೆ ಯಾರದ್ದು!"

"ನನ್ನವರದು".

"ಅಂದರೆ!"

"ಅನಸೂಯಳದು".

"ಅವರು ನಿನ್ನವರೇ?"

"ಹೌದು".

"ಅದು ಹೇಗೆ ಸಾಧ್ಯ!"

"ಅದೇಕೆ ಅಸಾಧ್ಯ!....ನಾನು ಅವಳನ್ನು ಪ್ರೀತಿಸಿದ್ದೇನೆ. ಅವಳು ನನ್ನನ್ನು ಪ್ರೀತಿಸಿದ್ದಾಳೆ."

"ಅದಕ್ಕೆ?"

"ಈ ಬದಲಾವಣೆ....ನನ್ನ ಮತ್ತು ಅವಳ ಗಾಢಪ್ರೇಮದ ಕುರುಹು".

"ಹಾಗಾದರೆ ಇದು Mutual exchange...."

"....of love"—ಎಂದು ವಾಕ್ಯ ಪೂರ್ತಿಮಾಡಿದ ಶ್ರೀಧರ.

ನರೇಂದ್ರ ನಾಟಕಕಕ್ಕಾಗಿ ಕಂಪೆನಿಗಳನ್ನಾಶ್ರಯಿಸಿದವನಲ್ಲ. ಜೀವನಕ್ಕಾಗಿ ಇಲ್ಲಿ ಕೈಯೊಡ್ಡಿದವನೂ ಅಲ್ಲ. ಮನೆಯಲ್ಲಿ ಸಾಕಷ್ಟು ಅನುಕೂಲವಿತ್ತು. ತಂದೆ ಚಿಕ್ಕಂದಿನಲ್ಲೇ ತೀರಿಹೋಗಿ, ತಾಯಿಯ ಮುದ್ದಿನಿಂದ ಬೆಳೆದ ನರೇಂದ್ರ. ತನ್ನ ಊರಿನಲ್ಲಿ ಶಾಲಾಜೀವನವನ್ನು ಮುಗಿಸಿದವನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬಂದ. ಕಾಲೇಜನ್ನು ಸೇರಿದ.

ಕಾಲೇಜನ್ನು ಸೇರಿದ ಮೇಲೆ....ಮತ್ತೆ ಕಾಲೇಜಿಗೆ ಹೋಗಲಿಲ್ಲ ನರೇಂದ್ರ. ಅಮೆಚೂರು ಕಂಪೆನಿಗಳ ಜೊತೆಯಲ್ಲಿ ಸೇರಿಕೊಂಡು ನಾಟಕವಾಡುವ ಖಯಾಲಿ ಅಂಟಿಕೊಂಡಿತು.

ಅನಸೂಯಳ ಪರಿಚಯವಾದದ್ದು ನರೇಂದ್ರನ ದಿಕ್ಕನ್ನು ಮತ್ತಷ್ಟು ಬದಲಾಯಿಸಿತ್ತು. ಈ ಪರಿಚಯ ಪ್ರಬಲವಾಗಿ ಅವಳು ಹೋದಲ್ಲೆಲ್ಲಾ ಅವಳ ಹಿಂಬಾಲಕನಾದ. ಅವಳ ಪ್ರೇಮದ ಭಿಕ್ಷುಕನಾದ.

ಪ್ರತಿ ತಿಂಗಳೂ ಮನೆಯಿಂದ ಹಣ ಬರುತ್ತಿತ್ತು ಕಾಲೇಜಿನ ವ್ಯಾಸಂಗಕ್ಕೆಂದು. ಆದರೆ ನರೇಂದ್ರ ಕಾಲೇಜನ್ನು ಬಿಟ್ಟು ಬಹಳ ದಿನಗಳಾಗಿಹೋಗಿತ್ತು. ಈ ಹಣ ಅನಸೂಯಳ ಮನಸ್ತೃಪ್ತಿಗಾಗಿ ವಿನಿಯೋಗವಾಗುತ್ತಿತ್ತು.

ಅನಸೂಯಳ ವರ್ತನೆಯಿಂದ, ಅವಳ ಬಗ್ಗೆ ಸಂಶಯದಿಂದಿದ್ದ ಶ್ರೀಧರನಿಗೆ ನರೇಂದ್ರನ ನಡತೆ ಸರಿಬೀಳಲಿಲ್ಲ. ಅವನೊಮ್ಮೆ ಹೇಳಿದ—

"ರಂಗಭೂಮಿ ದೇವಾಲಯವಿದ್ದಂತೆ. ಇಲ್ಲಿ ಎಲ್ಲರ ಮನಸ್ಸೂ ಪವಿತ್ರವಾಗಿರಬೇಕು".

"ಪವಿತ್ರ ಯಾವುದು? ಅಪವಿತ್ರ ಯಾವುದು? ಒಂದು ಗಂಡು ಒಂದು ಹೆಣ್ಣನ್ನು ಪ್ರೀತಿಸುವುದೇ ಅಪವಿತ್ರವೇ!"

"ಪ್ರೇಮ ಅಪವಿತ್ರವೆಂದು ನಾನು ಹೇಳ್ಲಿಲ್ಲ. ಅದಕ್ಕೆ ನೀನು ಕೊಟ್ಟಿರುವ ಅರ್ಥ ಅಪವಿತ್ರ".

"ಮಜಾ ಮಾಡುವ ಈ ಕಾಲದಲ್ಲಿ ಅವನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬಾರದು."

"ನಾಳಿನ ಯೋಚನೆಯಾದರೂ ಬೇಡವೇ?"

"ನಾಳಿನ ಯೋಚನೆಯಿಂದ ಇಂದೊದಗುವ ಸುಖವನ್ನು ಒದ್ದೋಡಿಸುವವವರು ನಾವಲ್ಲ. ನಾಳೆ ಏನೇ ಆಗಲಿ ಇವತ್ತು ಸಾಲಮಾಡಿಯಾದರೂ ಸುಖಪಡಬೇಕು."

" ಈ ಸಾಲ ತೀರಿಸಲಸಾಧ್ಯವಾಗಿ, ಇಂದಿನ ಸುಖದಿಂದ ನಾಳಿನ ಕಷ್ಟ ದುಸ್ಸಹವಾದರೆ?"

"ನಾಳೆ—ಅದು ಇದೆಯೋ ಇಲ್ಲವೋ ಯಾರಿಗೆ ಗೊತ್ತು—

ಹಿಂದೊಂದು ಬಾಗಿಲ್, ಆ ಬೀಗಕ್ಕೆ ಕೈಯಿಲ್ಲ;
ಮುಂದೆ ತೆರೆ, ಅದನೆತ್ತಿ ನೋಡಲಳವಲ್ಲ;
ಈ ಎಡೆಯೊಳೊಂದೆರಡುದಿನ ನೀನು ನಾನೆಂದು
ಹರಟುವೆವು; ಬಳಿಕಿಲ್ಲ ನೀನು ನಾನುಗಳು."

"ಇರುವ ಎರಡು ದಿನವಾದರೂ ಘನವಾಗಿ ಬಾಳಲೆತ್ನಿಸಬೇಕು".

"ಆಗ ಸತ್ತನಂತರ ಸ್ವರ್ಗ ಸಿಗುವುದೇನು—ನನಗೆ ಆ ಸ್ವರ್ಗದ ಅಪೇಕ್ಷೆಯೂ ಇಲ್ಲ.

ಸ್ವರ್ಗದಲಿ ಹೆಚ್ಚೇನು? ಹಿರಿಯರು ಮಧುಪಾನ;
ಅದನೆ ನಾನಿಲ್ಲಿ ಬೇಡಿದೊಡೆ ತಪ್ಪೇನು?"

ಶ್ರೀಧರ ಮಾತನಾಡುವಂತಿರಲಿಲ್ಲ—ತಲೆ ತಗ್ಗಿಸಿದ.

# ೧೧

ಕೃಷ್ಣರಾಜಪುರದಲ್ಲಿ ಥಿಯೇಟರು ಸಿದ್ಧವಾಯಿತು. ಪ್ರೊಪ್ರೈಟರ್ ಶೇಷಪ್ಪನವರಿಗೆ ನಟರನ್ನು ಅಲ್ಲಿಗೆ ಸಾಗಿಸಿದರೆ ಸಾಕಾಗಿತ್ತು. ಬೆಂಗಳೂರಲ್ಲಿ ಆದಷ್ಟು ಜಾಗ್ರತೆ ಮಂಗಳಹಾಡಿಸಿ ಕೃಷ್ಣರಾಜಪುರಕ್ಕೆ ಕಾಲೂರಿಸಿದರು.

ಮೊದಲ ನಾಟಕ ಸಾಮಾಜಿಕ!.... ಬೆಂಗಳೂರಿನಲ್ಲಿ ಶತಮಾನೋತ್ಸವ ವನ್ನಾಚರಿಸಿದ ನಾಟಕ!....ಅಲ್ಲಿ ಬಿದ್ದುಹೋಯಿತು. ಹೊರದೇಶಗಳಿಂದ ಹೆಚ್ಚು ಹೆಚ್ಚಾಗಿ ಬಂದು ಸೇರಿಕೊಂಡ ರೈತರಿಗೆ ಮತ್ತು ಕಾರ್ಮಿಕರಿಗೆ ಕನ್ನಡವೇ ಬೇಡವಾಗಿತ್ತು.

ತಮಿಳು, ತೆಲುಗು ಪೌರಾಣಿಕ ಚಿತ್ರಗಳನ್ನು ಪದೇ ಪದೇ ನೋಡಿ, ಅಲ್ಲಿನ ಕೀಳುಹಾಸ್ಯಗಳಿಗೆ ಮನಸೋತಿದ್ದ ಅವರಿಗೆ, ಉನ್ನತ ಮಾತುಗಾರಿಕೆ.... ಗಂಭೀರಹಾಸ್ಯಗಳು ರುಚಿಸಲಿಲ್ಲ. ರಂಗಭೂಮಿಯ ಮೇಲೂ ಗಂಡಹೆಂಡಿರ ಜಗಳ, ಅವರ ಹೊಡೆದಾಟ ಬೈದಾಟಗಳು ಬೇಕೆನ್ನುವ ಮನೋಭಾವ ಅವರದಾಗಿತ್ತು.

ಬಡಕಲು ಗಂಡ, ದಪ್ಪನಾದ ಹೆಂಡತಿ, ಮಾರಿ ಅತ್ತೆ, ನಪುಂಸಕ ಅಳಿಯ ಇವರನ್ನೇ ಕಾಣಬಯಸುತ್ತಿತ್ತು ಅವರ ಕಣ್ಣು.

ಹಾಸ್ಯ ಪಾತ್ರಧಾರಿಗಳು ಕಡಿವಾಣವಿಲ್ಲದ ಕುದುರೆಯಂತೆ ನೆಗೆದಾಡಿ ದರೂ ಜನಕ್ಕೆ ತೃಪ್ತಿಯಾಗಲಿಲ್ಲ.

ನಾಟಕ ಬಿದ್ದು ಹೋಯಿತು.

ಈ ಪೆಚ್ಚಾಟದಿಂದ ನೊಂದ ಶ್ರೀಧರ ಕೇಳಿದ—

"ಇದೇಕೆ ಹೀಗಾಯಿತು?"

"ಕಲೆ!....ಕಲೆ!....ಅಂತ ಬೊಬ್ಬೆಯಿಡುವವರು ಇಂತಹ ಸಂದರ್ಭ ಗಳನ್ನು ನೋಡಬೇಕು. ಅರ್ಥಮಾಡಿಕೊಳ್ಳಲಾರದ ಜನರೆದುರಿನಲ್ಲಿ ಕಲೆ ವ್ಯರ್ಥ".

"ಇದು ನಮ್ಮ ಹಿಂದಿನವರ ತಪ್ಪು. ಸರಿಯಾದ ಮಾರ್ಗದಲ್ಲಿ ಪ್ರೇಕ್ಷಕ ರನ್ನು ಕೊಂಡೊಯ್ಯದೇ, ಕೀಳುಹಾಸ್ಯಗಳಿಂದ ಅವರ ಮನಸ್ಸನ್ನು ನಲಿಸಿ.... ಅವರ ಮಟ್ಟವನ್ನು ತಗ್ಗಿಸಿಬಿಟ್ಟಿದ್ದಾರೆ."

"ಸ್ವಲ್ಪಮಟ್ಟಿಗೆ ಅದೂ ನಿಜವಾದರೂ, ಬಡತನ ಅಜ್ಞಾನಗಳಿಂದ ಬೇಸತ್ತ ಜನಕ್ಕೆ ಅಮೃತ ಬೇಡ. ತಕ್ಷಣವೇ ಅಮಲೇರುವ ಹುಳಿ ಹೆಂಡವೇ ಬೇಕು."—ವೆಂಕಟೇಶಯ್ಯ ನಿಟ್ಟುಸಿರಿಟ್ಟು ಹೇಳಿದರು.

ನಾಟಕ ಬದಲಾಯಿತು. ಸಾಮಾಜಿಕದ ಬದಲಾಗಿ ಪೌರಾಣಿಕಗಳು ಪ್ರಾರಂಭವಾದುವು. ಓಬೀರಾಯನ ಕಾಲದ ಕಂತೆಗಳೆಲ್ಲಾ ಒಂದೊಂದಾಗಿ ಹೊರಗೆ ಬಂದವು.

ಹಳೆಯ ನಾಟಕಗಳಿಗೆ ಹೊಂದಿಕೊಳ್ಳುವ ನಟರನ್ನು ಹೊರಗಡೆ ಯಿಂದ ಕರೆಸಬೇಕಾಯಿತು. ನಾಟಕಕ್ಕೆ ಇಪ್ಪತ್ತು-ಮೂವತ್ತು ರೂಪಾಯಿ ಗಳನ್ನೆತ್ತಿಕೊಂಡು ಹಾಯಾಗಿ ರೈಲು ಹತ್ತಿದರು ಹಳೆಯ ಹುಲಿಗಳು.

ಉತ್ಪತ್ತಿಯ ಬಹುಭಾಗ ಹೊರಗಡೆ ಹರಿದುಹೋಯಿತು. ಕಂಪೆನಿ ಯಲ್ಲಿದ್ದವರಿಗೆ ಬಿಕ್ಕಟ್ಟು ಪ್ರಾರಂಭವಾಯಿತು.

ಬುಕಿಂಗ್ ಆಫೀಸಿನಲ್ಲಿ ದುಡ್ಡಿನ ಶಬ್ದ ಕಡಿಮೆಯಾಗುತ್ತ ಬಂದಂತೆ ಶೇಷಪ್ಪನವರು ಕೃಷ್ಣರಾಜಪುರಕ್ಕೆ ಬರುವುದನ್ನೂ ಕಡಿಮೆಮಾಡಿದರು.

ಕೊನೆಗೊಂದು ದಿನ ಅವರೂ ಮಾಯವಾದರು.

ಒಂದು ದಿನ, ಎರಡು ದಿನ ನಾಟಕ ನಡೆಯಿತು. ಅಲ್ಲಿ ಬಂದ ಉತ್ಪತ್ತಿ ಇಲ್ಲಿ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಹಣ ಬಂದಾಗ ಜೇಬಿಗಿಳಿ ಬಿಟ್ಟ ಪ್ರೊಪ್ರೈಟರರ ಮುಖವನ್ನೂ ನೋಡಲು ಸಾಧ್ಯವಾಗಲಿಲ್ಲ.

ವೆಂಕಟೇಶಯ್ಯ ಗಾಬರಿಯಾದರು. ಪ್ರೊಪ್ರೈಟರನ್ನು ನೋಡಿ ಕೊಂಡು ಬರುತ್ತೇನೆಂದು ಬೆಂಗಳೂರಿಗೆ ಹೊರಟರು.

ಅಲ್ಲಿ ವಿಚಾರವನ್ನು ಕೇಳಿ ಅವರ ಎದೆ ಒಡೆದುಹೋಯಿತು. ಖಿನ್ನ ರಾಗಿ ಹಿಂದಿರುಗಿದರು.

ವೆಂಕಟೇಶಯ್ಯನ ಬರವನ್ನೇ ನಿರೀಕ್ಷಿಸುತ್ತಿದ್ದ ನಟರು ಒಬ್ಬೊಬ್ಬರು ಒಂದೊಂದು ಪ್ರಶ್ನೆ ಕೇಳಲಾರಂಭಿಸಿದರು.—

"ಶೇಷಪ್ಪನವರು ಸಿಕ್ಕಲಿಲ್ಲವೇ".

"ಇಲ್ಲ....ಅವರು ಬೆಂಗಳೂರಿನಲ್ಲೇ ಇಲ್ಲ".

"ಮತ್ತೆ ಎಲ್ಲಿಗೆ ಹೋಗಿದ್ದಾರೆ?"

"ತಲೆ ಮರೆಸಿಕೊಂಡು ಓಡಿಹೋಗಿದ್ದಾರೆ".

"ಕಾರಣ!"

"ಮತ್ತೇನು? ನಮಗೆಲ್ಲರಿಗೂ ಸಂಬಳಕೊಡಬೇಕಾಗುವುದೆಂದು ಓಡಿ ಹೋಗಿರಬೇಕು...." ಎಂದರು ಮತ್ತೊಬ್ಬರು.

"ನಮ್ಮ ಹೊಟ್ಟೆಯಮೇಲೆ ಹೊಡೆಯವುದು ಅಂತಹ ಕಠಿಣವಾದ ಕೆಲಸವಲ್ಲ. ಅದಕ್ಕಾಗಿ ಓಡಿಹೋಗಬೇಕಾದ ಪ್ರಮೇಯವೂ ಇರಲಿಲ್ಲ"

—ಎಂದರು ವೆಂಕಟೇಶಯ್ಯ.

"ಮತ್ತೇನಾಯಿತು ಅವರಿಗೆ?"

"ಅವರದೊಂದು ಭಾರಿ ಕತೆಯಾಗಿ ಬಿಟ್ಟಿದೆ. ಬೆಂಗಳೂರಿನಲ್ಲೆಲ್ಲಾ ಗುಲ್ಲೆದ್ದಿದೆ. ತಾವು ಕೆಲಸಮಾಡುತ್ತಿದ್ದ ಬಸ್ ಕಂಪೆನಿಯಲ್ಲೂ ಸಾವಿರ ಗಟ್ಟಲೆ ಹಣ ಹೊಡೆದುಬಿಟ್ಟಿದ್ದಾರಂತೆ. ಅವರ ಮೇಲೆ ಅರೆಸ್ಟ್ ವಾರಂಟ್ ಹುಟ್ಟಿದೆ. ಅದಕ್ಕೇ ತಲೆತಪ್ಪಿಸಿಕೊಂಡು ಓಡಿಹೋಗಿದ್ದಾರೆ."

"ಮುಂದೆ ನಮ್ಮ ಗತಿ?"

"ದೇವರು ಕಾಪಾಡಬೇಕು"

—ವೆಂಕಟೇಶಯ್ಯ ನಿರಾಶೆಯಿಂದ ಆಕಾಶದ ಕಡೆ ನೋಡಿದರು.

ವರ್ತಮಾನವನ್ನು ತಿಳಿದಕೂಡಲೇ ಕಂಪೆನಿಯ ಅನುಭವವುಳ್ಳ ಹಿರಿಯ ತಲೆಗಳು ಒಬ್ಬೊಬ್ಬರಾಗಿ ಕಾಲುಕೀಳತೊಡಗಿದರು.

"ಸ್ವಲ್ಪ ಕೆಲಸವಿದೆ. ಬೆಂಗಳೂರಿಗೆ ಹೋಗಿ ರಾತ್ರಿ ನಾಟಕದ ಹೊತ್ತಿಗೆ ಬಂದುಬಿಡುತ್ತೇನೆ"—ಎಂದು ಹೊರಟುಹೋದ ಕೌಶಿಕ ತಿರುಗಿ ಈ ಕಡೆ ಮುಖ ಹಾಕಲಿಲ್ಲ.

"ಮನೆಯಲ್ಲಿ ಸೀರಿಯಸ್....ಕೂಡಲೇ ಹೊರಟು ಬಾ"

—ಎಂದು ಟೆಲಿಗ್ರಾಂ ಬಂದಿತು ರಾಮಚಂದ್ರರಾಯರಿಗೆ.

"ಬರೋ ಭಾನುವಾರ ನಮ್ಮ ಅಪ್ಪನ ತಿಥಿ...."—ಎಂದು ಕಾರಣ ಹೇಳಿ ಹೊರಟರು ಲಕ್ಷ್ಮಣರಾಯರು.

ತಿಥಿ–ಬಜ್ಜ–ಶ್ರಾದ್ಧ–ಮದುವೆ–ಉಪನಯನ–ಎಲ್ಲವೂ ಒಟ್ಟಿಗೆ ಬಂದು ಬಿಟ್ಟವು.

ಬಾಂಬುಧಾಳಿಯ ಮುನ್ನೆಚ್ಚರಿಕೆಯ ಸೈರ್ರ‍ನ್ ಕೂಗುವಾಗ, ಸುರಕ್ಷಿತ ಸ್ಥಳಗಳಿಗೆ ಸೇರಿಕೊಳ್ಳುವ ನಾಗರಿಕರಂತೆ, ಒಬ್ಬೊಬ್ಬರಾಗಿ ಪರಾರಿಯಾಗಿ

ಊರುಸೇರಿಕೊಂಡರು.

ಅನಸೂಯಳೂ ಹೊರಟುನಿಂತಾಗ, ವೆಂಕಟೇಶಯ್ಯ ಅತಿ ದೈನ್ಯದಿಂದ ಕೇಳಿಕೊಂಡರು—

"ನೀನು ಒಬ್ಬಳಾದರೂ ಇದ್ದರೆ, ನಾವು ಇರುವಷ್ಟೇ ಮಂದಿ ಹೇಗಾದರೂ ಹೊಟ್ಟೆ ತುಂಬಿಕೊಳ್ಳುತ್ತೇವೆ....ದಯವಿಟ್ಟು ಇರು."—

"ನಾನು ಇಲ್ಲಿಗೆ ಬರಬೇಕಾಗಿಯೇ ಇರಲಿಲ್ಲ. ಏನೋ ಸಮೀಪವಿದೆಯಲ್ಲ ಬೆಂಗಳೂರಿಗೆ ಅಂತ ನಾಲ್ಕು ದಿನದ ಮಟ್ಟಿಗೆ ಬಂದೆ. ಬೆಂಗಳೂರಿನಲ್ಲೇ ನನಗೆ ಬಿಡುವಿಲ್ಲದಷ್ಟು ಕೆಲಸವಿದೆ. ನಾಟಕವೊಂದರ ನಲವತ್ತು ರೂಪಾಯಿನಂತೆ ಹತ್ತು ನಾಟಕಗಳ ಕಂಟ್ರಾಕ್ಟ್ ಆಗಿಬಿಟ್ಟಿದೆ"—ಎಂದಳು ಅನಸೂಯ.

ವೆಂಕಟೇಶಯ್ಯ ಕಾಲಿಗೆ ಬೀಳುವುದೊಂದು ಬಾಕಿಯಿತ್ತು. ಅನಸೂಯ ರೈಲು ಹತ್ತಿದಳು. ಹಿಂದುಗಡೆ ನರೇಂದ್ರನೂ ಕಂಬಿಕಿತ್ತ.

ಹೆಣ್ಣಿಲ್ಲದ ಮದುವೆ ತಾನಾಗಿ ನಿಲ್ಲುವಂತೆ ನಾಟಕ ನಿಂತುಹೋಯಿತು. ಜೀವನದ ರುದ್ರನಾಟಕ ಆರಂಭವಾಯಿತು.

ಈ ರುದ್ರನಾಟಕದ ಪಾತ್ರಧಾರಿಗಳಾಗಿ ಈಗ ಉಳಿದವರು ಕೇವಲ ಕೆಲವು ಮಂದಿ. ಮತ್ತೆಲ್ಲೂ ಹೋಗಲಾರದ....ಅಥವಾ ಇರುವವರನ್ನು ಅಗಲಲಾರದ ಆರೆಂಟು ಮಂದಿ.

"ನಾನು ಎಲ್ಲಿಂದಲಾದರೂ ತಂದು ಬಸ್ ಛಾರ್ಜ್ ಕೊಡಿಸುತ್ತೇನೆ, ನೀನು ಊರಿಗೆ ಹೊರಡು"–ಎಂದರು ವೆಂಕಟೇಶಯ್ಯ ಶ್ರೀಧರನನ್ನು ಕುರಿತು.

ಇಷ್ಟುಬೇಗ ಈ ಸ್ಥಿತಿ ಬರಬಹುದೆಂದು ಶ್ರೀಧರ ಕನಸುಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಮಹತ್ಕಾರ್ಯವನ್ನು ಮಾಡಹೊರಟವನಂತೆ ಕಾಲೇಜನ್ನು ತೊರೆದು, ಮನೆಯಲ್ಲೂ ನಿಷ್ಠುರನಾಗಿ....ಹಸಿದ ಹೊಟ್ಟೆಯಿಂದ ಮತ್ತೆ ಮನೆಗೆ ಹೋಗುವುದೇ?

ಮನೆಗೆ ಹಿಂದಿರುಗಲಾರೆ—ಹಿಂದಿರುಗಬಾರದು. ಕಲೆ!....ಅದಕ್ಕಾಗಿ ಯಾವ ಕಷ್ಟಗಳು ಬಂದರೂ ಕುಗ್ಗಬಾರದು. ಜಗ್ಗಬಾರದು.

"ನಿಮ್ಮನ್ನೆಲ್ಲಾ ಬಿಟ್ಟು ನಾನು ಹೋಗುವುದಿಲ್ಲ ವೆಂಕಟೇಶಯ್ಯ. ಅದು ಏನಾಗುತ್ತದೆಯೋ ಆಗಿಹೋಗಲಿ. ನಾಲ್ಕು ಜನರಿಗಾದಂತೆ ನನಗಾಗುತ್ತದೆ.

ಸತ್ತರೆ ನಾನೊಬ್ಬನೇ ಸಾಯುವುದಿಲ್ಲ. ನಾಲ್ಕು ಜನ ಸತ್ತರೆ....ಅವರೊಡನೆ ನಾನೂ ಒಬ್ಬನಾಗುತ್ತೇನೆ."

ವೆಂಕಟೇಶಯ್ಯನ ಕಣ್ಣಿನಲ್ಲಿ ಹನಿಗಟ್ಟಿತು—

"ನಿನ್ನ ಗ್ರಹಚಾರ, ಅದಕ್ಕೆ ನಾವೇನು ಮಾಡಲಾದೀತು"—ಅವರೆಂದರು.

ವೆಂಕಟೇಶಯ್ಯ ದಿನಬೆಳಗಾದರೆ ಅವರು ಇವರನ್ನು ಹಿಡಿದು ಕರತರಲಾರಂಭಿಸಿದರು. "ಸದ್ಯ ನಾಟಕ ಆಡುತ್ತೇವೆ, ನಿಮ್ಮ ಸಾಲ ತೀರಿಸುತ್ತೇವೆ—" ಎಂದು ಹೇಳುತ್ತಾ ದಿನಗಳು ಒಂದೊಂದಾಗಿ ಉರುಳಿದವು.

ಇರುವ ಜನಗಳಿಗೆಲ್ಲ ಬಸ್ ಛಾರ್ಜನ್ನಾದರೂ ಮಾಡಿ ಊರಿಗೆ ಕಳಿಸೋಣವೆಂದರೆ, ಥಿಯೇಟರು ಕಟ್ಟಿದ ಕಂಟ್ರಾಕ್ಟರ್ ಮುನಿಸ್ವಾಮಿ ತನಗೆ ಬರಬೇಕಾದ ಬಾಕಿಯ ಬಗ್ಗೆ ಪರದೆ ಸೀನರಿಗಳನ್ನು ವಶಪಡಿಸಿಕೊಂಡ.

ಸ್ಟೇಜಿಗೆ ಕಾಫಿ ಹೊತ್ತ ಹೋಟಲಿನವನು ತನ್ನ ಬಾಕಿಗಾಗಿ ಅಡಿಗೆ ಪಾತ್ರೆಗಳ ಮೇಲೆ ಕೈಮಾಡಲು ಬಂದ.

ವೆಂಕಟೇಶಯ್ಯ ಹೆಣಗಾಡಿದರು. ಹೋರಾಡಿದರು. ದಯೆಯಿಡಿ, ಕನಿಕರವಿಡಿ ಎಂದು ಮೊರೆಯಿಟ್ಟರು.

ಅವರ ಪ್ರಯತ್ನಗಳೆಲ್ಲ ವಿಫಲವಾದವು. ಊರಿನಲ್ಲಿ ಸಾಲವೂ ಹುಟ್ಟದಾಯಿತು. ಕೊನೆಗೊಂದು ದಿನ ಕಂಪೆನಿಯ ಅಡಿಗೆ ಮನೆಯ ಒಲೆಯೂ ಆರಿಹೋಯಿತು.

ಮುಂದೇನು ಮಾಡುವುದೆಂದು ಬಗೆಹರಿಯಲಿಲ್ಲ ವೆಂಕಟೇಶಯ್ಯನಿಗೆ. ತಾವೂ ಹೀಗೆಯೇ ಕುಳಿತರೆ ತಮ್ಮ ರಕ್ಷಣೆಗೆ ಯಾರೂ ಬರುವವರಿಲ್ಲವೆಂದು ಅವರಿಗೆ ತಿಳಿದಿತ್ತು. ತಾವು ಏನಾದರೂ ಪ್ರಯತ್ನಮಾಡಬೇಕು. ಏನು ಮಾಡಬೇಕಾದರೂ ಮೊದಲು ಈ ಊರಿನಿಂದ ಹೊರಡಬೇಕು. ಈ ಹುಡುಗರನ್ನು ಬಿಟ್ಟುಹೋಗುವುದು ಹೇಗೆ? ಹಸಿವಿನ ಜ್ವಾಲೆಯಲ್ಲಿ ಅವರು ಬೇಯುವುದನ್ನು ಕಣ್ಣಾರೆ ಕಂಡು ಮರೆಯಾಗುವುದು ಹೇಗೆ?

ಮರೆಯಾಗಲೇಬೇಕು. ಬೇಗ ಮತ್ತೇನಾದರೂ ವ್ಯವಸ್ಥೆ ಮಾಡದಿದ್ದಲ್ಲಿ ನಾವೆಲ್ಲರೂ ಒಟ್ಟಿಗೆ ಸಾಯುವದಿನ ಸಮೀಪಿಸುತ್ತದೆ.

ಎಲ್ಲರನ್ನೂ ಕೂರಿಸಿ ಕೇಳಿದರು ವೆಂಕಟೇಶಯ್ಯ.

"ನೀವು ಹೋಗಿಬನ್ನಿ, ನಾವೇನೂ ತಿಳಿದುಕೊಳ್ಳುವುದಿಲ್ಲ"—ಎಲ್ಲರ ಸಂಕಟದ ಉದ್ಗಾರದ ಸಾರಾಂಶ ಇದು.

"ನಾನು ಹೊರಡದೇ ವಿಧಿಯಿಲ್ಲ. ನಾನು ಬರುವವರೆಗೂ ನೀವೆಲ್ಲರೂ ತಾಳ್ಮೆಯಿಂದಿರಬೇಕು. ಹಸಿದವರನ್ನು ನೋಡಿ ಮರುಗುವವರು ನಮ್ಮಲ್ಲಿಲ್ಲ. ಅವರನ್ನು ಅಪಹಾಸ್ಯಮಾಡುವವರು ಬಹಳ ಮಂದಿಯಿದ್ದಾರೆ. ಕೆಲಸಕ್ಕೆ ಬಾರದವರು, ನಿರುದ್ಯೋಗಿಗಳು, ಪೋಲಿಗಳು ಎಂದೂ ಜನ ನಿಮ್ಮನ್ನು ಕೂಗಬಹುದು. ಅವರೊಡನೆ ನಿಷ್ಠುರಕ್ಕೆ ಹೋಗಬೇಡಿ—ರೊಚ್ಚಿಗೆದ್ದು ಗಲಾಟೆ ಮಾಡಬೇಡಿ."

ರತ್ನಾಕರ ಇಸ್ಪೀಟು ಆಟವಾಡಿ ಸಂಪಾದಿಸಿಟ್ಟಿದ್ದ ಕೊನೆಯ ಆರಾಣೆ ವೆಂಕಟೇಶಯ್ಯನ ರೈಲುಛಾರ್ಜಿಗಾಯಿತು. ಅದನ್ನೇ ತೆಗೆದುಕೊಂಡು ರೈಲು ಹತ್ತಿದರು.

"ಬೆಂಗಳೂರಿಗೆ ಹೋಗುತ್ತೇನೆ. ಅಲ್ಲಿ ಯಾರಾದರೂ ಪರಿಚಯದವರು ಸಿಕ್ಕುತ್ತಾರೆ. ಸಾಧ್ಯವಾದರೆ ಕೂಡಲೇ ಸಹಾಯ ಕಳಿಸುತ್ತೇನೆ. ಅಸಾಧ್ಯವಾದಲ್ಲಿ ಮೈಸೂರಿನವರೆಗೂ ಹೋಗಿಬರುತ್ತೇನೆ."

ರೈಲು ಹೊರಡುವಾಗ ಭವಿಷ್ಯವನ್ನು ಯೋಚಿಸಿಕೊಂಡ ವೆಂಕಟೇಶಯ್ಯನ ಕಣ್ಣಿನಲ್ಲಿ ನೀರು ದಳದಳನೆ ಸುರಿಯುತ್ತಿತ್ತು. ರೈಲು ಹೊರಡುತ್ತಿರುವಂತೆ ಮತ್ತೊಮ್ಮೆ ಕೂಗಿಹೇಳಿದರು—

"ನೀವೆಲ್ಲರೂ ಹುಡುಗರು. ದೇವರು ಕೊಡುವ ಕಷ್ಟವನ್ನು ಧೈರ್ಯದಿಂದ ಎದುರಿಸಿ. ನಾನೂ ವಂಚಿಸಿವೆನೆಂದು ಗಾಬರಿಯಾಗಬೇಡಿ. ಬೇಗ ಬರುತ್ತೇನೆ."

ರೈಲು ಹೊರಟುಹೋಯಿತು.

ವೆಂಕಟೇಶಯ್ಯನನ್ನು ಕಳಿಸಿ ಬರಿ ಹೊಟ್ಟೆಯಲ್ಲಿ ಹಿಂದಿರುಗುವ "ಭಿಕಾರಿ...."ಗಳ ಗುಂಪನ್ನು ನೋಡಿ, ಬೆಣ್ಣೆ ಅಂಗಡಿ ವೆಂಕಟರಮಣಸೆಟ್ಟಿ ಗೊರಗಲು ಕಂಠದಿಂದ ಕಿರುಚಿದ—

"ಚೂಡಂಡಿ!........ನಾಟಕವಾಳ್ಳು ವಸ್ತಾ ಉನ್ನಾರು!"

"ಅವನೊಬ್ಬನಿದ್ದ ಮನೆಮನೆಗೂ ಹೋಗಿ ಭಿಕ್ಷೆ ಎತ್ತುವದಕ್ಕೆ. ಅವನೂ ಹೋಗಿಬಿಟ್ಟನಲ್ಲವೋ?"

—ಎಂದು, ತಂಬುಲವನ್ನುಗಿದು, ಬಾಯಿಮುಕ್ಕಳಿಸಿ ಒಳಗೆ ಹೋದ ಮಂಗಳೂರಿನ ಹೋಟಲು ಮಾಲೀಕ.

"ನೆಮ್ಮದಿಯಾಯ್ತೇಳ್ರಿ. ನಿಮ್ಮ ಹೊಲ್ದಾಗೆ ಏನಾದ್ರೂ ಕೆಲ್ಸ ಇದ್ರೆ ಕೊಡ್ರಿ ಪಾಪ, ಹುಡುಗರು ಮಾಡ್ಕೊಂಡಿರ್ತವೆ"–ಚಿತ್ರದುರ್ಗದ ಮಾರ್ವಾಡಿ ಬೀಡಿ ಎಳೆದು ಕೆಮ್ಮಿದ.

"ಇವು ಯಾವ ಕೆಲ್ಸಕ್ಕೆ ಬಂದಾವೋ ಮಾರಾಯ? ಹೊಲ ಉಳೋ ಕಾದ್ರೂ ತಾಕತ್ ಐತ ಮುಖದಾಗೆ. ಯಾವುದಾದರೂ ಓಟ್ಲಾಗೆ ಕಾಪಿ ಲೋಟ ತೊಳ್ಯಾಕಾದಾವು ಕೊರಮರ‍್ರೈತನೊಬ್ಬ ಧ್ವನಿಗೂಡಿಸಿದ".

ಬೀದಿಯಲ್ಲಿ ತಲೆಯೆತ್ತಿಕೊಂಡು ತಿರುಗುವುದೂ ಅಸಾಧ್ಯವೆನ್ನಿಸಿತು ನಾಟಕದವರಿಗೆ.

# ೧೨

ಮತ್ತೊಂದು ದಿನ ಕಳೆಯಿತು............

"ಹಸಿವು!....ಹಸಿವು!...."

—ಅನ್ನವಿಲ್ಲದ ಹೊಟ್ಟೆ ಅರಚತೊಡಗಿತು. ಕೆಲಸವಿಲ್ಲದ ಅಂಗಾಂಗಗಳು ಸೆಳೆಯತೊಡಗಿದುವು. ಜಠರದಲ್ಲಿನ ಮಾಂಸಖಂಡಗಳು ತಮ್ಮ ತಮ್ಮಲ್ಲೇ ಕುಸ್ತಿಯಾಡುವಂತೆ ತಿಕ್ಕಾಡಲಾರಂಭಿಸಿದುವು.

ಹುಂಡು ನೀರು ಬಿದ್ದಾಗ ಅವಕ್ಕೆ ಶಾಂತಿ. ಕಾದ ಮಣ್ಣಿನ ಮೇಲೆ ಬಿದ್ದುಹೋದ ಮುಂಗಾರು ಹನಿಯಂತೆ, ಮರುಕ್ಷಣದಲ್ಲಿಯೇ ಮತ್ತಷ್ಟು ಬೇಗೆ. ಮೊದಲಿನದನ್ನೂ ಮೀರಿಸುವ ದಗೆ.

ಆ ಮರುದಿನ........

ಶ್ರೀಧರ ಹೊಟ್ಟೆಯನ್ನು ಅಮುಕಿಕೊಂಡು ಮೇಲಕ್ಕೆದ್ದ. ಅಸಾಧ್ಯವಾದ ನೋವಿನಿಂದ ನಿಲ್ಲುವ ಶಕ್ತಿಯೂ ಇರಲಿಲ್ಲ. ಪಕ್ಕದಲ್ಲಿದ್ದ ಬಾಗಿಲನ್ನು ಹಿಡಿದುಕೊಂಡ.

ತಲೆ ತಿರುಗಿ ಬಂತು. ಕಣ್ಣು ಮಂಜಾಯಿತು. ಪುನಃ ಕುಸಿದು ಕುಳಿತ. ಹಾಸಿಗೆಗೆ ಒರಗಿದ.

ಹೊಟ್ಟೆಯೊಳಗಿನ ಹೊಯ್ದಾಟದಿಂದ ಹಾಹಾಕಾರವೆದ್ದಿತ್ತು. ಕ್ಷುಧೆಯ ಬಾಧೆಯಿಂದ ಅದು ಪ್ರಕ್ಷುಬ್ಧವಾಗಿತ್ತು.

"ಈ ಸಂಕಟಕ್ಕೆ ಏನುಮಾಡಬೇಕು ರತ್ನಾಕರ?"

—ಶ್ರೀಧರ ವೇದನೆಯಿಂದ ಕೇಳಿದ.

ರತ್ನಾಕರನಿಗೆ ಇವಾವುದರ ಗಮನವೂ ಇರಲಿಲ್ಲ. ಅದು ಇವನಿಗೆ ಹೊಸದೂ ಅಲ್ಲ. ಹಿಂದೆಷ್ಟೋ ಉಪವಾಸಗಳನ್ನನುಭವಿಸಿ ಪಳಗಿದ ಹೊಟ್ಟೆ ಅದು. ಎಲ್ಲರಂತೆ ಹಾಹಾಕಾರಪಡದೆ "ಪೇಷನ್ಸ್" ಆಡುತ್ತಾ ಕುಳಿತಿದ್ದ ರತ್ನಾಕರ. ಅವನು ಸಮಾಧಾನದಿಂದಲೇ ಹೇಳಿದ—

"ಹೀಗಿರುವುದು ಒಂದೆರಡು ದಿನಗಳು ಮಾತ್ರ. ಆಮೇಲೆ ಇಷ್ಟರ ಮಟ್ಟಿನ ಹಿಂಸೆಯಾಗೊಲ್ಲ".

"ಹೊಟ್ಟೆಯೊಳಗೆ ಏನೋ ತಿಕ್ಕಿದ ಹಾಗೆ ಆಗ್ತಾ ಇದೆ. ತುಂಬಾ ಉರಿ...."

"ಹೊಟ್ಟೆ ಅನ್ನೋದು ಹಿಟ್ಟಿನ ಮಿರ್ಷ ಇದ್ದಹಾಗೆ. ಮಿಲ್ ಚಾಲೂ ಆಗ್ತಾ ಇದೆ. ತಿಕ್ಕೋದಕ್ಕೆ ಮತ್ತೇನೂ ಸಿಕ್ಕದೇ ಕಲ್ಲುಗಳು ಹೀಟ್ ಆಗಿ ಬಿಟ್ಟವೆ."

"ಅದಕ್ಕೇನು ಮಾಡಬೇಕು?"

"Cool....ಮಾಡಿ".

"ಹೇಗೆ?"

"ಗಾದೆ ಕೇಳಿಲ್ಲವೇ? ಹೊಟ್ಟೆಯ ಮೇಲೆ ಒದ್ದೆಯ ಬಟ್ಟೆ ಅಂತ. ಹಾಕಿ ಕೊಳ್ಳಿ ನೋವು ಕಡಿಮೆಯಾಗುತ್ತೆ."

ರತ್ನಾಕರ ಸಣ್ಣ ಪಂಚೆಯ ತುಂಡನ್ನು ತಣ್ಣೀರಿನಲ್ಲಿ ನೆನೆಸಿ ಹಿಂಡಿದ. ಶ್ರೀಧರನ ಹೊಟ್ಟೆಯ ಮೇಲೆ ಮಡಿಸಿ ಇಟ್ಟ.

ರತ್ನಾಕರನ ಮಾತು ನಿಜವಾಗಿತ್ತು. ಒಡಲಬೇಗೆ ಕಡಿಮೆಯಾಯಿತು.

ಸ್ವಲ್ಪ ಹೊತ್ತು ಕಳೆಯಿತು. ಶ್ರೀಧರ ಬಟ್ಟೆಯ ಮೇಲೆ ಕೈಯಿಟ್ಟ. ಆಗಲೇ ಅದು ಕಾದುಹೋಗಿತ್ತು. ನೀರು ಆವಿಯಾಗುತ್ತಿತ್ತು.

"ಬಟ್ಟೆಯೂ ಬಿಸಿಯಾಯಿತು"—ಅವನೆಂದ.

"ಮತ್ತೊಂದು ಹಾಕೋಣ. ಬೇಗೆ ಕಡಿಮೆಯಾಗುವವರೆಗೂ ಬಟ್ಟೆ ಬದಲಾಯಿಸುತ್ತಲೇ ಇರಬೇಕು." ರತ್ನಾಕರ ಮತ್ತೆ ಬಟ್ಟೆ ನೆನೆಸಿದ.

ಬೆನ್ನಿಗೆ ಅಂಟಿಕೊಂಡಿತ್ತು ಹೊಟ್ಟೆ. ಪಕ್ಕೆಲುಬುಗಳು ತುಟಿ ಮೀರಿ ಬಂದ ಹಲ್ಲುಗಳಂತೆ ಮುಂದೆ ಚಾಚಿಕೊಂಡುವು. ಎರಡು ಚರ್ಮಗಳ ಮಧ್ಯೆ ಮತ್ತೇನೂ ಇಲ್ಲವೇನೋ ಎನ್ನುವಂತೆ, ಗಾಳಿ ತೆಗೆದ ರಬ್ಬರು ಚೆಂಡಿನಂತೆ, ಹೊಟ್ಟೆ ಬತ್ತಿಹೋಯಿತು.

ಹೊಟ್ಟೆಯ .ಮೇಲೆ ಕೈಯಾಡಿಸಿದ ಶ್ರೀಧರ. ಪಕ್ಕೆಲುಬುಗಳು ಕೈಗೊತ್ತುತ್ತಿದ್ದುವು. ಗಾಬರಿಯಾದ. ದುಃಖಿತನಾಗಿ ಹೇಳಿದ—

"ನಾವಿನ್ನು ಬದುಕಲಾರೆವು."

"ಹೋಗಲಿ ಬಿಡಿ. ಬದುಕಿ ಆಗಬೇಕಾದ್ದೇನು?"

"ನಾನು ಸಾಯುವುದು ನಿನಗೆ ಸಂತೋಷವೆ?"

"ಸತ್ತಮೇಲಾದರೂ....ಕಲೆಗಾಗಿ ಕೈಲಾಸವನ್ನು ಸೇರಿದ 'ಹುತಾತ್ಮ' ಅಂತ ಪತ್ರಿಕೆಯವರಾದರೂ ಹೊಗಳುತ್ತಾರೆ. ಹಾಗೆ ಹೊಗಳಿಸಿಕೊಳ್ಳೋ ದಕ್ಕೂ ಪಡೆದುಬಂದಿರಬೇಕು!"

ಶ್ರೀಧರನಿಗೆ ಸಾವಿರ ಚೇಳು ಕುಟುಕಿದಂತಾಯಿತು. ಹಸಿವಿನಲ್ಲೂ ಕೋಪವೇರಿತು. ಉದ್ರಿಕ್ತನಾಗಿ ಹೇಳಿದ—

"ಇಂಥ ಸಮಯದಲ್ಲೂ ನಿನಗೆ ತಮಾಷೆಯೇ."

"ಇಂಥ ಸಮಯದಲ್ಲೇ ತಮಾಷೆಯಾಗಿರಬೇಕು! ನಾವು ದುಃಖ ದಲ್ಲಿದ್ದರೂ ಆ ದುಃಖದಲ್ಲಿಯೇ ಸುಖವನ್ನು ಕಾಣುವ ಪ್ರಯತ್ನಮಾಡ ಬೇಕು."

"ದುಃಖದಲ್ಲಿ ಸುಖ!....ಅದು ಹೇಗೆ ಕಾಣಲು ಸಾಧ್ಯ?"

"ಸಾಧ್ಯ! ಇಷ್ಟು ಹೊತ್ತೂ ನೀವು ಮೇಲೆ ನೋಡುತ್ತಿದ್ದೀರಿ. ನಿಮ ಗಿಂತಲೂ ಸುಖವಾಗಿರುವವರನ್ನು ನೆನೆಸಿಕೊಂಡು ಅಳುತ್ತಿದ್ದೀರಿ. ನಿಮ್ಮ ಅಂತಸ್ತು ಅಭಿಮಾನಗಳನ್ನು ಮರೆತು ಕೆಳಗೆ ನೋಡಿರಿ. ನಿಮಗಿಂತಲೂ ಕೆಳಗಡೆ ಅದೆಷ್ಟು ಜನ ನರಳುತ್ತಿದ್ದಾರೆ! ನಮ್ಮ ದೇಶದಲ್ಲಿ, ಜೀವಮಾನ ವೆಲ್ಲಾ ಹೊಟ್ಟೆಗಿಲ್ಲದೆ ನರಳುವ ಭಿಕಾರಿಗಳ ಕ್ಷುಬ್ಧ ಜೀವನದ ಕರಾಳ ಅನು ಭವವನ್ನು ಕಂಡಾಗ, ಅವರಿಗಿಂತಲೂ ನಾವು ಮೇಲೆಂದು ನಿಮಗನ್ನಿಸು ವುದಿಲ್ಲವೇ?"

"ನಾವು ಭಿಕಾರಿಗಳಿಗಿಂತಲೂ ಮೇಲೆಂದು ತೃಪ್ತಿಪಟ್ಟುಕೊಳ್ಳಬೇಕೇ?"

"ಹೌದು. ಜೀವನದಲ್ಲಿ ತೃಪ್ತಿಸಿಗಬೇಕಾದರೆ, ನಮಗಿಂತ ಕೆಳಗಿನ ವರನ್ನು ನೋಡಿ ಅವರಿಗಿಂತಲೂ ನಾವು ವಾಸಿ ಎಂದು ಸಮಾಧಾನರಾಗ ಬೇಕು. ಆಗ ನೀವು ದುಃಖದಲ್ಲಿಯೂ ಸುಖವನ್ನು ಕಾಣಬಲ್ಲಿರಿ."

ರತ್ನಾಕರನ ಮಾತನ್ನು ಕೇಳಿ ಬೆರಗಾದ ಶ್ರೀಧರ. ಇಷ್ಟರಮಟ್ಟಿನ ತತ್ತ್ವೋಪದೇಶವನ್ನು ಹೇಳಬಲ್ಲನೆಂಬ ಸುಳಿವೂ ಕಂಡಿರಲಿಲ್ಲ.

ಹಸಿವು ಸಮಾಧಾನವಾದಂತಾಯಿತು ಶ್ರೀಧರನಿಗೆ.

"ಎದ್ದು ಕುಳಿತುಕೊಳ್ಳಿ....ಕತ್ತೆ ಆಟ ಆಡೋಣ."—ಅಂದ ರತ್ನಾಕರ.

"ನಿನಗಂತೂ ಇಸ್ಪೀಟು ಅಂದರೆ ಪಂಚಪ್ರಾಣ. ಸತ್ತಮೇಲೆ ನಿನ್ನ ಚಿತೆಯಲ್ಲೂ ಒಂದು ಪ್ಯಾಕು ಇಟ್ಟು ಬೆಂಕಿ ಕೊಡಬೇಕು."

"ಇಸ್ಪೀಟು ಅಂದರೆ ಅಷ್ಟು ತಾತ್ಸಾರ ನಿಮಗೆ. ಎದ್ದು ಕುಳಿತು ಕೊಳ್ಳಿ. ಈ ಆಟ ಹಸಿವನ್ನು ಮರೆಸುತ್ತೋ ಇಲ್ಲವೋ ಆಮೇಲೆ ಹೇಳಿ."

ಆಟ ಪ್ರಾರಂಭವಾಯಿತು. ಒಬ್ಬರು ಕತ್ತೆಯಾದಾಗ ಮತ್ತೊಬ್ಬರು ನಗುವುದು. ನಗುವ ತ್ರಾಣವಿಲ್ಲದಿದ್ದರೂ ತಡೆಯಲಾರದಷ್ಟು ನಗು ಬರಲಾರಂಭಿಸಿತು.

ಶ್ಮಶಾನದಂತಿದ್ದ ಕಂಪೆನಿ ಮನೆಯಲ್ಲಿ ಮತ್ತೆ ಗೆಲವು ಮೂಡಿತು.

"ಎಲ್ಲರೂ ಹೇಳುತ್ತಾರೆ. ನಾಟಕದ ಕಂಪೆನಿಗೂ ಇಸ್ಪೀಟು ಆಟಕ್ಕೂ ಗಂಟು ಅಂತ. ನೋಡಿದಿರಾ ಈ ಇಸ್ಪೀಟಾಟ ಎಷ್ಟು ಜನಗಳ ಪ್ರಾಣ ಉಳಿಸ್ತಾ ಇದೆ ಅಂತ."—ರತ್ನಾಕರ ನಗುತ್ತಾ ಹೇಳಿದ.

ಆಟದ ಮಧ್ಯೆ ಕೋತಿಯೊಂದು ಹೆಂಚು ಕಿತ್ತು ಕೆಳಗಿಣಿಕಿತು.—

"ಈ ಕೋತಿಗಳಿಗೆ ಇರುವ ಸ್ವಾತಂತ್ರ್ಯವೂ ನಮಗಿಲ್ಲ. —ಎಂದ ರತ್ನಾಕರ, ಕೋತಿಯನ್ನು ನೋಡಿ.

"ಅದು ಹೇಗೆ?"

"ಅರಳಿಮರದ ಮೇಲಿಂದ ಕಡಲೇಕಾಯಿ ಲಾರಿಗಳ ಮೇಲೆ ಹಾರಿ, ಚೀಲವನ್ನು ಹರಿದು ತಿನ್ನುತ್ತಿರುವಾಗ, ನನಗೆ ಅನ್ನಿಸಿತು—

'ಹಸಿವನ್ನು ತೀರಿಸಿಕೊಳ್ಳಲು ಮನುಷ್ಯರಾದ ನಮಗೆ ಅಷ್ಟು ಸ್ವಾತಂತ್ರ್ಯವಿಲ್ಲವಲ್ಲಾ—ಅಂತ.'

ಅನುಭವ ಪೂರ್ಣವಾದ ರತ್ನಾಕರನ ಮಾತಿನಿಂದ ಶ್ರೀಧರ ಮನಸ್ಸಿನಲ್ಲೇ ನಕ್ಕ.

ಕತ್ತೆ ಆಟ ಯಥಾಪ್ರಕಾರವಾಗಿ ಸಾಗಿತು.

# ೧೩

ಮತ್ತೆ ದಿನ ಕಳೆಯಿತು........

ಶ್ರೀಧರನಿಗೆ ಹಸಿವು ಅಭ್ಯಾಸವಾಗಿ ತಾಳಿಕೊಳ್ಳುವ ಶಕ್ತಿ ಬಂದಿತ್ತು. ಆದರೂ ಎಷ್ಟು ದಿನ ತಾಳಿಕೊಳ್ಳಲು ಸಾಧ್ಯ?

"ಈ ಊರಿನ ಜನ ಬೇಡಿದರೂ ಕೊಡುವುದಿಲ್ಲ. ಕಾಡಿದರೂ ಕೊಡುವುದಿಲ್ಲ. ನಮ್ಮಲ್ಲಿದ್ದ ಯಾವುದಾದರೂ ಪದಾರ್ಥಗಳನ್ನು ಒತ್ತೆಯಿಟ್ಟಾದರೂ ಹಣ ತರೋಣ."

—ಎಂದು ಸೂಚಿಸಿದ ರತ್ನಾಕರ. ಉಳಿದವರು ಅನುಮೋದಿಸಿದರು.

"ನಮ್ಮದಾಗಿ ನಮ್ಮ ಬಳಿ ಏನೂ ಇಲ್ಲ. ಇತರರ ಪದಾರ್ಥಗಳನ್ನು ನಾವು ಕೊಡುವುದು ನ್ಯಾಯವಲ್ಲ."

"ನಮ್ಮನ್ನು ಹೀಗೆ ಕೊಳೆ ಹಾಕಿ ಹೋಗಿದ್ದು ನ್ಯಾಯವೇನು?"—ಎಂದು ಕೇಳಿದ ರತ್ನಾಕರ.

ಶ್ರೀಧರನ ಮಾತನ್ನು ಯಾರೂ ಒಪ್ಪುವಂತಿರಲಿಲ್ಲ.

"ತಬಲ ಹಾರ್ಮೋನಿಯಂಗಳನ್ನು ಹೊರಡಿಸಿದರೆ ಸ್ಟೇಜಿನವನು ಗಂಟು ಬೀಳುತ್ತಾನೆ. ಅಡಿಗೆ ಪಾತ್ರೆಗಳು ಹೋಟೆಲಿನವನಿಗೆ ಸಾಟಿಯಾಗಿವೆ. ಮತ್ತೇನು ಉಳಿದಿದೆ?"

"ಈ ಕುರ್ಚಿಯೊಂದಿದೆಯಲ್ಲ ಅದನ್ನೇ ಕೊಟ್ಟು ಬಿಡೋಣ"—ಎಂದ ರತ್ನಾಕರ.

ಕುರ್ಚಿಯನ್ನೇ ಕೊಡಬೇಕೆಂದು ತೀರ್ಮಾನವಾಯಿತು.

ಅದನ್ನಾದರೂ ಗುಟ್ಟಾಗಿ ಒಯ್ಯಬೇಕು: ರತ್ನಾಕರ ಹಗಲೆಲ್ಲಾ ಓಡಾಡಿದ. ಸಾಯಂಕಾಲ ಬಂದು ಹೇಳಿದ.

"ಆಚೆ ಬೀದಿಯ ಮಿಲ್ಟ್ರಿ ಹೋಟೆಲಿನವನಿಗೆ ಬೇಕಂತೆ. ಕ್ರಯಕ್ಕೆ ಕೊಡುವುದಾದರೆ ಮಾತ್ರ ತೆಗೆದುಕೊಳ್ಳುತ್ತಾನಂತೆ."

"ಎಷ್ಟಕ್ಕೆ?"

"ಕುರ್ಚಿ ತನ್ನಿ, ನೋಡಿ ದರ ಮಾಡುತ್ತೇನೆ ಅಂದ."

ಕತ್ತಲಾದ ಮೇಲೆ ಬೀದಿಯ ಬೆಳಕು ಬೀಳದ ಹಾದಿಯಲ್ಲಿ, ಮತ್ತಾವ ಸಾಲಿಗರಿಗೂ ಕಾಣದಂತೆ ಕುರ್ಚಿಯನ್ನು ಹೊತ್ತು ನಡೆದ ರತ್ನಾಕರ. ಶ್ರೀಧರ ಹಿಂಬಾಲಿಸಿದ.

ಮಿಲ್ಟ್ರಿ ಹೋಟೆಲಿನ ಹಿಂಬಾಗಿಲಿನಲ್ಲಿ ಕುರ್ಚಿಯನ್ನಿಳಿಸಿ ಹೇಳಿದ— "ನೀವು ಮುಂದೆ ಹೋಗಿ."

ಹಸಿವು ಮುನ್ನಡೆಯಿಸಿತು. ಕೊಚ್ಚೆಯಲ್ಲಿ ಕಾಲಿಟ್ಟು ಒಳಗೆ ದಾಟಿದ ಶ್ರೀಧರ ಕಳ್ಳನಂತೆ.

ದರದ ಬಗ್ಗೆ ಚರ್ಚೆ ಪ್ರಾರಂಭವಾಯಿತು.

"ಹೊಸ ಕುರ್ಚಿಗೆ ಸುಮಾರು ೧೦–೧೨ ರೂಪಾಯಿಗಳಾದರೂ ಬೆಲೆಯಿದೆ. ನೀವು ಎಂಟು ರೂಪಾಯಿಗಳನ್ನಾದರೂ ಕೊಡಬೇಕು"—ಎಂದ ಶ್ರೀಧರ.

"ಚರ್ಚೆ ಮಾಡುವಂತಿದ್ದರೆ ನೀವು ಬಂದ ದಾರಿಯಲ್ಲೇ ಹೊರಡಬಹುದು" —ಮಾಲೀಕ ಒರಟಾಗಿ ಹೇಳಿದ.

"ನಮ್ಮ ಪರಿಸ್ಥಿತಿ ನಿಮಗೆ ತಿಳಿದಿದೆ. ನೀವೆಷ್ಟು ಕೊಡುತ್ತೀರಿ?"

"ನಾನು ಕೊಡೋದು ಐದೇ ರೂಪಾಯಿ".

"ಅಷ್ಟೇನೇ?...."

"ಮತ್ತೆಷ್ಟು ಕೊಡ್ತಾರೆ ಸ್ವಾಮಿ ಕಳ್ಳಮಾಲಿಗೆಲ್ಲ".

"ಇದು ಕಳ್ಳಮಾಲಲ್ಲ".

"ಗಲಾಟೆಮಾಡಿದರೆ ಚನ್ನಾಗಿರೊಲ್ಲ."

ಅವಮಾನದಿಂದ ತಲೆತಗ್ಗಿಸಿದ ಶ್ರೀಧರ. ಏನಾದರಾಗಲಿ ಅಲ್ಲಿಂದ ಹೊರಟು ಬಿಡಬೇಕೆಂದು ತೀರ್ಮಾನಿಸಿದ.

ಮತ್ತೆ ಹಸಿವಿನ ಸಮಸ್ಯೆ ಮುಂದೆ ಬಂತು. ಬಂದಷ್ಟಾದರೂ ಬರಲಿ, ಎರಡುದಿನವಾದರೂ ಊಟಮಾಡೋಣ ಅನ್ನಿಸಿತು.

"ಸರಿ....ಹಾಗಾದರೆ ಅಷ್ಟೇಕೊಡಿ"—ಎಂದ.

ಮಾಲೀಕ ಒಳಗೆ ಹೋದ. ಎರಡು ರೂಪಾಯಿಗಳನ್ನು ತಂದು ಶ್ರೀಧರನ ಕೈಮೇಲಿಟ್ಟ.

"ನೀವು ಮಾತನಾಡಿದ್ದು ಐದು ರೂಪಾಯಿ".

"ಹೌದು. ಪರದೆ ಎಳೆಯುವ ಬಸಪ್ಪ ಇಲ್ಲಿ ಮೂರು ರೂಪಾಯಿ ಸಾಲ ಮಾಡಿದ್ದಾನೆ. ಅದನ್ನು ಮುರಿಹಾಕಿಕೊಂಡೆ".

"ಅವನ ಸಾಲಕ್ಕೂ ನಮಗೂ ಸಂಬಂಧವಿಲ್ಲ".

"ಅದೇಕೆ ಸ್ವಾಮಿ? ನಿಮ್ಮದಾದರೆ ದುಡ್ಡು, ಉಳಿದವರದು ಕಲ್ಲು ಹರಳೋ?"—ಮಾಲೀಕ ಒಮ್ಮೆಲೇ ತಾರಕಕ್ಕೇರಿದ.

"ನೀವು ಕುರ್ಚಿ ಕೊಳ್ಳುವುದುಬೇಡ. ಈ ಹಣ ವಾಪಸು ತೆಗೆದು ಕೊಳ್ಳಿ. ನಾನು ಹೊರಡುತ್ತೇನೆ".

"ಮತ್ತೆ ಬಸಪ್ಪನ ಸಾಲ?..."

"ಅದಕ್ಕೆ ನಾನು ಹೊಣೆಯಲ್ಲ".

"ನೀವು ನಾಟಕದವರು, ಟೋಪಿ ಹಾಕೋದಕ್ಕೆ ಚೆನ್ನಾಗಿ ಕಲ್ತಿದೀರಿ. ನನ್ನಹತ್ರ ನಡೆಯೋಲ್ಲ ಅವೆಲ್ಲ. ಮಾತು ಆಡಿದ ಮೇಲೆ ಮುಗಿಯಿತು. ಲೋ ರಂಗಾ!...ಆ ಕುರ್ಚಿ ತಂದು ಒಳಗಿಡೋ".

—ಹೋಟಲು ಮಾಲಿಕ ಸರ್ವರನ್ನು ಕೂಗಿ ಹೇಳಿದ.

ರಂಗ ಬಾಗಿಲು ಬಳಿಓಡಿದ. ಹಿಂಬಾಗಿಲಿನಲ್ಲಿ ಇದನ್ನೆಲ್ಲಾ ಕೇಳುತ್ತ ನಿಂತ ರತ್ನಾಕರ ಕುರ್ಚಿ ಎತ್ತಿ ಕೊಂಡು ಹೋಗಿ ಬಹಳ ಹೊತ್ತಾಗಿತ್ತು.

ರೂಪಾಯಿಗಳನ್ನು ಅವನ ಕೈಮೇಲೆಸೆದು, ಹೊರಗೆ ಬಂದ ಶ್ರೀಧರ.

## ೧೪

ಮತ್ತೊಂದು ದಿನ....

ಹಸಿವಿನ ರುದ್ರ ತಾಂಡವ ತಾನೇ ತಾನಾಗಿ ನಡೆಯುತ್ತಿತ್ತು. ಆಸ್ಪತ್ರೆಯ ದಾದಿಯೊಬ್ಬಳು ಕಂಪೆನಿ ಮನೆಗೆ ಬಂದಳು. ಮುಖ ನೋಡಿದರೆ ಎಲ್ಲಿ ಗಂಟು ಬೀಳುತ್ತಾರೋ ಎಂದು ಮುಖ ತಿರುಗಿಸಿಕೊಂಡು ಕಂಪೆನಿ ಮನೆಯೆದುರು ಜನ ತಿರುಗುತ್ತಿರುವಾಗ, ತಾನಾಗಿ ಬಂದ ದಾದಿಯನ್ನು ಕಂಡು ಆಶ್ಚರ್ಯವಾಯಿತು ನಾಟಕದವರಿಗೆ.

ನಾಟಕದವರ ಅವಸ್ಥೆಯನ್ನು ದೂರದಿಂದಲೇ ಕೇಳಿ ಮರುಗಿದ ಅವಳು ಮನಸ್ಸು ತಡೆಯಲಾರದೆ ಒಳಗೆ ಬಂದಿದ್ದಳು. ರೋಗಿಗಳಂತೆ ಒಬ್ಬೊಬ್ಬರು ಒಂದೊಂದು ದಿಕ್ಕಿನಲ್ಲಿ ಹಾಸಿಗೆ ಹಿಡಿದು ಮಲಗಿರುವುದನ್ನು ನೋಡಿ ಅವಳ ದಯಾರ್ದ್ರ ಹೃದಯ ಮರುಗಿತು.

ಸೆರಗಿನಿಂದ ಒಂದು ರೂಪಾಯಿನ ಚಿಲ್ಲರೆಯನ್ನು ತೆಗೆದು ಬಾಗಿಲ ಬಳಿ ಮಲಗಿದ ಮಲ್ಲಿಯ ಕೈಮೇಲಿಟ್ಟು, ತನ್ನ ಸೆರಗಿನಿಂದ ಕಣ್ಣನ್ನೊರಸಿಕೊಂಡು ಹೊರಟುಹೋದಳು ದಾದಿ.

ತಮ್ಮ ಸ್ಥಿತಿಗಾಗಿ ನಾಚಿಕೆಯಾಯಿತು ಶ್ರೀಧರನಿಗೆ. ಅಷ್ಟಾದರೂ ಸಿಕ್ಕಿತಲ್ಲಾ ಎಂದು ಸಂತೋಷವಾಯಿತು ರತ್ನಾಕರನಿಗೆ.

"ಹಸಿವು ತಡೆಯುವುದಕ್ಕೆ ಸಾಧ್ಯವಿಲ್ಲ.... ಬೇಗ ಅನ್ನ ಮಾಡು"— ಎಂದ ಶ್ರೀಧರ ಮಲಗಿದಲ್ಲೇ.

"ಈಗ ತಿಳಿದಿರಾ ?—ಅನ್ನಕ್ಕೆ ಎಷ್ಟು ಬೆಲೆಯಿದೆ ಅಂತ. ಆದರೇನು ಮಾಡೋದು ಸಾರ್? ಅನ್ನದೂಟಮಾಡುವ ಕಾಲ ಬಂದಿಲ್ಲ".

"ಏಕೆ?"

"ಈ ರೇಷರ್ ಗಲಾಟೇಲಿ ರೂಪಾಯಿಗೆ ಒಂದು ಸೇರು ಅಕ್ಕಿ ತಂದರೆ ಎಷ್ಟು ಜನ ತಿನ್ನಲು ಸಾಧ್ಯ ?"

"ಮತ್ತೆ ?"

"ಎಲ್ಲರಿಗೂ ಈ ಒಂದು ರೂಪಾಯಿನಲ್ಲೇ ಹೊಟ್ಟೆ ತುಂಬುವಂತೆ ನಾನು ಮಾಡುತ್ತೇನೆ."

ರತ್ನಾಕರ ಪೇಟೆಗೆ ಹೋದ. ಒಂದು ಸೇರು ಹೆಸರುಬೇಳೆ, ಅದಕ್ಕೆ ತಕ್ಕಷ್ಟು ಬೆಲ್ಲ ಇವನ್ನು ಕೊಂಡುಕೊಂಡ. ಹಿಂದಿರುಗುವಾಗ ಸೌದೆಯ ನೆನಪಾಯಿತು. ಅದಕ್ಕೆ ದುಡ್ಡು ಉಳಿದಿರಲಿಲ್ಲ.

ಮನೆಗೆ ಬಂದವನೇ ಹಿಂದುಗಡೆ ಬೇಲಿಯ ಗೂಟಗಳಿಗೇ ಕೈಕೊಟ್ಟ. ಯಾರಿಗೂ ತಿಳಿಯದಂತೆ ಅವನ್ನು ಒಳಗೆ ಸಾಗಿಸಿ ಉರಿಮಾಡಿದ. ಕೊಡ ನೀರಿಗೆ—ಬೇಳೆ ಸುರಿದು—ಬೆಲ್ಲವನ್ನು ಹಾಕಿ ಬೇಯಿಸಿದ.

"ಇದೇನಿದು?...." ಎಂದ ಶ್ರೀಧರ.

"ನಮಗೆ ಊಟದ ಹಬ್ಬ. ಅದಕ್ಕಾಗಿ ಪಾಯಸ."

ಶ್ರೀಧರನ ಬರಿದಾದ ಹೊಟ್ಟೆ ಹೆಸರು ನೀರಿಗಾಗಿ ಹಾತೊರೆಯುತ್ತಿತ್ತು. ಕುಡಿದಷ್ಟೂ ಕಡಿಮೆಯೆಂದು ತೋರಿತು. ಈ ರುಚಿಯಮುಂದೆ ಮತ್ತೆ ರುಚಿ ಇಲ್ಲವಾಗಿತ್ತು. ಬಟ್ಟಲಮೇಲೆ ಬಟ್ಟಲು ನೀರು ಹೊಟ್ಟೆಗಿಳಿಯಿತು.

ಕುಳಿತಾಗ, ನಿಂತಾಗ, ಹೊಟ್ಟೆಯಲ್ಲಿ ಪಾಯಸ ತುಳುಕಾಡುತಿತ್ತು.

"ಇವತ್ತು ನಮಗೆಲ್ಲರಿಗೂ ಪಾಯಸದ ಊಟ".

—ಕೊನೆಯ ಹುಂಡನ್ನೂ ಬಿಡದೆ ಇಳಿಸಿಬಿಟ್ಟ ರತ್ನಾಕರ.

ಆ ಮರುದಿನ....

ಸಮುದ್ರದಲ್ಲಿ ಮುಳುಗಿ ಏಳುತ್ತಿರುವವರಿಗೆ ಮರದ ತುಂಡಿನ ಆಶ್ರಯ ದೊರೆತಂತೆ ವೆಂಕಟೇಶಯ್ಯ ಊರಿಗೆ ಹಿಂದಿರುಗಿದರು. ಎಲ್ಲರನ್ನೂ ಒಟ್ಟಾಗಿ ಹೋಟಲಿಗೆ ಕರೆದುಕೊಂಡು ಹೋದರು. ಹೊಟ್ಟೆತುಂಬಾ ತಿಂಡಿ ಕಾಫಿ ಬಿದ್ದಾಗ ನಾವೂ ಮನುಷ್ಯರು ಎನ್ನುವಂತಾಯಿತು ನಾಟಕದವರಿಗೆ.

"ಇಷ್ಟೂ ದಿನ ನೀವು ಏನು ಮಾಡುತ್ತಿದ್ದಿರಿ"—ಶ್ರೀಧರ ಕೇಳಿದ.

"ಎಷ್ಟು ದಿನವಾಯಿತು? ಹತ್ತುಹನ್ನೆರಡು ದಿನವಾಯಿತು ಅಷ್ಟೆ".

"ನಿಮಗೆ ಅಷ್ಟೇ...ಆದರೆ ನಮಗೆ ಒಂದು ಯುಗವನ್ನೇ ಕಳೆದಂತಾಯಿತು"

ಮೊದಲು ಅಡಿಗೆ ನಂತರ ಮಿಕ್ಕ ವಿಚಾರವೆಂದು ಅಂಗಡಿಯಕಡೆ ಹೊರಟರು ವೆಂಕಟೇಶಯ್ಯ.

ಅಡಿಗೆಯಾಯಿತು. ಊಟವಾಯಿತು. ಹಸಿವಿನ ಜ್ವಾಲೆಯಡಗಿತು. ಹೊಟ್ಟೆ ಶಾಂತವಾಯಿತು.

"ನಾನು ಇಲ್ಲಿಂದ ಹೊರಟವನು ಬೆಂಗಳೂರಿಗೆ ಹೋದೆ. ಅಲ್ಲಿ ನನಗೆ ಸ್ವಲ್ಪವೂ ಅನುಕೂಲವಾಗಲಿಲ್ಲ. ಛಾಜಿರ್ನಮಟ್ಟಿಗೆ ಹಣವನ್ನು ಪಡೆದು ಮೈಸೂರಿಗೆ ಹೋದೆ. ಅಲ್ಲಿ ನನ್ನ ಹಳೆಯ ಸ್ನೇಹಿತರೊಬ್ಬರು ಕಂಪೆನಿ ಮಾಡಲು ಓಡಾಡುತ್ತಿದ್ದರು ಅವರನ್ನು ಹಿಡಿದು, ನಾವೆಲ್ಲಾ ಬರುವುದಾಗಿ ತಿಳಿಸಿ, ಹಣಪಡೆದೆ. ನಮ್ಮ ಕ್ಯಾಂಪು ಸೋಮಾರಪೇಟೆ ಎಂದುನಿರ್ಧರಿಸಿದ್ದೇವೆ."

"ಕೊಡಗು! ಪ್ರಕೃತಿ ಸೌಂದರ್ಯದ, ನೆಲೆವೀಡು!"

—ಶ್ರೀಧರ ಉತ್ಸಾಹದಿಂದ ಹೇಳಿದ.

"ಈಗ ಕವಿತ್ವ ಹೊರಡುತ್ತಿದೆ"—ಎಂದ ರತ್ನಾಕರ.

"ಹೊಟ್ಟೆ ತುಂಬಿದ ಮೇಲೆ ಅದು ಸಹಜವೆ"

—ಮುಗುಳುನಗೆ ನಗುತ್ತಾ ಹೇಳಿದರು ವೆಂಕಟೇಶಯ್ಯ.

"ಮತ್ತೆ ನಮ್ಮ ಮಾಜಿ ಪ್ರೊಪ್ರೈಟರರ ಗತಿ?"

"ಅವರೀಗ ಸಿಕ್ಕಿ ಬಿದ್ದಿದಾರೆ."

"ಹೇಗೆ?"

"ತಲೆ ಮರೆಸಿಕೊಂಡು ಓಡಿ ಹೋದ ನಮ್ಮ ಪ್ರೊಪ್ರೈಟರ್ ಸಾಹೇಬರು ಹುಬ್ಬಳ್ಳಿಯಲ್ಲಿದ್ದರಂತೆ. ಹೋಟಲೊಂದರ ರೂಮಿನಲ್ಲಿ, ಅದೇನೋ ಹುಬ್ಬಳ್ಳಿಕರ್ ಅಂತ ಹೆಸರಿಟ್ಟುಕೊಂಡು ವೇಷ ಮರೆಸಿಕೊಂಡು ತಿರುಗಾಡುತ್ತಿದ್ದರಂತೆ."

"ಪಾಪ...."—ಎಂದ ಶ್ರೀಧರ.

"ಪಾಪಿ...."—ಅಂದ ರತ್ನಾಕರ.

"ಅಲ್ಲಿಂದ ಬೆಂಗಳೂರಿನ ತಮ್ಮ ಆಪ್ತರಿಗೆ ಪತ್ರ ಬರೆಯುತ್ತಿದ್ದರಂತೆ. ಇದೇ ಜಾಡಿನಲ್ಲಿದ್ದ ಬೆಂಗಳೂರಿನ ಪೋಲೀಸರಿಗೆ ಗುಟ್ಟು ಸಿಕ್ಕಿ ಬಿತ್ತು. ಹುಬ್ಬಳ್ಳಿಗೆ ವರ್ತಮಾನ ಹೋಯಿತು".

"ನಂತರ?"

"ಹುಬ್ಬಳ್ಳಿಯ ಪೋಲೀಸರು ದಸ್ತಗಿರಿ ಮಾಡಿದರು. ಮೊನ್ನೆ ಬೆಂಗಳೂರಿಗೆ ತಂದಿದ್ದಾರೆ."

"ಬಿಡುಗಡೆ ಮಾಡಿದರೆ ?"

"ಅವನನನ್ನೇಕೆ ಬಿಟ್ಟಾರು? ಜಾಮೀನು ಕೊಡಲೂ ಯಾರೂ ಧೈರ್ಯಮಾಡಿ ಮುಂದೆ ಬರಲಿಲ್ಲ. ರಿಮ್ಯಾಂಡಿನಲ್ಲಿ ಲಾಕಪ್ಪಿನಲ್ಲಿಟ್ಟಿದ್ದಾರೆ. ಕೇಸು ದಾಖಲ್ ಮಾಡಿದ್ದಾರೆ."

"ಮುಂದೆ ಅವರ ಗತಿ?"

"ಎಂಟೋ ಹತ್ತೋ ವರುಷ ಕಠಿಣ ಸಜ."

"ನನಗೇಕೋ ಇದನ್ನೆಲ್ಲಾ ಕೇಳಿ ಸಂಕಟವಾಗುತ್ತಿದೆ."

—ಶ್ರೀಧರ ವ್ಯಸನದಿಂದ ಹೇಳಿದ.

"ಸಂಬಳಕ್ಕೇಂತ ಹೋಗಿ, ಅವರು ಜೇಬು ತಿರುಗಿಸಿದಾಗ, 'ಕಾಫಿಗಿಲ್ಲ ....Four annas please'....ಅಂತ ಭಿಕ್ಷುಕರಂತೆ ಕೈ ಒಡ್ಡುತ್ತಿದ್ದಿರಲ್ಲ, ಆಗ ಹೇಗಿತ್ತು ಸಾರ್!"—ರತ್ನಾಕರ ಚುಚ್ಚಿ ನುಡಿದ.

"ಕನ್ನಡಕ ಕಿಸೆಯಲ್ಲಿ ಸೇರಿಸಿ, ಪಂಚೆಯ ಸೆರಗನ್ನೆತ್ತಿ ಹಿಡಿದು, ಕುಂಟುತ್ತಾ ನಡೆಯುತ್ತಿದ್ದರಲ್ಲ....ಅದಕ್ಕೆ ಪ್ರತಿಫಲ ಇದು."

—ಯಾವ ಮಾತನ್ನೂ ಆಡದಿದ್ದ ಮಲ್ಲಿಯೂ ಒಂದು ಮಾತು ತೂರಿಬಿಟ್ಟ.

ವೆಂಕಟೇಶಯ್ಯ ನಕ್ಕರು.

ಕೃಷ್ಣರಾಜಪುರದಲ್ಲಿ ಕ್ಯಾಂಪು ಮುಕ್ತಾಯವಾಯಿತು.

## ೧೫

ಎಲ್ಲರೂ ಬೆಡ್ಡಿಂಗ್ ಕಟ್ಟಿದರು. ರತ್ನಾಕರ ಮಾತ್ರ ಕಟ್ಟಿರಲಿಲ್ಲ. ಡೋಲಾಯಮಾನವಾದ ಮನಸ್ಸು ಇರಲೂಬಾರದು, ಹೊರಡಲೂ ಬಾರದಾಗಿ ಹೊಯ್ದಾಡುತ್ತಿತ್ತು.

"ರೈಲಿಗೆ ಸಮಯವಾಯಿತು ಬೇಗ ಕಟ್ಟು"–ಶ್ರೀಧರ ಬಲಾತ್ಕರಿಸಿದ.

"ನಾನು ಬರುವುದಿಲ್ಲ. ನನಗೆ ನಾಟಕದ ಕಂಪೆನಿ ಸಾಕಾಗಿ ಹೋಯಿತು."

"ಏಕೆ?"

"ಇದನ್ನು ನಂಬಿಕೊಂಡರೆ ನನ್ನ ಜೀವನ ನಡೆಯಲಾರದು–ಈಗಾಗಲೇ ನಾನು ನಾಲ್ಕಾರು ಉಪವಾಸಗಳನ್ನು ಅನುಭವಿಸಿದ್ದೇನೆ. ಮತ್ತೆ ಇಂತಹ ಉಪವಾಸಗಳನ್ನು ಅನುಭವಿಸುವ ಸಾಮರ್ಥ್ಯವಿಲ್ಲ."

"ಕಂಪೆನಿ ಮುಂದುವರೆಯುತ್ತಲ್ಲ...."

"ಮುಂದುವರೆಯುತ್ತೋ, ಮರಿದುಬೀಳುತ್ತೋ ಯಾರಿಗೆ ಗೊತ್ತು ? ಈ ಮಳೆಗಾಲದ ಅಣಬೆಗಳನ್ನು ಆಶ್ರಯಿಸಿದರೆ ಬದುಕುವುದು ಕಷ್ಟ."

"ಮತ್ತೇನು ಮಾಡುತ್ತೀಯೆ?"

"ಇಲ್ಲೇ ಕಾರ್ಖಾನೆಯಲ್ಲಿ ಕೆಲಸಕ್ಕೆ ಅರ್ಜಿಹಾಕಿದ್ದೇನೆ. ಸಿಕ್ಕುವ ಭರವಸೆಯಿದೆ."

"ಸಿಕ್ಕದಿದ್ದರೆ?"

"ಮತ್ತೊಂದು ಕೆಲಸ ಹುಡುಕುತ್ತೇನೆ. ಅಂತೂ ಈ ನಾಟಕದ ಕಂಪೆನಿ ಬೇಡ."

"ನಮ್ಮ ಕಷ್ಟದಲ್ಲಿ ನೀನಿದ್ದಾಗ, ಆ ಕಷ್ಟಗಳ ಪರಿವೆಯೇ ಇಲ್ಲದೇ ನಗುತ್ತಾ ಕಾಲಹಾಕಿದೆವು. ನಿನ್ನನ್ನು ಬಿಟ್ಟು ನಾವು ಹೋಗುವುದಿಲ್ಲ."

"ಈ ರೀತಿ ಜನಗಳ ಅಭಿಮಾನದಿಂದಲೇ ನಾನು ಇಷ್ಟು ದಿನ ಕಂಪೆನಿಯಲ್ಲುಳಿಯಬೇಕಾಯಿತು. ನಿಮಗಾದರೆ ಹೊಟ್ಟೆಯ ಯೋಚನೆಯಿಲ್ಲ. ಮನೆಗೆ ಹೋದರೆ ಮುಗಿಯಿತು. ನಮ್ಮ ಪಾಡು ಹಾಗಲ್ಲ; ಇಲ್ಲೇ ಬಿದ್ದು ಒದ್ದಾಡಬೇಕು. ಈಗ ಸಿಕ್ಕುವ ಕೆಲಸ ಕಳೆದುಕೊಂಡರೆ, ಕೈಗೆ ಬಂದ ತುತ್ತು

ಬಾಯಿಗಿಲ್ಲವಾದೀತು."

"ಹೋಗಲಿ ಬಿಡು. ಇಂತಹ ವಿಚಾರಗಳಲ್ಲಿ ನಾವು ಬಲಾತ್ಕರಿಸ ಬಾರದು"—ಎಂದರು ವೆಂಕಟೇಶಯ್ಯ.

ಶ್ರೀಧರನ ಬಲಾತ್ಕಾರ ನಡೆಯಲಿಲ್ಲ.

ರೈಲು ಹೊರಟಿತ್ತು. ರತ್ನಾಕರನೂ ಸ್ಟೇಷನ್ನಿಗೆ ಬಂದಿದ್ದ. ಹೊರಡು ವಾಗ ಈ ಅಗಲುವಿಕೆಯ ಸಂಕಟ ಹೃದಯುವನ್ನು ಭೇದಿಸುತ್ತಿತ್ತು.

ವೆಂಕಟೇಶಯ್ಯ ರತ್ನಾಕರನ ಕೈಮೇಲೆ ಸ್ವಲ್ಪ ಹಣವನ್ನು ಕೊಟ್ಟು ಹೇಳಿದರು—

"ಇದನ್ನು ಇಟ್ಟುಕೋ. ಕೆಲಸ ಸಿಕ್ಕದಿದ್ದರೆ ಬಂದು ಬಿಡು."

"ಭಿಕ್ಷೆ ಬೇಡಿದರೂ ಸರಿಯೇ ನಾನಿನ್ನು ನಾಟಕದ ಕಂಪೆನಿಗೆ ಬರು ವುದಿಲ್ಲ"—ಖಡಾಖಂಡಿತವಾಗಿ ಹೇಳಿದ ರತ್ನಾಕರ.

ಸಿಳ್ಳುಹಾಕಿತು. ರೈಲು ಹೊರಟಿತ್ತು. ಭಾರವಾದ ಹೃದಯಗಳು ದುಃಖದಿಂದ ಬೀಳ್ಕೊಟ್ಟವು.

ರತ್ನಾಕರ ಕಂಬನಿ ತುಂಬಿದ ಕಣ್ಣುಗಳಿಂದ ಓಡುವ ರೈಲನ್ನೇ ದಿಟ್ಟಿ ಸುತ್ತಾ ನಿಂತ.

ಒಂದು ಕ್ಷಣದಲ್ಲಿ ಅದೂ ಮರೆಯಾಯಿತು—ಮನುಷ್ಯನ ವಿಫಲ ಮನೋಭೀಷ್ಟಗಳಂತೆ.

## ೧೬

ಕೊಡಗು!........

ಪಶ್ಚಿಮಾದ್ರಿಯ ಸರಹದ್ದಿನಲ್ಲಿನ ಸುಂದರವಾದ ಪ್ರಸ್ಥಭೂಮಿ. ನಂದನ ವನದಂತಿರುವ ಈ ನಾಡು, ಪೂರ್ಣ ಮಳೆನಾಡು.–

ಕಣ್ಣು ಹಾದಲ್ಲೆಲ್ಲಾ ಹಸಿರು! ಮನಸ್ಸು ಓಡಿದಲ್ಲೆಲ್ಲಾ ಆನಂದ!

ಇಲ್ಲಿ ಬಂದಾಗ ಅರಸಿಕ ರಸಿಕನಾಗುತ್ತಾನೆ. ಕಲ್ಲುಹೃದಯ ಕೋಮಲವಾಗುತ್ತದೆ. ಕಸ ರಸವಾಗಿ ಕವಿತೆ ತನ್ನಷ್ಟಕ್ಕೇ ರೂಪು ಗೊಳ್ಳುತ್ತದೆ.

ಇಂತಹ ಸುಂದರ ನಾಡನ್ನು ಹಾದುಹೋಗುವಾಗ, ಪ್ರಕೃತಿಮಾತೆ ತನಗಾಗಿ ಕೈಚಾಚಿ ಎತ್ತಿಕೊಳ್ಳುತ್ತಿದ್ದಾಳೋ ಎನ್ನಿಸಿತು ಶ್ರೀಧರನಿಗೆ.

ಸೋಮವಾರ ಪೇಟೆಯಲ್ಲಿ ಥಿಯೇಟರು ಸಿದ್ಧವಾಗಿತ್ತು. ಹೆದರಿ ಹೋದ ನಟರು ಹಿಂದಿರುಗಿಬಂದರು. ಕಡಿಮೆಬಿದ್ದ ಸ್ಥಳದಲ್ಲಿ ಹೊಸ ನಟರು ಬಂದು ಸೇರಿದರು. ಮುಂಗಾರಿಗೆ ಮುಂಚೆ ಬಿಸಿಲಿನ ಝಳವನ್ನು ಸಹಿಸ ಲಾರದೇ ಬಾಡಿ, ಎಲೆಗಳನ್ನು ಕಳೆದುಕೊಂಡ ಮರ, ಮುಂಗಾರ ಮಳೆ ಹನಿತು ಕುಳಿತಾಗ, ಹೊಸಬೇರು ಕೊಟ್ಟು ಹಸಿರೊಡೆದು ನಿಲ್ಲುವಂತೆ— ಕಂಪೆನಿ ನವೋತ್ಸಾಹದಿಂದ ತಲೆಯೆತ್ತಿತು. ನಾಟಕಗಳು ಕಳೆಗಟ್ಟಿ ಯಶಸ್ವಿ ಯಾಗಿ ನಡೆಯತೊಡಗಿದವು.

ಈ ಯಶಸ್ಸಿಗೆ ಮುಖ್ಯಕಾರಣ....ಲಲಿತ.

ಮಗುವಿನಷ್ಟು ಸರಳವಾಗಿ ಶುದ್ಧಭಾವಗಳನ್ನು ವ್ಯಕ್ತ ಪಡಿಸುವ ಲಲಿತಳ ಸಹಜಾಭಿನಯ ಪ್ರೇಕ್ಷಕರನ್ನು ಆಕರ್ಷಿಸಿತು. ಅವಳ ಸ್ನೇಹಮಯ ದೃಷ್ಟಿ, ನಡೆನುಡಿಗಳು....ಕಂಪೆನಿಜೀವನದಿಂದ ಬೇಸತ್ತ ಮನಸ್ಸುಗಳಿಗೆ ನೆಮ್ಮದಿಯನ್ನುಂಟು ಮಾಡುತ್ತಿದ್ದುವು.

ಅನಸೂಯಳ ಅಸಹ್ಯವರ್ತನೆಯಿಂದ ಜಿಗುಪ್ಸೆ ಪಟ್ಟುಕೊಂಡ ಶ್ರೀಧರನ ಮನಸ್ಸು, ಲಲಿತಳಕಡೆ ಸಹಜವಾಗಿ ಒಲಿದಿತ್ತು. ಅವಳ ಬಗ್ಗೆ ಮೂಡಿದ ಅಭಿಮಾನವನ್ನು ಹೆಚ್ಚುದಿನ ಮುಚ್ಚಿಡಲು ಸಾಧ್ಯವಿಲ್ಲದೇ ಒಮ್ಮೆ ಹೇಳಿದ—

"ಇಂಥವರು ಜೊತೆಯಲ್ಲಿದ್ದರೆ ನಮಗೂ ಕೆಲಸ ಮಾಡಲು ಉತ್ಸಾಹ ಬರುತ್ತದೆ."

ವೆಂಕಟೇಶಯ್ಯ ಚಕಿತರಾದರು. ಅದನ್ನು ತೋರ್ಪಡಿಸದೆ ನಗುತ್ತಾ ಅಂದರು—

"ನಮ್ಮದೂ ಒಂದು ಸಂಸಾರವೇ. ಒಳ್ಳೆಯ ಗೃಹಿಣಿ ಮನೆಯ ಬೆಳಕಾಗಿ, ತನ್ನವರಿಗೆಲ್ಲಾ ಸುಖ–ಶಾಂತಿಗಳನ್ನು ಕೊಡುವಂತೆ....ಯೋಗ್ಯ ಹೆಣ್ಣು, ಕಂಪೆನಿಯಲ್ಲೂ ಚೇತನ ರೂಪಳಾಗಿ ಬಾಳುತ್ತಾಳೆ."

"ಇಂಥವರು ನಮ್ಮ ಕಂಪೆನಿಗಳಲ್ಲಿ ವಿರಳ."

"ಸಂಸಾರದಲ್ಲೇ ಯೋಗ್ಯ ಹೆಣ್ಣುಗಳು ವಿರಳರಾಗುತ್ತಿರುವ ಈ ಕಾಲದಲ್ಲಿ, ನಟರಿಗಾಗಿ ಮೀಸಲೆಂದೆಣಿಸಿದ ನಾಟಕದ ಕಂಪೆನಿಗಳಲ್ಲಿ ಇಂಥವರನ್ನು ನಿರೀಕ್ಷಿಸುವುದೇ ತಪ್ಪು."

"ನಿಜ.." ಎನ್ನಿಸಿತು ಶ್ರೀಧರನಿಗೆ.

ಶ್ರೀಧರ ತನ್ಮಯತೆಯಿಂದ ಪಾತ್ರಗಳನ್ನು ಅಭ್ಯಾಸ ಮಾಡಿ ಕೊಂಡ. ಅವನ ಮೇಲೆ ಮೊದಲಿನಿಂದಲೂ ಅಭಿಮಾನವನ್ನಿಟ್ಟಿದ್ದ ವೆಂಕಟೇಶಯ್ಯ ಅವಕಾಶಗಳನ್ನು ಒದಗಿಸಿ ಕೊಟ್ಟರು. ಕಂಪೆನಿಯ ಒಳಗಡೆ ಮಾತ್ರ ವಲ್ಲದೇ ಹೊರಗಡೆಯೂ ಗೌರವವನ್ನು ಸಂಪಾದಿಸಿದ.

ಸೋಮವಾರ ಪೇಟೆಯ ಸುತ್ತುಮುತ್ತಲಿನ ಪ್ರಕೃತಿಸೌಂದರ್ಯ ಅವನನ್ನು ಆಕರ್ಷಿಸಿತು. ಯಾವುದೋ ಬಯಲು, ಯಾವುದೋ ಬಂಡೆ, ಯಾರದೋ ಗದ್ದೆಯ ಅಂಚು....ಆದರೂ ಅವೆಲ್ಲವನ್ನೂ ತನ್ನದಾಗಿ ಅನು ಭವಿಸುವ ಹೃದಯ ಹಕ್ಕಿಯಂತೆ ಹಾರುತ್ತಿತ್ತು.

ಒಂದು ಸಂಜೆ ಎಂದಿನಂತೆ ತಿರುಗಾಡ ಹೊರಟ. ಗದ್ದೆಯ ಅಂಚನ್ನು ದಾಟಿ, ಸಣ್ಣಗುಡ್ಡವನ್ನೇರಿದ. ಅದರ ಮತ್ತೊಂದು ಭಾಗದ ಇಳುಕಲಿನಲ್ಲಿನ ಕಾಫಿ ತೋಟ ಅವನ ಮನಸ್ಸನ್ನು ಸೆಳೆಯಿತು.

ಹರಿದ್ವರ್ಣದ ಈ ತೋಟದ ಅಂಚಿನಲ್ಲಿ ಸಾಲುಸಾಲಾಗಿನಿಂತ ಕಿತ್ತಿಳೆಯ ಗಿಡಗಳಲ್ಲಿ, ರಸಭರಿತವಾದ ಹಣ್ಣುಗಳು ಶೋಭಿಸುತ್ತಿದ್ದುವು—ಎಳೆ ನೇಸರಿನ ಹೊಂಬಣ್ಣದೊಂದಿಗೆ ಸ್ಪರ್ಧಿಸುವ ರತ್ನದ ಚೆಂಡುಗಳಂತೆ.

ಈ ಸೌಂದರ್ಯವನ್ನು ನೋಡುತ್ತ ನಿಂತಂತೆ, ಹಿಂದಿನಿಂದ ಯಾರೋ

ಕೇಳಿದರು.

"ಏನು ನೋಡುತ್ತಿದ್ದೀರಿ!"........

"ಹಣ್ಣಿನ ಸೊಬಗನ್ನು"—ಎನ್ನಬೇಕೆನ್ನುವಷ್ಟರಲ್ಲಿ ಹಳ್ಳಿಯವರ ಕೆಲವು ನಂಬಿಕೆಗಳು ನೆನಪಿಗೆ ಬಂತು. ಹಾಗೆಂದರೆ ಈ ಮರಗಳಿಗೆಲ್ಲಾ ಎಲ್ಲಿ ದೃಷ್ಟಿ ತೆಗೆಯುವರೋ ಎನ್ನಿಸಿತು.

"ಏನೂ ಇಲ್ಲ—" ಅವನೆಂದ.

"ನೋಡಿ! ನೋಡಿ! ಪರಸ್ಥಳದವರಿಗೆ ಇವೆಲ್ಲಾ ಹೊಸದು."

—ಅವರು ನಗುತ್ತಾ ಹೇಳಿದರು.

"ನಿಮ್ಮ ಊರು ಬಹಳ ಸೊಗಸಾಗಿದೆ...." —ಎಂದ ಶ್ರೀಧರ.

"ಬಯಲು ಸೀಮೆ ಜನ....ನಿಮಗೆ ಇವೆಲ್ಲಾ ಹೊಸದು. ಆದ್ದರಿಂದ ಕಂಡದ್ದೆಲ್ಲಾ ಸೊಗಸೇ."

"ನಾನು ಬಯಲು ಸೀಮೆಯವನಲ್ಲ."

"ಮತ್ತೆ........"

"ನನ್ನದೂ ಮಲೆನಾಡೆ."

ಮಲೆನಾಡಿನವರೆಂದು ಕೇಳಿದ ಕೂಡಲೇ ಅವರಿಗೆ ತಮ್ಮವನೆಂಬ ಅಭಿಮಾನ ಮೂಡಿತು. ಊರು—ಮನೆಗಳನ್ನು ವಿಚಾರಿಸಿ ನಂತರ ಹೇಳಿದರು—

"ಬನ್ನಿ ನಮ್ಮ ಮನೆಗೆ ಹೋಗೋಣ."

"ಬಹಳ ದೂರವಿದೆಯೇನು ?"

"ಇಲ್ಲ ಇಲ್ಲೇ ಎರಡು ಫರ್ಲಾಂಗುಗಳಲ್ಲಿ ಮನೆಯಿದೆ."

"ರಾತ್ರಿ ನಾಟಕವಿದೆ, ಹಿಂದಿರುಗಲು ಹೊತ್ತಾದರೆ ?"

"ಬೇಗ ಹೊರಟು ಬಂದುಬಿಡಿ...."

ಶ್ರೀಧರ ಅವರೊಡನೆ ಹೊರಟ. ಮಾತನಾಡುತ್ತಾ ಆಡುತ್ತಾ ದಾರಿ ಕಳೆಯುತ್ತಿತ್ತು.

"ನೀವೂ ರೈತರೇನು ?"

"ಸ್ವಲ್ಪ ಕಿತ್ತಳೆ ತೋಟವಿದೆ. ಆರೆಂಟು ಎಕರೆ ಗದ್ದೆ ಇದೆ."

"ಗದ್ದೆ ಸ್ವಂತ ಮಾಡಿಸುತ್ತಿದ್ದೀರಾ ?"

"ಇಲ್ಲ, ಒಕ್ಕಲಿಗೆ ಕೊಟ್ಟಿದ್ದೇನೆ."

"ಗಡಿಬತ್ತ ಜೀವನಕ್ಕೆ ಸಾಕಾಗುತ್ತೆಯೇ?"

"ಎಲ್ಲಿ ಸಾಕು ಸ್ವಾಮಿ?....ನಮ್ಮ ಹಿರಿಯರಿಂದ ಬಂದ ಶಾನುಭೋಗಿಕೆಯಿದೆ. ಹಾಗೂ ಹೀಗೂ ಕಾಲಕಳೆಯುತ್ತೇನೆ."

ಅದೊಂದು ಊರುಹೆಂಚಿನ ಹಳೆಯ ಮನೆ. ಶಾನುಭೋಗರು ಕಾಲು ತೊಳೆಯಲು ನೀರು ತಂದುಕೊಟ್ಟರು. ಶ್ರೀಧರ ಕಾಲು ತೊಳೆದು ಮನೆಯೆದುರು ಜಗಲಿಗೆ ಬಂದ. ಶಾನುಭೋಗರು ಚಾಪೆಯನ್ನು ಹಾಸಿದರು. ಎಲೆಯಡಕೆಯ ತಟ್ಟೆಯನ್ನು ತಂದು ಅದರ ಮೇಲಿಟ್ಟರು.

ಶ್ರೀಧರ ಚಾಪೆಯ ಮೇಲೆ ಕುಳಿತುಕೊಂಡ. ಶಾನುಭೋಗರು ಒಳಗಿನಿಂದ ನಾಲ್ಕಾರು ರಸಭರಿತ ಕಿತ್ತಿಳೆ ಹಣ್ಣುಗಳನ್ನು ತಂದು ಶ್ರೀಧರನ ಮುಂದಿಟ್ಟರು.

"ತೆಗೆದುಕೊಳ್ಳಿ...."—ಎಂದರವರು.

ಕೃತಜ್ಞತೆಯಿಂದ ಶ್ರೀಧರ ಹಣ್ಣುಗಳನ್ನೆತ್ತಿಕೊಂಡ. ಚಿಮ್ಮಿ ಒಡೆಯುವಷ್ಟು ರಸಭರಿತವಾದ ಕುಸುಮಗಳ ಸವಿನೋಡಿದ.

"ನಿನ್ನೆ ನಾನು ತಮ್ಮ ನಾಟಕಕ್ಕೆ ಬಂದಿದ್ದೆ"

—ಶ್ಯಾನುಭೋಗರು ಮತ್ತೆ ಮಾತು ಪ್ರಾರಂಭಿಸಿದರು.

"ಚೆನ್ನಾಗಿತ್ತೇನು?"

"ಬಹಳ ಭೇಷಾಗಿತ್ತು. ಇತ್ತೀಚೆಗೆ ನಾಟಕ ನೋಡೋದಕ್ಕೆ ಬೇಸರವಾಗಿಹೋಗಿತ್ತು ನನಗೆ. ಊರವರೆಲ್ಲಾ ಚೆನ್ನಾಗಿದೆ ಅಂತಾರಲ್ಲ ಅಂತ ನಿನ್ನೆ ಬಂದೆ. ನನಗೇನೋ ತುಂಬಾ ಸಂತೋಷವಾಯಿತು."

"ಆದ್ದರಿಂದಲೇ ನಾವು ಈ ಊರಿನಲ್ಲಿ ಸುಖವಾಗಿ ಇನ್ನೂ ಉಳಿದಿರೋದು. ಇಲ್ಲವಾದಲ್ಲಿ ಬಂದ ಮರುದಿನವೇ ಪೆಟ್ಟಿಗೆ ಕಟ್ಟಬೇಕಿತ್ತು."

"ಎದುರಿಗೆ ಹೇಳ್ತೀನೆ ಅಂತ ಅಲ್ಲ. ನಿಮ್ಮ ಪಾತ್ರವೂ ತುಂಬಾ ಸೊಗಸಾಗಿತ್ತು."

ಶ್ರೀಧರ ಮಾತನಾಡಲಿಲ್ಲ. ಯಾವ ಭಾವನೆಯನ್ನೂ ತೋರ್ಪಡಿಸದೇ ಮೌನವಾಗಿದ್ದ.

"ಆದು ಯಾರು ಸ್ವಾಮಿ? ಸ್ವಲ್ಪ ವಯಸ್ಸಾದ ಹಾಗೆ ಕಾಣ್ತಾರಲ್ಲ."

"ಯಾರು?...."

"ಹಾಸ್ಯದಪಾತ್ರ ಮಾಡಿದರಲ್ಲ ನಿನ್ನೆ........ ಹೊಟ್ಟೆ ಹುಣ್ಣಾಗಿ ಹೋಯಿತು ನಕ್ಕೂ ನಕ್ಕು."

"ವೆಂಕಟೇಶಯ್ಯ ಅಂತ."

"ಅವರೇನೋ ವೆಂಕಟೇಶಯ್ಯ ಅಂದರೆ. ನಾನು ಹಿಂದಿನಿಂದಲೂ ಅವರ ಹೆಸರು ಕೇಳಿದ್ದೆ. ನಿನ್ನೆ ನೋಡೋ ಹಾಗೆ ಆಯಿತು."

"ನಮ್ಮಲ್ಲಿನ ಉತ್ತಮ ನಟರಲ್ಲಿ ಒಬ್ಬರು ಅವರು. ಬಹಳ ಹಿಂದಿನಿಂದಲೂ ಪಳಗಿದ್ದಾರೆ."

"ನಿಜ ನಿಜ ತುಂಬಾ ದಕ್ಷರು. ಅಂದಹಾಗೆ ಆ ಅಮ್ಮನೂ ಪರವಾಯಿಲ್ಲ."

"ಯಾರು?...."

"ನಿಮ್ಮ ಜೊತೆಯಲ್ಲಿ ನಿಮ್ಮ ಹೆಂಡತಿ ಪಾರ್ಟು ಮಾಡಿದರಲ್ಲ...."

ಶ್ರೀಧರನ ಮೈ ಬೆಚ್ಚಗಾಯಿತು.

"ಕಣ್ಣಲ್ಲಿ ನೀರು ಬಂದುಬಿಡ್ತು ಸ್ವಾಮಿ ಆ ಅಮ್ಮನ ಪಾರ್ಟು ನೋಡಿ. ಅವರು ನಿಮ್ಮ ಹೆಂಡತೀನಾ?"

—ಶಾನುಭೋಗರು ಇದ್ದಕ್ಕಿದ್ದಂತೆ ಪ್ರಶ್ನಿಸಿಬಿಟ್ಟರು.

ಪ್ರಶ್ನೆ ವಿಚಿತ್ರವಾದರೂ ಸಹಜವಾಗಿತ್ತು. ನಾಟಕವನ್ನು ನೋಡಿದ ಮಾತ್ರದಿಂದ ಅವರಲ್ಲಿ ಈ ಭಾವನೆ ಮೂಡಬೇಕಾದರೆ, ನಮ್ಮಿಬ್ಬರ ಅಭಿನಯ ಯಶಸ್ವಿಯಾಗಿರಬೇಕು ಎನ್ನಿಸಿತು.

ಶ್ರೀಧರ ಮೌನವಾಗಿದ್ದ.

ಶಾನುಭೋಗರು ಮಾತು ಮುಂದುವರಿಸಲಿಲ್ಲ.

ಪುನಃ ಕಿತ್ತಿಳೆಯ ಹಣ್ಣಿಗೆ ಕೈಹಾಕಿದ ಶ್ರೀಧರ. ಬೆರಳು ಕೆಲಸ ಮಾಡತೊಡಗಿತು. ಮನಸ್ಸು ಯಾವುದೋ ಕಾಣದ ಪ್ರಪಂಚಕ್ಕೆ ಹಾರಿ ಹೋಯಿತು. ಶಾನುಭೋಗರ ಮಾತು ಅವನ ಮನಸ್ಸಿನ ತಂತಿಯೊಂದನ್ನು ಮಿಡಿದಿತ್ತು. ಅದರ ಝೇಂಕಾರ ಗರ್ಭಗುಡಿಯಲ್ಲಿನ ಘಂಟಾನಾದದಂತೆ ಮನಸ್ಸನ್ನಾವರಿಸಿತ್ತು.

ಶಾನುಭೋಗರು ಬಾಡಿದ ಅವಲಕ್ಕಿಯನ್ನು ತಂದು ಮುಂದಿಟ್ಟರು.

ಸುಖಸ್ವಪ್ನದಲ್ಲಿ ಓಲಾಡುತ್ತಿದ್ದ ಶ್ರೀಧರ ಎಚ್ಚೆತ್ತ. ಕಾಫಿ ಬಂತು. ಅದನ್ನೂ ಕುಡಿದು ಮೇಲೆದ್ದ—

"ನಾನಿನ್ನು ಬರುತ್ತೇನೆ."

"ಎಲೆಯಡಿಕೆ ಹಾಕಿ ಸ್ವಾಮಿ."

ಶ್ರೀಧರ ಪುನಃ ಕುಳಿತ. ಎಲೆಯಡಕೆ ಹಾಕಿಕೊಂಡ. ಔಪಚಾರಿಕ ವಾಗಿ ನಾಲ್ಕು ಒಳ್ಳೆಯ ಮಾತುಗಳನ್ನಾಡಿ ಹೊರಟ.

ಶಾನುಭೋಗರೂ ಹಿಂದಿನಿಂದ ಬಂದರು. ಅವರ ಕೈಯಲ್ಲಿ ಕಿತ್ತಿಲೆ ಹಣ್ಣು ತುಂಬಿಸಿದ ಕೈಚೀಲವಿತ್ತು. ಅದನ್ನು ಶ್ರೀಧರನಿಗೆ ಕೊಡುತ್ತಾ ಹೇಳಿದರು—

"ಇದನ್ನು ಮನೆಗೆ ತೆಗೆದುಕೊಂಡುಹೋಗಿ. ನಿಮ್ಮವರಿಗೆಲ್ಲಾ ಕೊಡಿ."

"ಇಷ್ಟೊಂದು ಹಣ್ಣು!"

—ಶ್ರೀಧರ ಚಕಿತನಾಗಿ ಕೇಳಿದ.

"ಅಷ್ಟು ಜನ ಇದ್ದೀರಿ—ಎಲ್ಲರಿಗೂ ಬೇಡವೇ. ಹಾಗೂ ಆ ಅಮ್ಮ ನಿಗೂ ಕೊಡಿ....ತಿನ್ನಲಿ."

ಶ್ರೀಧರ ಚೀಲವನ್ನು ಕೈಗೆ ತೆಗೆದುಕೊಂಡ. ಶಾನುಭೋಗರ ಪ್ರತಿ ಯೊಂದು ಮಾತೂ ಅವನ ಅಂತರಂಗದ ತಂತಿಯನ್ನು ಮಿಡಿಯುತ್ತಿತ್ತು.

"ರಾತ್ರಿ ಬನ್ನಿ ಸ್ವಾಮಿ ನಾಟಕಕ್ಕೆ"

—ಶ್ರೀಧರ ಶಾನುಭೋಗರನ್ನು ಆಹ್ವಾನಿಸಿದ.

"ಮತ್ತೆ ಇವತ್ತು ನಿದ್ರೆ ಬಿಡೋದಕ್ಕೆ ಸಾಧ್ಯವಿಲ್ಲ. ನಾಳೆ ಬರ್ತೇನೆ. ನಮ್ಮ ಮನೆಯವಳೂ ನೋಡಬೇಕಂತೆ."

"ಕರೆದುಕೊಂಡು ಬನ್ನಿ"

—ಎಂದು ಹೇಳಿ ಹೊರಟುಬಂದ ಶ್ರೀಧರ.

ಆಗಲೇ ಕತ್ತಲಾಗಿತ್ತು. ಕಂಪೆನಿ ಮನೆಯಲ್ಲಿ ಮಂದ ಪ್ರಕಾಶದ ಕಂದೀಲುಗಳು ಉರಿಯುತ್ತಿದ್ದುವು. ಶ್ರೀಧರ ಮನೆಯ ಮೆಟ್ಟಲು ಹತ್ತಿದ.

"ಮುಗಿಯಿತೇ? ನಿಮ್ಮ ವಾಕಿಂಗ್...."

—ಲಲಿತ ಎಂದಿನಂತೆ ಸಹಜ ಸ್ವರದಲ್ಲಿ ಕೇಳಿದಳು.

ಶ್ರೀಧರನ ಮನಸ್ಸಿನಲ್ಲಿ ಮೊಳಗುತ್ತಿದ್ದುದು ಅದೇ ಧ್ವನಿ. ಧ್ವನಿ ಬಂದ

ದಿಕ್ಕಿನಲ್ಲಿ ತಿರುಗಿ ಹೇಳಿದ—

"ಇವತ್ತಿಗೆ ಮುಗಿಯಿತು."

"ಅದೇನು ಕೈಯಲ್ಲಿ".

"ಕಿತ್ತಲೆಹಣ್ಣು."

"ಕೊಂಡು ತಂದಿರಾ?"

"ಇಲ್ಲ. ಯಾರೋ ಕೊಟ್ಟರು."

"ಯಾರಿಗೆ?"

"ನನಗೆ"

"ನನಗೆ?...."

"ನನಗೆ, ನಿಮಗೆ ಎಲ್ಲರಿಗೂ".

ಕತ್ತಲಿನಲ್ಲಿ ಮಾತನಾಡುತ್ತಿದ್ದ ಲಲಿತ ಶ್ರೀಧರನನ್ನು ಸಮೀಪಿಸಿದ್ದಳು.

"ತೆಗೆದುಕೊಳ್ಳಿ"—ಎಂದ ಶ್ರೀಧರ.

"ನನಗೇಕೆ ಇಷ್ಟು"—ಎಂದಳು ಲಲಿತ.

ನೀವೇ ಹಂಚಿಬಿಡಿ"—ಎನ್ನುತ್ತ ಶ್ರೀಧರ ತನ್ನ ಕೈಯಲ್ಲಿದ್ದ ಚೀಲವನ್ನು ಅವಳ ಕೈಗೆ ಕೊಟ್ಟುಬಿಟ್ಟ.

ಆಶ್ಚರ್ಯದಿಂದ ಲಲಿತ ಶ್ರೀಧರನ ಮುಖವನ್ನು ನೋಡಿದಳು.

ಶ್ರೀಧರ ಅವಳ ಮುಖವನ್ನು ನೋಡಿದ.

ಬಾಗಿಲಿನ ಮೂಲಕ ತೂರಿಬಂದ ದೀಪದ ಮಂದಪ್ರಕಾಶ ಮಿಂಚಿನಂತೆ ಹೊಳೆಯಿತು.

ಮತ್ತೊಂದು ಕ್ಷಣವೂ ಅಲ್ಲಿ ನಿಲ್ಲುವುದು ಸಾಧ್ಯವಿಲ್ಲದೇ ಶ್ರೀಧರ ಒಳಗೆ ದಾಟಿದ.

"ಇದೇಕೆ ಹೀಗೆ ಮಾಡಿದರು?"

—ಲಲಿತ ಅಂದುಕೊಂಡಳು.

"ಏಕೆ ಹೀಗಾಯಿತು?"

—ಶ್ರೀಧರನೂ ಪ್ರಶ್ನಿಸಿಕೊಂಡ.

"ಏನೋ ಆಗಿಹೋಯಿತು"—ಅನ್ನುವುದು ಇಬ್ಬರಿಗೂ ಅನುಭವವಾಯಿತು.

* * * * * *

ಅಂದು ರಾತ್ರಿ....

ನಾಟಕದಲ್ಲಿ ಲಲಿತಳೊಡನೆ ಮಾತನಾಡುವಾಗ, ಎಂದಿನ ಸರಳತೆ ಬಾ ಎಂದರೂ ಬಾರದು. ಪ್ರಣಯದೃಶ್ಯಗಳಲ್ಲಿ ಅವಳ ಮೇಲೆ ಮಮತೆ ಯಿಂದ ಕೈಯಾಡಿಸುವಾಗ, ಹಾವಿನ ಮೇಲೆ ಹರಿಯುವ ಕೈಗಳಂತೆ ಅವು ನಡುಗಲಾರಂಭಿಸಿದುವು. ಸ್ಫುಟವಾಗಿ ಹೊರಡುತ್ತಿದ್ದ ಮಾತುಗಳು ಆಗಾಗ ತೊದಲಿದುವು.

ಲಲಿತಳಿಗೆ ಇವೆಲ್ಲ ಅರ್ಥವಾಗದಿರಲಿಲ್ಲ. ದೃಶ್ಯವನ್ನು ಮುಗಿಸಿಕೊಂಡು ಸ್ಟೇಜಿನಿಂದ ಒಳಗೆ ಬಂದಾಗ ಅವಳು ಕೇಳಿದಳು—

"ನಿಮಗ ಏನಾಗಿದೆ ಇವತ್ತು?"

"ಏಕೆ?"

"ಎಂದಿನಂತೆ ಇಲ್ಲ. ಬಹಳ ಮಂಕಾಗಿಬಿಟ್ಟಿದ್ದೀರಿ"

"ಪಾರ್ಟು ಕೆಟ್ಟುಹೋಯಿತೆ?"

"ತೀರಾ ಸಪ್ಪೆ"

ಶ್ರೀಧರನಿಗೆ ನಾಚಿಕೆಯಾಯಿತು. ಲಲಿತ ಎಂದೂ ತನ್ನ ಪಾತ್ರದ ಬಗ್ಗೆ ಮಾತನಾಡದವಳು ಇಂದು ತನ್ನ ತಪ್ಪು ಕಂಡಾಗ ಎತ್ತಿ ಹಿಡಿದಿದ್ದಾಳೆ. ಅವಳಿಗೆ ಏನುಕಾರಣ ಹೇಳಬೇಕೆಂದೇ ತಿಳಿಯಲಿಲ್ಲ.

"ಸಾಯಂಕಾಲದಿಂದ ನನಗೆ ಮೈಚೆನ್ನಾಗಿಲ್ಲ".—

"ಸುಳ್ಳು!....ಇವತ್ತು ನಿಮ್ಮ ಮನಸ್ಸು ಪಾರ್ಟಿನ ಮೇಲಿಲ್ಲ."

ಶ್ರೀಧರನಿಗೆ ಬರೆ ಎಳೆದಂತಾಯಿತು. ಮಾತೇ ಹೊರಡಲಿಲ್ಲ. ಮೊದಲೇ ಬೆವತುಹೋದ ಮುಖ ಮತ್ತಷ್ಟು ಬೆವತಿತು.

"ಇವತ್ತು ಏಕೆ ಇಷ್ಟೊಂದು ಬೆವರು ಹತ್ತಿದೆ ನಿಮ್ಮ ಮುಖ. ಎಣ್ಣೆ ಚೆಲ್ಲಿದಂತೆ ಹೊಳೆಯುತ್ತಿದೆ. ಗ್ರೀನು ರೂಮಿಗೆ ಹೋಗಿ ಕನ್ನಡಿ ನೋಡಿ ಕೊಳ್ಳಿ. ಬೆವರು ಒತ್ತಿಕೊಂಡು "ಪಫ್" ಮಾಡಿಕೊಂಡು ಬನ್ನಿ. ನೀವು ಪಾರ್ಟು ಕೆಡಿಸಿಕೊಂಡರೆ ನಾನು ಸುಮ್ಮನಿರುವುದಿಲ್ಲ"

—ಒಂದೇ ಉಸುರಿನಲ್ಲಿ ಇಷ್ಟನ್ನೂ ಹೇಳಿ ಹೆಂಗಸರ ಗ್ರೀನ್‌ರೂಮಿನ ನೇಪಥ್ಯದ ಕಡೆ ಹೊರಟುಹೋದಳು ಲಲಿತ.

ಗಂಡಸರ ಗ್ರೀನ್‌ರೂಮಿನತ್ತ (ವೇಷ ಹಾಕುವ ಕೊಠಡಿಯತ್ತ) ಧಾವಿಸಿದ ಶ್ರೀಧರ.

## ೧೭

ಮದ್ದೂರಾಯ ಕಂಪೆನಿಯ ಪ್ರ್ಯಾಕ್ಟೀಸ್ ಮ್ಯಾನೇಜರ್. ಯಾವ ಕಂಪೆನಿಗೆ ಹೋದರೂ ಅವನಿಗೆ ಈ ಕೆಲಸ ಮೀಸಲು. ಕಾರಣ ಮದ್ದೂರಾಯ ನಾಟಕದ ಸರ್ವಾಂತರ್ಯಾಮಿ. ಹಿಂದಿನಿಂದ ಇಂದಿನವರೆಗಿನ ಪ್ರತಿಯೊಂದು ನಾಟಕವೂ ಅವನ ಬಾಯಿನಲ್ಲಿತ್ತು. ಕಾಗದ ಬೇಡ. ಪೆನ್ಸಿಲ್ ಬೇಡ. ಪುಸ್ತಕವೂ ಬೇಡ. ಮೂಗಿನ ಮೇಲ್ಗಡೆ ಹುಬ್ಬುಗಳ ಮಧ್ಯೆ ಬೆರಳುಗಳನ್ನು ಕೂಡಿಸಿ....ಸ್ವಲ್ಪ ಹೊತ್ತು ಜ್ಞಾಪಿಸಿಕೊಂಡು ಹೇಳುತ್ತಾ ಹೋದರೆ, ಅಕ್ಷರವೂ ವ್ಯತ್ಯಾಸವಾಗದಷ್ಟು ಸರಿಯಾಗಿ ಪಾತ್ರಗಳನ್ನು ಬರೆಸಿಬಿಡುತ್ತಿದ್ದ.

ಅವನೊಬ್ಬ ಕಂಪೆನಿಯಲ್ಲಿದ್ದರೆ ಎಲ್ಲ ನಾಟಕಗಳೂ ಇದ್ದಂತೆ. ಎಲ್ಲ ಪಾತ್ರಗಳೂ ಇದ್ದಂತೆ.

ತಬಲಾದವರು ಚಕ್ಕರ್ ಹಾಕಲಿ, ಹಾರ್ಮೋನಿಯಂರವರು ರಜಾ ಹೋಗಲಿ, ರಾಜಾ ಪಾರ್ಟಿನವನು ಮೋಸಮಾಡಲಿ, ಮದ್ದೂರಾಯ ಆ ಸ್ಥಳಗಳಿಗೆ ಸರಿಯಾಗಿ ಭರ್ತಿಯಾಗುತ್ತಿದ್ದ. ಎಲ್ಲಿಯೂ ಸೈ ಎನ್ನಿಸಿಕೊಂಡು ಬರುತ್ತಿದ್ದ. .

ನಗಾರಿಯನ್ನು ಹೊಡೆದಂತೆ ಗಂಭೀರವಾದ ಮಾತುಗಾರಿಕೆ; ಪೂರ್ಣ ಪ್ರವಾಹದ ಜೋಗ್ ಜಲಪಾತದಂತೆ ಎಂಥವರನ್ನೂ ಬೆರಗುಗೊಳಿಸುವ ಹಾಡುಗಾರಿಕೆ; ಎಂತಹ ಪಾತ್ರವನ್ನಾದರೂ ದಕ್ಷತೆಯಿಂದ ನಿರ್ವಹಿಸುವ ಅಭಿನಯಚಾತುರ್ಯವಿದ್ದರೂ ಅವನು ಯಶಸ್ಸನ್ನು ಗಳಿಸಿರಲಿಲ್ಲ.

ಅದಕ್ಕೆ ಕಾರಣ ಅವನ ಕಟ್ಟಿಗೆಯಂತೆ ಬಡಕಲಾದ ದೇಹ, ಬಾಳೆಯ ಮೂತಿಯಂತೆ ಮೊನಚಾದ ಮುಖ.

ಬಣ್ಣವನ್ನಳಿಸಿ ಬಟ್ಟೆಯನ್ನು ಕಳಚಿದಾಗ ಈ ಶರೀರ ತೊಳೆದಿಟ್ಟ ಯಜ್ಞೇಶ್ವರ.

ದೇವರ ಶಾಪವೊ; ಮದ್ದೂರಾಯನ ನತದೃಷ್ಟತನವೊ; ರಂಗಭೂಮಿಯ ದೌರ್ಭಾಗ್ಯವೊ;—ಅವನಲ್ಲಿದ್ದ ಯೋಗ್ಯತೆ ಪ್ರತಿಭೆಗಳೆಲ್ಲವೂ ಮರೆಯಾಗಿ ಬಿಟ್ಟಿತ್ತು ಇಜ್ಜಲೊಳಗಿನ ಬೆಂಕಿಯಂತೆ.

ಬೆಳಗಿನಿಂದ ಸಂಜೆಯವರೆಗೆ ಮುದ್ದೂರಾಯ ಪಾರ್ಟಿಗಳನ್ನು ಕಲಿಸುವುದರಲ್ಲೇ ಕಾಲಹಾಕುತ್ತಿದ್ದ. ಬೆಳಗಿನ ಕಾಫಿಯಾದೊಡನೆ ಚಾಪೆಯ ಮೇಲೆ ಹಾಸಿಗೆಯನ್ನೊರಗಿ ಕುಳಿತು, ಹಾರ್ಮೋನಿಯಂ ಮುಂದಿಟ್ಟು ಕೊಂಡರೆ ತಿರುಗಿ ಏಳುವುದು ಮಧ್ಯಾಹ್ನದ ಊಟಕ್ಕೇ.

ಮಧ್ಯಾಹ್ನ ಸ್ವಲ್ಪ ನಿದ್ರೆ ನಂತರ ಪುನಃ ಇದೇ ಹಾಡು.

ಯಾರಾದರೂ ಕಾಫಿಗೆ ಹೊರಟಾಗ ಮುದ್ದೂರಾಯ ಹೇಳುವ ರೂಢಿ–

"ನನಗೂ ಒಂದು ಕಾಫಿ ಹೇಳ್ತೀರಾ ದಯವಿಟ್ಟು?"—ಅಂತ.

"ಹೂ"—ಎಂದು ಅವರು ಮುಂದೆ ಹೊರಟಾಗ,

"ಹಾಗೇ ಬರೋವಾಗ ಒಂದು ಕಟ್ಟು ಮೂರ್ನೇ ನಂಬರು ಬೀಡಿ.... ಒಂದು ಬೆಂಕಿ ಪಟ್ಟಣ"—ಅಂದುಬಿಡುತ್ತಿದ್ದ.

ಒಂದೊಂದು ದಿನ ಒಬ್ಬೊಬ್ಬರಿಗೆ ಈ ಸರದಿ ಬರುತ್ತಿತ್ತು. ಎಲ್ಲರಿಗೂ ತಿಳಿದ ವಿಚಾರವಾದ್ದರಿಂದ ಯಾರೂ ದುಡ್ಡು ಕೇಳುವ ಗೊಡವೆಗೇ ಹೋಗುತ್ತಿರಲಿಲ್ಲ.

ಕಂಪೆನಿಯಲ್ಲಿ ಹುಡುಗಿಯರಿದ್ದರಂತೂ ಮುದ್ದೂರಾಯನಿಗೆ ಅದೂ ಬೇಡ. ಎರಡುಮೂರು ಜನ ಹುಡುಗಿಯರನ್ನು ಸುತ್ತ ಕೂರಿಸಿಕೊಂಡು ಅವರುಗಳಿಗೆ ಹಾಡು ಹೇಳಿಕೊಡುತ್ತಾ ಕುಳಿತನೆಂದರೆ ಕಂಪೆನಿಯಲ್ಲಿದ್ದ ಉಳಿದವರ ಕಿವಿ ಚಿಟ್ಟೆದ್ದು ಹೋಗುತ್ತಿತ್ತು. ಅವರಿಗೆ ಹೇಳಿಕೊಡುತ್ತಾ ಮಧ್ಯೆ ಮಧ್ಯೆ ತನ್ನನ್ನೇ ತಾನು ಮರೆತು ಹಾಡಲಾರಂಭಿಸುವನು.

ಆ ಹುಡುಗಿಯರು ಬೆಪ್ಪಾಗಿ ನೋಡಬೇಕು ಇವನ ಹಾವಭಾವಗಳನ್ನು. ಆಗ—

"ನೋಡಿದಿರಾ ಹೀಗೆ ಹಾಡಬೇಕು"

—ಅನ್ನುತ್ತಾ ಟವಲಿನಿಂದ ಮುಖವನ್ನೊರೆಸಿಕೊಂಡು ಗುಟುರು ಹಾಕುತ್ತಿದ್ದ. ಕೈಯನ್ನು ತನ್ನ ಗಲ್ಲಕ್ಕೆ ಕೊಟ್ಟು, ಕುತ್ತಿಗೆಯನ್ನು ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಸಟಸಟನೆ ತಿರುಗಿಸಿ, ಲಟಲಟನೆ ನೆಟ್ಟಿಗೆ ಹೊರಡಿಸುತ್ತಿದ್ದ—ಒಳಗಿನ ಎಲುಬುಗಳು ಪುಡಿಪುಡಿಯಾದುವೋ ಎಂದು ಹುಡುಗಿಯರು ಗಾಬರಿಯಾಗುವಂತೆ.

ಇಷ್ಟೆಲ್ಲಾ ಮುಗಿಯುವಾಗ ಸಾಯಂಕಾಲವಾಗುತ್ತಿತ್ತು. ಆಗ ಇದ್ದ

ಕ್ಕಿದ್ದಂತೆಯೇ ತಲೆನೋವು ಬಂದುಬಿಡುತ್ತಿತ್ತು.

ಹಾಡಿಕೆಯನ್ನು ನಿಲ್ಲಿಸಿ, ಹಾರ್ಮೋನಿಯಂ ಮೇಲೆ ಮೊಳಕೈಯನ್ನೂರಿಕೊಂಡು ಎರಡೂ ಕೈಗಳಿಂದ ತನ್ನ ತಲೆಯನ್ನು ಒತ್ತಿಕೊಳ್ಳಲಾರಂಭಿಸುವನು.

"ಏನಾಯ್ತು? ಮಾಸ್ತರ್....ಜೀ...."

—ಎಂದು ಯಾರಾದರೂ ಒಬ್ಬಳು ಹುಡುಗಿ ಕೇಳಬೇಕು.

"ಹಾರಿಬಲ್ ಹೆಡ್ಡೇಕ್! ಮಗೂ...."

—ಎನ್ನುತ್ತಿದ್ದ ಮದ್ದೂರಾಯ, ಛಳಿ ಬಂದವನಂತೆ ತನ್ನ ಅಂಗಾಂಗಗಳನ್ನೆಲ್ಲ ನಡುಗಿಸುತ್ತಾ.

"ಔಷಧಿ ಮಾಡಿಕೊಳ್ಳಿ ಮಾಸ್ತರ್....ಜೀ....ಈ—ಈ"

—ಎಂದು ಮತ್ತೊಬ್ಬಳು ರಾಗ ಎಳೆಯಬೇಕು....ಬೆರಳನ್ನೊತ್ತಿ ಪಿಟೀಲಿನ ತಂತಿಯನ್ನು ಮಿಡಿದಾಗ ಅದು "....ಕೊಯ್....ಯ್...." ಅನ್ನುವಂತೆ.

"ಬೆಳಗ್ಗೆ ಎರಡು ಆಸ್ಪ್ರೋ ನುಂಗಿದೆ ಮಗೂ....ಊ"—ಎಂದು ಅದೇ ರಾಗದಲ್ಲಿ ಧ್ವನಿಗೂಡಿಸುತ್ತಿದ್ದ ಮದ್ದೂರಾಯ.

ಅವನು "ಮಗೂ....ಬಾ" ಎನ್ನುವಾಗ ಈ ಹುಡುಗಿಯರಿಗೆ "ಅಯ್ಯೋ....ಓ" ಎನ್ನಿಸುತ್ತಿತ್ತು. ಆಗ ಯಾರಾದರೂ ಒಳಗೆ ಹೋಗಿ ಅಮೃತಾಂಜನ ತರಬೇಕು.

ಮದ್ದೂರಾಯ ಪೆಟ್ಟಿಗೆಯನ್ನು ಬದಿಗಿರಿಸುತ್ತಿದ್ದ. ಚಾಪೆಯ ಮೇಲೆ ಕಾಲುಚಾಚಿಕೊಂಡು ಹಾಸಿಗೆಗೆ ತಲೆಗೊಟ್ಟು ಮಲಗಿಕೊಳ್ಳುತ್ತಿದ್ದ.

"ಇದನ್ನು ಸವರಿಕೊಳ್ಳಿ ಮಾಸ್ಟರ್ ಜೀ........ನೋವು ಕಡಿಮೆಯಾಗುತ್ತೆ"—ಅಂತ ಅವಳು ಅಂದಾಗ,

"ನೀನೇ ಸ್ವಲ್ಪ ಹಾಗೇ ಉಜ್ಜು ಮಗೂ....ಬಾ"

—ಎನ್ನುತ್ತಿದ್ದ. ಅವಳ ಕೈಯನ್ನು ಹಿಡಿದು ತನ್ನ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಿದ್ದ.

ಆಗ ಉಳಿದವರು ಮೇಲೇಳಬೇಕು. ಅವರು ಹೊರಟಾಗ—

"ಬೆಳಕು ಕಣ್ಣಿಗೆ ಹೊಡೆಯುತ್ತಿದೆ....ಹೋಗುವಾಗ ಆ ಬಾಗಿಲು ಸ್ವಲ್ಪ ಓರೆಮಾಡಿ ಬಿಡಿ"—ಅನ್ನುತ್ತಿದ್ದ ಮದ್ದೂರಾಯ.

"ಆ....ಹಾಗೆ!....ಅಬ್ಬಬ್ಬ ಅಲ್ಲೇ....ಸ್ವಲ್ಪ ಕೆಳಗೆ....ತುಸುಮೇಲೆ–".

—ಅವಳ ಕೈಗಳು ಎಲ್ಲೆಲ್ಲೂ ಓಡಾಡಬೇಕು. ಆ ಬಳೆಗಳ ಶಬ್ದ ಕಿವಿಯಲ್ಲಿ ಮೊಳಗುತ್ತಿರಬೇಕು. ಮದ್ದೂರಾಯನಿಗೆ ಸ್ವರ್ಗಕ್ಕೆ ಮೂರೇ ಬೆರಳು.

"ತುಂಬಾ ಜಾಣೆ....ಬಹಳ ಒಳ್ಳೆಯವಳು"—ಅನ್ನುತ್ತಾ ಮದ್ದೂರಾಯ ಅವಳ ತಲೆಯ ಮೇಲೆ ಬೆರಳಾಡಿಸುವನು. ಬೆನ್ನ ಮೇಲೆ ಕೈ ಜಾರಿಸುವನು. ಕೂದಲಿಗೆ ಸಿಕ್ಕಿಕೊಂಡ ಕೊರಳ ಸರವನ್ನು ಬಿಡಿಸಿ.... ಅದು ಹೀಗೆ ನಿಲ್ಲಬೇಕು ಎಂದು ಎದೆಯ ಮೇಲೆ ಸರಿಸುವನು.

ಈಗ ಹುಡುಗಿಗೆ ನಾಚಿಕೆಯಾಗುತ್ತೆ. ಅವಳ ಮುಖ ಕೆಂಪೇರುತ್ತೆ. ಎದೆ ಹೊಡೆದುಕೊಳ್ಳುತ್ತೆ. ಹಿಂದೆ ಸರಿಯುತ್ತಾಳೆ. ಆಗ—

"ಜ್ವರ ಬಂದಿರೋ ಹಾಗಿದೆ ಈ ಕೈ ನೋಡು"

—ಎನ್ನುತ್ತಾ ಕೈ ಮುಂದೆ ಮಾಡುವನು ಮದ್ದೂರಾಯ.

ಕೈ ನೋಡುವ ಧೈರ್ಯ ಅವಳಲ್ಲಿ ಉಳಿದಿರುವುದಿಲ್ಲ. ನಾಚಿಕೆ ಅವಮಾನಗಳಿಂದ ಮೇಲೆದ್ದು ಬಿಡುತ್ತಾಳೆ.

ಪುನಃ ಮದ್ದೂರಾಯನ ತಲೆನೋವಿಗೆ ಮದ್ದು ಹೇಳಲು ಅವಳು ಬರುವುದಿಲ್ಲ. ಮೇಷ್ಟರು ಹೀಗೆ ಮಾಡಿದರೆಂದು ಮತ್ತೊಬ್ಬರಿಗೆ ಹೇಳುವಂತೆಯೂ ಇಲ್ಲ.

ಮದ್ದೂರಾಯನಿಗೆ ಇಷ್ಟಕ್ಕೇ ತೃಪ್ತಿ. ಇದಕ್ಕಿಂತಲೂ ಮುಂದಿನ ಹೆಜ್ಜೆಯನ್ನು ಅವನು ಎಂದೂ ಇಟ್ಟಿಲ್ಲ. ಯಾರನ್ನೂ ಕೆಡಿಸಿಲ್ಲ.

ಈ ಮುದಿಚಪಲವನ್ನು ನೋಡಿ ನೋಡಿ ಹಿಂದೆ ರತ್ನಾಕರ ಮದ್ದೂರಾಯನಿಗೆ "Headache Prince" ಎಂದು ಬಿರುದುಕೊಟ್ಟಿದ್ದ. ರತ್ನಾಕರ ಕಂಪೆನಿ ಬಿಟ್ಟಿದ್ದರೂ ಮದ್ದೂರಾಯನ ಬಿರುದು ಬಿಟ್ಟುಹೋಗಿರಲಿಲ್ಲ. ಯಾರೇ ಆಗಲಿ ಮದ್ದೂರಾಯ ಬಂದ ಅನ್ನುವ ಬದಲು "ತಲೆನೋವಿನ ರಾಜಕುಮಾರರು ಚಿತ್ತೈಸಿದಾರೆ"—ಎನ್ನುವಂತಾಗಿತ್ತು.

ಇದು ಮದ್ದೂರಾಯನ ತಪ್ಪಲ್ಲ. ಬೆಳಕಿದ್ದಲ್ಲಿ ಕತ್ತಲೆಯನ್ನ, ಜೇನಿದ್ದಲ್ಲಿ ಹುಳವನ್ನು ಇಟ್ಟ ಪಾಪಿ ಪರಮಾತ್ಮನ ತಪ್ಪು.

* * * *

ಇದ್ದಕ್ಕಿದ್ದಂತೆಯೇ ಒಂದು ದಿನ ಮದ್ದೂರಾಯನ ಗಂಟಲು ಕೈ ಕೊಟ್ಟಿತು. ಈ ಹವೆ ಅವನಿಗೆ ಒಗ್ಗಿರಲಿಲ್ಲ. ಅದಕ್ಕಾಗಿ ಅವನು ಚಿಕಿತ್ಸೆ ಮಾಡಿಕೊಳ್ಳಬೇಕಿತ್ತು.

ಪೇಟೆಗೆ ಹೋದ. ಅಲ್ಪಸ್ವಲ್ಪ ಬಾದಾಮಿಯನ್ನು ಕೊಂಡು ತಂದ. ಲಲಿತಳ ಕೊಠಡಿಗೆ ಹೋದ—

"ಇದನ್ನು ತೆಗೆದುಕೋ ಮಗು, ತುಪ್ಪದಲ್ಲಿ ಹುರಿದು ತೆಗೆದಿಡು. ರಾತ್ರಿ ನಾಟಕಕ್ಕೆ ಹೋಗುತ್ತಾ ತೆಗೆದುಕೊಂಡು ಹೋಗುತ್ತೇನೆ."

ಲಲಿತ ಒಪ್ಪಿದಳು. ಕಂಪೆನಿ ಮನೆಯಲ್ಲಿ ಲಲಿತಳ ಕೊಠಡಿ ದವಾಖಾನೆಯಿದ್ದಂತೆ. ಒಬ್ಬರಿಗೆ ಮೆಣಸಿನಕಾಳ ಕಷಾಯ, ಮತ್ತೊಬ್ಬರಿಗೆ ರವೆ ಗಂಜಿ, ಮಗುದೊಬ್ಬರಿಗೆ ಬಾದಾಮಿ ಹಾಲು, ಎಲ್ಲವೂ ಇಲ್ಲಿಯೇ ತಯಾರಾಗಬೇಕು.

ಯಾರಿಗೆ ಏನಾದರೂ ಇಲ್ಲಿ ಔಷಧಿ ಪಥ್ಯಗಳು ಸಿದ್ಧವಾಗುತ್ತಿದ್ದವು. ಯಾರಿಗೂ ಇಲ್ಲವೆನ್ನುವ ಸ್ವಭಾವ ಲಲಿತಳದ್ದಲ್ಲ.

ರಾತ್ರಿ ನಾಟಕಕ್ಕೆ ಹೋಗುವಾಗ ಮದ್ದೂರಾಯ ಬಾದಾಮಿಗಾಗಿ ಕೊಠಡಿಯ ಒಳಗೆ ಬಂದ. ಲಲಿತ ಬಾದಾಮಿಯನ್ನು ಕೊಟ್ಟಳು. ಎರಡು ಬಾದಾಮಿ ಬಾಯಿಗೆ ಹಾಕಿಕೊಂಡು ಬಾಯಿ ಚಪ್ಪರಿಸಿದ.

"ಭೇಷ್! ಭೇಷ್! ಬಹಳ ಚೆನ್ನಾಗಿ ಮಾಡಿದ್ದಿ ಮಗೂ"

—ಎನ್ನುತ್ತಾ ಅವಳ ಬೆನ್ನಿನ ಮೇಲೆ ಕೈ ತಟ್ಟಲು ಹೋದ.

ಮದ್ದೂರಾಯನ ವರ್ತನೆ ಕಂಪೆನಿಗಳಲ್ಲಿ ಜನಜನಿತವಾಗಿತ್ತು. ಲಲಿತಳೂ ಎಚ್ಚರಿಕೆಯಿಂದಲೇ ನಿಂತಿದ್ದಳು.

ಅವನ ಕೈ ಬೆನ್ನಿಗೆ ಬರುವಾಗ ಲಲಿತ ಕೆಳಗೆ ಬಾಗಿದಳು. ಅವನು ಮುಂದಕ್ಕೆ ಬಂದಾಗ ಇವಳು ಹಿಂದಕ್ಕೆ ಸರಿದಳು.

ಮದ್ದೂರಾಯ ಮಾತನಾಡಲಿಲ್ಲ. ಶುಷ್ಕನಗೆ ನಗುತ್ತಾ ಹೊರಗೆ ಬಂದ.

# ೧೮

ಶ್ರೀಧರನಿಗೆ ಎಚ್ಚರವಾಗುವಾಗ ಮಧ್ಯಾಹ್ನದ ನಾಲ್ಕು ಗಂಟೆಯಾಗಿತ್ತು. ಜಾಗ್ರತೆ ಮುಖ ತೊಳೆದು ಕಾಫಿ ಮುಗಿಸಿದ. ಬೇರೆ ಬಟ್ಟೆಗಳನ್ನು ತೊಟ್ಟು ತನ್ನ ನಿತ್ಯದ ತಿರುಗಾಟಕ್ಕಾಗಿ ಹೊರಟ.

"ಅಲ್ಲಿಗೇ ಹೊರಟಿರೇನು ?"—ಲಲಿತ ಕೇಳಿದಳು.

"ಎಲ್ಲಿಗೆ?"

"ಶಾನುಭೋಗರ ಮನೆಗೆ ಬರಹೇಳಿದ್ದರಲ್ಲ."

"ನೀವೂ ಬರುತ್ತೀರಾ? "

"ಹೌದು!....ಸ್ವಲ್ಪ ತಾಳಿ."—ಲಲಿತ ಒಳಗಡೆ ಹೊರಟುಹೋದಳು.

* * * *

ಶಾನುಭೋಗರು ಹಿಂದಿನ ರಾತ್ರಿ ತಮ್ಮ ಮನೆಯವರೊಡನೆ ನಾಟಕಕ್ಕೆ ಬಂದಿದ್ದರು. ಹೊರಡುವಾಗ ಶ್ರೀಧರ ಬರುವುದನ್ನೇ ಕಾಯುತ್ತಾ ಗ್ರೀನ್‌ರೂಮಿನ ಬಾಗಿಲಲ್ಲಿ ನಿಂತಿದ್ದರು. ಶ್ರೀಧರ ಬಣ್ಣ ಅಳಿಸಿ—ಬಟ್ಟೆ ಹಾಕಿಕೊಂಡು ಹೊರಗಡೆ ಬಂದ.

"ಮನೆಗೆ ಹೋಗಲಿಲ್ಲವೇ ಶಾನುಭೋಗರೇ"—ಅವನೆಂದ.

"ಇಲ್ಲ...."

"ಈ ರಾತ್ರಿ ನಿಮ್ಮ ಹಳ್ಳಿ ಬಹಳ ದೂರ. ಬನ್ನಿ ನಮ್ಮ ಕಂಪೆನಿ ಮನೆಯಲ್ಲೇ ಉಳಿದುಕೊಳ್ಳಿ."

"ರಾತ್ರಿ ನಡೆದು ನಮಗೆ ಅಭ್ಯಾಸವಿದೆ. ನಿಮ್ಮನ್ನು ಕಂಡು ಹೋಗೋಣ ಅಂತ ನಿಂತುಕೊಂಡೆ!"

"ನೀವು ಹೇಳಿಕಳಿಸಿದ್ದಿದ್ದರೆ ಒಳಗಡೆ ಕರೆಸಿಕೊಳ್ಳುತ್ತಿದ್ದೆ. ಈ ಇಬ್ಬನಿಯಲ್ಲಿ ಹೆಂಗಸರನ್ನು ನಿಲ್ಲಿಸಿಕೊಂಡಿದ್ದೀರಲ್ಲ....ಬನ್ನಿ ಒಳಗೆ"—ಅವನೆಂದ.

ಶಾನುಭೋಗರು ತಮ್ಮ ಹೆಂಡತಿಯೊಡನೆ ಒಳಗೆ ಬಂದರು. ಸೂಕ್ಷ್ಮವಾಗಿ ಪರಿಚಯಮಾಡಿಸಿದ ಶ್ರೀಧರ,

"ಇವಳು ಆ ಅಮ್ಮನನ್ನು ನೋಡಬೇಕಂತೆ."—ಎಂದರು ಶಾನುಭೋಗರು.

"ಅವರಿಗಿನ್ನೂ ಬಣ್ಣ ಅಳಿಸಿ ಮುಗಿದಿಲ್ಲ. ಸ್ವಲ್ಪ ತಡ."

"ನಾಳೆ ನೀವಿಬ್ಬರೂ ನಮ್ಮ ಮನೆಗೆ ಬರಬೇಕು"—ಎಂದರು ಶಾನು ಭೋಗರು.

"ನಾವಿಬ್ಬರೂ....ಅದು ಹೇಗೆ ಸಾಧ್ಯ! ನಾನಂತೂ ಬರುತ್ತೇನೆ. ಅವರ ವಿಚಾರ ನಾನು ಭರವಸೆ ಕೊಡಲಾರೆ."

"ಇವಳು ಕೇಳುತ್ತಾಳೆ. ಅವಳದ್ದೇ ಹಟ, ಮನೆಗೆ ಕರೆದುಕೊಂಡು ಹೋಗಬೇಕು ಅಂತ. ಅದಕ್ಕೇ ನಿಂತುಕೊಂಡೆವು."

"ಕೇಳಿನೋಡಿ"....ಎಂದ ಶ್ರೀಧರ.

ಲಲಿತ ಬಣ್ಣವನ್ನಳಿಸಿ—ಬಟ್ಟೆ ಬದಲಾಯಿಸಿದ ಮೇಲೆ—ಶ್ರೀಧರ ಶಾನುಭೋಗರು ಮತ್ತು ಅವರ ಹೆಂಡತಿಯನ್ನು ಲಲಿತಳಿಗೆ ಪರಿಚಯಮಾಡಿಸಿದ.

ಹೆಂಗಸರು ಪರಿಚಯಮಾಡಿಕೊಳ್ಳುವಷ್ಟು ಜಾಗ್ರತೆ ಗಂಡಸರು ಪರಿಚಯಮಾಡಿಕೊಳ್ಳಲಾರರು. ಸ್ವಲ್ಪ ಹೊತ್ತಿಗೇ ಅಕ್ಕತಂಗಿಯರಂತಾಗಿ ಬಿಟ್ಟರು.

ಈ ಮಾಯೆಯನ್ನು ಕಂಡು ಶ್ರೀಧರನಿಗೆ ಅಚ್ಚರಿಯಾಯಿತು. ಶಾನು ಭೋಗರ ಹೆಂಡತಿಯ ಆಹ್ವಾನವನ್ನು ಲಲಿತ ಒಪ್ಪಿಕೊಂಡು ಬಿಟ್ಟಳು.

ನಾಳೆ ನೀವಿಬ್ಬರೂ ಖಂಡಿತವಾಗಿ ಬರಬೇಕೆಂದು ಹೇಳಿ ಆ ದಂಪತಿಗಳು ಹೊರಟುಹೋಗಿದ್ದರು.

* * * *

ಮಾರನೆದಿನ. ಈಗ ಲಲಿತ ತನ್ನೊಡನೆ ಹೊರಡಬಹುದೆಂಬ ನೆಚ್ಚಿಗೆ ಶ್ರೀಧರನಲ್ಲಿರಲಿಲ್ಲ. ಆದ್ದರಿಂದಲೇ ಅವನು ಯಾವ ವಿಚಾರವನ್ನೂ ಮತ್ತೆ ಮಾತಾಡಿರಲಿಲ್ಲ.

ಲಲಿತ ಆಡಂಬರವಿಲ್ಲದ ಸಾದಾ ಉಡುಪನ್ನು ಧರಿಸಿ ಬಂದಳು. ಶ್ರೀಧರ ಮುಂದೆ ಹೊರಟ. ಲಲಿತ ಹಿಂಬಾಲಿಸಿದಳು.

ಇದರಿಂದ ಏನು ಪರಿಣಾಮವಾಗಬಹುದು? ಕಂಪೆನಿಯಲ್ಲಿ ಜನ ಏನೆಂದುಕೊಂಡಾರೆಂದು ಶ್ರೀಧರನ ತಲೆ ಕೆಲಸಮಾಡತೊಡಗಿತು.

ಇಬ್ಬರೂ ಮೌನವಾಗಿ ಊರು ದಾಟಿದರು. ಮೌನವನ್ನು ಮುರಿದು

ಕೇಳಿದಳು ಲಲಿತ—

"ನಿಮಗೆ ಅಲ್ಲಿಗೆ ಹೋಗುವ ಹಾದಿ ತಿಳಿದಿದೆಯೆ ?"

"ಹೌದು."

"ನಿತ್ಯವೂ ಅಲ್ಲಿಗೆ ಹೋಗುತ್ತೀರಾ ?"

"ಇಲ್ಲ. ಒಂದೊಂದು ದಿನ ಒಂದೊಂದು ಹಾದಿ ಹಿಡಿಯುತ್ತೇನೆ."

"ನಿಮಗೆ ಭಯವಾಗುವುದಿಲ್ಲವೇ ?"

"ಇಲ್ಲ."

"ಬೇಸರವೂ ಆಗುವುದಿಲ್ಲವೇ ?"

"ಬೇಸರ ಕಳೆಯುವುದಕ್ಕೋಸ್ಕರವಾಗಿಯೇ ನಾನು ತಿರುಗಾಡ ಹೊರಡುವುದು."

"ಒಬ್ಬಳೇ ನಡೆಯುವುದೆಂದರೆ ನನಗಂತೂ ಬೇಸರ. ನಡೆಯುವುದೇ ಒಂದು ಕೆಲಸವಾಗಿಬಿಡುತ್ತೆ."

"ಇಲ್ಲ. ಮನಸ್ಸಿನಲ್ಲಿ ಯಾವುದಾದರೂ ವಿಚಾರಗಳನ್ನು ಕಲ್ಪಿಸಿಕೊಂಡು....ಮಥಿಸುತ್ತಾ ಮೆಲುಕು ಹಾಕುತ್ತಾ ಹೋಗಬೇಕು. ಆಗ ನಡಿಗೆ ಆಯಾಸವಾಗುವುದಿಲ್ಲ."

"ಹೀಗೇ ಏನೇನೋ ಮೆಲುಕು ಹಾಕಿಯೇ ಮೊನ್ನೆ ನಾಟಕದಲ್ಲಿ ತೊದಲ್ತಾ ಇದ್ರಿ."

ಶ್ರೀಧರ ಬೆಚ್ಚಿದ. ಸುಧಾರಿಸಿಕೊಂಡು ಹೇಳಿದ—

"ನೀವು ತಪ್ಪು ತಿಳಿದುಕೊಂಡಿದ್ದೀರಿ. ಯೋಚನೆ ಮಾಡಲು ಅನೇಕ ವಿಚಾರಗಳಿರುತ್ತವೆ. ಚಿಗುರಿದ ಮರ—ಹರಿಯುವ ಹೊಳೆ—ಹೂಬಿಟ್ಟ ಗಿಡ ಬಳ್ಳಿಗಳೂ ನಮ್ಮ ಮನಸ್ಸನ್ನು ಸೆಳೆಯಬಲ್ಲವು."

"ಅವುಗಳ ಬಗ್ಗೆಯೂ ಯೋಚಿಸುತ್ತೀರಾ?"

"ಹೌದು. ಅವು ನಮ್ಮ ಮನಸ್ಸಿಗೆ ಆನಂದವನ್ನು ಕೊಡಬಲ್ಲವು."

"ಹೇಗೆ?"

"ಬರಿ ನೋಟದಿಂದಲ್ಲ. ತನ್ಮಯತೆಯಿಂದ. ಹಾಗೆ ಧ್ಯಾನಿಸಿದಾಗ ಮಾತ್ರ ಪ್ರಕೃತಿ ನಮಗೆ ಒಲಿಯುತ್ತಾಳೆ."

"ಅದಕ್ಕಾಗಿಯೇ ಒಂಟಿಯಾಗಿ ಬರುತ್ತೀರಾ?"

"ಹೌದು."

"ನಿಮ್ಮೊಡನೆ ನಾನೂ ಬರಬಹುದೇ?"

"ಪ್ರತಿನಿತ್ಯ!"

"ಅಡ್ಡಿಯೇನು? ಕಂಪೆನಿ ಮನೆಯಲ್ಲಿ ಮಧ್ಯಾಹ್ನದ ಮೇಲೆ ಬಲು ಬೇಸರ."

"ಜನ ಸಿಕ್ಕಿದಂತೆ ಮಾತನಾಡುತ್ತಾರೆ."

"ಅದರ ಲಕ್ಷ್ಯ ನನಗಿಲ್ಲ. ನಿಮ್ಮ ಮನಸ್ಸು ಶುದ್ಧವಾಗಿದ್ದರೆ ತೀರಿತು."

ಮನಸ್ಸು ಶುದ್ಧವಾಗಿರಬಹುದೆಂಬ ಭರವಸೆ ಶ್ರೀಧರನಲ್ಲಿರಲಿಲ್ಲ. ಇರಲಾರದೆಂದು ವ್ಯಕ್ತಪಡಿಸುವ ಇಚ್ಛೆಯೂ ಇರಲಿಲ್ಲ. ಮೌನವಾಗಿ ಮುಂದುವರೆದ.

ಶಾನುಭೋಗರು ಆದರದಿಂದ ಬರಮಾಡಿಕೊಂಡರು. ಅವರ ಹೆಂಡತಿ ಲಲಿತಳೊಂದಿಗೆ ಆತ್ಮೀಯತೆಯಿಂದ ವರ್ತಿಸಿದರು. ಒಂದೇ ಮನೆಯವರಂತೆ ಅವರು ಮಾತನಾಡತೊಡಗಿದರು.

ಬೆಳ್ಳಿಯ ತಟ್ಟೆಯ ತುಂಬಾ ಕಿತ್ತಿಳೆ ಹಣ್ಣುಗಳನ್ನು ತಂದು ಮುಂದಿಟ್ಟರು.

ಅರಿಸಿನ ಕುಂಕುಮ ಕೊಟ್ಟು ಲಲಿತಳನ್ನು ಬೀಳ್ಕೊಟ್ಟರು.

ಅಲ್ಲಿಂದ ಹೊರಡುವಾಗ ಬೆಳಕು ಮರೆಯಾಗುತ್ತಿತ್ತು.

"ಬೇಗ ಹೋಗೋಣ. ಕತ್ತಲಾಗುವುದರೊಳಗಾಗಿ ನಾವು ಮನೆ ಸೇರಬೇಕು"—ಎಂದಳು ಲಲಿತ.

"ಬಹಳ ದೂರ ಹೋಗಿತ್ತೇನೋ ಸವಾರಿ?"

—ಯಾರೋ ಹಿಂದಿನಿಂದ ಕೇಳಿದರು. ಇಬ್ಬರೂ ನಿಂತರು. ಮದ್ದೂರಾಯ ಶುಷ್ಕವಾಗಿ ನಗುತ್ತಾ ಅಲ್ಲೇ ನಿಂತಿದ್ದ.

ಪ್ರಶ್ನೆಯ ಕೊಂಕು ಅರ್ಥವಾಗದಿರಲಿಲ್ಲ. ಆದರೂ ತೋರ್ಪಡಿಸಿಕೊಳ್ಳದೇ ಹೇಳಿದ ಶ್ರೀಧರ—

"ಶಾನುಭೋಗರ ಮನೆಗೆ ಹೋಗಿದ್ದೆವು."

"ನೀವು"—ಎಂದು ಕೇಳಿದಳು ಲಲಿತ.

"ನಾನಿಲ್ಲೇ ಹಳ್ಳದ ಕಡೆ ಬಂದಿದ್ದೆ....ಯಾಕೆ ನಿಂತಿದ್ದೀರಿ ಹೊರಡಿ.... ಪಾಪ ನನ್ನಿಂದ ನಿಮಗೇಕೆ ತೊಂದರೆ!"

ಕೊಂಕುಮಾತನ್ನು ಸಹಿಸುವ ತಾಳ್ಮೆ ಲಲಿತಳಲ್ಲಿರಲಿಲ್ಲ. ಅವಳು ಚುಚ್ಚಿ ನುಡಿದಳು—

"ನಿಮ್ಮಂತೆಯೇ ಎಲ್ಲರೂ ಎಂದು ನಿಮ್ಮ ಭಾವನೆ."

"ನಮಗೇಕೆ ತಾಯಿ ದೊಡ್ಡ ಮನುಷ್ಯರ ವಿಚಾರ".

—ಅಂದುಕೊಂಡು ಮದ್ದೂರಾಯ ಮುಂದೆ ನಡೆದ.

"ಮೊನ್ನೆ ಮಗು! ಇವತ್ತು ತಾಯಿ! ಅಬ್ಬ! ಈ ಜನ ಎಷ್ಟು ಬೇಗ ಬದಲಾಗುತ್ತಾರೆ."

ಕೇಳಿಯೂ ಕೇಳದವನಂತೆ ಅವನು ಮುಂದುವರೆದ. "ಹೀಗೆ ಆಗಬಾರದಿತ್ತು"—ಎನ್ನಿಸಿತು ಶ್ರೀಧರನಿಗೆ.

೧೯

ರಾತ್ರಿ ನಾಟಕ ಬಿರುಸಿನಿಂದ ನಡೆಯುತ್ತಿತ್ತು. ಪ್ರೇಕ್ಷಕರು ದಂಗಾಗಿ ನೋಡುತ್ತಿದ್ದರು. ರಸ್ತೆ ಪರದೆಯ ಮುಂದೆ ಶ್ರೀಧರ ಮತ್ತು ಮದ್ದೂರಾಯ ....ಎದುರುಬರುವ ಖಳನಾಯಕನಿಂದ ತಪ್ಪಿಸಿಕೊಂಡು ಓಡಬೇಕು.

ಮದ್ದೂರಾಯ ಶ್ರೀಧರನ ಎಡಗೈ ಮಣಿಕಟ್ಟನ್ನು ಹಿಡಿದು ಬಲವಾಗಿ ಜಗ್ಗಿದ. ಕೈ ತಿರುಪಿದಂತಾಯಿತು. ತನ್ನ ಪಾತ್ರದಲ್ಲಿ ತನ್ಮಯನಾದ ಶ್ರೀಧರ ಯಾವುದರ ಅರಿವೂ ಇಲ್ಲದೆ ಒಳಗೆ ದಾಟಿದ.

ನಾಟಕ ಮುಗಿಯಿತು. ಬಣ್ಣ ಅಳಿಸುವಾಗ ಕೈಯಲ್ಲಿದ್ದ ವಾಚಿನ ನೆನಪಾಯಿತು. ಗಾಬರಿಗೊಂಡ. ಯಾರನ್ನು ಕೇಳಬೇಕು? ಎಲ್ಲಿ ಹುಡುಕ ಬೇಕು?

ಎಷ್ಟು ಯೋಚಿಸಿಕೊಂಡರೂ ವಾಚು ಎಲ್ಲಿದೆಯೆಂದು ನೆನಪು ಬರ ಲಿಲ್ಲ. ಇದನ್ನು ತಿಳಿದು ಕಂಪೆನಿಯಲ್ಲಿ ಎಲ್ಲರೂ ಹುಡುಕಲಾರಂಭಿಸಿದರು.

"ಇಷ್ಟರಮಟ್ಟಿಗೆ ಮರವೆಯಾದರೆ ಹೇಗಪ್ಪಾ!"

—ವೆಂಕಟೇಶಯ್ಯ ಬೇಸರದಿಂದ ಕೇಳಿದರು.

"ನಾನೆಲ್ಲೂ ಮರೆತಿಲ್ಲ ವೆಂಕಟೇಶಯ್ಯ....ತುಂಬಾ ವಿಚಿತ್ರವಾಗಿದೆ ಇದು".

"ಹೊರಗಡೆ ಎಲ್ಲಾದರೂ ಹೋಗಿದ್ದಿರಾ?"—ಲಲಿತ ಕೇಳಿದಳು.

"ಬಣ್ಣ ಬಳಿದುಕೊಂಡು ಹೊರಗಡೆ ಹೋಗಲು ನನಗೇನು ಹುಚ್ಚೇ?"

"ಹುಚ್ಚರೇ....ರಾತ್ರಿಯ ಹೊತ್ತೂ ಪ್ರಕೃತಿಯ ಹುಚ್ಚು. ಮೈ ಮೇಲೆ ಎಚ್ಚರವೇ ಇರುವುದಿಲ್ಲ"—ಎನ್ನುತ್ತಾ ಲಲಿತ ಸ್ಟೇಜಿನ ಕಡೆ ಹೋದಳು.

ಚಾಪೆ ಜಮಖಾನಗಳನ್ನು ಎತ್ತಿಸಿ ಹುಡುಕಾಡಿದಳು. ವೆಂಕಟೇಶ ಯ್ಯನೂ ಹುಡುಕಾಡಿದರು.

ಪಿಟೀಲು ಗುಂಡಪ್ಪನವರು ನಾಟಕ ಬಿಟ್ಟಮೇಲೆ ಎದುರು ಹೋಟೆಲಿ ನಲ್ಲಿ ಕಾಫಿ ಕುಡಿದು ಗಡಿಬಿಡಿಯಿಂದ ಒಳಗೆ ಬಂದರು. ಹಾಡು ಮುಗಿ ದೊಡನೆ ತಮ್ಮ ಕೆಲಸ ಮುಗಿಯಿತೆಂದು ತೂಕಡಿಸುತ್ತಾ ಕುಳಿತುಕೊಳ್ಳುವ

ವರು ಅವರಲ್ಲ. ಯಾರು ಯಾರು ಎಲ್ಲೆಲ್ಲಿ ತಪ್ಪುತ್ತಾರೆಂದು ಹಿಡಿದು ಮರುದಿನ ಅವರ ತಪ್ಪನ್ನು ಅವರಿಗೆ ಕಾಣಿಸುತ್ತಿದ್ದರು. ಬೆಳಗಿನಜಾವದ ಚಳಿಗೆ ಹೆದರಿ ತಲೆಯ ಮೇಲೆ ಶಾಲನ್ನು ಹೊದ್ದು ಕುಳಿತಿದ್ದ ಗುಂಡಪ್ಪನ ವರಿಗೆ ಮುಸುಕಿನೊಳಗಿಂದಲೇ ನಡೆದ ವಿಚಾರ ತಿಳಿದಿತ್ತು.

ಅವರ ಪಕ್ಷಿನೋಟ ಶ್ರೀಧರನ ಮೇಲೆ ಬಿದ್ದಾಗ, ಮದ್ದೂರಾಯ ಅವನ ಕೈಹಿಡಿದು ತಿರುಪಿದ್ದರು.

"ಫುಟ್ ಲೈಟಿನ ಕೆಳಗೆ ನೋಡಿ, ವಾಚು ಬಿದ್ದಿರಬೇಕು"–ಅವರೆಂದರು.

ಲಲಿತ ವೆಂಕಟೇಶಯ್ಯ ಎಚ್ಚರಿಕೆಯಿಂದ ಹುಡುಕಿನೋಡಿದರು. ನಿರಾಶರಾದರು.

ಗುಂಡಪ್ಪನವರ ಮುಖದಲ್ಲಿ ಜಿಗುಪ್ಸೆ ತಾತ್ಸಾರಗಳು ಮೂಡಿದುವು—

"ಅವನು ಎಲ್ಲಿ ಹೋದರೂ ಅವನ ಹಣೆಬರಹ ಇಷ್ಟೆ."

"ಏನಾಯಿತು ಗುಂಡಪ್ಪನವರೇ?"—ಲಲಿತ ಕೇಳಿದಳು.

"ಕೈ ತಿರುಪಿದಾಗ ಚೈನು ಕಿತ್ತು ವಾಚು ಕೈಗೆ ಬಂತು. ಮದ್ದೂ ರಾಯ ಅದನ್ನು ತಕ್ಷಣವೇ ಫುಟ್ ಲೈಟಿನ ಕೆಳಗೆ ಎಸೆದ."

"ಈಗ".

"ಪರದೆ ಬಿದ್ದೊಡನೆ ಅದು ಸೇರಬೇಕಾದ ಸ್ಥಳವನ್ನು ಸೇರಿದೆ."

"ಕೇಳಿದ್ದರೆ ನಾನೇ ಕೊಡುತ್ತಿದ್ದೆ. ಮುಂದೆ ಯಾರೂ ಈ ವಿಚಾರ ವನ್ನೆತ್ತಬೇಡಿ"—ಎಂದ ಶ್ರೀಧರ.

"ಕೇಳಿಬಿಡಿ ಅದಕ್ಕೇಕೆ ಸಂಕೋಚ?—ಎಂದಳು ಲಲಿತ.

"ಕೇಳುವುದರಿಂದೇನು ಪ್ರಯೋಜನ? ವೃಥಾ ನಿಷ್ಠುರ. ಇದು ನಮಗೆ ಹೊಸದಲ್ಲ"—ಎಂದರು ವೆಂಕಟೇಶಯ್ಯನವರು ವ್ಯಸನದಿಂದ.

ಎಲ್ಲರೂ ಮರೆಯಾದ ನಂತರ ಲಲಿತ ಹೇಳಿದಳು—"ಇನ್ನೇನೂ ಮಾಡಲು ಸಾಧ್ಯವಿಲ್ಲ. ಇಷ್ಟರಲ್ಲಾದರೂ ಸೇಡು ತೀರಿಸಿಕೊಂಡರಲ್ಲ."

"ಸೇಡು! ಯಾರ ಮೇಲೆ! ಯಾವುದಕ್ಕಾಗಿ!"

—ಮನಸ್ಸಿನಲ್ಲೇ ಅಂದುಕೊಂಡ ಶ್ರೀಧರ. ಚಕಿತನಾಗಿ ಅವಳ ಮುಖವನ್ನು ನೋಡಿದ.

ಆ ಬಗೆಗಣ್ಣಿನ ಅಂಚುಗಳಲ್ಲಿ ನೀರು ತುಳುಕುತ್ತಿತ್ತು.

## ೨೦

ಸೋಮವಾರಪೇಟೆಯ ಕ್ಯಾಂಪು ಮುಕ್ತಾಯವಾಯಿತು. ಹುಟ್ಟಿದೂರನ್ನು ಬಿಟ್ಟುಹೊರಡುವಷ್ಟು ದುಃಖ ಬಂದಿತ್ತು ಶ್ರೀಧರನಿಗೆ. ಅಂಗಡಿ–ಮನೆ–ಕಾಡು–ಬೆಟ್ಟ ಎಲ್ಲವೂ ತನ್ನದು ಎನ್ನುವಂತಾಗಿತ್ತು. ಪ್ರಕೃತಿಯಂತೆ ಜನಗಳೂ ತುಂಬು ಅಭಿಮಾನಿಗಳಾಗಿದ್ದರು.

ಎಲ್ಲರೂ ಬಂದು ಬೀಳ್ಕೊಡುವವರೇ!....

ಹೊರಡುತ್ತೀರಾ?....ಮತ್ತೆ ಎಂದೋ?....ಮುಂದಿನ ವರುಷ ಬನ್ನಿ.... ಮರೆಯದೇ ಕಾಗದ ಬರೆಯುತ್ತಿರಿ—ಎನ್ನುತ್ತಾ ಕಣ್ಣೀರು ಹರಿಸುವ ಬಳಗವನ್ನು ಬಿಡುವುದೇ ಕಷ್ಟವಾಗಿತ್ತು ನಾಟಕದವರಿಗೆ.

ಬಸ್ಸು ಹೊರಡುವಾಗ ಲಲಿತ ಹೇಳಿದಳು—

"ಅಲ್ಲಿ ನೋಡಿ ಶಾನುಭೋಗರು ಮತ್ತೆ ಬರುತ್ತಿದ್ದಾರೆ."

ಶಾನುಭೋಗರು ದೊಡ್ಡ ಕೈ ಚೀಲದ ತುಂಬಾ ಕಿತ್ತಿಲೆ ಹಣ್ಣುಗಳನ್ನು ತುಂಬಿಕೊಂಡು ಓಡಿಬರುತ್ತಿದ್ದರು. ಬಸ್ಸಿನ ಬಳಿ ಬಂದಾಗ ಅವರ ಮುಖದಲ್ಲಿ ಬೆವರಿನ ಹೊಳೆ ಹರಿಯುತ್ತಿತ್ತು, ಏದುತ್ತಾ ಏದುತ್ತಾ "ನಮ್ಮ ಪುಣ್ಯ—ಇನ್ನೂ ಬಸ್ಸು ಹೊರಟಿಲ್ಲ" ಎಂದುಕೊಂಡು ಚೀಲವನ್ನು ಬಸ್ಸಿನ ಮೇಲೆ ಇಳಿಸಿದರು.

"ನಿನ್ನೆ ಬಂದಿದ್ದೆವಲ್ಲ ಮತ್ತೇಕೆ ಈ ಹಣ್ಣುಗಳನ್ನು ತಂದಿರಿ ಶಾನುಭೋಗರೇ"—ಶ್ರೀಧರ ಎಂದ.

"ಇವತ್ತೊಂದು ದಿನ. ನಾಳೆ ನೀವೆಲ್ಲೋ ನಾವೆಲ್ಲೋ. ಅದಕ್ಕೇ ಸ್ವಲ್ಪ ಹಣ್ಣಾದರೂ ಕೊಟ್ಟು ಕಳಿಸೋಣ ಅಂತ ಕೊಯಿಸಿದೆ. ಕೊಯಿಸುವುದು ತಡವಾಯಿತು, ಅದಕ್ಕೇ ಅಲ್ಲಿಂದಿಲ್ಲಿಗೂ ಓಡಿಬರಬೇಕಾಯಿತು."

"ನಿಮ್ಮ ವಿಶ್ವಾಸಕ್ಕೆ ಪ್ರತಿಯಾಗಿ ಮಾತನಾಡಲು ನನಗೆ ಬಾಯೇ ಬರುತ್ತಿಲ್ಲ....ನಿಮ್ಮನ್ನು ಬಿಟ್ಟು ಹೋಗಬೇಕಲ್ಲಾ ಎಂದು ಸಂಕಟವಾಗುತ್ತಿದೆ ಶಾನುಭೋಗರೇ"—ಶ್ರೀಧರ ಗದ್ಗದಿತನಾಗಿ ನುಡಿದ.

ಶಾನುಭೋಗರ ಕಣ್ಣಿನಲ್ಲೂ ಹನಿಕಂಡಿತು.

"ನಿಮ್ಮ ಮನೆಯವರಿಗೆ ನನ್ನ ನಮಸ್ಕಾರ ತಿಳಿಸಿ. ಎಂದೆಂದಿಗೂ

ಮರೆಯಬಾರದು ಅಂತ ತಿಳಿಸಿ"—ಲಲಿತ ದುಃಖದಿಂದ ಹೇಳಿದಳು.

"ಆಗಲಿ ತಾಯಿ—ಅವಳಂತೂ ಇವತ್ತು ಅಳುತ್ತಾ ಕುಳಿತಿದ್ದಾಳೆ ಮನೆಯಲ್ಲೇ."

"ಪಾಪ ತುಂಬಾ ಒಳ್ಳೆಯ ಹೆಂಗಸು—ತಾಯಿಯಂತೆ ನೋಡಿಕೊಂಡರು"—ಲಲಿತ ಸೆರಗಿನಿಂದ ಕಣ್ಣನ್ನೊರೆಸಿಕೊಂಡಳು.

ಬಸ್ಸು ಹೊರಟಿತು. ಶ್ರೀಧರ ಲಲಿತರಿಗೆ ಅಳು ತಡೆಯಲಾಗಲಿಲ್ಲ.

ಶಾನುಭೋಗರು ತಮ್ಮ ಶಲ್ಯವನ್ನು ಮುಖದ ಮೇಲೆ ಎಳೆದುಕೊಂಡು ಕಲ್ಲುಬೆಂಚಿನ ಮೇಲೆ ಕುಳಿತರು.

ದಾರಿಯುದ್ದಕ್ಕೂ ಜನ "ನಾಟಕದವರು ಹೋಗುತ್ತಿದ್ದಾರೆ" ಎಂದು ದುಃಖದಿಂದ ನೋಡುತ್ತಿದ್ದರು.

ಶ್ರೀಧರನಿಗೆ ಕೃಷ್ಣರಾಜಪುರದ ನೆನಪಾಯಿತು.

ಅಲ್ಲಿಗೂ ಇಲ್ಲಿಗೂ ಅದೆಷ್ಟು ಅಂತರ! ಒಂದೇ ಭಾಷೆ—ಒಂದೇ ರೀತಿ—ಒಂದೇ ನೀತಿಯಾದರೂ ಈ ಹೃದಯಗಳಲ್ಲಿ ಅದೆಷ್ಟು ವೈವಿಧ್ಯ!

ನಿಜವಾಗಿ ಇದು ವಿಚಿತ್ರ ಪ್ರಪಂಚ!

# ಎರಡನೆಯ ಭಾಗ

# ೨೧

ಇದು ಬೇಲೂರು!........

ಪೇಟೆಯ ಬೀದಿಯನ್ನು ದಾಟಿ, ದೇವಾಲಯದ ಮುಂಭಾಗದಲ್ಲಿ ಬಸ್ಸು ಬಂದು ನಿಂತಾಗ, ಎತ್ತರವಾದ ಭವ್ಯಗೋಪುರವನ್ನು ನೋಡಿದಾಗ, ಬಹು ದಿವಸಗಳ ಮನಸ್ಸಿನ ಚಿತ್ರ ಪ್ರತ್ಯಕ್ಷವಾದಂತಾಯಿತು ಶ್ರೀಧರನಿಗೆ.

ಚಿತ್ರವನ್ನು ನೋಡಿ, ಕಲ್ಪನೆಗಳನ್ನು ಮಾಡಿಕೊಂಡರೂ, ಆ ಎಲ್ಲ ಕಲ್ಪನೆಗಳನ್ನೂ ಮೀರಿಸುವ ಕಲಾಚಾತುರ್ಯ ಇಲ್ಲಿದೆ. ಇಲ್ಲಿ ನಾವು ಕಾಲ ಕಳೆಯಬೇಕು.

ಓ!....ಎಂತಹ ಸೌಭಾಗ್ಯ!!....

ನಾಟಕ ಪ್ರಾರಂಭವಾಯಿತು. ಎರಡು ಮೂರು ದಿನಗಳು ಗಡಿಬಿಡಿಯಲ್ಲೇ ಕಳೆದುಹೋಯಿತು.

ಒಂದು ಬೆಳಗ್ಗೆ ಲಲಿತ ಕೇಳಿದಳು—

"ದೇವಸ್ಥಾನಕ್ಕೆ ಹೋಗಿದ್ದಿರಾ?"

"ಹೌದು ನಾನು ನಿತ್ಯವೂ ಹೋಗುತ್ತೇನೆ."

"ಎಷ್ಟು ಸ್ವಾರ್ಥಿಗಳು ನೀವು! ಹೇಳಿದ್ದರೆ ನಾನೂ ಬರುತ್ತಿದ್ದೆ."

"ಅಲ್ಲೇನಿದೆಯೆಂದು ಮೊದಲು ನಾನು ತಿಳಿದುಕೊಂಡ ಹೊರತು, ನಿಮ್ಮನ್ನು ಕರೆದುಕೊಂಡು ಹೋಗಬಾರದೆಂದು ಹಾಗೆ ಮಾಡಿದೆ."

"ಅದೇನು?"

"ನಾನು ಮೊದಲ ದಿನ ಅಲ್ಲಿಗೆ ಹೋದಾಗ ನನಗೆ ಹಾಗೇ ಅನ್ನಿಸಿತು. ನಾನು ಒಳಗೆ ಕಾಲಿಡುವುದೇ ತಡ–'ಬನ್ನಿ ಸ್ವಾಮಿ....ದೇವಸ್ಥಾನ ತೋರಿಸ್ತೇನೆ"–ಅಂತ ಒಬ್ಬ ಮುದುಕ ನನ್ನನ್ನು ಕರೆದೊಯ್ದ.

ಅಪದ್ಧ ಅಪದ್ಧವಾಗಿ ಮಂತ್ರಗಳನ್ನುಚ್ಚರಿಸುವ ಬ್ರಾಹ್ಮಣನಂತೆ—ಒಂದೇ ಉಸಿರಿನಲ್ಲಿ ಒದರಲಾರಂಭಿಸಿದ—ನಿಂತು ನೋಡಲೂ ಸಮಯವಿಲ್ಲದಂತೆ."

"ನಿಮಗೆ ಕೋಪ. ಅವನಿಗೆ ನಿಮ್ಮಂಥವರು ದಿನಕ್ಕೆ ಎಷ್ಟು ಜನವೋ?"

"ನಿಜ....ಹೊರಗಿನಿಂದ ಬಂದವರೆಲ್ಲರೂ ದೇವಸ್ಥಾನವನ್ನು ನೋಡು

ವುದು ಇವನ ಮೂಲಕವೇ. 'ಏನು ನೋಡಿದೆ?' ಎಂದು ಯಾರಾದರೂ ಕೇಳಿದರೆ—'ಎಲ್ಲ ನೋಡಿದೆ' ಎಂದು ಬಿಡುತ್ತಾರೆ ಈ ಪ್ರೇಕ್ಷಕರು. 'ಎಲ್ಲಿ ಹೇಳಿ ಎಂದು ಅವರು ಕೇಳಿದರೆ ಹೇಳುವುದಕ್ಕೆ ಯಾರಾದರೂ ಬರೆದಿಟ್ಟ ಪುಸ್ತಕ ಬೇಕು.

ಮೊದಲ ದಿನ ನನ್ನ ಗತಿಯೂ ಇಷ್ಟೇ ಆಯಿತು. ಅವನ ಕೈಮೇಲೆ ಎಂಟಾಣೆಯನ್ನಿಟ್ಟು ಹೊರಗೆ ಬಂದೆ."

"ದೇವರ ದರ್ಶನ ಮಾಡಲಿಲ್ಲವೇ?"

"ಮಾಡಿದೆ."

"ಹಣ್ಣು ಕಾಯಿ ಮಾಡಿಸಿದಿರಾ?"

ಶ್ರೀಧರನ ಮನಸ್ಸಿಗೆ ಇದು ಬಂದೇ ಇರಲಿಲ್ಲ. ಅವನೆಂದ—

"ನಾನು ದೇವಸ್ಥಾನಕ್ಕೆ ಹೋದ ಉದ್ದೇಶ ಅದಲ್ಲ. ಕಲೆಯ ದರ್ಶನಕ್ಕಾಗಿ ಹೋಗಿದ್ದೆನಷ್ಟೆ."

"ಸಾಕು! ಸುಮ್ಮನಿರಿ. ಅಷ್ಟುದೂರದಿಂದ ನಾವು ಈ ಕ್ಷೇತ್ರಕ್ಕೆ ಬಂದು....ದೇವರಿಗೆ ಹಣ್ಣು ಕಾಯಿ ಮಾಡಿಸಬಾರದಾಗಿತ್ತೆ?"

—ಲಲಿತ ನಸುಮುನಿಸಿನಿಂದ ಹೇಳಿದಳು.

ಶ್ರೀಧರ ಸುಮ್ಮನಿದ್ದ.

"ನಾನು ಸ್ನಾನಮಾಡಿ ಬರುತ್ತೇನೆ. ನೀವೂ ಸ್ನಾನಮಾಡಿ. ದೇವಸ್ಥಾನಕ್ಕೆ ಹೋಗೋಣ."

ಸ್ನಾನಮಾಡಿ ಶುಭ್ರವಸ್ತ್ರಗಳನ್ನು ಧರಿಸಿ ಬಂದಳು ಲಲಿತ. ಶ್ರೀಧರನೂ ಸ್ನಾನಮಾಡಿ ಬಟ್ಟೆ ಬದಲಾಯಿಸಿದ. ಪರಿಶುದ್ಧವಾದ ಮನಸ್ಸಿನಿಂದ ಇಬ್ಬರೂ ದೇವಾಲಯಕ್ಕೆ ಹೊರಟರು.

ಲಲಿತ ಅಂಗಡಿಯಲ್ಲಿ ತೆಂಗಿನಕಾಯಿ ಬಾಳೆಯಹಣ್ಣುಗಳನ್ನು ತೆಗೆದುಕೊಂಡಳು. ಊದುಬತ್ತಿ ಕರ್ಪೂರಗಳನ್ನೂ ಬಿಡಲಿಲ್ಲ.

"ಈ ಬಾಹ್ಯ ಸಂಕೇತಗಳಲ್ಲಿ ನನಗೆ ನಂಬಿಕೆಯಿಲ್ಲ"—ಎಂದು ಹೇಳಬೇಕೆಂದು ಶ್ರೀಧರ ಆಗಾಗ ಪ್ರಯತ್ನಿಸಿದ. ಹಾಗೆ ಹೇಳಿ ಅವಳ ಗಾಢವಾದ ಭಕ್ತಿ, ಶ್ರದ್ಧೆಗಳಿಗೆ ಕಲ್ಲು ಹಾಕಿ, ಅವಳನ್ನು ಕೆಣಕುವ ಇಚ್ಛೆಯಿಲ್ಲದೇ ಮೌನವಾಗಿ ಹಿಂಬಾಲಿಸಿದ.

ಗೋಪುರದ ಮಹಾದ್ವಾರವನ್ನು ದಾಟಿ, ದೇವಸ್ಥಾನದ ವಿಶಾಲಾಂಗಣದಲ್ಲಿ ಬಂದು ನಿಂತಾಗ, ಲಲಿತಳ ಮುಖ ಗಂಭೀರವಾಯಿತು. ಭಕ್ತಿಯಿಂದ ತಲೆ ಬಾಗಿದಳು.

"ಇದು ನೋಡಿ: ಧ್ವಜಸ್ತಂಭ!...."

ಶ್ರೀಧರ ಎಡಗಡೆ ನಿಂತಿರುವ ಎತ್ತರವಾದ ಒಂದೇ ಕಲ್ಲಿನ ಶಿಲಾ ಸ್ತಂಭವನ್ನು ತೋರಿಸಿದ.

"ಯಾವ ಆಧುನಿಕ ಸಲಕರಣೆಗಳೂ ಇಲ್ಲದೇ ಒಂದೇ ಕಲ್ಲಿನ ಈ ಇಷ್ಟು ಎತ್ತರದ ಶಿಲಾಸ್ತಂಭವನ್ನು ಹಿಂದಿನವರು ಹೇಗೆ ನಿಲ್ಲಿಸಿರಬೇಕು? ಊಹಿಸಿ ನೋಡಿ."

ಲಲಿತ ಆಶ್ಚರ್ಯದಿಂದ ನೋಡಿದಳು!

ಮುಂದುವರೆದು ದೇವಾಲಯದ ಸುತ್ತಿಗೆ ಬಂದಾಗ ಶ್ರೀಧರ ಹೇಳಿದ–

"ಇದು ನೋಡಿ ರಾಮಾಯಣದ ಚಿತ್ರಗಳು–ಈ ಸುತ್ತಿನಲ್ಲಿರುವುದು ಭಾರತ–ಈ ಸುತ್ತು ಶೃಂಗಾರ ಶಾಸ್ತ್ರಕ್ಕೆ ಮೀಸಲು. ಒಂದೊಂದು ಸುತ್ತಿನಲ್ಲೂ ಒಂದೊಂದು ವಿಷಯಗಳನ್ನು ವಿವರಿಸಿದ್ದಾರೆ. ಚಿತ್ರಗಳ ಮೂಲಕ ಕಥೆಯನ್ನು ಕಾಣಿಸಿದ್ದಾರೆ ಶಿಲ್ಪಿಗಳು."

"ಈಗ ಬೇಡ ಅವೆಲ್ಲ"—ಲಲಿತ ಅಸಹನೆಯಿಂದ ಹೇಳಿದಳು.

"ಏಕೆ ?"

"ಒಂದು ಪ್ರದಕ್ಷಿಣೆ ಬಂದು ಮೊದಲು ಒಳಗೆ ಹೋಗೋಣ. ದೇವರ ದರ್ಶನ ಮಾಡಿ, ಹಣ್ಣುಕಾಯಿ ಮಾಡಿಸಿಕೊಂಡು ಬರೋಣ. ನಂತರ ನಿದಾನವಾಗಿ ನೋಡೋಣ."

ಶ್ರೀಧರ ಮಾತನಾಡುವಂತಿರಲಿಲ್ಲ. "ಹೆಂಗಸರು ಎಷ್ಟು ಮುಂದುವರಿದಿದ್ದಾರೆಂದರೂ ಇಷ್ಟೇ ಅವರ ಸ್ವಭಾವ"—ಅಂದುಕೊಂಡ.

ಒಳಗೆ ಹೋದಾಗ ಅದು ಅಭಿಷೇಕದ ಸಮಯ.

ಅಟ್ಟಣೆಯ ಮೇಲೆ ನಿಂತು, ಕ್ಷೀರಾಭಿಷೇಕವನ್ನು ಮಾಡುವಾಗ, ಸುಮಾರು ಎರಡಾಳು ಎತ್ತರದ, ಕರಿ ಶಿಲೆಯ ಚೆನ್ನಕೇಶವನ ನೈಜ ಸೌಂದರ್ಯ ಶ್ರೀಧರನನ್ನು ಬೆರಗು ಮಾಡಿತು.

ಎತ್ತರಕ್ಕೆ ತಕ್ಕ ಮೈಕಟ್ಟು. ಥಳಥಳನೆ ಹೊಳೆಯುವ ಮುಖ;

ನಗು ಚಿಮ್ಮುವಂತೆ ಕಾಣುವ ಕೆನ್ನೆಗಳು; ಮುಗುಳ್ದುಟಿ.

"ನಾವು ಪುಣ್ಯವಂತರು. ಅದಕ್ಕಾಗಿಯೇ ಈ ದೃಶ್ಯವನ್ನು ನೋಡು ವಂತಾಯಿತು. ಚೆನ್ನಕೇಶವನನ್ನು ನೋಡಲು ಇದೇ ಸರಿಯಾದ ಸಮಯ"

—ಶ್ರೀಧರನೆಂದ.

"ಏಕೆ ?"

"ಸ್ವಲ್ಪ ಹೊತ್ತು ತಡೆದು ಬಂದಿದ್ದರೆ; ಈ ಸುಂದರ ವಿಗ್ರಹದ ಮೇಲೆ ಜರಿಯ ಮಗುಟವನ್ನು ಮುಚ್ಚಿ, ಆಭರಣಗಳ ಹೊರೆಯನ್ನು ಹೇರಿ ಮರೆ ಮಾಡಿ ಬಿಡುತ್ತಿದ್ದರು ಈ ಪೂಜಾರಿಗಳು.

"ಪುಣ್ಯಾತ್ಮರು ದೇವರಿಗಾಗಿ ಇವುಗಳನ್ನರ್ಪಿಸಿದ್ದಾರೆ. ಪೂಜಾರಿಗಳು ಅದನ್ನು ತೊಡಿಸುತ್ತಿದ್ದಾರೆ—ಇದರಲ್ಲಿ ತಪ್ಪೇನು ?"

"ಯಾರು ಯಾರೋ ಯಾವ ಯಾವ ಪಾಪಗಳನ್ನೋ ಮಾಡಿ, ಅದರ ಪರಿಹಾರಕ್ಕೋಸ್ಕರವಾಗಿ ದೇವರಿಗೆ ಅರ್ಪಿಸಿದ ಲಂಚ ಇವು."

"ಅದೇಕೆ ಹಾಗನ್ನುವಿರಿ ?"

"ಮತ್ತೆ ದೇವರಿಗೆ ಈ ಆಭರಣಗಳೆಲ್ಲ ಏಕೆ ಬೇಕು. ವೇಷ ಭೂಷಣ ಗಳಾದರೂ ಏಕೆ ಬೇಕು ?"

"ಬೇಡವೇ ?"

"ಮನುಷ್ಯರಾದ ನಾವು ನಮ್ಮ ದೃಷ್ಟಿಯಿಂದಲೇ ದೇವರನ್ನು ಅಳೆಯು ತ್ತೇವೆ. ನಮ್ಮನ್ನು ಸೃಷ್ಟಿಸಿದವನು ಅವನೆಂದು ತಿಳಿದೂ ತಿಳಿದೂ ಅವ ನನ್ನೇ ನಾವು ಸೃಷ್ಟಿಸ ಹೊರಟಿದ್ದೇವೆ. ನಮಗೆ ಬೇಕಾದ್ದೆಲ್ಲವೂ ಅವನಿಗೂ ಬೇಕು ಎನ್ನುತ್ತೇವೆ. ಊಟ ಬಟ್ಟೆಗಳನ್ನು ಒಡವೆ ವಸ್ತುಗಳನ್ನು ಅವನ ಮೇಲೆ ಹೊರಲೆತ್ನಿಸುತ್ತೇವೆ.

ಬೊಂಬೆಯಾಟವಾಡಿ ಬೆಳೆದ ನಾವು, ದೊಡ್ಡವರಾದ ಮೇಲೂ ಈ ಚಟಕ್ಕೆ ಅಂಟಿಕೊಂಡು, ವಿಗ್ರಹವನ್ನು ಹೊತ್ತು ಮೆರವಣಿಗೆ ಮಾಡುತ್ತೇವೆ. ರಥವನ್ನು ಕಟ್ಟಿ ಎಳೆಯುತ್ತೇವೆ.

ಹುಡುಗರಾಗಿದ್ದಾಗ ಅದು ಆಟ! ದೊಡ್ಡವರಾದ ಮೇಲೆ ಅದೇ ಭಕ್ತಿ!

"ಭಕ್ತಿಗೆ ನಮ್ಮ ಜನ ಕಟ್ಟಿರುವ ಬೆಲೆ ಇಷ್ಟೆ."

"ಮತ್ತೆ ದೇವರನ್ನು ಹೇಗೆ ಪೂಜಿಸಬೇಕು?"

"ಪ್ರೇಮದಿಂದ."

"ಅಂದರೆ?...."

"ಶುದ್ಧಾಂತಃಕರಣದ ಪ್ರೇಮ ಅಂತಶ್ಚಕ್ಷುಗಳಿಗೆ ಮಾತ್ರ ಗೋಚರವಾಗುವಂತೆ ಭಕ್ತಿ ಎಂದಿಗೂ ಅಗೋಚರ.

ನದಿಯಲ್ಲಿ ಮುಳುಗಿ, ಒದ್ದೆಯುಸ್ಸುಟ್ಟು, ವಿಭೂತಿಯನ್ನು ಧರಿಸಿ, ಗಂಟೆಗಳನ್ನು ಬಾರಿಸುತ್ತಾ...."ಶಂಭೋ" ಎಂದು ಬೊಬ್ಬೆಯಿಟ್ಟರೆ ದೇವರು ಮೆಚ್ಚಲಾರ. ದೊಡ್ಡ ಭಕ್ತನೆಂದು ಜನ ಮೆಚ್ಚಿಯಾರು ಅಷ್ಟೆ."

"ಹೀಗೇ ಮಾಡಬೇಕೆಂದು ಹಿಂದಿನವರು ಶಾಸ್ತ್ರಗಳಲ್ಲಿ ಏಕೆ ಬರೆದಿಟ್ಟರು?"

"ಹೀಗೆ ಶಾಸ್ತ್ರಗಳಲ್ಲಿ ಬರೆದು ದೇವರ ಭಯವನ್ನು ತೋರಿಸದಿದ್ದಿದ್ದರೆ ಬಹುಶಃ ಈ ಜನ ಸದಾಚಾರವನ್ನೇ ಮರೆಯುತ್ತಿದ್ದರು. ಶಾಸ್ತ್ರಗಳಲ್ಲಿರುವ ಪ್ರತಿಯೊಂದು ವಿಚಾರವೂ ಆಗಿನ ಕಾಲದ ಜನರ ಮನೋಭಾವಕ್ಕನುಗುಣವಾಗಿ ಅವರ ರೀತಿ, ನೀತಿ, ನಡೆಗಳನ್ನು ತಿದ್ದಲಿಕ್ಕಾಗಿ ಬರೆದಂಥವುಗಳು. ಇಂದು ನಾವು ದೇವರಿಗಾಗಿ ಹೆದರಿ ಆಚಾರ ನಡಸುತ್ತಿಲ್ಲ. ನಮ್ಮ ಸಮಾಜ ಸುಧಾರಿಸಿದೆ....ಕಾಲ ಬದಲಾಗಿದೆ. ಕಾಲಕ್ಕೆ ತಕ್ಕಂತೆ ಶಾಸ್ತ್ರಗಳೂ ಬದಲಾಗಬೇಕು."

"ನಮ್ಮ ಶಾಸ್ತ್ರಗಳಲ್ಲಿ ವಿಗ್ರಹಾರಾಧನೆಯಿಲ್ಲವೇ?"

"ಇದೆ. ಆದರೆ ಶಾಸ್ತ್ರಗಳು ಆದದ್ದು ಈಚೆಗೆ. ನಮ್ಮ ಸಂಸ್ಕೃತಿಯ ಮೂಲವಾದ ವೇದಗಳು ವಿಗ್ರಹಾರಾಧನೆಯನ್ನು ಅನುಮೋದಿಸಿಲ್ಲ. ನಿರಾಕಾರ!—ನಿರ್ವಿಕಾರ! ಎಂದು ಹೊಗಳಲ್ಪಡುವ ದೇವರಿಗೆ ಈ ರೂಪವೆಲ್ಲಿ ಬಂತು. ಉಪನಿಷತ್ತುಗಳು ದೇವರ ರೂಪವನ್ನು "ನೇತಿ, ನೇತಿ" ಎಂದು ಸಾರಿವೆ."

"ಮತ್ತೆ ಹೇಗೆ ಈ ಪದ್ಧತಿ ಬೆಳೆದು ಬಂತು?"

"ಪರಧರ್ಮಗಳ ಪ್ರಭಾವಕ್ಕೆ ಸಿಕ್ಕಿ ನಮ್ಮ ಮತ ಅಳಿಯುವುದೆಂಬ ಅಂಜಿಕೆಯಿಂದ ಶಂಕರಾಚಾರ್ಯರು–ರಾಮಾನುಜಾಚಾರ್ಯರು–ಮಧ್ವಾಚಾರ್ಯರಂತಹ ಯುಗಪ್ರವರ್ತಕರು ವಿಗ್ರಹಾರಾಧನೆಯ ತತ್ವಗಳನ್ನು ಪ್ರಚಾರ ಮಾಡತೊಡಗಿದರು."

"ಏಕೆ?"

"ಹುಲಿ ಎಲ್ಲಿ? ಎಂದು ಮಗು ಕೇಳಿದಾಗ, ನಿಜವಾದ ಹುಲಿಯನ್ನು ತೋರಿಸಲಸಾಧ್ಯವಾಗಿ, ಹುಲಿಯ ಚಿತ್ರವನ್ನು ತೋರಿಸಿ, 'ಇದೇ....ಅದು', ಅನ್ನುವಂತೆ—ನಮ್ಮ ದುರ್ಬಲ ಮನಸ್ಸುಗಳಲ್ಲಿ ಈ ವಿಗ್ರಹಗಳನ್ನು ಮೂಡಿಸಿದರು. ದೇವಾಲಯಗಳನ್ನು ನಿರ್ಮಿಸಿದರು—ಮಠಗಳನ್ನು ಸ್ಥಾಪಿಸಿದರು."

"ಅದರಿಂದ ಈಗಾದ ಬಾಧಕವೇನು?"

"ದೇಶದ ಸ್ವಾತಂತ್ರ್ಯದ ಘನೋದ್ದೇಶದಿಂದ, ಪೂಜ್ಯ ಗಾಂಧೀಜಿಯವರು ಬಳಕೆಗೆ ತಂದ ಉಪವಾಸ ಸತ್ಯಾಗ್ರಹ—ಇಂದಿನ ನಮ್ಮ ಸ್ವತಂತ್ರ ಭಾರತದಲ್ಲಿ ಕೇವಲ ಐದು ರೂಪಾಯಿಗಳ ಸಂಬಳದ ಬಡತಿಗಾಗಿ ಪ್ರಯೋಗಿಸಲ್ಪಡುತ್ತಿರುವಂತೆ,—ಸ್ವಾರ್ಥಿಗಳು ಇದನ್ನೆಲ್ಲಾ ತಮ್ಮ ಹೀನ ಉದ್ದೇಶಗಳಿಗಾಗಿ ಬಳಸಿಕೊಳ್ಳುತ್ತಿದ್ದಾರೆ.

ಅಂದಿನ ಆ ಆಚಾರ್ಯರ—ವಿಭೂತಿಗಳ—ಪ್ರವರ್ತಕರ ಹಿನ್ನೆಲೆಯ ಉದ್ದೇಶಗಳು ಮಾಯವಾಗಿ, ಹುಲಿಯ ಚಿತ್ರವೇ ಹುಲಿಯಾಗಿ ಬಿಟ್ಟಿದೆ. ಈ ಬಾಯ್ಬಡಕ ಡಾಂಭಿಕರೇ ಭಕ್ತರಾಗಿ ಬಿಟ್ಟಿದ್ದಾರೆ. ಅವರ ಅನಾಚಾರಗಳೇ ಆಚಾರಗಳಾಗಿ, ವಿಭೂತಿ—ಮುದ್ರೆ....ತ್ರಿಪುಂಡ್ರಗಳೇ ಭಕ್ತಿಯ ದ್ಯೋತಕವಾಗಿ ಬಿಟ್ಟಿವೆ."

ಶ್ರೀಧರನ ಮುಖ ಕೆಂಪೇರಿತ್ತು. ಸೌಮ್ಯವಾದ ಕಣ್ಣುಗಳು ಉದ್ರಿಕ್ತವಾದುವು. ಶ್ರೀಧರ ಇಷ್ಟು ಆವೇಶದಿಂದ ಮಾತನಾಡುವನೆಂಬ ಅನುಭವವಾದದ್ದು ಲಲಿತಳಿಗೆ ಇದೇ ಮೊದಲು.

ಸ್ತಬ್ಧಳಾಗಿ ಶ್ರೀಧರನನ್ನು ನೋಡಿದಳು.

ಗಂಟೆ ಬಾರಿಸಿತು. ವಾದ್ಯಗಳು ಮೊಳಗಿದುವು.

"ಮಂಗಳಾರತಿಯಾಗುತ್ತಿದೆ ನೋಡಿ"—ಎಂದಳು ಲಲಿತ.

ಶ್ರೀಧರ ಯಾವುದೋ ಭಾವನಾ ಲೋಕದಲ್ಲಿದ್ದವನು ಇಳಿದು ಬಂದ ವಾಸ್ತವ ಪ್ರಪಂಚಕ್ಕೆ.

ದಪ್ಪನಾಮದ ಪರಿಚಾರಕ ಆರತಿಯನ್ನು ಹಿಡಿದು ಹೊರಗೆ ಬಂದ. ಅಲ್ಲಿ ನಿಂತಿರುವ "ಭಕ್ತ.... ಜನ" ಆರು ಕಾಸು, ಮೂರು ಕಾಸು ಹಾಕುವಾಗ ಹಸನ್ಮುಖರಾಗುವ ಅವರ ದೀನ ಅವಸ್ಥೆಯನ್ನು ನೋಡಿ ನಾಚಿಕೆ

ಯಾಯಿತು ಶ್ರೀಧರನಿಗೆ. ಅವರು ವಿರಕ್ತರಾಗಿರಬೇಕು. ಇದು ಸಾಧ್ಯ ವಿಲ್ಲದಿದ್ದರೆ ದಕ್ಷಿಣೆಯ ರೊಕ್ಕದ ಕಡೆ ಅನಾಸಕ್ತಿಯಿಂದಿರುವಷ್ಟಾದರೂ ಅವರು ಉಪಪನ್ನರಾಗಿರಬೇಕು ಎಂದುಕೊಂಡ ಶ್ರೀಧರ.

ಲಲಿತ ಆರತಿಯಮೇಲೆ ಬೆಳ್ಳಿ ರೂಪಾಯಿಯನ್ನಿಟ್ಟಾಗ ಅವನ ಮುಖ ಮತ್ತೂ ಅಗಲವಾಯಿತು.

ಈ ವಿಚಾರವನ್ನು ತಿಳಿದ ಪೂಜಾರಿ ತೆಂಗಿನಕಾಯಿ ಹೋಳಿನಲ್ಲಿ ಪ್ರಸಾದವನ್ನು ತೆಗೆದುಕೊಂಡು ಬಂದ.

ಶ್ರೀಧರನ ಎದುರು ನಿಂತು—"ಶತಮಾನಂ ಭವತಿ ಶತಾಯುಃ ಪುರುಷಃ........" ಎಂದು ಆಶೀರ್ವಚನ ಶ್ಲೋಕವನ್ನು ಪಠಿಸಲಾರಂಭಿಸಿದ.

ಶ್ರೀಧರ ಬೆಪ್ಪಾಗಿ ಲಲಿತಳ ಕಡೆ ನೋಡಿದ.

"ತೆಗೆದುಕೊಳ್ಳಿ...." ಎಂದಳವಳು ನಗುತ್ತಾ, ತುಂಟಮಗುವನ್ನು ಶಿಕ್ಷಿಸುವ ತಾಯಿಯಂತೆ...."ಹಾಗೇ ಆಗಬೇಕು" ಎಂದು ಶ್ರೀಧರನನ್ನು ಅಣಕಿಸುವಂತಿದ್ದುವು ಅವಳ ಕಣ್ಣುಗಳು.

ವಿಧಿಯಿಲ್ಲದೇ ಕೈಮುಂದೆ ಮಾಡಿದ ಶ್ರೀಧರ.

ಅದೇ ಕಾಯಿಯ ಮತ್ತೊಂದು ಹೋಳನ್ನು ಎದುರು ಹಿಡಿದು "ಸುಮಂಗಲೀರಿಯಂ....ವಧೂರಿಮಾಂ...." ಎನ್ನುವಾಗ ನಾಚಿಕೆಯಿಂದ ತಲೆ ತಗ್ಗಿಸಿದಳು ಲಲಿತ.

ಈ ಲೋಭಿ ಪೂಜಾರಿ ಅವಳ ಕೊರಳನ್ನಾದರೂ ನೋಡಬಾರದಿತ್ತೇ ಅನ್ನಿಸಿತು ಶ್ರೀಧರನಿಗೆ.

* * * *

ದೇವರ ಬಾಗಿಲಿನಲ್ಲಿ ನಿಂತ ದ್ವಾರಪಾಲಕರ ಬಳಿ ಹೋದಳು ಲಲಿತ. ಭೂತಾಕಾರರಾದರೂ ಭಯಂಕರರಾಗಿಲ್ಲ. ಸನಕಸನಂದಾದಿಗಳ ಶಾಪದಿಂದ ಗ್ರಸ್ತರಾಗಿ, ಮೂರು ಮೂರು ಬಾರಿ ಈ ಭೂಲೋಕದಲ್ಲಿ ಜನ್ಮವೆತ್ತಿ, ಕೋಪಾದಿ ಅರಿಷಡ್ವರ್ಗಗಳನ್ನು ಜಯಿಸಿದ ನಂತರ—ಇಲ್ಲಿ ಬಂದು ನಿಂತಿರುವರೋ ಎನ್ನುವಷ್ಟು ಪ್ರಶಾಂತವಾಗಿದೆ ಮುಖ.

ದೃಷ್ಟಪುಷ್ಟವಾದ ಶರೀರ; ಅದಕ್ಕೆ ಹೊಂದುವಂತಹ ವಿಶಾಲ ಮುಖ ಮಂಡಲ; ಕೈಗೆ ತಕ್ಕ ಕಾಲು; ಕಾಲಿಗೆ ತಕ್ಕ ಪಾದ; ಪಾದಕ್ಕೆ ಸರಿಯಾದ

ಬೆರಳು; ಅದಕ್ಕೆ ಹೋಲುವಂತೆ ಮೊನಚಾದ ಉಗುರು.

ಪ್ರೀತಿಯಿಂದ ವಿಗ್ರಹದ ಮೇಲೆ ಕೈಯಾಡಿಸಿದಳು ಲಲಿತ.

"ಎಷ್ಟು ಚೆನ್ನಾಗಿದೆ!"—ಅವಳೆಂದುಕೊಂಡಳು.

ವಿದ್ಯುದ್ದೀಪದ ಪ್ರಖರ ಕಿರಣಗಳು ಬಿದ್ದಾಗ ಮಾತ್ರ ಸ್ಪಷ್ಟವಾಗಿ ಗೋಚರಿಸುವ ಮೇಲ್ಛಾವಣಿಯಲ್ಲಿ—ತೂಗಾಡುವ ಕಲ್ಲು ಮಂಟಪವನ್ನು ತೋರಿಸಿದ ಶ್ರೀಧರ.

ಅದರ ಸುತ್ತಲೂ ನಾಲ್ವರು ನರ್ತಕಿಯರು. ಒಬ್ಬಳ ಬಳೆ ಮೇಲಕ್ಕೂ ಕೆಳಕ್ಕೂ ಚಲಿಸುತ್ತದೆ. ಮತ್ತೊಬ್ಬಳ ಅಲಕ ಅಲ್ಲಾಡುತ್ತಿದೆ.

ವಿವಿಧ ರೀತಿಯ ವಿವಿಧ ಮಾದರಿಯ ವೃತ್ತಗಳಿಂದಾವೃತವಾದ ಕರಿ ಶಿಲೆಯ ಹೊಳೆಯುವ ಸ್ತಂಭಗಳನ್ನು ನೋಡಿ ಬೆರಗಾದಳು ಲಲಿತ—

"ಕಲ್ಲು ಕೋಮಲವಾಗಿದೆ ಕಲಾಕಾರರ ಚಾತುರ್ಯದಿಂದ"

—ಅವಳೆಂದಳು.

"ಇಲ್ಲಿ ಬಂದರೆ ನಾವು ಯಾವುದೋ ಕಾಲದಲ್ಲಿ ಬದುಕಿರುವಂತೆನ್ನಿಸು ತ್ತಿದೆ"—ಎಂದ ಶ್ರೀಧರ.

"ಹೊರಗೆ ಬನ್ನಿ....ದೇವರ ದಶಾವತಾರ—ರಾಮಾಯಣ ಮಹಾ ಭಾರತಗಳ ಚಿತ್ರಗಳನ್ನು ಕಾಣಬಹುದು. ಅವಿರಲಿ ಮುಂದೆ ನೋಡಿ—

ಈ ಶಿಲಾ ಕನ್ನಿಕೆಯರನ್ನು!....ಈ ಜೀವಂತ ಸುಂದರ ಶಿಲಾ ಕನ್ನಿಕೆ ಯರನ್ನು ಮತ್ತೆಲ್ಲೂ ಕಾಣಲಾರಿರಿ."

ತುಂಬಿದ ಹೃದಯದಿಂದ—ನೋಡಿದಳು ಲಲಿತ.

ಇವಳು ಸರ್ವಾಲಂಕಾರ ಭೂಷಿತೆ. ಭರತನಾಟ್ಯದ ಭಂಗಿಯಲ್ಲಿ ನಿಂತಿದ್ದಾಳೆ. ತನ್ನ ಸೌಂದರ್ಯವನ್ನು ಕೈಯಲ್ಲಿನ ಕಿರುಗನ್ನಡಿಯಲ್ಲಿ ನೋಡಿಕೊಳ್ಳುತ್ತಿದ್ದಾಳೆ."

"ಕನ್ನಡಿ ದುಂಡಗಿದೆ. ಹಿಂದುಗಡೆ ಹಿಡಿಯಿದೆ. ಇಷ್ಟು ನಾಜೂ ಕಾದ ಕನ್ನಡಿಯಿತ್ತೆ ಆಗಿನ ಕಾಲದಲ್ಲಿ"—ಲಲಿತ ಪ್ರಶ್ನಿಸಿದಳು.

"ಇದ್ದಿರಲೇ ಬೇಕು. ಆಗಿನ ಕಾಲದವರು ನಮಗಿಂತಲೂ ಹೆಚ್ಚಿನ ರಸಿಕರು. ಶೃಂಗಾರ ಪ್ರಿಯರು ಎನ್ನುವುದನ್ನು ಕಾಣಿಸುತ್ತಿದ್ದಾರೆ ಈ ಶಿಲಾ ಬಾಲಿಕೆಯರು."

ಮತ್ತೊಬ್ಬಳು ಚೆನ್ನೆ; ಅವಳ ಮುಂಗೈ ಮೇಲೆ ಗಿಳಿ ಕುಳಿತಿದೆ. ಹಸನ್ಮುಖದಿಂದ ಮಾತನಾಡಿಸುತ್ತಿದ್ದಾಳೆ ಗಿಳಿಯನ್ನು.

"ಒಮ್ಮೆ ಅವಳು ಕುಪಿತಳಾದರೆ ?"—ಲಲಿತ ಚೇಷ್ಟೆಗಾಗಿ ಕೇಳಿದಳು.

"ಆ ಗಿಳಿ ಹಾರಿಹೋಗಬಹುದು"—ನಗುತ್ತಾ ಉತ್ತರಿಸಿದ ಶ್ರೀಧರ.

ಇವಳು ಸ್ನಾನ ಮಾಡಿ ಸೀರೆಯುಡುತ್ತಿದ್ದಾಳೆ. ಹಿಂದಿನಿಂದ ಬಂದು ಕೋತಿ ಅವಳ ಸೀರೆಯ ಸೆರಗನ್ನು ಎಳೆಯುತ್ತಿದೆ. ಸೆರಗು ಜಾರುವುದೆಂಬ ಸಂಕೋಚ; ಕೋತಿ ಬಂದಿದೆಯೆಂದು ಭಯ. ಬಳ್ಳಿಯೊಂದನ್ನು ಆಶ್ರಯಿಸಿ ಬೆದರಿ ನಿಂತಿದ್ದಾಳೆ ಮುಗ್ಧೆ!

"ಪಾಪ ಎಷ್ಟು ದಿನವಾಯಿತೋ ಏನೋ ಈ ಕಪಿ ಸೆರಗನ್ನು ಬಿಟ್ಟೇ ಇಲ್ಲ."—ಎಂದಳು ಲಲಿತ.

"ಅದು ಬಿಟ್ಟ ಹೊರತು ಅವಳು ಪೂರ್ತಿಯಾಗಿ ಸೀರೆಯುಡುವಂತಿಲ್ಲ"

—ಶ್ರೀಧರ ನಸುನಗುತ್ತಾ ಹೇಳಿದ.

ಆ ಬಳ್ಳಿಯಲ್ಲೊಂದು ಹಣ್ಣಿದೆ. ಆ ಹಣ್ಣು ಹೆಣ್ಣಿಗೆ ಬೇಕು. ಅದನ್ನು ಕೀಳುತ್ತಿದ್ದಾಳೆ. ಬಲವಾಗಿ ಎಳೆದರೆ ಬಳ್ಳಿಗೆ ಪೆಟ್ಟು; ಮೆತ್ತಗೆ ಎಳೆದರೆ ಹಣ್ಣು ಬರಲೊಲ್ಲದು. ಈ ಉಭಯಸಂಕಟದಲ್ಲಿ ತೊಳಲುತ್ತಿದ್ದಾಳೆ ಮೃದುಹೃದಯಿ!

"ಅವಳೀಗ ಏನುಮಾಡಬೇಕು ಹೇಳಿ."

—ಎಂದು ಕೇಳಿದ ಶ್ರೀಧರ ಈ ಚಿತ್ರವನ್ನು ತೋರಿಸುತ್ತಾ.

"ಹೆಣ್ಣು ಹೃದಯ ಎಷ್ಟೆಂದರೂ ಅಷ್ಟೆ"—ಅಂದಳು ಲಲಿತ.

ಮರದ ಮೇಲೊಂದು ಗಿಳಿ. ಯುವತಿ ಅದನ್ನು ಹೊಡೆಯಲು ಹೆದೆಯೇರಿಸಿದ್ದಾಳೆ. ಇನ್ನೇನು ಬಾಣವನ್ನು ಕೈಬಿಡಬೇಕು. ಅಷ್ಟರಲ್ಲೇ ಆ ಗಿಳಿಯ ಮೇಲೆ ಮರುಕ ಬಂದಿದೆ. ಇಟ್ಟ ಗುರಿಯನ್ನು ತಪ್ಪಿಸಿಲ್ಲ. ತೊಟ್ಟ ಬಾಣವನ್ನು ಕೈಬಿಟ್ಟಿಲ್ಲ.

"ನೋಡಿದಿರಾ! ಹೆಣ್ಣು ಹೃದಯ ಎಷ್ಟು ಮೃದು"–ಎಂದಳು ಲಲಿತ ಅಭಿಮಾನದಿಂದ. "ಅಲ್ಲ! ಹೆಣ್ಣು ಕಠಿಣಳೂ ಹೌದು—ಮುಂದೆ ಬನ್ನಿ.... ಇಲ್ಲಿ ನೋಡಿ—

ಈ ಮೃಗನಯನೆ ಬೇಟೆಗೆ ಹೋಗಿ ಹಿಂದಿರುಗುತ್ತಿದ್ದಾಳೆ. ಆ

ಎರಡು ಜಿಂಕೆಗಳನ್ನು ಹೊಡೆದಿದ್ದಾಳೆ. ಆಯಾಸದಿಂದ ಮುಖ ಬಳಲಿದೆ. ಸೆರಗು ಜಾರಿದೆ. ಸಖಿ ಸತ್ತ ಜಿಂಕೆಯನ್ನು ಹೊತ್ತು ತರುತ್ತಿದ್ದಾಳೆ."

"ಇವಳ ಮನಸ್ಸೂ ಮೃದುವೇನು?"—ಶ್ರೀಧರ ಪ್ರಶ್ನಿಸಿದ.

ಅದಕ್ಕೇ ಅವಳಿಗೆ ಶಿಕ್ಷೆಯಾಗಿದೆ. ಕೋಮಲವಾದ ಕಾಲಿಗೆ ಮುಳ್ಳು ಚುಚ್ಚಿದೆ. ಸಖಿ ಅದನ್ನು ಬಿಡಿಸಲೆತ್ನಿಸುತ್ತಿದ್ದಾಳೆ. ಸೂಜಿ ಮೊನಚಾಗಿಯೇ ಇದೆಯಾದರೂ, ಅವಳು ಮಾಡಿದ ಪಾಪದ ಫಲವಾಗಿ ಇಂದಿಗೂ ಆ ಮುಳ್ಳು ಹೊರಗೆ ಬಂದಿಲ್ಲ. ಮಾರ್ಗಾಯಾಸದಿಂದ ಬಳಲಿ ದಾರಿಯಲ್ಲೇ ನಿಂತಿದ್ದಾಳೆ.

ಲಲಿತಳ ಕಲ್ಪನೆಯಿಂದ ಶ್ರೀಧರ ಬೆರಗಾದ.

ಮುಂದೆ ನಡೆದಾಗ ಅಲ್ಲೊಂದು ಯುವತಿಯರ ಗುಂಪು ಕಣ್ಣಿಗೆ ಬಿತ್ತು—

ಒಬ್ಬಳ ಕೈಯಲ್ಲಿ ವೀಣೆ; ಇನ್ನೊಬ್ಬಳ ಕೈಯಲ್ಲಿ ತಾಳ; ಮತ್ತೊಬ್ಬಳ ಕೈಯಲ್ಲಿ ಮೃದಂಗ; ಮಧ್ಯೆ ನರ್ತಿಸುತ್ತಿದ್ದಾಳೆ ಬೆಡಗಿನ ನರ್ತಕಿ; ಹಿಮ್ಮೇಳದೊಡನೆ ಹಾಡುತ್ತಿದ್ದಾರೆ ಸಖಿಯರು.

"ಈ ಹಾಡಿನ ಧ್ವನಿ ನಿಮಗೆ ಕೇಳುವುದೇನು?"—ಶ್ರೀಧರ ಪ್ರಶ್ನಿಸಿದ.

ಪ್ರಶ್ನೆಯ ಅರ್ಥವೇ ಆಗದೆ ಬೆಪ್ಪಾಗಿ ನೋಡಿದಳು ಲಲಿತ.

ನಾವು ಈ ಹಾಡಿನ ಧ್ವನಿಯನ್ನು ಕೇಳಬೇಕು. ಇವರ ನರ್ತನವನ್ನು ಕಾಣಬೇಕು. ಇವರ ಭಾಷೆಯನ್ನು ಅರ್ಥ ಮಾಡಿಕೊಳ್ಳಬೇಕು. ಅವರೊಡನೆ ನಾವೂ ಒಂದಾಗಿ ಬದುಕಿನ ಮಾಧುರ್ಯವನ್ನನುಭವಿಸಬೇಕು. ಬರಿಗಣ್ಣಿಗೆ ಇದು ಕಲ್ಲು. ಸುಸಂಸ್ಕೃತ ರಸಿಕ ಹೃದಯಕ್ಕೆ ಇದು ಚೇತನಾತ್ಮಕ ಸಜೀವ ಸೃಷ್ಟಿ.

ಶ್ರೀಧರ ಎಂದಿನ ಶ್ರೀಧರನಾಗಿ ಕಾಣಿಸಲಿಲ್ಲ ಲಲಿತಳಿಗೆ. ದೇವಸ್ಥಾನಕ್ಕೆ ಬಂದೊಡನೆಯೆ ಅವನ ಮನಸ್ಸೇ ಬದಲಾಗಿ ಹೋಗಿತ್ತು. ಕಣ್ಣುಗಳು ತೀಕ್ಷ್ಣವಾಗಿ ಹೊಳೆಯುತ್ತಿದ್ದುವು. ಮಾತು ಎಂದಿಗಿಂತಲೂ ಉನ್ನತವಾಗಿ ಹೊರಡುತ್ತಿತ್ತು. ದೃಷ್ಟಿಯಲ್ಲಿ ಪವಿತ್ರತೆ ತುಳುಕುತ್ತಿತ್ತು.

ಶ್ರೀಧರನ ಬಗ್ಗೆ ಅವಳ ಅಭಿಮಾನ ಗೌರವಗಳು ಮೊದಲಿಗಿಂತಲೂ ಬಿಗಿಯಾದುವು.

ಬಿಸಿಲು ನೆತ್ತಿಗೇರುತ್ತಿತ್ತು. ಹೊಟ್ಟೆ ಹಸಿಯುತ್ತಿತ್ತು. ಆದರೂ ಶ್ರೀಧರ ಅಲ್ಲಲ್ಲಿ ತೋರಿಸುತ್ತಾ ಮುನ್ನಡೆದ.

ದೇವಸ್ಥಾನದ ಎದುರಿನ ಗೋಪುರವನ್ನು ತೋರಿಸಿ ಕೇಳಿದಳು ಲಲಿತ—

"ಅಲ್ಲೇನಿದೆ?"

"ಮೇಲಕ್ಕೆ ಹತ್ತಿ ನೋಡಬೇಕು. ಈಗ ಬೇಡ ಬಿಸಿಲು".

"ಉಹ್ಞು....ಹೋಗಿ ಬರೋಣ ಬನ್ನಿ."

"ಈಗ ಬೇಡ."

"ಈಗಲೇ ಹೋಗಬೇಕು."

"ಅನಂತರ ನೀವು ನನ್ನನ್ನು ದೂಷಿಸುತ್ತೀರಿ."

"ಏಕೆ?"

"ಆ ಗೋಪುರವನ್ನು ಕಟ್ಟಿಸಿದವಳು ಒಬ್ಬಳು ಸೂಳೆಯಂತೆ. ಇಲ್ಲಿ ನೋಡಿದ ಮೇಲೆ ಅಲ್ಲಿ ನೋಡುವುದು ಒಳ್ಳೆಯದಲ್ಲ."

"ಕಾರಣ?"

"ಅವಳ ಅಭಿರುಚಿಗೆ ತಕ್ಕಂತೆ ಕೆಲವು ಚಿತ್ರಗಳಿವೆ."

"ನಾವು ನೋಡ ಬಾರದೇ?"

"ನೀವು ನೋಡಬಾರದ್ದಲ್ಲ. ನಾನಾಗಿ ತೋರಿಸಬಾರದು."

"ಪ್ರಪಂಚದಲ್ಲಿ ಇರುವುದೇ ತಾನೇ ಅಲ್ಲಿ ಕಾಣಿಸುವುದು".

"ಅದೇನೋ ನನಗೆ ತಿಳಿಯದು. ಬನ್ನಿ ಬೇಕಾದರೆ ಹೋಗಿಬರೋಣ".

ಇಬ್ಬರೂ ಮೇಲೆ ನಡೆದರು.

ಕಾಮ ಶಾಸ್ತ್ರಕ್ಕೆ ಸಂಬಂಧಿಸಿದ ನಗ್ನ ಆಸನಗಳನ್ನು ನೋಡಿ ನಾಚಿಕೆಯಾಯಿತು ಲಲಿತಳಿಗೆ—

"ಏನೋ ಅಂತ ಇದ್ದೆ. ಸಾಕು ಬನ್ನಿ ಹೋಗೋಣ."

"ಇವೆಲ್ಲ ಪ್ರಪಂಚದಲ್ಲಿ ಇರುವುದೇ ತಾನೇ?"

—ಶ್ರೀಧರ ಲಲಿತಳ ಮಾತನ್ನೇ ಹಿಂದಿರುಗಿಸಿ ಕೇಳಿದ.

ಲಲಿತ ಉತ್ತರಿಸಲಿಲ್ಲ. ಮುಖ ಕೆಂಪೇರಿತು. ಅಂಗಾಂಗಗಳು ಸ್ಪಂದಿಸಿದುವು.

ದೇವಸ್ಥಾನದಿಂದ ಹೊರಡುವಾಗ ಮಹಾದ್ವಾರದಲ್ಲಿ ನಿಂತು ಮತ್ತೊಮ್ಮೆ ನಮಸ್ಕರಿಸಿದಳು ಲಲಿತ.

ಶ್ರೀಧರ ಅವಳನ್ನು ನೋಡಿದ.

“ಎಷ್ಟು ಪ್ರೇಮ! ಎಷ್ಟು ಭಕ್ತಿ! ಎಂತಹ ಗಾಂಭೀರ್ಯ! ಅಷ್ಟೇ ಅಲ್ಲ. ಈ ಹೃದಯಕ್ಕೆ ಅದೆಷ್ಟು ಹತ್ತಿರ ಬಂದಿದ್ದಾಳೆ!

# ೨೨

ಅಂದು ಬಿಡುವಿನ ದಿನ. ಅಪರೂಪವಾಗಿ ನಾಟಕದವರಿಗೆ ರಜಾ ಸಿಕ್ಕಿದೆ. ರಾತ್ರಿ ಊಟವಾದ ಮೇಲೆ ಒಬ್ಬೊಬ್ಬರು ಒಂದೊಂದು ಕಡೆ ಹೊರಟರು. ಸಿನಿಮಾಕ್ಕೆಂದು ಕೆಲವರು; ವಾಕಿಂಗ್ ಎಂದು ಕೆಲವರು; ಗಲ್ಲಿಯಲ್ಲಿ ಗಸ್ತು ಹೊಡೆಯಲು ಮತ್ತೆ ಕೆಲವರು.

ಶ್ರೀಧರನಿಗೆ ಹಿಡಿಸುವ ಮೆಚ್ಚಿನ ಆಟ ಚದುರಂಗ. ಅದು ಎಲ್ಲಿ ಹೋದರೂ ಅವನ ಬಳಿ ಇರುತ್ತಿತ್ತು. ಕಂಪೆನಿಗೆ ಬಂದ ಮೇಲೆ ಬೆಳಗಿನಿಂದ ಸಂಜೆಯವರೆಗೆ ಒಬ್ಬರಲ್ಲ ಒಬ್ಬರು ಆಡುತ್ತಲೇ ಇದ್ದರು.

ಈ ಆಟಕ್ಕೆ ಆಗಾಗ ಕುಳಿತುಕೊಳ್ಳುತ್ತಿದ್ದಳು ಲಲಿತ.

"ಪ್ರತಿನಿತ್ಯವೂ ನಿದ್ರೆ ಬಿಟ್ಟು ಒಂದೊಂದು ದಿನ ಮುಂಚೆ ಮಲಗಿದರೆ ನಿದ್ರೆಯೇ ಬರುವುದಿಲ್ಲ."—ಎಂದ ಶ್ರೀಧರ.

"ಚದುರಂಗವನ್ನು ತನ್ನಿ ಸ್ವಲ್ಪ ಹೊತ್ತು ಆಡೋಣ"—ಎಂದಳು ಲಲಿತ.

ಶ್ರೀಧರ ಚದುರಂಗವನ್ನು ತಂದ. ಲಲಿತ ಚಾಪೆ ಬಿಡಿಸಿದಳು. ಆಟ ಪ್ರಾರಂಭವಾಯಿತು.

ಒಂದಾಯಿತು. ಎರಡಾಯಿತು. ಯಾರೇ ಸೋಲಲಿ, ಯಾರೇ ಗೆಲ್ಲಲಿ ಆಟವನ್ನು ಬಿಡುವ ಇಷ್ಟ ಇಬ್ಬರಿಗೂ ಕಾಣಲಿಲ್ಲ.

ಹೊರಗಡೆ ಹೋದವರು ಒಬ್ಬೊಬ್ಬರಾಗಿ ಹಿಂದಿರುಗಿದರು. ಎಲ್ಲರೂ ಮಲಗಿ ನಿದ್ರಿಸಿದರು. ಆದರೂ ಆಟ ಬಿಡುವಿಲ್ಲದೇ ನಡೆಯುತ್ತಿತ್ತು.

"ಬಹಳ ಹೊತ್ತಾಯಿತು ಇನ್ನು ಸಾಕುಮಾಡೋಣ."—ಎಂದಳು ಲಲಿತ.

"ಇದೊಂದು ಕಡೆಯ ಆಟ"—ಅಂದ ಶ್ರೀಧರ.

ಮತ್ತೆ ಆಟ ಪ್ರಾರಂಭವಾಯಿತು. ಲಲಿತಳ ಮಂತ್ರಿಯ ಮೇಲೆ ಶ್ರೀಧರ ಕಣ್ಣಿಟ್ಟಿದ್ದ. ಶ್ರೀಧರನ ಆನೆಯ ಎದುರು ಅವಳ ಮಂತ್ರಿ ಕುಳಿತಿದ್ದ. ನಡುವೆಯಿತ್ತು ಶ್ರೀಧರನ ರಥ. ರಥವನ್ನು ತಪ್ಪಿಸಿ ರಾಜನಿಗೆ "ಚೆಕ್" ಎಂದ.

ತೆರವೆಯಲ್ಲಿ ಸಿಕ್ಕಿಕೊಂಡ ಮಂತ್ರಿ.

ಆನೆಯ ಬಾಯಿಂದ ಮಂತ್ರಿಯನ್ನು ತಪ್ಪಿಸಿಕೊಳ್ಳಲಾರದೆ ಒದ್ದಾಡುವ ಲಲಿತಳನ್ನು ಕಂಡು ಕನಿಕರವಾಯಿತು ಶ್ರೀಧರನಿಗೆ.

"ನಿಮ್ಮ ತಾಪತ್ರಯವನ್ನು ನೋಡಲಾರೆ. ಮಂತ್ರಿ ತಪ್ಪಿಸಿಕೊಳ್ಳಿ. ನನ್ನ ರಥವನ್ನು ಹಿಂದಕ್ಕಿಡುತ್ತೇನೆ"—ಎಂದ ಶ್ರೀಧರ.

"ಇಟ್ಟ ಕಾಯನ್ನು ಹಿಂದಿಡಬಾರದೆಂದು ನಮ್ಮ ಶಪಥ. ಅದನ್ನು ಮೀರಬಾರದು."

"ಮಂತ್ರಿ ಹೋದ ಮೇಲೆ ನೀವು ಸೋತು ಹೋಗುತ್ತೀರಿ".

"ಸೋತರೆ ಅವಮಾನವಲ್ಲ. ಮತ್ತೊಂದು ಆಟ ಆಡೋಣ"—ಅಂದಳು ಲಲಿತ.

ಮಂತ್ರಿ ಹೋಯಿತು. ಕೋಟೆ ಒಡೆಯಿತು. ಬಲವೂ ಕಮ್ಮಿಯಾಯಿತು. ಲಲಿತಳ "ರಾಜ" ನಡೆಯಲು ಮನೆಯೇ ಇಲ್ಲದೇ ಸಿಕ್ಕಿಬಿದ್ದ.

"ಮತ್ತೊಂದು ಸೋಲು"—ಎಂದ ಶ್ರೀಧರ.

"ಮತ್ತೊಂದು ಆಟ"—ಎಂದಳು ಲಲಿತ.

"ಬೇಡ ಕೊನೆಯ ಸೋಲು ನಿಮಗೇ ಇರಲಿ".

"ಉಹ್ಞು ಕೊನೆಗೆ ನೀವೇ ಸೋಲಬೇಕು".

ಶ್ರೀಧರ ಪುನಃ ಕಾಯಿಗಳನ್ನು ಹೂಡಿದ.

"ನನಗೆ ಕೆಂಪು"—ಎಂದು ಮಧ್ಯೆ ಕೈಹಾಕಿದಳು ಲಲಿತ.

ಕೈಗೆ ಕೈ ತಗುಲಿದಾಗ ತನ್ನ ಮೈಯೊಳಗೆ ಅದಾವುದೋ ಶಕ್ತಿ ಹರಿದು ಹೋದಂತಾಯಿತು ಶ್ರೀಧರನಿಗೆ.

ನಾಟಕಗಳಲ್ಲಿ ಅನೇಕ ಬಾರಿ ಅವಳ ಕೈಹಿಡಿದಾಗ, ಹಗಲು ರಾತ್ರಿಗಳೆನ್ನದೆ ಅವಳೆಷ್ಟು ಸನಿಹದಲ್ಲಿದ್ದಾಗಲೂ ಇಷ್ಟು ದಿನ ಏನೂ ಆಗಿರಲಿಲ್ಲ.

ಇಂದೇಕೆ ಹೀ( ಾಯಿತು?

ತಲೆಯೆತ್ತಿ ಒಂದುಕ್ಷಣ ಅವಳ ಮುಖವನ್ನು ನೋಡಿದ.

ಲಲಿತಳೂ ಕಾಯಿಗಳನ್ನು ಹೂಡುತ್ತಿದ್ದಳು.

"ನಡೆಸಿ"—ಅವಳೆಂದಳು.

ಶ್ರೀಧರ ಆಳನ್ನು ಮುಂದೆ ದಬ್ಬಿದ. ಮನಸ್ಸನ್ನೆಷ್ಟು ಬಿಗಿ ಹಿಡಿದರೂ

ಅದು ಹೆಂಡ ಕುಡಿದ ಕಪಿಯಂತೆ ಚೆಲ್ಲಾಟವಾಡುತ್ತಿತ್ತು.

ಆಟ ನಡೆಯುತ್ತಿತ್ತು ಯಾಂತ್ರಿಕವಾಗಿ....

"ಇದೇನಿದು ಆಳಿನ ಬಾಯಿಗೆ ಮಂತ್ರಿ ಕೊಟ್ಟಿದ್ದೀರಲ್ಲ."

—ಆಶ್ಚರ್ಯದಿಂದ ತಲೆಯೆತ್ತಿದಳು ಲಲಿತ.

ತೀವ್ರವಾದ ಬಯಕೆಯಿಂದ ತಪಿಸುವ ಶ್ರೀಧರನ ಕಣ್ಣುಗಳು ಅವಳನ್ನೇ ದೃಷ್ಟಿಸುತ್ತಿದ್ದುವು.

ವಿದ್ಯುತ್ತಿನ ಗುಂಡಿಯನ್ನೊತ್ತಿದಾಗ, ಪಕ್ಕನೆ ಹತ್ತಿಕೊಳ್ಳುವ ಕೆಂಪು ದೀಪದಂತೆ ಅವಳ ಮುಖ ಉಜ್ವಲವಾಯಿತು.

ಅಲ್ಲಿ ಹಾದು ಹೋದ ಕೆಂಪು ಶ್ರೀಧರನ ಮನಸ್ಸನ್ನು ಮತ್ತಷ್ಟು ಚಲಿಸಿತು.

ತುಟಿಗಳನ್ನು ಬಿಗಿದು, ಕಣ್ಣುಗಳನ್ನು ಮುಚ್ಚಿ, ಹಣೆಗೆ ಕೈಕೊಟ್ಟುಕೊಂಡು ಕುಳಿತಳು ಲಲಿತ.

ಕೆಂಪು ಕಿರಣಗಳಿಂದ ಪ್ರಕಾಶಿಸುವ ಅಗ್ನಿಯೊಂದು ತನ್ನ ಮುಂದೆ ಜ್ವಲಿಸುತ್ತಿದೆ—ಎನ್ನಿಸಿತು ಶ್ರೀಧರನಿಗೆ.

ಅದರ ಮುಂದೆ ಬೆಂಕಿಯ ಮುಂದಿಟ್ಟ ಬೆಣ್ಣೆಯಂತೆ ಅವನ ಹೃದಯ ಕರಗತೊಡಗಿತು.

"ಏನು ಹೇಳಬೇಕು? ಏನು ಮಾಡಬೇಕು?"—ವಿಕಲಳಾದಳು ಲಲಿತ.

ಮನಸ್ಸಿನ ಹೊಯ್ದಾಟದಿಂದ ತಲ್ಲಣಿಸಿಹೋದ ಶ್ರೀಧರ.

ಮುಂದಿನ ವಿಚಾರವನ್ನು ಕಲ್ಪಿಸಿಕೊಂಡಂತೆ ಇಬ್ಬರ ಎದೆಯೂ ನಡುಗತೊಡಗಿತು. ಮೈ ನವಿರೆದ್ದಿತು.

"ಈಗ ನನ್ನ ಕರ್ತವ್ಯವೇನು? ದೇವರೇ ಎಂತಹ ಸಂದಿಗ್ಧವನ್ನು ತಂದೊಡ್ಡಿದೆ."

—ನಿಸ್ಸಹಾಯಕಳಂತೆ ಒಂದು ಕ್ಷಣ ಯೋಚಿಸಿದಳು ಲಲಿತ.

ಶ್ರೀಧರ ತಲೆಯೆತ್ತಿದ.

ಎವೆಯಿಕ್ಕದೇ ಅವನನ್ನೇ ನೋಡುತ್ತಿದ್ದಳು ಲಲಿತ—ಎಲ್ಲಿಗೋ ಓಡಬಯಸುವ ತುಟಿಗಳನ್ನು ಅದುಮಿಕೊಂಡು.

"ಹೌದು! ನನಗೆ ಬೇಕಾಗಿರುವುದೇ ಅವಳಿಗೂ ಬೇಕಾಗಿದೆ. ಆ

ಕಣ್ಣುಗಳು ಅದನ್ನೇ ಬಯಸುತ್ತಿವೆ. ನಾನೀಗ ಏನು ಮಾಡಿದರೂ ವಿರೋಧಿಸಲಾರಳು."

ಕೈ ಮುಂದೆ ಮಾಡಲೆತ್ನಿಸಿದ ಶ್ರೀಧರ.

"ಆದರೆ ಈ ಕೈಗಳಿಗೇನು ಬಂತು ರೋಗ? ಇವೇಕೆ ಮುಂದೋಡುತ್ತಿಲ್ಲ? ಕರೆದು ಹೆಣ್ಣು ಕೊಟ್ಟಾಗ ಅಳಿಯನಿಗೆ ಬರುವ ಮಲರೋಗದಂತೆ ನನ್ನ ಮೈ ಏಕಿಷ್ಟು ನಡುಗುತ್ತಿದೆ? ಈ ಹಲ್ಲುಗಳೇಕೆ ಕಟಕಟನೆ ಹೊಯ್ದಾಡುತ್ತಿವೆ?

"ಛೆ!....ನನ್ನ ಹೇಡಿತನವನ್ನು ಮುಚ್ಚಿಡಲೂ ಸಾಧ್ಯವಿಲ್ಲವಲ್ಲಾ."

"ಏನಾಯಿತು ನಿಮಗೆ?"—ಲಲಿತಳೂ ನಡುಗುತ್ತಾ ಕೇಳಿದಳು.

ಏನಾಗಿದೆಯೆಂದು ಹೇಳಬೇಕು? ಮನೋಭೀಷ್ಟದ ಒತ್ತಡ ಒಂದು ಕಡೆಯಾದರೆ....ಮನೋ ದೌರ್ಬಲ್ಯದ ನಾಚಿಕೆ ಮತ್ತೊಂದು ಕಡೆ. ಯಾವುದು ಸೋಲಬೇಕು? ಯಾವುದು ಗೆಲ್ಲಬೇಕು?

"ಏಕೆ ನಡುಗುತ್ತಿದ್ದೀರಿ ಜ್ವರ ಬಂದವರಂತೆ."

—ಮತ್ತೆ ಕೇಳಿದಳು ಲಲಿತ. ಅವಳ ಧ್ವನಿಯೂ ನಡುಗುತ್ತಿತ್ತು.

ಶ್ರೀಧರನಿಗೆ ಉತ್ತರ ಹೇಳುವ ಸಾಮರ್ಥ್ಯವಿರಲಿಲ್ಲ. ದೀನನಂತೆ ಅವಳ ಮುಖವನ್ನು ನೋಡಿದ—ಬಾಯಾರಿ ಬಳಲಿದವನು ಎದುರಿಗಿದ್ದ ನೀರನ್ನು ಕುಡಿಯಬಯಸುವಂತೆ.

"ಉಹ್ಞು....ಹೀಗಾಗಬಾರದು."

—ಅಂತಃ ಶಕ್ತಿಯೊಂದು ಲಲಿತಳನ್ನು ಹಿಂದಕ್ಕೆಳೆಯಿತು. ಉದ್ವೇಗ ಅಪೇಕ್ಷೆಗಳನ್ನು ಮೆಟ್ಟಿ ಮೇಲಕ್ಕೆದ್ದಳು ಲಲಿತ.

ಚಕಿತನಾಗಿ ನೋಡಿದ ಶ್ರೀಧರ.

ಲಲಿತ ಹಾಸಿಗೆಯನ್ನು ಬಿಡಿಸಿದಳು. ತಾನು ನಿತ್ಯವೂ ಹೊದೆಯುವ ಶಾಲನ್ನು ತಂದು ಶ್ರೀಧರನ ಹೆಗಲಮೇಲೆ ಹಾಕಿದಳು—

"ಹೊದ್ದುಕೊಳ್ಳಿ ಬೆಚ್ಚಗಿರುತ್ತೆ. ಬಹಳ ಛಳಿಯಾಗಿರಬಹುದು."

ಶ್ರೀಧರ ಅವಮಾನದಿಂದ ಪಾತಾಳಕ್ಕಿಳಿದುಹೋದ.

"ಏನಾಗಿಹೋಯಿತು? ನನ್ನ ಮನಸ್ಸು ಅವಳಿಗೆ ಅರ್ಥವಾಗಲಿಲ್ಲವೇ? ಅಥವಾ ಅರ್ಥಮಾಡಿಕೊಂಡೂ ಹೀಯಾಳಿಸುತ್ತಿರುವಳೇ?

ನಾನೇ ಹೇಡಿಯಂತೆ ನಡುಗಿದರೆ ಅವಳಾದರೂ ಏನುಮಾಡಬಲ್ಲಳು. ಎಲ್ಲರೂ ಎಷ್ಟೆಷ್ಟೋ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಅವರಿಗೇಕೆ ಹೀಗಾಗಬಾರದು?

ನಮ್ಮಲ್ಲಿರುವ ಸದ್ಭಾವನೆಗಳೇ ನಮ್ಮ ಸುಖಕ್ಕೆ ಕಂಟಕ ಪ್ರಾಯಗಳೇ?"

—ಸಮಸ್ಯೆಯಲ್ಲಿ ಮುಳುಗಿದ ಶ್ರೀಧರ.

"ನೀವು ಹೋಗಿ ಮಲಗಿಕೊಳ್ಳಿ"—ಎಂದಳು ಲಲಿತ.

ತಲೆಯ ಮೇಲೆ ಕಲ್ಲನ್ನೆತ್ತಿ ಹಾಕಿದಂತಾಯಿತು ಶ್ರೀಧರನಿಗೆ. ಇನ್ನು ಕುಳಿತುಕೊಳ್ಳುವುದು ಮರ್ಯಾದೆಯಲ್ಲವೆನ್ನಿಸಿತು. ಮರುಮಾತಾಡದೇ ಮೇಲಕ್ಕೆದ್ದ. ಬಾಗಿಲು ದಾಟಿದ.—

"ಈ ಶಾಲು."

"ತೆಗೆದುಕೊಂಡು ಹೋಗಿ ನನಗೆ ಬೇರೆ ಇದೆ."

"ನನಗೆ ಬೇಡ."

—ಶ್ರೀಧರ ಹೆಗಲಮೇಲಿದ್ದ ಶಾಲನ್ನು ಮುದುರಿಸಿ ಲಲಿತಳ ಹಾಸಿಗೆಯ ಮೇಲೆ ಎಸೆದ.

ಅವಮಾನ ನಿರಾಶೆಗಳಿಂದ ತಪ್ತನಾಗಿ ಹಾಸಿಗೆ ಹಿಡಿದ.

ಲಲಿತ ಬಾಗಿಲನ್ನು ಹಾಕಿಕೊಂಡಳು. ಹಾಸಿಗೆಗೆ ತಲೆ ಕೊಟ್ಟಳು.

ಬಿಕ್ಕಿ ಬಿಕ್ಕಿ ಅಳುವ ಅವಳ ನಿಟ್ಟುಸಿರು ನಾಲ್ಕು ಗೋಡೆಗಳ ಮಧ್ಯೆ ಲೀನವಾಯಿತು.

ಕಣ್ಣುಗಳು ಅದನ್ನೇ ಬಯಸುತ್ತಿವೆ. ನಾನೀಗ ಏನು ಮಾಡಿದರೂ ವಿರೋಧಿಸಲಾರಳು."

ಕೈ ಮುಂದೆ ಮಾಡಲೆತ್ನಿಸಿದ ಶ್ರೀಧರ.

"ಆದರೆ ಈ ಕೈಗಳಿಗೇನು ಬಂತು ರೋಗ? ಇವೇಕೆ ಮುಂದೋಡುತ್ತಿಲ್ಲ? ಕರೆದು ಹೆಣ್ಣು ಕೊಟ್ಟಾಗ ಅಳಿಯನಿಗೆ ಬರುವ ಮಲರೋಗದಂತೆ ನನ್ನ ಮೈ ಏಕಿಷ್ಟು ನಡುಗುತ್ತಿದೆ? ಈ ಹಲ್ಲುಗಳೇಕೆ ಕಟಕಟನೆ ಹೊಯ್ದಾಡುತ್ತಿವೆ?

"ಛೆ!....ನನ್ನ ಹೇಡಿತನವನ್ನು ಮುಚ್ಚಿಡಲೂ ಸಾಧ್ಯವಿಲ್ಲವಲ್ಲಾ."

"ಏನಾಯಿತು ನಿಮಗೆ?"—ಲಲಿತಳೂ ನಡುಗುತ್ತಾ ಕೇಳಿದಳು.

ಏನಾಗಿದೆಯೆಂದು ಹೇಳಬೇಕು? ಮನೋಭೀಷ್ಟದ ಒತ್ತಡ ಒಂದು ಕಡೆಯಾದರೆ....ಮನೋ ದೌರ್ಬಲ್ಯದ ನಾಚಿಕೆ ಮತ್ತೊಂದು ಕಡೆ. ಯಾವುದು ಸೋಲಬೇಕು? ಯಾವುದು ಗೆಲ್ಲಬೇಕು?

"ಏಕೆ ನಡುಗುತ್ತಿದ್ದೀರಿ ಜ್ವರ ಬಂದವರಂತೆ."

—ಮತ್ತೆ ಕೇಳಿದಳು ಲಲಿತ. ಅವಳ ಧ್ವನಿಯೂ ನಡುಗುತ್ತಿತ್ತು.

ಶ್ರೀಧರನಿಗೆ ಉತ್ತರ ಹೇಳುವ ಸಾಮರ್ಥ್ಯವಿರಲಿಲ್ಲ. ದೀನನಂತೆ ಅವಳ ಮುಖವನ್ನು ನೋಡಿದ—ಬಾಯಾರಿ ಬಳಲಿದವನು ಎದುರಿಗಿದ್ದ ನೀರನ್ನು ಕುಡಿಯಬಯಸುವಂತೆ.

"ಉಹ್ಞು....ಹೀಗಾಗಬಾರದು."

—ಅಂತಃ ಶಕ್ತಿಯೊಂದು ಲಲಿತಳನ್ನು ಹಿಂದಕ್ಕೆಳೆಯಿತು. ಉದ್ವೇಗ ಅಪೇಕ್ಷೆಗಳನ್ನು ಮೆಟ್ಟಿ ಮೇಲಕ್ಕೆದ್ದಳು ಲಲಿತ.

ಚಕಿತನಾಗಿ ನೋಡಿದ ಶ್ರೀಧರ.

ಲಲಿತ ಹಾಸಿಗೆಯನ್ನು ಬಿಡಿಸಿದಳು. ತಾನು ನಿತ್ಯವೂ ಹೊದೆಯುವ ಶಾಲನ್ನು ತಂದು ಶ್ರೀಧರನ ಹೆಗಲಮೇಲೆ ಹಾಕಿದಳು—

"ಹೊದ್ದುಕೊಳ್ಳಿ ಬೆಚ್ಚಗಿರುತ್ತೆ. ಬಹಳ ಛಳಿಯಾಗಿರಬಹುದು."

ಶ್ರೀಧರ ಅವಮಾನದಿಂದ ಪಾತಾಳಕ್ಕಿಳಿದುಹೋದ.

"ಏನಾಗಿಹೋಯಿತು? ನನ್ನ ಮನಸ್ಸು ಅವಳಿಗೆ ಅರ್ಥವಾಗಲಿಲ್ಲವೇ? ಅಥವಾ ಅರ್ಥಮಾಡಿಕೊಂಡೂ ಹೀಯಾಳಿಸುತ್ತಿರುವಳೇ?

ನಾನೇ ಹೇಡಿಯಂತೆ ನಡುಗಿದರೆ ಅವಳಾದರೂ ಏನುಮಾಡಬಲ್ಲಳು.

ಎಲ್ಲರೂ ಎಷ್ಟೆಷ್ಟೋ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ. ಅವರಿಗೇಕೆ ಹೀಗಾಗಬಾರದು?

ನಮ್ಮಲ್ಲಿರುವ ಸದ್ಭಾವನೆಗಳೇ ನಮ್ಮ ಸುಖಕ್ಕೆ ಕಂಟಕ ಪ್ರಾಯಗಳೇ?"

—ಸಮಸ್ಯೆಯಲ್ಲಿ ಮುಳುಗಿದ ಶ್ರೀಧರ.

"ನೀವು ಹೋಗಿ ಮಲಗಿಕೊಳ್ಳಿ"—ಎಂದಳು ಲಲಿತ.

ತಲೆಯ ಮೇಲೆ ಕಲ್ಲನ್ನೆತ್ತಿ ಹಾಕಿದಂತಾಯಿತು ಶ್ರೀಧರನಿಗೆ. ಇನ್ನು ಕುಳಿತುಕೊಳ್ಳುವುದು ಮರ್ಯಾದೆಯಲ್ಲವೆನ್ನಿಸಿತು. ಮರುಮಾತಾಡದೇ ಮೇಲಕ್ಕೆದ್ದ. ಬಾಗಿಲು ದಾಟಿದ.—

"ಈ ಶಾಲು."

"ತೆಗೆದುಕೊಂಡು ಹೋಗಿ ನನಗೆ ಬೇರೆ ಇದೆ."

"ನನಗೆ ಬೇಡ."

—ಶ್ರೀಧರ ಹೆಗಲಮೇಲಿದ್ದ ಶಾಲನ್ನು ಮುದುರಿಸಿ ಲಲಿತಳ ಹಾಸಿಗೆಯ ಮೇಲೆ ಎಸೆದ.

ಅವಮಾನ ನಿರಾಶೆಗಳಿಂದ ತಪ್ತನಾಗಿ ಹಾಸಿಗೆ ಹಿಡಿದ.

ಲಲಿತ ಬಾಗಿಲನ್ನು ಹಾಕಿಕೊಂಡಳು. ಹಾಸಿಗೆಗೆ ತಲೆ ಕೊಟ್ಟಳು.

ಬಿಕ್ಕಿ ಬಿಕ್ಕಿ ಅಳುವ ಅವಳ ನಿಟ್ಟುಸಿರು ನಾಲ್ಕು ಗೋಡೆಗಳ ಮಧ್ಯೆ ಲೀನವಾಯಿತು.

## ೨೩

ಮುಂಜಾನೆ ಏಳದೇ ಬಹಳ ದಿನಗಳಾಗಿತ್ತು. ರಾತ್ರಿ ನಿದ್ರೆಯಿಲ್ಲದಿದ್ದರೂ ಮನಸ್ಸು ಮಲಗಲೊಪ್ಪಲಿಲ್ಲ.

ಇಷ್ಟು ದಿನ ಶ್ರೀಧರ ಬೆಳಗಿನ ಹೊತ್ತು ಮನೆಯಿಂದ ಹೊರಗಡೆ ಹೋಗುತ್ತಿರಲಿಲ್ಲ. ಹೋಗಬೇಕಾದ ಅಗತ್ಯವೂ ಇರಲಿಲ್ಲ. ಕಂಪೆನಿ ಮನೆಗೇ ಕಾಫಿ ಬರುತ್ತಿತ್ತು. ಶ್ರೀಧರ ಏಳುವುದು ತಡವಾದರೂ ಹೋಟಲಿನವನು ತಂದ ಕಾಫಿ–ತಿಂಡಿಯನ್ನು ಲಲಿತ ಆರಿ ಹೋಗದಂತೆ ತೆಗೆದಿರಿಸುತ್ತಿದ್ದಳು.

ಇಂದು ಅವಳಿಗೆ ಮುಖ ತೋರಿಸುವುದು ಹೇಗೆ? ಅವಳಲ್ಲಿಗೆ ಕಾಫಿಗೆ ಹೋಗುವುದು ಹೇಗೆ?

ಶ್ರೀಧರ ಹಾಸಿಗೆಯಿಂದೆದ್ದ–ಯಾರೂ ಏಳುವ ಮೊದಲೇ ಮನೆಯಿಂದ ಹೊರಗೆ ಬಂದ. ಹೋಟಲಿನಲ್ಲಿ ಕಾಫಿ ಕುಡಿದ. ಹೊತ್ತು ಕಳೆಯುವುದೇ ಕಷ್ಟವಾಗಿತ್ತು ಅವನಿಗೆ. ಅಲ್ಲಿ ಇಲ್ಲಿ ಅಡ್ಡಾಡ ತೊಡಗಿದ. ಯಾವುದಾದರೂ ಪುಸ್ತಕವಿದ್ದರಾದರೂ ಚೆನ್ನಿತ್ತು ಎನ್ನಿಸಿತು ಅವನಿಗೆ.

ಅವನ ಕಾಲುಗಳು ದೇವಸ್ಥಾನದತ್ತ ತಿರುಗಿದುವು. ನೋಡಿದಷ್ಟೂ ನೋಡಬೇಕೆನ್ನಿಸುವ ಆ ಶಿಲಾ ಕನ್ನಿಕೆಯರಾದರೂ ನನ್ನ ಮನಸ್ಸಿಗೆ ಶಾಂತಿ ತರಬಹುದು ಎನ್ನಿಸಿತು.

ಆದರೆ ಇವೇನು? ಈ ಶಿಲಾ ಕನ್ನಿಕೆಯರೇಕೆ ಹೀಗಾಗಿದ್ದಾರೆ? ಎಂದಿನ ಸೊಬಗು ಇಂದೇಕೆ ಇಲ್ಲ? ದೃಷ್ಟಿ ಏಕಿಷ್ಟು ಮಂಕಾಗಿದೆ? ಅವರೂ ನನ್ನನ್ನು ನೋಡಿ ನಗುವಂತಾಯಿತೇ? ಈ ಶಿಲಾ ಕನ್ನಿಕೆಯರಿಗೂ ನನ್ನ ಮೇಲೆ ಕೋಪ ಬಂದಿದೆಯೇ?

ಅವನ ದೃಷ್ಟಿ ಗೋಪುರದ ಕಡೆ ಹರಿಯಿತು.

"ಇವೆಲ್ಲಾ ಪ್ರಪಂಚದಲ್ಲಿ ಇರುವುದೇ ತಾನೇ!"

—ಯಾರೋ ಈ ಮಾತನ್ನು ಮತ್ತೆ ಆಡಿದಂತಾಯಿತು.

"ಥೂ....ಎಲ್ಲಿ ಹೋದರೂ ಮನಸ್ಸಿಗೆ ಇದೇ ವಿಚಾರಗಳೇ. ಆದದ್ದಾಗಲಿ ಮನೆಗೇ ಹೋಗಿಬಿಡುತ್ತೇನೆ."

ಶ್ರೀಧರ ಮನೆಯ ಕಡೆ ಹೆಜ್ಜೆ ಹಾಕಿದ.

ಲಲಿತ ಎಂದಿಗಿಂತಲೂ ತಡವಾಗಿ ಎದ್ದಿದ್ದಳು. ಹೋಟೆಲಿನವನ ಕಾಫಿ ತಿಂಡಿಯನ್ನು ತಂದ. ತೆಗೆದುಕೊಂಡು ಕಪಾಟಿನಲ್ಲಿ ಮುಚ್ಚಿಟ್ಟಳು ಶ್ರೀಧರ ಬಂದಾನೆಂದು ಸ್ವಲ್ಪ ಹೊತ್ತು ನಿರೀಕ್ಷಿಸಿದಳು. ಎಷ್ಟು ಹೊತ್ತಾದರೂ ಅವನು ಬರಲಿಲ್ಲ. ಎದ್ದು ಹೋಗಿ ಅವನ ಕೊಠಡಿಯಲ್ಲಿ ನೋಡಿದಳು ಹಾಸಿಗೆ ಸುತ್ತಿಟ್ಟು ಹೊರಟುಬಿಟ್ಟಿದ್ದ.

ಬೇಸರದಿಂದ ಹಿಂದಿರುಗಿದಳು ಲಲಿತ. ಬಹಳ ದಿವಸಗಳ ಮೇ ಅವಳಿಗೆ ಕಸೂತಿಯ ನೆನಪಾಯಿತು.

* * * *

ಹಿಂದೊಮ್ಮೆ ಶ್ರೀಧರನನ್ನು ಕೇಳಿದ್ದಳು—

"ನಾನೊಂದು ದಿಂಬಿನ ಕವರನ್ನು ಹಾಕಬೇಕೆಂದಿದ್ದೇನೆ, ಅದಕ್ಕಾ ಏನನ್ನಾದರೂ ಬರೆದುಕೊಡಿ."

"ಏನು ಬರೆಯಲಿ? ನಾನು ಚಿತ್ರಗಾರನಲ್ಲ!"—ಅವನೆಂದಿದ್ದ.

"ಚಿತ್ರ ಬೇಡ. ಬರಿಯ ಅಕ್ಷರಗಳನ್ನು ಬರೆಯಿರಿ ಸಾಕು."

"ಅಕ್ಷರಗಳನ್ನೂ ಮುದ್ದಾಗಿ ಬರೆಯಲು ಬರುವುದಿಲ್ಲ."

"ನಿಮಗೆ ಬಂದಂತೆ ಬರೆಯಿರಿ....ನಿಮ್ಮ ಕೈಯ ಅಕ್ಷರಗಳು ಬೇಕು."

"ನನಗೆ ಈ ತಲೆದಿಂಬುಗಳನ್ನು ನೋಡಿದಾಗ ಮೈಯೆಲ್ಲಾ ಉ ಯುತ್ತದೆ. ಹಾಸಿಗೆ ತಲೆದಿಂಬಿನ ಮೇಲೂ—"Sweet dreams" "Good night"— Wel-Come ಗಳ ಅವಾಂತರ ನನಗೆ ಇಷ ವಿಲ್ಲ. ನಾವು ಹೆಚ್ಚು ಹೆಚ್ಚಾಗಿ ಕನ್ನಡವನ್ನು ಬಳಸುವ ಯತ್ನ ಮಾ ಬೇಕು."

"ಕನ್ನಡದಲ್ಲೇ ಬರೆಯಿರಿ."

"ನೀವು ನಗಬಹುದು."

"ಇಲ್ಲ."—ಎಂದಿದ್ದಳವಳು.

ಶ್ರೀಧರ ಸ್ವಲ್ಪ ಹೊತ್ತು ಯೋಚಿಸಿ ನಂತರ ಹೊಸ ಬಿಳಿಯ ಬಟ್ಟೆ ಮೇಲೆ ಪೆನ್ಸಿಲಿನಲ್ಲಿ ಗುರುತು ಮಾಡಿಕೊಟ್ಟಿದ್ದ—

"ಸುಖವಿರಾಮ" "ಸುಖವಿರಾಮ" ಎಂದು. ಈಗ ಆ ಬಟ್ಟೆಯನ

ತೆಗೆದು ಅರ್ಧಕ್ಕೆ ಬಿಟ್ಟ ಅಕ್ಷರಗಳನ್ನು ಪೂರ್ತಿಮಾಡತೊಡಗಿದಳು ಲಲಿತ.

* * * *

ಶ್ರೀಧರ ಕೊಠಡಿಯ ಎದುರು ಹಾದುಹೋದ. ತಗ್ಗಿಸಿದ ತಲೆಯನ್ನು ಮೇಲಕ್ಕೆತ್ತದೆಯೇ ಮುಂದುವರೆದ.

ಲಲಿತ ಕಸೂತಿಯನ್ನು ಬದಿಗಿಟ್ಟಳು. ಮೇಲೆದ್ದಳು—

"ಬನ್ನಿ ಇಲ್ಲಿ."

ಶ್ರೀಧರನಿಗೆ ಹೋದ ಜೀವ ಬಂದಂತಾಯಿತು. ಅಲ್ಲಿಯೇ ನಿಂತ. ತಲೆಯೆತ್ತಿ ಅವಳನ್ನು ನೋಡುವ ಧೈರ್ಯವಿರಲಿಲ್ಲ.

"ಬರುವುದಿಲ್ಲವೇ?"—ಲಲಿತ ಮತ್ತೆ ಕೇಳಿದಳು.

ಶ್ರೀಧರ ಒಳಗೆ ಬಂದ. ಲಲಿತ ಮಾತನಾಡಲಿಲ್ಲ. ಮೌನವಾಗಿ ಅವನನ್ನು ನೋಡುತ್ತ ನಿಂತಳು.

"ಏಕೆ ಕರೆದಿರಿ?"

"ಕಾಫಿ ಕುಡಿದಿರಾ?"

"ಹೌದು."

"ನೀವೊಬ್ಬರೆ."

"ನಾನು....ಒಬ್ಬನೇ."

"ನನ್ನನ್ನು ಬಿಟ್ಟು ಕುಡಿಯುವ ಮನಸ್ಸು ಹೇಗೆ ಬಂತು?"

"ಬಿಡಲಾರದ ಬಂಧನ ನಮ್ಮಲ್ಲಿಲ್ಲವಲ್ಲ."

"ಗಂಡಸರೆಲ್ಲರೂ ಅಷ್ಟೇ–ಕ್ಷಣಚಿತ್ತದವರು. ಅವರನ್ನು ನಂಬಿದರೆ ಬಹಳ ಕಷ್ಟ."

ಯಾರನ್ನು ಯಾರು ನಂಬುವುದು? ಏನು ಮಾತಿದು? ಇವಳು ನನ್ನನ್ನು ನಂಬಿದ್ದಾಳೆಯೇ?

ಶ್ರೀಧರ ತಲೆಯೆತ್ತಿದ. ಲಲಿತಳ ಕಣ್ಣು ಅಶ್ರುಪೂರ್ಣವಾಗಿದ್ದುವು.

"ನೀವು ಕಾಫಿ ಕುಡಿದಿರೇನು"—ಸ್ವಲ್ಪ ಹೊತ್ತಿನ ನಂತರ ಕೇಳಿದ ಶ್ರೀಧರ.

ಲಲಿತ ಮೌನ.

"ನೀವು ಕಾಫಿ ಕುಡಿಯಬಹುದಿತ್ತು."

ಈಗಲೂ ಮಾತನಾಡಲಿಲ್ಲ ಲಲಿತ. "ನೀವು ಕುಡಿದ ಹೊರತು ನನಗೆ ಬೇಡವೆಂದು"—ಆ ಕಣ್ಣುಗಳು ಸೂಚಿಸುತ್ತಿದ್ದುವು.

"ಒಟ್ಟಿಗೇ ತೆಗೆದುಕೊಳ್ಳೋಣ"—ಎಂದ ಶ್ರೀಧರ.

ಇಬ್ಬರೂ ಕುಳಿತರು. ಭಾರವಾದ ಹೃದಯದಿಂದ ಕೇಳಿದಳು ಲಲಿತ—

"ಅದೇಕೆ ಅಷ್ಟು ಮುಂಚೆ ಎದ್ದು ಹೋದಿರಿ ಬೆಳಿಗ್ಗೆ? "

"ನಿಮಗೆ ಮುಖ ತೋರಿಸಲು ನಾಚಿಕೆಯಾಗಿ."

—ಮುಚ್ಚುಮರೆಯಿಲ್ಲದೇ ಉತ್ತರಿಸಿದ ಶ್ರೀಧರ.

"ಕಾರಣ? "—ಅವಳೆಂದಳು.

"ರಾತ್ರಿ ನಾನು ಬಹು ದೊಡ್ಡ ತಪ್ಪು ಮಾಡಿದೆ."

"ಅದು ಮಾನವಸಹಜವಾಗಿರುವುದೇ."

ಶ್ರೀಧರ ಚಕಿತನಾದ. ಲಲಿತ ತನ್ನನ್ನು ದೂಷಿಸಬಹುದೆಂಬ ಕಲ್ಪನೆಯಿಂದ ಅಧೀರನಾದ ಅವನಿಗೆ ಸ್ವಲ್ಪಮಟ್ಟಿಗೆ ಚೇತನ ಬಂದಂತಾಯಿತು. ಅವನು ಹೇಳಿದ—

"ಹಾಗೆ ಮನಸ್ಸನ್ನು ಸಡಿಲಬಿಟ್ಟಿದ್ದು ನನ್ನ ತಪ್ಪು."

"ಅಲ್ಲ."

"ಮತ್ತೆ ?"

"ಅದು ನನ್ನದೇ ತಪ್ಪು."

"ಹೇಗೆ? "

"ನನ್ನ ವಿಚಾರಗಳನ್ನು ಮೊದಲೇ ತಿಳಿಸದೆ ಮುಚ್ಚಿಟ್ಟಿದ್ದು."

ಶ್ರೀಧರ ಗಾಬರಿಯಾದ. ಮುಚ್ಚಿಡುವಂತಹ ಗೋಪ್ಯವೇನಿರಬಹುದು?

"ಸ್ನಾನ ಮಾಡಿ ಬನ್ನಿ. ವಿಷ್ಣುಸಮುದ್ರಕ್ಕೆ ಹೋಗೋಣ. ನಿಮ್ಮೊಡನೆ ತುಂಬಾ ಮಾತನಾಡಬೇಕಾಗಿದೆ."

ಕುತೂಹಲ ಸಂಶಯಗಳಿಂದ ಮೇಲೆದ್ದ ಶ್ರೀಧರ. ಏಕೋ? ಅವನ ಮನಸ್ಸು ಹಿಂದೇಟು ಹೊಡೆಯುತ್ತಿತ್ತು.

# ೨೪

ಕೇಶವ ದೇವಾಲಯದ ಎದುರು, ಬಲಭಾಗದ ರಸ್ತೆಯಲ್ಲಿ ಹೋದಾಗ ಕಾಣಿಸುವ ವಿಶಾಲವಾದ ಕೆರೆಯೇ ವಿಷ್ಣುಸಮುದ್ರ.

ಮುಂಗಾರ ಮೊದಲ ದಿನಗಳು ಸಮೀಪಿಸಿದ್ದರಿಂದ ಆಕಾಶದಲ್ಲಿ ಮೋಡಗಳು ಆರ್ಭಟಿಸುತ್ತಿದ್ದುವು. ಬೆಳಗಿನ ಬಿಸಿಲು ಮಾಯವಾಗಿ ಆಕಾಶದಲ್ಲಿ ಮಬ್ಬು ಕವಳಿಸಿತ್ತು.

"ಮಳೆ ಬರುವಂತಿದೆ, ನಾವು ದೇವಸ್ಥಾನದಲ್ಲೇ ಕುಳಿತಿದ್ದರೆ ಚೆನ್ನಾಗಿತ್ತು."—ಎಂದ ಶ್ರೀಧರ

"ಅಲ್ಲಿ ಒಬ್ಬರಲ್ಲ ಒಬ್ಬರು ಬರುತ್ತಾರೆ. ಮಳೆಬಂದರೆ ಎದ್ದುಬಂದರಾಯಿತು. ಅಲ್ಲಿಗೇ ಹೋಗೋಣ"—ಎಂದಳು ಲಲಿತ.

ಇಬ್ಬರೂ ಕೆರೆಯ ದಂಡೆಯ ಮೇಲೆ ನಡೆದು ಹೋದರು. ಶಿಥಿಲವಾದ ಕಲ್ಲು ಮಂಟಪದ ಬಳಿ ಕುಳಿತರು.

"ಇಲ್ಲಿ ಯಾರೂ ಹೆಚ್ಚಾಗಿ ಬರುವುದಿಲ್ಲ. ಈಗ ಹೇಳಿ"—ಎಂದ ಶ್ರೀಧರ.

* * * *

"ಇದು ಈಗ ಆರೆಂಟು ವರುಷಗಳ ಹಿಂದಿನ ಮಾತು. ಆಗ ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದೆ".

"ಯಾವ ಊರಿನಲ್ಲಿ?"

"ಶಿವಮೊಗ್ಗದಲ್ಲಿ. ನಮ್ಮ ತಂದೆ ಸರ್ಕಾರಿ ಶಾಲೆಯೊಂದರ ಉಪಾಧ್ಯಾಯರಾಗಿದ್ದರು. ಅವರಿಗೆ ನಾನು ಒಬ್ಬಳೇ ಮಗಳು. ತಾಯಿ ತಂದೆಯರು ನನ್ನನ್ನು ಮುದ್ದಿನಿಂದ ಸಾಕಿದರು."

"ನಿಮ್ಮ ತಾಯಿ ತಂದೆಯರು ಈಗ ಎಲ್ಲಿದ್ದಾರೆ?"

"ತಂದೆಯಿಲ್ಲ-ತಾಯಿ ಮಾತ್ರ ಇದ್ದಾರೆ. ತಂದೆ ನನ್ನ ಚಿಕ್ಕಂದಿನಲ್ಲೇ ತೀರಿಹೋದರು. ಅವರು ಬದುಕಿದ್ದರೆ ಬಹುಶಃ ನನ್ನ ಬಾಳು ಹೀಗಾಗುತ್ತಿರಲಿಲ್ಲ. ತಂದೆಯ ಸಾವಿನೊಂದಿಗೆ ಬಡತನವೂ ಬಂದು ಕಾಲೂರಿತು. ನನ್ನ ತಾಯಿ ಕಷ್ಟದಿಂದ ದುಡಿದು ನನ್ನನ್ನು ಓದಿಸಿದರು. ಹೈಸ್ಕೂಲಿನ ಮೆಟ್ಟಲನ್ನು ಹತ್ತುವಾಗ ನನಗೆ ಹನ್ನೆರಡು ವರ್ಷ."

"ಅಷ್ಟುಬೇಗ ಹೈಸ್ಕೂಲಿಗೆ ಬಂದಿರಾ!"

ನಿಮಗೆ ಬೇಗ. ನಮ್ಮ ಜನಗಳ ದೃಷ್ಟಿಯಲ್ಲಿ ನನಗೆ ಅದು ಮದುವೆಯ ವಯಸ್ಸು. ನಮ್ಮ ತಾಯಿ ಆಗಲೇ ಮದುವೆಯ ಏರ್ಪಾಡಿನಲ್ಲಿದ್ದರು. ನಮ್ಮ ಸಮಾಜದಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ಎಷ್ಟು ದೊಡ್ಡ ಸಮಸ್ಯೆಯೆಂದು ನಿಮಗೆ ಗೊತ್ತಿದೆ".

"ಗೊತ್ತು. ಮಾನ ಮರ್ಯಾದೆಯಿಲ್ಲದೆ, ಸಿಕ್ಕಿದ್ದೇ ಸಮಯವೆಂದು, ಮಾವನನ್ನು ಸುಲಿಗೆ ಮಾಡುವ ದಶಮಗ್ರಹ ಜಾಮಾತರೇ ನಮ್ಮಲ್ಲಿ ಹೆಚ್ಚಿಕೊಂಡಿದ್ದಾರೆ."

"ಅಂದಮೇಲೆ ಬಡವರಾದ ನಮ್ಮ ಪಾಡೇನಾಗ ಬೇಕು? ವರಸಿಕ್ಕಲಿಲ್ಲ. ಓದುಮುಂದುವರಿಯಿತು. ಮತ್ತೆರಡು ವರುಷಗಳ ನಂತರ ನಾನು"ಮೆಟ್ರಿಕ್" ತರಗತಿಗೆ ಬಂದೆ. ಅಲ್ಲಿ ನನ್ನ ಜೀವನಕ್ಕೆ ಕಂಟಕ ಪ್ರಾಯರಾಗಿ ಬಂದವರು ಒಬ್ಬರು ಮೇಷ್ಟರು."

ಮೇಷ್ಟರು ಎಂದು ಕೇಳಿದ ಕೂಡಲೇ ಮೈಗೆ ಬೆಂಕಿಯಿಟ್ಟಂತಾಯಿತು ಶ್ರೀಧರನಿಗೆ. ಅವನು ಉದ್ರಿಕ್ತನಾಗಿ ನುಡಿದ—

"ಇತ್ತೀಚಿಗಂತೂ ಈ ಮೇಷ್ಟರುಗಳ ಹಾವಳಿ ಬಹಳ ಹೆಚ್ಚಾಗಿಬಿಟ್ಟಿದೆ."

"ಏಕೆ?"

"ನೀತಿ ನಡೆವಳಿಕೆಗಳು ಮೊದಲು ಅವರಲ್ಲೇ ಇಲ್ಲ. ಹುಡುಗರಿಗೆ ಹೇಗೆ ಹೇಳಿಯಾರು?"

"ನಿಮಗೇಕೆ ಅಷ್ಟುಕೋಪ?"

"ನಮ್ಮ ಊರಿಗೂ ಕೆಲವರು ಮೇಷ್ಟರುಗಳು ಬಂದಿದ್ದಾರೆ. ಕಾಲೇಜಿನಲ್ಲಿ ಡಿಗ್ರಿ ತೆಗೆದುಕೊಂಡು ಹೊರಬರುವಾಗ ಮೇಷ್ಟರ ಕೆಲಸವೂ ಜೊತೆಯಲ್ಲೇ ಸಿಕ್ಕಿದೆ"

ಪ್ರಪಂಚದ ಅನುಭವವೇ ಇಲ್ಲದ ಈ "ಎಳಪು" ಗಳು ತಮ್ಮ ಘನತೆ ಗೌರವಗಳನ್ನರಿಯದೆ, ತಮ್ಮಕಾಲೇಜುಗಳಲ್ಲಿ ಹುಡುಗಿಯರನ್ನು ಕುರಿತು ಚಕ್ಕಂದವಾಡುವಂತೆ—ಇಲ್ಲಿಯೂ ಬಂದು ತಮ್ಮ ಬ್ರೇಕಿಲ್ಲದ ನಾಲಗೆಯನ್ನು ಹರಿಯಬಿಡುತ್ತಾರೆ.

ಹೋಟಲಿನ ರೌಂಡ್ ಟೇಬಲಿನ ಮುಂದೆ ಕುಳಿತು, "ಡಬ್ಬಲ್‌ಜಡೆ ಚೆನ್ನಾಗಿದೆ, Green sary suits you,"–ಅಂತ ತಮ್ಮ ವಿದ್ಯಾರ್ಥಿನಿಯರನ್ನೇ ಕುರಿತು ಕುಚೋದ್ಯ ಮಾಡುವಾಗ, ನಮ್ಮ ಸೋದರಿಯರ ಈ ಅಸಹಾಯಕ ಸ್ಥಿತಿಗಾಗಿ ಕಣ್ಣೀರಿಡುವಂತಾಗುತ್ತಿದೆ. ಅವರನ್ನುಶಾಲೆಗೆ ಕಳಿಸುವುದೇ ಬೇಡವೆನ್ನುವಷ್ಟು ಸಂಕಟವಾಗುತ್ತಿದೆ.—

–ಹೋಗಲಿ ಬಿಡಿ ಈಗೇಕೆ ಈ ಮಾತು? ನಿಮ್ಮ ಮೇಷ್ಟರು ನಿಮಗೇನು ಮಾಡಿದರು ಹೇಳಿ?"

"ನನ್ನನ್ನು ಮದುವೆಯಾಗಲು ಮುಂದೆ ಬಂದರು."

"ಮದುವೆ! ಮಕ್ಕಳ ಆಟವಾಗಿ ಹೋಯಿತೆ?"

"ನನ್ನದಂತೂ ದೊಡ್ಡ ಆಟವೇ ಆಗಿಹೋಯಿತು. ಆಗ ನಮ್ಮ ಮೇಷ್ಟರಿಗೆ ಸುಮಾರು ಇಪ್ಪತ್ತಾರು–ಇಪ್ಪತ್ತೆಂಟು ವರುಷಗಳಿರಬಹುದು. ಆಗ ತಾನೇ ಓದುಮುಗಿಸಿ ಬಂದಿದ್ದರು. ನಮಗೆ ಯಾವಾಗಲೂ ಇಂಗ್ಲೀಷಿಗೇ ಬರುತ್ತಿದ್ದರು. ಇಂಗ್ಲೀಷಿಗೆ ನನಗೆ ಅವರು ಕೊಟ್ಟಷ್ಟು ನಂಬರನ್ನು ಮತ್ತೆ ಯಾರೂ ಕೊಡುತ್ತಿರಲಿಲ್ಲ."

"ಮೇಷ್ಟರುಗಳ ಕುತಂತ್ರ ಇದು. ಇದಕ್ಕೆ ಬಲಿಬಿದ್ದಿರಾ?"

"ಇಲ್ಲ. ಆದರೂ ಈ ಮೇಷ್ಟರು ತುಂಬಾ ಒಳ್ಳೆಯವರು ಅನ್ನಿಸಿತು ನನಗೆ."

"ಅವರು ಯಾವ ಊರಿನವರು?"

"ನಮ್ಮ ಊರಿನವರೇ; ನಮ್ಮ ಪಕ್ಕದ ಮನೆಯವರೇ. ಮೊದಲಿನಿಂದಲೂ ಅವರು ನಮ್ಮಲ್ಲಿಗೆ ಬರುತ್ತಿದ್ದರು, ನಾವು ಅವರಲ್ಲಿಗೆ ಹೋಗುತ್ತಿದ್ದೆವು. ಜಾತಿಯಲ್ಲಿ ಬೇರೆಯಾದರೂ ಆ ಭೇದವೇ ಗೊತ್ತಾಗದಷ್ಟು ನಾವು ನೆರೆಹೊರೆಯಲ್ಲಿ ಬೆರೆತು ಹೋಗಿದ್ದೆವು."

"ಅವರು ಯಾವ ಜನ?"

"ನಮ್ಮವರಲ್ಲ, ಎಂದಿಟ್ಟುಕೊಳ್ಳಿ."

ಶ್ರೀಧರ ಬೆಚ್ಚಿಬಿದ್ದ. ವಿದ್ಯುತ್ತನ್ನು ಮೈಗೆ ತಗುಲಿಸಿದಂತಾಯಿತು ಅವನಿಗೆ. ಲಲಿತಳಿಗೆ ತೀರಾ ಸಮೀಪದಲ್ಲಿ ತಾನು ಕುಳಿತಿದ್ದೇನೆಂಬ ಅರಿವಾದದ್ದು ಈಗ.

ತೀವವಾದ ಅವಳ ಕಣ್ಣುಗಳು ಶ್ರೀಧರನನ್ನೇ ನೋಡುತ್ತಿದ್ದುವು.

"ಮುಂದೆ ಹೇಳಿ."

"ನನ್ನ ಮೇಲೆ ಅವರಿಗೆ ಮೊದಲಿನಿಂದಲೂ ಅಭಿಮಾನ. ನನ್ನ ಮದುವೆಯ ಬಗ್ಗೆ ನಡೆಯುವ ನಿಷ್ಫಲಯತ್ನಗಳು ಅವರಿಗೆ ತಿಳಿಯದಿರಲಿಲ್ಲ. ಒಂದು ದಿನ ನಾನು ಅವರ ಮನೆಗೆ ಹೋದಾಗ ತಮಾಷೆಯಾಗಿ ಕೇಳಿದರು—

"ಯಾಕೆ ಇಷ್ಟೆಲ್ಲಾ ತಾಪತ್ರಯ. ನನ್ನನ್ನೇ ಮದುವೆಯಾಗಿ ಬಿಡು" —ಅಂತ.

ಅವರೇನೋ ಅಂದು ಆ ಮಾತನಾಡಿದ್ದು ತಮಾಷೆಗಾಗಿಯೇ ಇರ ಬಹುದು. ನನ್ನ ಮನಸ್ಸಿನ ಮೇಲೆ ಅದು ಪರಿಣಾಮ ಮಾಡದಿರಲಿಲ್ಲ.

"ಸ್ಕೂಲಿನ ಹುಡುಗರ ದೃಷ್ಟಿಯಲ್ಲಿ ಮೇಷ್ಟರುಗಳೇ ಆದರ್ಶರಾಗಿ ಕಾಣುತ್ತಾರೆ. ಅವರೇನು ಮಾಡಿದರೂ ಹುಡುಗರಿಗೆ ತಪ್ಪಾಗಿ ಕಾಣುವು ದಿಲ್ಲ"—ಎಂದ ಶ್ರೀಧರ.

"ಹೌದು. ನನಗೂ ಹಾಗೇ ಅನ್ನಿಸಿತು. ಮತ್ತೊಂದು ದಿನ ಪರೀಕ್ಷೆಯ ನಂಬರನ್ನು ತಿಳಿಯುವ ಕುತೂಹಲದಿಂದ ನಾನು ಅವರ ಮನೆಗೆ ಹೋದೆ. ಮೇಷ್ಟರು ಬಟ್ಟೆ ಹಾಕಿಕೊಂಡು ಎಲ್ಲಿಗೋ ಹೊರಟಿದ್ದರು. ನಾನು ಹೋದೊಡನೆ ನನ್ನನ್ನು ಒಳಗೆ ಬರಹೇಳಿದರು. ಯಾವುದೋ ಮಾತು ಗಳನ್ನಾಡುತ್ತ ಮತ್ತೆ ಕೇಳಿದರು—"ಹೇಗೆ ನಿನ್ನ ಅಭಿಪ್ರಾಯ ಅಂತ."

ನಾನು ಉತ್ತರ ಕೊಡಲಾರೆನಾದೆ. ನಾಚಿಗೆಯಾಯಿತು. ಮೇಷ್ಟ ರಿಗೆ ಸಂಯಮ ಕಡಿಮೆಯೆಂದು ನನಗೆ ಈಗ ಅನ್ನಿಸುತ್ತಿದೆ. ಅವರ ವರ್ತನೆ ಹಿತವಾಗಿರಲಿಲ್ಲ. ನಿಮ್ಮ ನಾಟಕದ ಮದ್ದೂರಾಯನಂತೆ ವರ್ತಿಸಿದರು.

ಮದ್ದೂರಾಯನ ಹೆಸರನ್ನು ಕೇಳಿದೊಡನೆ ಕೋಪ ನಗು ಎರಡೂ ಒಟ್ಟಿಗೆ ಬಂತು ಶ್ರೀಧರನಿಗೆ.

"ನಮ್ಮ ನಾಟಕದಲ್ಲಿ ಮಾತ್ರವಲ್ಲ. ಮದ್ದೂರಾಯನಂತಹ ಮಾಸ್ಟರ್....ಜೀ....ಗಳು ಸಮಾಜದಲ್ಲೂ ಕಾಣಿಸಿಕೊಳ್ಳುತ್ತಿದ್ದಾರೆ—ಇಂಥವರನ್ನು ಹುಡುಕಿ ಆ ಸ್ಥಳದಿಂದ ಕಿತ್ತುಹಾಕಬೇಕು."—ಎಂದ ಶ್ರೀಧರ.

"ದಿನಗಳು ಕಳೆಯುತ್ತಿದ್ದುವು. ಘಟನೆಗಳು ಕೂಡಿಬಂತು. ನಮ್ಮ ಸಮಾಜದಲ್ಲಿ ಮದುವೆ ಸಮಸ್ಯೆಯಾಗಿರುವಾಗ ಅವರನ್ನು ಕೈಹಿಡಿಯುವುದ

ರಲ್ಲಿ ತಪ್ಪಿಲ್ಲವೆಂದೆನ್ನಿಸಿತು."

"ನಿಮ್ಮ ತಾಯಿಯವರನ್ನು ಕೇಳಿದಿರಾ?"

"ಅಷ್ಟರಮಟ್ಟಿನ ತಿಳುವಳಿಕೆ, ಮುನ್ನೆಚ್ಚರಿಕೆಯಿದ್ದಿದ್ದರೆ ನನಗೇಕೆ ಹೀಗಾಗುತ್ತಿತ್ತು. ನಮ್ಮ ತಾಯಿಗಿಂತಲೂ ನಮ್ಮ ಮೇಷ್ಟರನ್ನೇ ದೃಢ ವಾಗಿ ನಂಬಿದೆ. ಯಾರನ್ನೂ ಎದುರಿಸಬಲ್ಲೆ! ಯಾವುದನ್ನೂ ಗೆಲ್ಲಬಲ್ಲೆ ನೆಂಬ ಕೆಚ್ಚಿತ್ತು ನನ್ನಲ್ಲಿ. ಆದರೆ ಕಾಲ ಬುದ್ಧಿ ಕಲಿಸಿತು."

"ನಾವು ವಿವಾಹಿತರಾಗುವ ತೀರ್ಮಾನಕ್ಕೆ ಬಂದೆವು. ಇದನ್ನು ಹೊರ ಗೆಡಹಿದರೆ ದೊಡ್ಡ ಗಲಾಟೆಯಾಗುವುದೆಂದು ಮೇಷ್ಟರು ಎಚ್ಚರಿಕೆ ಕೊಟ್ಟಿ ದ್ದರು. ಮದುವೆಯೊಂದು ನಡೆದುಹೋಗಲಿ ನಂತರ ಎಲ್ಲರನ್ನೂ ಸಮಾ ಧಾನ ಪಡಿಸುತ್ತೇನೆಂದು ಭರವಸೆ ಕೊಟ್ಟಿದ್ದರು."

"ಅಮ್ಮನಿಗಾದರೂ ತಿಳಿಸೋಣ" ಎಂದೆ ನಾನು.

"ಹಾಗಾದರೆ ಈ ಮದುವೆಯೇ ನಡೆಯುವುದಿಲ್ಲ"–ಎಂದರು ಅವರು.

ನಮ್ಮ ಪರೀಕ್ಷೆ ಮುಗಿಯಿತು. ಬೇಸಿಗೆ ರಜೆ ಬಂತು. ಬೇರೆ ಊರಿಗೆ ಹೋಗಿ ನಾವಿಬ್ಬರೂ "ರಿಜಿಸ್ಟರ್ಡ್ ಮ್ಯಾರೇಜ್" ಮಾಡಿಕೊಳ್ಳುವ ತೀರ್ಮಾ ನಕ್ಕೆ ಬಂದೆವು.

ಜಾತಿ ಕುಲ ಗೋತ್ರಗಳೊಂದೂ ಅಡ್ಡಿ ಬರಲಿಲ್ಲ ನನಗೆ. ನಮ್ಮವ ರಾಗಿ ನಮಗೇನು ಮಾಡಿದ್ದಾರೆ? ಏನು ಮಾಡಬಲ್ಲರೆಂಬ ಕಿಚ್ಚೂ ಇಲ್ಲದಿರ ಲಿಲ್ಲ. ಮುಂದಾಗುವ ಪರಿಣಾಮದ ಕಲ್ಪನೆಯೂ ಇರಲಿಲ್ಲ. ಮೇಷ್ಟ ರೊಬ್ಬರ ಮುಂದೆ ಮತ್ತೆಲ್ಲವೂ ತುಚ್ಛವಾಗಿ ಕಾಣಿಸಿತು.—

"ಧೈರ್ಯಮಾಡಿ ಮನೆಯಿಂದ ಹೊರಟೆ."

"ಅಬ್ಬ! ಎಂತಹ ದಿಟ್ಟ ಹೆಣ್ಣು"—ಎನ್ನಿಸಿತು ಶ್ರೀಧರನಿಗೆ—"ನೀವು ಹಾಗೆ ಮಾಡಬಾರದಿತ್ತು."

"ಮಾಡಬಾರದಿತ್ತು ಅನ್ನಿಸುವುದು ಮಾಡಿಯಾದಮೇಲೆ ಮಾತ್ರ."

ಈ ಸಮಯದಲ್ಲಿ ಒಮ್ಮೆ ನಕ್ಕಳು ಲಲಿತ.

"ಮುಂದೇನಾಯಿತು?"

"ಮಾಷ್ಟರು ಆ ಊರಿನಲ್ಲಿನ ತಮ್ಮ ಸ್ನೇಹಿತನ ಮನೆಗೆ ಕರೆ ದೊಯ್ದರು."

"ನಿಮ್ಮ ಮದುವೆ ನಡೆಯಿತೇ?"

"ಹೇಳುತ್ತೇನೆ ಕೇಳಿ. ಹನ್ನೊಂದು ಗಂಟೆಗೆ ಮದುವೆಯ ಏರ್ಪಾಡಿತ್ತು. ಆದರೆ ಏಳು ಗಂಟೆಗಾಗಲೇ ಮನೆಯೆದುರು ದೊಡ್ಡ ಗುಂಪು ನೆರೆದಿತ್ತು.

"ದೊಡ್ಡ ಗಲಾಟೆ ನಡೆಯುತ್ತಿತ್ತು. ಪೋಲೀಸಿನವರು ಬಂದರು. ಕನ್ಯೆಯೊಬ್ಬಳ ಅಪಹಾರ ನಡೆದಿದೆ; ಜನಗಳು ಸಹಕರಿಸಬೇಕೆಂದು ಕೂಗಾಡುತ್ತಿದ್ದರು."

"ನಿಮಗೆ ಅವರನ್ನು ಮದುವೆಯಾಗುವ ಇಷ್ಟವಿದ್ದಮೇಲೆ ಇವರೇಕೆ ಹೀಗೆ ಮಾಡಿದರು?"

"ಸ್ವಪ್ರಚಾರ ಸ್ವಪ್ರತಿಷ್ಠೆಯಿಂದ."

"ನೀವು ನಿಮ್ಮ ಇಷ್ಟವನ್ನು ಸ್ಪಷ್ಟಪಡಿಸಿದಿರಾ?"

"ಹೌದು. ಆದರೆ ನನ್ನನ್ನು ಕೇಳುವವರಾರು. ನನಗಾಗ ಇನ್ನೂ ಹದಿನೈದು ವರ್ಷ. ಈ ಹುಡುಗಿ ಮೈನರ್, ಅವಳ ಮಾತುಗಳಿಗೆ ಪ್ರೋತ್ಸಾಹ ಕೊಡಕೂಡದೆಂದು ಈ ಮುಖಂಡರು ವಾದಿಸಿದರು.

ಇಷ್ಟೆಲ್ಲಾ ಗಲಾಟೆ ನಡೆಯುತ್ತಿರುವಾಗಲೇ....ನಮ್ಮ ತಾಯಿಯನ್ನೂ ನಾವಿದ್ದ ಊರಿಗೆ ಕರೆದುಕೊಂಡು ಬಂದರು. ಅವರ ಮುಖವನ್ನು ನೋಡಿದ ಕೂಡಲೇ ನನ್ನ ಎದೆಯೊಡೆದಂತಾಯಿತು.

ಬರುಬರುತ್ತಲೇ ಅವರು ಗಟ್ಟಿಯಾಗಿ ಅಳುತ್ತಾ ಬಂದರು. ಅಂದಿನ ಆ ಸಂಕಟವನ್ನು ನೆನೆಸಿಕೊಂಡಾಗ, ಪ್ರಾಯಶಃ ನಾನು ಹೀಗಾಗುವುದಕ್ಕಿಂತಾ ಸತ್ತುಹೋಗಿದ್ದರೂ ಅವರಿಗೆ ಅಷ್ಟು ದುಃಖವಾಗುತ್ತಿರಲಿಲ್ಲವೆನ್ನಿಸಿತು."

ಇದನ್ನು ಹೇಳುವಾಗ ಲಲಿತಳ ಕಣ್ಣು ಹನಿಗಟ್ಟಿತ್ತು. ಅದನ್ನು ಸೆರಗಿನಿಂದೊತ್ತಿಕೊಂಡು ಮುಂದುವರೆದಳು—

"ನಾನು ಕೂಡಲೇ ಹೊರಡದಿದ್ದರೆ ತಾನು ಜೀವ ಕಳೆದುಕೊಳ್ಳುವುದಾಗಿ ನಮ್ಮ ತಾಯಿ ರೋದಿಸತೊಡಗಿದರು. ಯೋಗ್ಯ ವರನನ್ನು ಹುಡುಕಿ ಸರಿಯಾದ ಸ್ಥಳವನ್ನು ಸೇರಿಸುವೆವೆಂದು ಈ ಮುಖಂಡರು ಅವಳ ಮನ ಒಲಿಸಿಕೊಂಡಿದ್ದರು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ನನಗೆ ಉಪದೇಶಮಾಡಿದರು. ಅಲ್ಲಿಂದ ನಮ್ಮ ತಾಯಿಯೊಂದಿಗೆ ಹೊರಡದೇ

ನನಗೆ ಅನ್ಯ ಮಾರ್ಗವಿಲ್ಲವೆನ್ನುವಷ್ಟು ಬಲಾತ್ಕರಿಸಿದರು."

"ಮೇಷ್ಟರ ಗತಿ!"

"ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೇಳಿಕೆ ತೆಗೆದುಕೊಂಡರು. ಅವರು ಬರುವುದರೊಳಗೆ ನಮ್ಮನ್ನು ಅಲ್ಲಿಂದ ದಾಟಿಸಿದ್ದರು ಈ ಮುಖಂಡರು."

"ಮೇಷ್ಟರು ಈಗ ಎಲ್ಲಿದ್ದಾರೆ?"

"ಕೆಲಸದಿಂದ ವಜಾಮಾಡಲ್ಪಟ್ಟು ಪುನಃ ಊರಿಗೆ ಕಾಲಿಡಲಿಲ್ಲ."

ಶ್ರೀಧರನಿಗೆ ಯಾವುದೋ ಹಳೆಯ ನೆನಪು ಮರುಕಳಿಸಿತು. ಅವನೆಂದ—

"ಈ ವಿಚಾರವನ್ನು ನಾನೆಲ್ಲೋ ಪತ್ರಿಕೆಗಳಲ್ಲಿ ಓದಿದ್ದೇನೆ."

"ಅನೇಕ ಪತ್ರಿಕೆಗಳಲ್ಲಿ ನನ್ನ ಸುದ್ದಿ ಬಂದಿದೆ."

"ನಿಮ್ಮ ಹೆಸರನ್ನೆಲ್ಲೂ ಓದಿಲ್ಲ."

"ಓದಲು ಕಾರಣವಿಲ್ಲ. ನೀವೀಗ ಕರೆಯುತ್ತಿರುವುದು ನನ್ನ ನಿಜ ವಾದ ಹೆಸರನ್ನಲ್ಲ."

"ಮತ್ತೆ ನಿಮ್ಮ ಹೆಸರು?"

"ಯಶೋಮತಿ."

"ಯಶೋಮತೀ....ನಿಜ ಮೂರು ವರುಷಗಳ ಕೆಳಗಿರಬೇಕು. ಕನ್ಯಾಪಹಾರ ಎಂಬ ಶಿರೋನಾಮೆಯಲ್ಲಿ ಪತ್ರಿಕೆಗಳಲ್ಲಿ ಏನೋ ಬರುತ್ತಿತ್ತು —ಯಶೋಮತಿ!....ಎಷ್ಟು ಸೊಗಸಾಗಿದೆ ನಿಮ್ಮ ಹೆಸರು."

"ಜೀವನದ ಸೊಗಸಿನೊಂದಿಗೆ ಹೆಸರಿನ ಸೊಗಸೂ ಮಾಯವಾಯಿತು. ಅಂದಿನ ಕೊಳೆಯನ್ನು ಮುಚ್ಚಲಿಕ್ಕಾಗಿ ಇಂದು ನನ್ನ ಹೆಸರನ್ನು ಮರೆಮಾಡಿದ್ದೇನೆ."

"ನಿಮ್ಮ ವಿಚಾರ ಕಂಪೆನಿಯಲ್ಲಿ ಯಾರಿಗೂ ತಿಳಿದಿಲ್ಲವೇ."

"ಇಲ್ಲ. ನಾನಾಗಿ ಯಾರಿಗೂ ಹೇಳಿಲ್ಲ. ಜನ ಒಬ್ಬೊಬ್ಬರು ಒಂದು ರೀತಿ ಹೇಳುತ್ತಾರೆ. ಅವರ ನಾಲಗೆಯನ್ನು ತಡೆಯಲು ನಾನು ಯಾರು? ನನ್ನ ಈ ಕಥೆಯನ್ನು ನಿಮಗೂ ತಿಳಿಸುತ್ತಿರಲಿಲ್ಲ.—ತಿಳಿಸಬೇಕಾದ ಸಂದರ್ಭ ಬಂತು ತಿಳಿಸಿದೆ ಅಷ್ಟೆ."

"ಈಗ ನಿಮ್ಮ ಮೇಷ್ಟ್ರು ಏನು ಮಾಡಿಕೊಂಡಿದ್ದಾರೆ? "

"ಬೇರೆ ಮದುವೆ ಮಾಡಿಕೊಂಡಿದ್ದಾರೆ. ಬೊಂಬಾಯಿನಲ್ಲಿ ಅವರಿಗೆ ಬೇರೆ ಕೆಲಸ ಸಿಕ್ಕಿದೆ. ಸುಖವಾಗಿದ್ದಾರೆ ಎಲ್ಲವನ್ನೂ ಮರೆತು. ಈಚೆಗೆ ಒಂದು ಮಗು ಎಂದು ಕೇಳಿದೆ."

"ನಿಮಗೆ ಬೇರೆ ಮದುವೆ ಮಾಡಿಸುತ್ತೇನೆಂದು ಆ ಕೆಂಪು ಟೋಪಿಯವರು ವಚನ ಕೊಡಲಿಲ್ಲವೇ? "

"ಅವರ ವಚನಕ್ಕೆ ಬೆಂಕಿ ಹಾಕಿತು. ಸರಿಯಾದ ಹೆಣ್ಣಾದರೇ ಮದುವೆ ನಡೆಯುವುದು ಕಠಿಣವಾದಾಗ ನನ್ನನ್ನು ಯಾರು ಕೇಳಬೇಕು? "

"ಅವರು ವರ ಹುಡುಕಲಿಲ್ಲವೇ."

"ಅವರು ತಂದು ನಿಲ್ಲಿಸಿದ ವರಮಹಾಶಯರನ್ನು ನೆನೆಸಿಕೊಂಡರೇ ಎದೆ ನಡುಗುತ್ತದೆ. ಅಗ್ಗಕ್ಕೆ ಸಿಕ್ಕಿದ ಹೆಣ್ಣು ಎಂಬ ಭಾವನೆಯಿಂದ ತಮಗೆ ಬೇಕಾದ, ಮತ್ತೆ ಯಾವ ರೀತಿಯಲ್ಲೂ ಮದುವೆಯಾಗಲಾರದ ಗಂಡುಗಳನ್ನು ತಂದು ತೋರಿಸಿದರು. ನಾನು ಸಮ್ಮತಿಸಲಿಲ್ಲ."

"ಆಮೇಲೆ? "

"ನನ್ನಿಂದ ನನ್ನ ತಾಯಿ ಸಂಕಟಗ್ರಸ್ತಳಾದಳು. ನನ್ನ ಮುಖವನ್ನು ನೋಡಿದಾಗಲೆಲ್ಲಾ ಅವರ ಹೃದಯಕ್ಕೆ ಆಗುವ ಹಿಂಸೆ, ನನ್ನನ್ನು ಯೋಚನೆಗೀಡು ಮಾಡಿತು. ನನಗೆ ಏನಾದರೂ ಚಿಂತೆಯಿರಲಿಲ್ಲ. ಅವಳ ನೊಂದ ಮುಖವನ್ನು ನೋಡಲಾರೆನಾದೆ. ಹೀಗೆ ನಿತ್ಯ ಸಂಕಟವನ್ನು ಕೊಡುವುದಕ್ಕಿಂತಾ ಒಮ್ಮೆಲೇ ಸತ್ತು ಹೋದರೆ ಒಳಿತೆನಿಸಿತು."

"ಆದರೆ ಸಾಯುವಾಗಲೂ ಆಸೆ ನಮ್ಮನ್ನು ಬಿಡುವುದಿಲ್ಲ. ಆಸೆಯೇ ಬದುಕಿನ ಮೂಲ. ಇಂದಲ್ಲ ನಾಳೆ ಕತ್ತಲು ಹರಿದು ಬೆಳಕು ಬರುತ್ತದೆ. ಈ ದುರ್ದಿನಗಳು ದಾಟಿ ಸುದಿನ ಬಂದು—ಸುಖದ ಸವಿಯನ್ನು ಕಾಣಬಲ್ಲೆನೆಂಬ ಕಲ್ಪನೆ ನನ್ನ ಜೀವವನ್ನುಳಿಸಿದೆ."

"ಒಳ್ಳೆಯದೇ ಮಾಡಿದಿರಿ. ಬದುಕು ಕಷ್ಟವೇ ಹೊರತು ಸಾವು ಕಷ್ಟವಲ್ಲ. ಅದು ಎಂದಿಗೂ ನಮ್ಮ ಬೆನ್ನ ಹಿಂದೆಯೇ ಇರುತ್ತದೆ"

—ಎಂದ ಶ್ರೀಧರ, ಸಹಾನುಭೂತಿಯಿಂದ.

"ಬೇಕಾದ ದಿನ ಸಾಯುವ ಸ್ವಾತಂತ್ರ್ಯ ನಮಗಿರುವಾಗ ಬಾಳ ಕಷ್ಟ

ಗಳಿಗೇಕೆ ಹೆದರಬೇಕು? ನಮ್ಮ ತಾಯಿಯವರಿಗೆ ಮಾತ್ರ ಮುಖ ತೋರಿಸುವುದು ಬೇಡವಾಗಿತ್ತು. ನಮ್ಮ ಜೀವನಕ್ಕಾಗಿ ಉದ್ಯೋಗವನ್ನು ಮಾಡಬೇಕಾಗಿತ್ತು. ಅದಕ್ಕಾಗಿ ನಾನು ನಾಟಕದ ಕಂಪೆನಿಗಳನ್ನಾಶ್ರಯಿಸಿದೆ. ನಾಟಕದ ಕಂಪೆನಿಗಳಲ್ಲಿ ಪಾತ್ರ ವಹಿಸುತ್ತಾ ಆಗಲೆ ಎರಡು ವರುಷಗಳ ಮೇಲಾಯಿತು."

"ಈಗ ನಿಮ್ಮ ತಾಯಿ?"

"ಅವರಿಗೀಗ ಎಲ್ಲ ವಿಚಾರಗಳೂ ತಿಳಿದಿವೆ. ಹೆತ್ತ ಹೃದಯ ಮಕ್ಕಳು ಎಷ್ಟು ತಪ್ಪು ಮಾಡಿದರೂ ಸಂಭಾಲಿಸಿಕೊಂಡು ಹೋಗುತ್ತದೆ. ಆಗಾಗ ಬಂದು ನೋಡಿಕೊಂಡು ಹೋಗುತ್ತಾರೆ. ಈ ಕಂಪೆನಿಗಳು ಮಗುಚಿಬಿದ್ದಾಗ ನಾನೂ ಮನೆಗೆ ಹೋಗುತ್ತಿರುತ್ತೇನೆ."

"ಎಷ್ಟು ಕಠಿಣವಾಗಿದೆ ನಿಮ್ಮ ಬಾಳು"

—ಶ್ರೀಧರ ದುಃಖದಿಂದ ಹೇಳಿದ.

"ಆದ್ದರಿಂದಲೇ ಈ ನನ್ನ ಕಠಿಣವಾದ ಬಾಳಿಗೆ ಏನೂ ಅರಿಯದ ಮತ್ತೊಬ್ಬರನ್ನು ನಾನಾಗಿ ತೊಡಗಿಸಿ ಕೊಳ್ಳುವ ಇಚ್ಛೆಯಿಲ್ಲ."

ಶ್ರೀಧರನಿಗೆ ಈ ಮಾತು ತಗುಲಿತು. ಲಲಿತ ತನ್ನನ್ನೇ ಕುರಿತು ಅನ್ನುತ್ತಿರುವಂತೆ ಭಾಸವಾಯಿತು.

ದೀರ್ಘವಾಗಿ ಉಸಿರೆಳೆದು ಆಕಾಶದ ಕಡೆ ನೋಡಿದ..

ಮಳೆಯಗಾಳಿಗೆ ಎದ್ದ ಅಲೆಗಳು ರಭಸದಿಂದ ಬಂದು ಕೆರೆಯದಂಡೆಗೆ ಅಪ್ಪಳಿಸುತ್ತಿದ್ದವು.

"ಅಲ್ಲಿ ನೋಡಿ ಆ ಬೆಟ್ಟದ ಮೇಲೆ ಮಳೆ ಸುರಿಯುತ್ತಿದೆ"—ಎಂದಳು ಲಲಿತ.

ಮೈಮೇಲೆ ಹನಿ ಬಿದ್ದಾಗ ಎಚ್ಚರವಾಯಿತು ಶ್ರೀಧರನಿಗೆ.

ಇಬ್ಬರೂ ಮೇಲೆದ್ದರು. ಸ್ವಲ್ಪ ದೂರ ಬರುವುದರಲ್ಲೇ ಮಳೆ ಸುರಿಯತೊಡಗಿತು.

# ೧೫

ಮುಂಗಾರು ಮಳೆ ಕೂರುವ ಲಕ್ಷಣಗಳು ಕಂಡುಬಂದವು. ಒಂದು ದಿನ ನಾಟಕವಾಡಿದರೆ ಎರಡು ದಿನ ರಜಾ ಮಾಡುವಂತೆ, ಮಳೆ ತೊಂದರೆ ಕೊಡಲು ಪ್ರಾರಂಭಿಸಿತು. ಒಂದು ತಿಂಗಳು ಮುಂದೆ ಬರಬೇಕಾದ ಮಳೆ ಮೇ ತಿಂಗಳ ಮೊದಲ ಭಾಗದಲ್ಲೇ ತನ್ನ ಪ್ರಭಾವವನ್ನು ಬೀರತೊಡಗಿತು.

ಜಾಗ್ರತೆ ಕಾಲುಕೀಳಲು ಸಿದ್ಧತೆಗಳನ್ನು ಮಾಡಿಕೊಂಡಿರಲಿಲ್ಲ ಕಂಪೆನಿಯವರು. ಬೆಚ್ಚಗಿರುವ, ಸಿದ್ಧವಾದ ಥಿಯೇಟರು ಹತ್ತಿರದ ಯಾವ ಊರಲ್ಲಿಯೂ ಲಭಿಸುವಂತಿರಲಿಲ್ಲ.

ಮಳೆಗಾಲದ ಮೋಡಮೊಂದಿಗೆ ನಾಟಕದವರ ಮನಸ್ಸೂ ಕತ್ತಲೆ ಗಟ್ಟಿತು. ಮುಂದೆ ಮೂರು ನಾಲ್ಕು ತಿಂಗಳು ಹೀಗೆ. ಕುಳಿತು ಉಣ್ಣಬೇಕು. ಆಗ ಹೊಟ್ಟೆ ಹೊರೆಯುವ ಮಾಲಿಕರಾರು.

ವಾರಕ್ಕೆ ಒಂದೋ ಎರಡೋ ಆಡುವ ನಾಟಕಗಳಿಗೂ ಕಲೆಕ್ಷನ್ ಬಿದ್ದು ಹೋಯಿತು. ಬಿತ್ತನೆ ಬೇಸಾಯಗಳ ಈ ಕಾಲದಲ್ಲಿ ನಾಟಕ ಯಾರಿಗೆ ಬೇಕು?

ಮತ್ತೊಮ್ಮೆ ಉಪವಾಸ ಇಣಕುಹಾಕತೊಡಗಿತು.

* * * *

ಮಧ್ಯಾಹ್ನ ಅಂಚೆಯವನು ಕಾಗದವೊಂದನ್ನು ತಂದುಕೊಟ್ಟ ಶ್ರೀಧರನಿಗೆ. ಮೇಲಿನ ವಿಳಾಸವನ್ನು ನೋಡಿದೊಡನೆ ಗಾಬರಿಯಾಯಿತು.

ಅದು ಅವನ ತಂದೆಯ ಕಾಗದ!....

ಶ್ರೀಧರ ಕಂಪೆನಿಗೆ ಬಂದ ಮೇಲೆ ಮನೆಗೆ ಕಾಗದವನ್ನೇ ಬರೆಯುತ್ತಿರಲಿಲ್ಲ. ಕಾಲೇಜನ್ನೇಕೆ ಬಿಟ್ಟೆಯೆಂದರೆ ಏನು ಉತ್ತರಕೊಡಬೇಕು ? ನಿನ್ನ ಸಾಧನೆ ಏನೆಂದು ಕೇಳಿದರೆ ಕಂಪೆನಿಯ ಸ್ಥಿತಿಗತಿಗಳನ್ನೇ ಅರಿಯದ ಅವರಿಗೆ ಯಾವ ರೀತಿ ಸಮಾಧಾನ ಪಡಿಸಬೇಕು ?

ಹೀಗಾಗಿ ಪತ್ರಗಳು ನಿಂತುಹೋಗಿದ್ದುವು.

ಶ್ರೀಧರ ನಡುಗುವ ಕೈಗಳಿಂದ ಕಾಗದವನ್ನೊಡೆದ. ಅವರು ಬರೆದಿದ್ದರು—

ಚಿ|| ಶ್ರೀಧರನಿಗೆ....

ಇಷ್ಟು ದಿನಗಳು ನನಗೆ ನಿನ್ನ ವಿಳಾಸ ತಿಳಿದಿರಲಿಲ್ಲ. ಕಾಗದ ಬರೆಯುವ ಅಗತ್ಯವೂ ಕಂಡು ಬರಲಿಲ್ಲವಾಗಿ ನಾವು ತಿಳಿಯುವ ಯತ್ನ ಮಾಡಲೂ ಇಲ್ಲ.

ನೀನು ಕಾಲೇಜನ್ನು ಬಿಟ್ಟು, ನಾಟಕದ ಕಂಪೆನಿಗಳಲ್ಲಿ ಅಲೆದಾಡುತ್ತಿದ್ದೀಯೆಂದು ಕೇಳಿ ನನಗೆ ತುಂಬಾ ವಿಷಾದವಾಗಿದೆ.

ಕಾಲೇಜನ್ನು ಬಿಟ್ಟದ್ದಕ್ಕಾಗಿ ಸಂಕಟವಿಲ್ಲ....ಆದರೆ ಕಂಪೆನಿಗಳಲ್ಲಿ ತೊಳಲುತ್ತಿರುವುದಕ್ಕಾಗಿ ಸಂಕಟಪಡಬೇಕಾಗಿದೆ.

ತಾವು ಹೇಳಹೋದರೆ "ಕಲೆ! "...."ಸೇವೆ! " ಎಂಬ ದೊಡ್ಡ ದೊಡ್ಡ ಮಾತುಗಳು ಹೊರಡುತ್ತವೆ. ನೀನು ಮಾತ್ರವಲ್ಲ—ಇಂದಿನ ಯುವಕರ ಮನೋಭಾವವೇ ಹೀಗಾಗಿಬಿಟ್ಟಿದೆ.

ಭಾವೋನ್ಮಾದಕ್ಕೂ, ಸತ್ಯಜೀವನಕ್ಕೂ ಭೇದವನ್ನರಿಯುವ ವಿವೇಚನೆ ಇಂದಿನ ಯುವಕರಲ್ಲಿರಲಿಲ್ಲ.

ಎಲ್ಲರೂ ಕವಿಗಳೇ! ಎಲ್ಲರೂ ಸಾಹಿತಿಗಳೇ! ಎಲ್ಲರೂ ನಟರೇ!

ಧ್ಯೇಯ ಕೆಟ್ಟದ್ದೆಂದು ನಾನು ಹೇಳುವುದಿಲ್ಲ. ಅದನ್ನನುಸರಿಸುವ ಮಾರ್ಗ ಶುದ್ಧವಾಗಿರಬೇಕು. ಹಿನ್ನೆಲೆಯ ಜೀವನ ಭದ್ರವಾಗಿರಬೇಕು.

ಜೀವನದ ಮಟ್ಟ ಉತ್ತಮವಾಗಿಲ್ಲದ ಮನುಷ್ಯನು ಮಹತ್ಕಾರ್ಯಗಳನ್ನು ಸಾಧಿಸಲಾರ. ಸಾಧಿಸಿದರೂ ತಕ್ಕ ಪ್ರತಿಫಲವನ್ನು ಹೊಂದಲಾರ.

ಜೀವನ....ಮೊದಲು! ಕಲೆ....ನಂತರ.

ನಿನ್ನ ಮಾರ್ಗಕ್ಕೆ ಅಡ್ಡಿ ಬರುವ ಹಕ್ಕು ನಮಗಿಲ್ಲವಾದರೂ, ಹಾಗಲ್ಲ ಹೀಗೆ ಎಂದು ಸೂಚಿಸುವ ಸ್ವಾತಂತ್ರ್ಯವಿದೆಯಷ್ಟೆ.

ಈ ಕಾಗದ ಬರೆಯುವ ಮುಖ್ಯ ಉದ್ದೇಶ—ಬರುವ ಭಾನುವಾರ ನಿನ್ನ ತಂಗಿಗೆ ಮದುವೆ ನಿಶ್ಚಯವಾಗಿದೆ. ಈ ಕಾಗದ ತಲುಪಿದ ಕೂಡಲೇ ಹೊರಟುಬರುತ್ತೀಯಾಗಿ ನಂಬಿದ್ದೇನೆ.

ಇತಿ—ಶಂ—

ತಾನು ಓದಿ ವೆಂಕಟೇಶಯ್ಯನಿಗೂ ಕಾಗದವನ್ನು ತೋರಿಸಿದ ಶ್ರೀಧರ. ಕಾಗದದ ಪ್ರತಿಯೊಂದು ಮಾತೂ ಅವರ ಮನಸ್ಸಿಗೆ ಹಿಡಿಯಿತು.

ಅವರೆಂದರು—

"ಈ ಕಾಗದ ನಿನಗೆ ಮಾತ್ರ ಬರೆದಿರುವುದಲ್ಲ, ನನಗೂ ಬರೆದಂತಿದೆ. ಇಲ್ಲಿರುವುದು ಕೆಲವೇ ವಾಕ್ಯಗಳಾದರೂ ಅದು ಸುಸಂಸ್ಕೃತ ಜೀವನದ ರಸಪಾಕ."

"ಈಗ ನಾನೇನು ಮಾಡಬೇಕು?"

"ನೀನು ಮನೆಗೆ ಹೊರಡಲೇ ಬೇಕು. ಈ ಕಾಗದ ಬಂದಿರುವುದು ನಿನ್ನ ಅದೃಷ್ಟವೆಂದು ತಿಳಿ."

"ಏಕೆ?"

"ಒಳ್ಳೆಯ ಸಮಯಕ್ಕೇ ಈ ಕಾಗದ ಬಂದಿದೆ. ಕಂಪೆನಿಗೂ ಕಷ್ಟದ ಕಾಲ ಸಮೀಪಿಸಿದೆ. ನಮಗೇನೋ ಇರದೆ ವಿಧಿಯಿಲ್ಲ."

"ಕಷ್ಟಕ್ಕೆ ನಾನು ಹೆದರುವುದಿಲ್ಲ."

"ಮದುವೆಗೆ?—ಅದಕ್ಕೂ ಹೋಗದಿದ್ದರೆ ಆ ಹೃದಯಗಳು ನೊಂದು ಕೊಳ್ಳುತ್ತವೆ. ಆ ನೋವು ನಿನ್ನ ಶ್ರೇಯಸ್ಸಿಗೇ ಒಳಿತಲ್ಲ."

"ಮುಂದೇನು ಮಾಡಲಿ?"

"ಕಂಪೆನಿ ನಡೆಯುವ ಭರವಸೆ ನನಗಿಲ್ಲ. ನಡೆದರೆ ಕಾಗದ ಬರೆ ಯುತ್ತೇನೆ, ಬಾ. ಇಂತರ ಯಾರಿಗೂ ಇಲ್ಲ."

"ನೀವೆಲ್ಲ ಏನುಮಾಡುತ್ತೀರಿ?...."

"ಯಾರು ಏನೇ ಮಾಡಲಿ, ನನಗಂತೂ ನಾಟಕದ ಕಂಪೆನಿ ಸಾಕಾಗಿ ಹೋಗಿದೆ. ಪ್ರತಿ ತಿಂಗಳು, ಪ್ರತಿ ದಿನ, ಪ್ರತಿ ಗಂಟೆ—ಮುಂದೇನು? ಮುಂದೇನು? ಅನ್ನಿಸುವ ಈ ಬಾಳಿನಿಂದ ಬೇಸರ ಬಂದುಬಿಟ್ಟಿದೆ. ಮತ್ತೇನಾ ದರೂ ಉದ್ಯೋಗ ಮಾಡುತ್ತೇನೆ."

"ಯಾವ ಉದ್ಯೋಗವನ್ನು ಮಾಡಲು ಸಾಧ್ಯ ವೆಂಕಟೇಶಯ್ಯ?"

—ಶ್ರೀಧರ ವೇದನೆಯಿಂದ ಕೇಳಿದ.

"ನೀನು ಹೇಳುವುದು ನಿಜ. ನಿತ್ಯವೂ ಬಣ್ಣ ಬಳಿದು ರೂಢಿಯಾಗಿ ರುವ ನಾವು, ಇದನ್ನು ಬಿಟ್ಟು ಮತ್ತೆ ಯಾವ ಉದ್ಯೋಗವನ್ನೂ ಮಾಡಲು ಅನರ್ಹರಾಗಿದ್ದೇವೆ. ಕಸಬನ್ನು ಮಾಡಲಾರದೇ ಬಿಟ್ಟ ಸೂಳೆಯರಂತೆ ನಮ್ಮ ಪಾಡು."

ಈ ಮಾತನ್ನಾಡುವಾಗ ವೆಂಕಟೇಶಯ್ಯನ ಹೃದಯದೊಳಗಿನ ತೀಕ್ಷ್ಣವಾದ ನೋವಿನ ಅರಿವಾಗದಿರಲಿಲ್ಲ ಶ್ರೀಧರನಿಗೆ. ಅವನು ಮಂಕನಂತೆ ನಿಂತಿದ್ದ. ವೆಂಕಟೇಶಯ್ಯನೇ ಮುಂದುವರಿದರು—

"ಆದರೂ ಹುಟ್ಟಿಸಿದ ದೇವರು ಹುಲ್ಲು ಮೇಯಿಸಲಾರ. ಯಾವುದಲ್ಲ ದಿದ್ದರೂ ರಸ್ತೆ ಬದಿಯಲ್ಲೊಂದು ಬೀಡಾ ಅಂಗಡಿ ಹಚ್ಚಿಬಿಡುತ್ತೇನೆ. ಬಹುಶಃ ಇದಕ್ಕಿಂತಲೂ ನೆಮ್ಮದಿಯಾಗಿ ಬಾಳುತ್ತೇನೆ."

—ವೆಂಕಟೇಶಯ್ಯ ಸಂಕಟದಿಂದ ದೃಢವಾಗಿ ಹೇಳಿದರು.

* * * *

"ನೀವು ಹೊರಟು ಬಿಡುತ್ತೀರಾ?"—ಎಂದಳು ಲಲಿತ ತುಂಬು ವೇದನೆಯಿಂದ.

"ಹೊರಡಲೇ ಬೇಕಾಗಿದೆ"—ಎಂದ ಶ್ರೀಧರ ಭಾರವಾದ ಹೃದಯ ದಿಂದ.

"ಮತ್ತೆ ನಮ್ಮ ಭೇಟಿ ಎಂದೋ?"

"ಹೀಗೇ ಕಂಪೆನಿಗಳಲ್ಲಿ...."

"ನೀವೆಲ್ಲಿ ಬರುತ್ತೀರಿ? ಮನೆಗೆ ಹೋದಮೇಲೆ ಇವೆಲ್ಲಾ ಮರೆತು ಹೋಗುತ್ತೆ."

ಲಲಿತಳ ಮಾತು ನಂಬಿಕೆಯಾಗಲಿಲ್ಲ ಶ್ರೀಧರನಿಗೆ—

"ಕಂಪೆನಿಗಲ್ಲದಿದ್ದರೂ ಕೊನೆಗೆ ನೀವಿರುವಲ್ಲಾದರೂ ಬಂದು ಬಿಡು ತ್ತೇನೆ."

ಲಲಿತ ಅಭಿಮಾನದಿಂದ ಶ್ರೀಧರನ ಮುಖವನ್ನು ನೋಡಿದಳು—

"ನಿಜವೇ?"

"ನಿಶ್ಚಯವಾಗಿ!"

"ಸ್ವಲ್ಪ ತಡೆಯಿರಿ"—ಎಂದು ಹೇಳಿ ಒಳಗೆ ಹೋದಳು ಲಲಿತ. ಮಡಿಸಿದ ಬಟ್ಟೆಯೊಂದನ್ನು ತಂದು ಶ್ರೀಧರನಿಗೆ ಕೊಟ್ಟಳು—

"ಇದು ನಿಮ್ಮ ಬಳಿ ಇರಲಿ"

"ಏನಿದು?"—ಎಂದು ಬಿಡಿಸಿದ ಶ್ರೀಧರ.

"ಸುಖವಿರಾಮ"—ಎಂದು ಅಂದವಾಗಿ ಬಿಡಿಸಲ್ಪಟ್ಟಿತ್ತು ಅಕ್ಷರಗಳು.

ಆಕರ್ಷಕವಾದ ಬಣ್ಣದಿಂದ ದಿಂಬಿನ ಕವರು ಶೋಭಿಸುತ್ತಿತ್ತು.

"ಒಳ್ಳೇ ಸಮಯದಲ್ಲೇ ನನಗೆ "ಸುಖವಿರಾಮ"ವನ್ನು ಕೊಟ್ಟಿರಿ. ಇದನ್ನು ನೀವು ನನಗಾಗಿ ಹಾಕುತ್ತಿದ್ದೀರೆಂದು ಇಷ್ಟು ದಿನವೂ ನನಗೆ ಅರಿವಾಗಲಿಲ್ಲ."

"ಹೆಂಗಸರ ಹೃದಯದ ಅರಿವಾಗಬೇಕಾದರೆ ನಿಮಗಿನ್ನೂ ಬಹಳ ದಿವಸಗಳು ಬೇಕು."

—ಲಲಿತ ಕಂಬನಿತುಂಬಿದ ಕಣ್ಣುಗಳಿಂದ ಶ್ರೀಧರನನ್ನು ನೋಡಿದಳು.

ಅವನ ಹೃದಯವನ್ನು ಹಿಂಡಿದಂತಿತ್ತು ಈ ನೋಟ. ಕಣ್ಣಲ್ಲಿ ಉಕ್ಕಿಬರುವ ನೀರನ್ನು ತಡೆಗಟ್ಟಿ ಹೇಳಿದ ಶ್ರೀಧರ—

"ನಾನು ಹೊರಡಲೇ?...."

"ಹೂ...."—ಎಂದಳವಳು ಸೆರಗಿನಿಂದ ಕಣ್ಣನ್ನು ಒರೆಸಿಕೊಳ್ಳುತ್ತಾ.

ಶ್ರೀಧರ ತಲೆ ತಗ್ಗಿಸಿಕೊಂಡೇ ಮುಂದೆ ನಡೆದ. ರಸ್ತೆಯ ತಿರುವಿನಲ್ಲೊಮ್ಮೆ ನಿಂತು ಕೊನೆಯಬಾರಿ ಕಂಪೆನಿಯ ಕಡೆ ತಿರುಗಿ ನೋಡಿದ.

ಎದುರುಗಡೆ ಕಂಬಕ್ಕೊರಗಿ ಅವನನ್ನೇ ನೋಡುತ್ತಾ ನಿಂತಿದ್ದಳು ಲಲಿತ ಪ್ರತಿಮೆಯಂತೆ.

ಅವಳ ಕಣ್ಣಿನಲ್ಲಿ ಹರಿಯುವ ನೀರು ಯಾರಿಗೂ ಕಾಣಿಸುವಂತಿರಲಿಲ್ಲ.

ಅವಳ ಹಿಂಬದಿ ವೆಂಕಟೇಶಯ್ಯ ನಿಂತಿದ್ದರು—ನೆಟ್ಟನೋಟದಿಂದ ಮೋಡ ಮುಚ್ಚಿದ ಆಗಸವನ್ನು ದಿಟ್ಟಿಸುತ್ತಾ.

## ೨೬

ಮನೆಯಲ್ಲಿ ಮದುವೆಯ ವೈಭವ. ಶ್ರೀಧರನ ಮನಸ್ಸು ಅಲೆದಾಡುತ್ತಿದ್ದುದು ನಾಟಕದಲ್ಲಿ. ಬಂಧು ಬಳಗದವರೆಷ್ಟು ಮಂದಿಯಿದ್ದರೂ, ಶ್ರೀಧರನ ಕಣ್ಣು ವೆಂಕಟೇಶಯ್ಯನನ್ನೇ ಕಾಣುತ್ತಿತ್ತು. ಅವರ ಸಹೃದಯತೆ, ವಾತ್ಸಲ್ಯದ ವ್ಯಕ್ತಿತ್ವ ಇವನ್ನು ನೆನೆಸಿಕೊಂಡಾಗ, ಅಭಿಮಾನ ಉಕ್ಕಿ ಬರುತ್ತಿತ್ತು. ಅವರ ದಾರುಣ ಜೀವನದ ಬಗ್ಗೆ ಅನುಕಂಪವಾಗುತ್ತಿತ್ತು.

ಲಲಿತ!........

ಅವಳದೂ ಒಂದು ರುದ್ರಜೀವನ! ಹರೆಯದ ಹೊಸಿಲಿನಲ್ಲಿ, ಅಜ್ಞಾನದಿಂದ, ಅವಿವೇಕದಿಂದ ಇಟ್ಟ ತಪ್ಪು ಹೆಜ್ಜೆ—ಅವಳ ಜೀವನವನ್ನೇ ಮತ್ತೊಂದು ಮಾರ್ಗಕ್ಕೆ ಒಯ್ದಿದೆ. ಆ ಬಾಳು ಮತ್ತೆ ಬೆಳಗುವುದು ಸಾಧ್ಯವೇ.

ಮದುವೆಯ ಗಡಿಬಿಡಿಗಳು ಮುಗಿದವು. ಹತ್ತು ಹದಿನೈದು ದಿನಗಳ ನಂತರ ಶ್ರೀಧರ ಲೇಖನಿ ಹಿಡಿದ.

ಪೂಜ್ಯ ವೆಂಕಟೇಶಯ್ಯನವರಿಗೆ—

ಅಲ್ಲಿಂದ ಹೊರಟವನು ನೇರವಾಗಿ ಊರಿಗೆ ಬಂದು ತಲುಪಿದೆ. ಇಲ್ಲಿ ಮದುವೆ ವೈಭವದಿಂದ ನಡೆಯಿತು. ಈ ಗಡಿಬಿಡಿಯಲ್ಲಿ ಕಾಗದ ಬರೆಯಲು ಅವಕಾಶವಾಗದಿದ್ದಕ್ಕಾಗಿ ನಿಮ್ಮ ಕ್ಷಮೆ ಕೇಳಿಕೊಳ್ಳುತ್ತೇನೆ.

ನಾಟಕದ ಕಂಪೆನಿಯಿಂದ ತಿರುಗಿ ಊರಿಗೆ ಬಂದಾಗ ನನಗಾದ ಅನುಭವ ಅತಿ ವಿಚಿತ್ರವಾದದ್ದು. ಬಸ್ಸಿನಿಂದಿಳಿಯುವಾಗಲೇ ನಮ್ಮ ಜನ ನನ್ನನ್ನು ನೋಡುವ ನೋಟ ತುಂಬ ವಕ್ರವಾಗಿತ್ತು.

ಕದ್ದು ಜೈಲಿಗೆ ಹೋದ ಕಳ್ಳ, ತನ್ನ ಶಿಕ್ಷೆಯನ್ನನುಭವಿಸಿ ಹೊರಗೆ ಬರುವಾಗಲೂ ಜನಗಳ ನೋಟದ ಈ ತೀಕ್ಷ್ಣತೆಯನ್ನನುಭವಿಸಲಾರ. ಕಳ್ಳನನ್ನು ನೋಡುವಂತೆ ನನ್ನನ್ನು ನೋಡುವ ನಮ್ಮ ಊರಿನವರ ತೀಕ್ಷ್ಣವಾದ ನೋಟ ನನ್ನನ್ನಿರಿಯುತ್ತಿತ್ತು.

"ಯಾವುದೋ ನಾಟಕದ ಕಂಪೆನಿಯಲ್ಲಿದ್ದನಂತೆ"

—ಎಂಬ ತಾತ್ಸಾರದ ನೋಟ ಒಂದು ಕಡೆಯಾದರೆ,

"ಎಂತಹ ಹುಡುಗ ಹೇಗಾಗಿ ಬಿಟ್ಟ!"

—ಎಂಬ ಕನಿಕರದ ದೃಷ್ಟಿ ಮತ್ತೊಂದು ಕಡೆ.

ಆ ತಾತ್ಸಾರವನ್ನಾದರೂ ಅನುಭವಿಸ ಬಲ್ಲೆ, ಈ ಅನುಕಂಪವನ್ನು ಸಹಿಸಲಾರೆ.

ರಸ್ತೆಯಮೇಲೆ ನಾನು ನಡೆಯುವಾಗ, ಕಳ್ಳಪೇಟೆಯಲ್ಲೇ ಡೊಳ್ಳು ಬೆಳಸಿಕೊಂಡ--ಕಟ್ಟೆಪುರಾಣದ ಪ್ರಭೃತಿಗಳು, ನನ್ನನ್ನು ನೋಡಿ—ತಮ್ಮ ಮೀಸೆಯ ಮರೆಯಲ್ಲಿ ನಗುವಾಗ, ಹಲ್ಲುಗಳು ಏಕೆ ಉದುರವೇ ನಿಂತಿವೆ ಎನ್ನುವಷ್ಟು ಕೋಪ ಬರುತ್ತಿದೆ.

ನಾನು ಹೇಗಿದ್ದರೆ ಇವರಿಗೇನು? ನಾನು ಏನಾದರೆ ಇವರಿಗೇನು? ಎಮ್ಮ ಸೊಣಗಂಗೆ ಇವರ ಕುನ್ನಿಯು ಕೊಡಬೇಕೇ?

ನನಗಂತೂ ಇದಾವುದರ ಲಕ್ಷ್ಯವೂ ಇಲ್ಲ. ಆದರೆ ನಮ್ಮ ತಂದೆಯ ವರಿಗೆ....ಸದಾಉನ್ನತ ಜೀವನವನ್ನೇ ಬಯಸುವ ಅವರ ಮನಸ್ಸಿಗೆ....ನನ್ನ ವರ್ತನೆಯಿಂದ ಬಹಳ ಖೇದವಾಗಿರಬೇಕು. ಅವರ ನೊಂದ ಮುಖವನ್ನು ನೋಡಿದಾಗಲೆಲ್ಲಾ ನಾನೇನೋ ಮಹಾ ಅಪರಾಧವನ್ನು ಮಾಡಿದಂತೆನ್ನಿಸು ತ್ತಿದೆ. ನನ್ನಬಗ್ಗೆ ಹೆಮ್ಮೆಯಿಂದಿದ್ದ ಅವರು ಈಗ ನನ್ನ ವಿಚಾರ ಬಂದಾಗ ತಲೆ ತಗ್ಗಿಸುವರಂತೆ.

ಇದು ತಿಳಿದು ಬಂದಾಗ ನನಗೆ ಅತೀವ ವೇದನೆಯಾಗುತ್ತಿದೆ. ನಾನು ಮಾಡುತ್ತಿರುವುದು ಒಳ್ಳೆಯ ಕೆಲಸವೆಂದು ಸಾಧಿಸಲಾರದ ನನ್ನ ದೌರ್ಬಲ್ಯಕ್ಕಾಗಿ ಮರುಗುತ್ತಿದ್ದೇನೆ.

ನಾಟಕದ ಜೀವನ ಕಠಿನವಾಗಿರುವುದು ನಿಜ. ಆದರೂ ಆ ಕಾಠಿನ್ಯ ವನ್ನೇ ಬಯಸುತ್ತಿದೆ ನನ್ನಮನಸ್ಸು.

ಸಾಯಂಕಾಲದ ಹೊಂಬಿಸಿಲು ಹುಲ್ಲು ಮೈದಾನದ ಮೇಲಾಡುವಾಗ, ಅದರ ಮಧ್ಯೆನಿಂತ ನಮ್ಮ ಥಿಯೇಟರು ನೆನಪಿಗೆ ಬರುತ್ತಿದೆ.

ಕತ್ತಲು ಕತ್ತಲಾದಾಗ, ಅದರ ಮೇಲೆ ಸಾಲುಸಾಲಾಗಿ ಉರಿಯುವ ವಿದ್ಯುದ್ದೀಪಗಳು ಕಣ್ಣಿಗೆ ಕಟ್ಟಿದಂತಾಗುತ್ತಿದೆ. ಪ್ರಚಾರಕ್ಕಾಗಿ ಹಾಕುವ ಧ್ವನಿಮುದ್ರಿಕೆಗಳ ಸುಮಧುರಗಾಯನ ಕಿವಿಯಲ್ಲಿ ಮೊಳಗುತ್ತಿದೆ.

ರಾತ್ರಿ!....ಗ್ರೀನ್‌ರೂಮಿನಲ್ಲಿ, ಜೀವನದ ಕಷ್ಟಗಳನ್ನೆಲ್ಲಾ ಮರೆತು

ವಿನೋದವಾಗಿ ಹರಟುತ್ತಾ ಕನ್ನಡಿಯ ಮುಂದೆ ಕುಳಿತು "ಮೇಕಪ್" ಮಾಡಿಕೊಳ್ಳುವಾಗ, ಕಳೆಯುವ ಕಾಲ—ಅದೆಷ್ಟು ಮಧುರ!

ಮುಂದೆ ಪರದೆ ಮೇಲಕ್ಕೆದ್ದಾಗ, ನಾವು ನಾವಾಗಿರದೇ ಮತ್ತೊಬ್ಬರಾಗಿ, ನಮ್ಮನ್ನೇ ನಾವು ಮರೆಯುವ ಆ ರಸನಿಮಿಷಗಳು ನಮಗಲ್ಲದೆ ಮತ್ತಾರಿಗೆ ಲಭ್ಯವಿದೆ?

ಎಷ್ಟು ಕಣ್ಣುಗಳು ನಮ್ಮನ್ನು ನೋಡುತ್ತವೆ! ಎಷ್ಟು ಮುಖಗಳು ಅರಳುತ್ತವೆ! ನಗುವವರೆಷ್ಟು ಮಂದಿ! ಅಳುವವರೆಷ್ಟು ಮಂದಿ! ಭೇಷ್ ಎಂದು ಬೆನ್ನುತಟ್ಟುವವರೆಷ್ಟು ಮಂದಿ!

ಇವೆಲ್ಲಾ ಈ 'ಕೊರಮ'ರಿಗೆ ಹೇಗೆ ಅರ್ಥವಾಗಬೇಕು? ನಿಲುಕದ ಹಣ್ಣು ಹುಳಿಯಾಗಿ ಕಾಣುವಂತೆ, ನಮ್ಮ ಜೀವನ ಇತರರ ತಾತ್ಸಾರಕ್ಕೆ ಸಿಲುಕಿ ಕೊಂಡಿದೆ ಎನ್ನಿಸುತ್ತಿದೆ ನನಗೆ.

ನಾಲ್ಕು ಗೋಡೆಗಳ ಮಧ್ಯೆ—ಹಾಸಿಗೆಯ ಮೇಲುರುಳಿ....ನಿಮಿಷಗಳನ್ನೆಣಿಸುವಾಗ, ಇವೆಲ್ಲವನ್ನೂ ಭೇದಿಸಿಕೊಂಡು ಹಾರುವ ದಿನ ಎಂದೋ ಎಂದು ತವಕ ಪಡುತ್ತಿದೆ ಹೃದಯ.

ನಿಮ್ಮ ಸ್ಥಿತಿ ಏನು? ಮುಂದಿನ ಕ್ಯಾಂಪು ಯಾವುದು? ನಾನು ಏನು ಮಾಡಬೇಕು? ಎಂಬುದಕ್ಕೆ ಕೂಡಲೇ ಉತ್ತರ ಬರೆಯಿರಿ—

ಇಂತೀ ನಮಸ್ಕಾರಗಳು—

—ಶ್ರೀಧರ.

ಒಂದೇ ಕಾಗದ ಬರೆದರೆ ಸಾಲದು. ಜೊತೆಯಲ್ಲಿ ಲಲಿತಳಿಗೂ ಬರೆಯಬೇಕು. ಅವಳಿಗೆ ಏನೆಂದು ಬರೆಯುವುದು?

ನಾನು ಮತ್ತು ಅವಳಿದ್ದ ರೀತಿ ವಿಚಿತ್ರ. ಇಬ್ಬರೂ ತುಂಬಾ ಆತ್ಮೀಯತೆಯಿಂದಿದ್ದೆವು. ಈ ಆತ್ಮೀಯತೆಯೇ ಪ್ರೇಮವೇ?

ಅದೇ ಪ್ರೇಮವಾಗುವ ಪಕ್ಷಕ್ಕೆ....ಅಷ್ಟು ದಿನಗಳು ನಾವು ಒಂದೆಡೆಯಲ್ಲಿದ್ದರೂ, ಅಷ್ಟು ಘಟನೆಗಳು ಒದಗಿ ಬಂದರೂ, ನಮ್ಮಿಬ್ಬರನ್ನೂ ಬಂಧಿಸುವ ಪ್ರಬಲತೆ ಅದಕ್ಕೇಕೆ ಬರಲಿಲ್ಲ.

ಇದು ಪ್ರೇಮ ಶೈಥಿಲ್ಯವೇ? ಅಥವಾ ಅವಳ ಬಾಳಹಿನ್ನೆಲೆಯ ಹೊಡೆತದ ಪರಿಣಾಮವೇ?

ಏನೂ ಇರಲಿ. ಕಾಗದ ಬರೆಯುವಾಗ ಇದನ್ನೆಲ್ಲಾ ಯೋಚಿಸಿ ತಲೆ ಬಿಸಿ ಮಾಡಿಕೊಳ್ಳಬೇಕಾದ ಅಗತ್ಯವೇನಿದೆ? ಲೋಕರೂಢಿಯಂತೆ ಬರೆದರಾಯಿತು. ಅವಳ ಉತ್ತರವನ್ನು ನೋಡಿ ಮುಂದೆ ಯೋಚಿಸೋಣ.

ಶ್ರೀಧರ ಬರೆಯತೊಡಗಿದ.

ಪ್ರೀತಿಯ ಸ್ನೇಹಿತೆ....ಲಲಿತೆ....ಗೆ!—

ನೀವು ಯಾರೋ? ನಾನು ಯಾರೋ? ಆದರೂ ನಾವಿಬ್ಬರೂ ಒಂದೆಡೆ ಸೇರಿದೆವು. ಆಶ್ಚರ್ಯಕರವಾದ ರೀತಿಯಲ್ಲಿ ನಮ್ಮ ಪರಿಚಯ ಬೆಳೆದು ವಿಶ್ವಾಸ ಬೇರೂರಿತು.

ನಾನು ಅಂದು ಹೊರಟುಬರುವಾಗ, ನಿಮ್ಮನ್ನಗಲಿರುವುದು ಇಷ್ಟು ಸಂಕಟಕರವೆಂದು ನನಗನ್ನಿಸಿರಲಿಲ್ಲ. ಸಧ್ಯದಲ್ಲೇ ಹಿಂದಿರುಗುವೆನೆಂದು ಸಮಾಧಾನದಿಂದ ಹೊರಟುಬಂದೆ.

ಈಗ ಕುಳಿತಲ್ಲಿ ನಿಂತಲ್ಲಿ ನಿಮ್ಮ ನೆನಪು ಬರುತ್ತಿದೆ. ನಿಮ್ಮ ಮಾತು ....ನಿಮ್ಮ ನೋಟ....ನಿಮ್ಮ ಸಾಮೀಪ್ಯ ಇವಕ್ಕಾಗಿ ಮನಸ್ಸು ಪರಿತಪಿಸುತ್ತಿದೆ.

ಹೀಗೇಕೆ ಆಗುತ್ತಿದೆಯೆಂದು ನನಗೆ ಅರ್ಥವಾಗುತ್ತಿಲ್ಲ. ನಿಮಗೂ ಹೀಗೇ ಆಗಿರಬಹುದೋ ಏನೋ ಎನ್ನಿಸುತ್ತಿದೆ.

ಕವಿಗಳು ವರ್ಣಿಸುವ "ವಿರಹ" ಪ್ರಾಯಶಃ ಇದೇ ಇರಬಹುದು. ಹೊಗೆಯಿದ್ದಲ್ಲಿ ಬೆಂಕಿಯಿರುವಂತೆ ವಿರಹವಿದ್ದಲ್ಲಿ ಪ್ರೇಮವಿರಬೇಕು....ಅಲ್ಲವೆ?....

ಹುಚ್ಚು ಹುಚ್ಚಾಗಿ ಬರೆಯುತ್ತಿದ್ದೇನೆಂದು ಕುಪಿತರಾಗಬೇಡಿ. ಹುಚ್ಚಾಗಿ ವರ್ತಿಸಿದಾಗ ನನ್ನನ್ನು ನೀವು ಕ್ಷಮಿಸಿದ್ದೀರಿ. ಈಗಲೂ ನನ್ನ ತಪ್ಪುಗಳಿದ್ದರೆ ಕ್ಷಮಿಸುವ ವಿಶಾಲ ಹೃದಯ ನಿಮಗಿರುವುದೆಂಬ ವಿಶ್ವಾಸದಿಂದ ಈ ಪತ್ರ ಬರೆದಿದ್ದೇನೆ.

ಕೂಡಲೇ ಕಾಗದ ಬರೆಯಿರಿ.

ಇಂತೀ—ವಿಶ್ವಾಸಿ—

* * * *

ಕಾಗದವನ್ನು ಪೋಸ್ಟ್ ಮಾಡಿದ ಶ್ರೀಧರ. ಎರಡು ದಿನ ಬಿಟ್ಟು ಉತ್ತರದ ನಿರೀಕ್ಷೆಯಿಂದ ಅಂಚೆ ಕಛೇರಿಗೆ ಹೋದ, ಅಂಚೆಯವನನ್ನು

ಕಾಯುವ ತಾಳ್ಮೆಯೂ ಇಲ್ಲದೆ.

ಎರಡು ದಿನ—ನಾಲ್ಕು ದಿನ—ವಾರ ಕಳೆಯಿತು. ಯಾರಿಂದಲೂ ಉತ್ತರ ಬರಲಿಲ್ಲ. ಕೊನೆಗೊಂದು ದಿನ ಶ್ರೀಧರ ಬರೆದ ಎರಡೂ ಕಾಗದಗಳೂ ವಾಪಸಾದುವು. ಜೊತೆಯಲ್ಲಿ ಮತ್ತೊಂದು ಕಾಗದವಿತ್ತು. ಅದು ಬೇಲೂರಿನಲ್ಲೇ ಇರುವ, ನಾಟಕದ ಕಂಪೆನಿಯವರೊಡನೆ ನಿಕಟಸಂಪರ್ಕದಿಂದಿದ್ದ ಫೋಟೋಗ್ರಾಫರ್ ಗುರುಜೋಷಿಯವರದು. ಅವರು ಬರೆದಿದ್ದರು.—

ಶ್ರೀಯುತ ಶ್ರೀಧರರಾಯರಿಗೆ!....

ನೀವು ವೆಂಕಟೇಶಯ್ಯ ಲಲಿತರಿಗೆ ಬರೆದಿರುವ ಎರಡೂ ಕಾಗದಗಳನ್ನು ಪೋಸ್ಟುಮ್ಯಾನ್ ನನಗೆ ತಂದು ತೋರಿಸಿದ. ಅವರ ವಿಳಾಸ ತಿಳಿಸಿರೆಂದು ಕೇಳಿದ. ನನಗೂ ಅವರುಗಳ ವಿಳಾಸ ತಿಳಿದಿಲ್ಲವಾದ್ದರಿಂದ ನಿಮ್ಮ ಕಾಗದಗಳನ್ನು ವಾಪಸ್ ಹಾಕಿಸಿದ್ದೇನೆ.

ನೀವು ಹೊರಟುಹೋದ ಮರುದಿನ ಬೆಳಗ್ಗೆ ವೆಂಕಟೇಶಯ್ಯನಿಗೆ ಮನೆಯಿಂದ ಟೆಲಿಗ್ರಾಂ ಬಂತು. ಅವರ ಹೆಂಡತಿಗೆ ಖಾಯಿಲೆ ಉಲ್ಬಣವಾಗಿ ಆಸ್ಪತ್ರೆಗೆ ಸೇರಿಸಿದ್ದಾರಂತೆ. ಕೂಡಲೇ ಬನ್ನಿ ಎಂದು ತಂತಿ ಕಳಿಸಿದ್ದರು.

ಅವತ್ತು ಸಂತೆ. ನಾಲ್ಕು ಕಾಸು ಕಾಣುವ ದಿನ. ವೆಂಕಟೇಶಯ್ಯ ಇಲ್ಲದಿದ್ದರೆ ನಾಟಕವೇ ನಡೆಯುವಂತಿರಲಿಲ್ಲ. ಕಂಪೆನಿಯ ಸ್ಥಿತಿ ನಿಮಗೆ ತಿಳಿದಿದೆ. ಕೂಡಲೇ ಹೊರಡಲು ಬಸ್ಸು ಛಾರ್ಜೂ ಅವರ ಬಳಿ ಇರಲಿಲ್ಲವೆಂದು ಕಾಣುತ್ತದೆ. ರಾತ್ರಿ ನಾಟಕ ಮುಗಿಸಿಕೊಂಡೇ ಹೊರಡುವುದೆಂದು ತೀರ್ಮಾನಿಸಿದರು.

ಇದ್ದಕ್ಕಿದ್ದಂತೆಯೇ ಮಧ್ಯಾಹ್ನ ವಿಪರೀತ ಮಳೆ ಪ್ರಾರಂಭವಾಯಿತು. ಎಡಬಿಡದೆ ಸುರಿಯಿತು. ಸಾಯಂಕಾಲದ ವೇಳೆಗೆ ನಿಂತುಹೋಯಿತು. ಆಕಾಶ ನಿರ್ಮಲವಾಯಿತು.

ನಾಟಕದವರಿಗೆ ಮತ್ತೆ ಬೆಳಕು ಕಂಡಂತಾಯಿತು. ನಾಟಕ ಆಡದೇ ವಿಧಿಯಿರಲಿಲ್ಲ. ಸ್ಟೇಜು ಕೆರೆಯಂತಾಗಿತ್ತು. ಕುರ್ಚಿ ಹೊಂಡದ ತುಂಬಾ ನೀರು ತುಂಬಿಕೊಂಡಿತ್ತು.

ಆದರೂ ನಾಟಕದವರು ಧೈರ್ಯ ಮಾಡಿದರು. ರಾತ್ರಿಯೊಳಗೆ

ಅಷ್ಟೊಂದು ನೀರನ್ನು ಖಾಲಿಮಾಡುವ ಧೈರ್ಯ ನನಗಿರಲಿಲ್ಲ. ವೆಂಕಟೇಶಯ್ಯ ಮುಂತಾದವರೆಲ್ಲಾ ಕೆಲಸಕ್ಕೆ ಕೈಕೊಟ್ಟರು. ಅವರ ಜೊತೆಯಲ್ಲಿ ನಾನೂ ಸೇರಿಕೊಂಡಿದ್ದೆ. ಕಂಪೆನಿಯಲ್ಲಿದ್ದ ಎಲ್ಲರೂ ಡಬ್ಬ....ಟಬ್ಬುಗಳಲ್ಲಿ ನೀರನ್ನು ತುಂಬಿ ಹೊರಗೆ ಚೆಲ್ಲಿದರು. ರಾತ್ರಿ ಎಂಟು ಗಂಟೆಯ ವೇಳೆಗೆ ನಮ್ಮ ಪ್ರಯತ್ನಕ್ಕೆ ಯಶಸ್ಸು ದೊರೆಯಿತು.

ನೀರು ಖಾಲಿಯಾಯಿತು.

ಕುರ್ಚಿಗಳನ್ನು ಒರೆಸಿ, ಹತ್ತಿರದ ಮಿಲ್ಲಿನಿಂದ ಬತ್ತದ ಹೊಟ್ಟನ್ನು ತಂದು ಸ್ಟೇಜಿನ ತುಂಬಾ ಹರಡಿದೆವು. ಒದ್ದೆ ಮುದ್ದೆಯಾದ ಪರದೆ ಸೀನರಿಗಳನ್ನು ಬಿಡಿಸಿ ಕೊಡವಿದೆವು. ಸಂತೆಯ ದಿನ ಹೇಗಾದರೂ ನಾಲ್ಕು ಕಾಸು ಕೂಡಬಹುದೆಂಬ ಭರವಸೆಯಿಂದ ನಿರೀಕ್ಷಿಸಿದೆವು.

ಬುಕಿಂಗ್ ಆಫೀಸು ತೆರೆಯಿತು. ನಿರೀಕ್ಷೆಯಂತೆ ಜನರೂ ಬಂದರು. ಟಿಕೆಟ್ ತೆಗೆದುಕೊಂಡು ಒಳಗೆ ಕುಳಿತಿದ್ದರು. ಗ್ರೀನ್‌ರೂಮಿನಲ್ಲಿ ಎಲ್ಲರೂ ಮೇಕಪ್ ಮಾಡಿಕೊಂಡಿದ್ದರು.

ಇನ್ನೇನು ನಾಟಕ ಪ್ರಾರಂಭವಾಗಬೇಕು. ಅಷ್ಟರಲ್ಲಿ ಪುನಃ ಮೋಡ ಕಟ್ಟಿತು. ಹನಿಯುದುರಿತು. ಹುಚ್ಚು ಮಳೆ ಸುರಿಯ ತೊಡಗಿತು.

ದೇವರಿಗೂ ನಾಟಕದವರ ಮೇಲೆ ಕೋಪವಿರಬೇಕು. ಬಂದ ಕಾಸನ್ನೂ ಹಿಂದೆ ಕೊಟ್ಟು ತಲೆಯ ಮೇಲೆ ಕೈ ಹೊರುವಂತಾಯಿತು.

ಹಚ್ಚಿದ ಬಣ್ಣ ಅಳಿಸಲೂ ಬಿಡುವು ಕೊಡದಂತೆ ಮಳೆ ಬಾರಿಸತೊಡಗಿತು. ತಟ್ಟೆಯಿಂದ ಸುರಿಯುವ ವರ್ಷಧಾರೆಯಿಂದ ತಪ್ಪಿಸಿ ಕೊಳ್ಳಲು ನಟರು ಪರದೆ ಬಟ್ಟೆಗಳನ್ನಾಶ್ರಯಿಸಿದರು.

ರಾತ್ರಿ—ಹನ್ನೊಂದು ಗಂಟೆಗೆ ಮಳೆಬಿಟ್ಟಿತು. ಹಚ್ಚಿದ ಬಣ್ಣವನ್ನಳಿಸಿ ಹೊರಬಂದರು ನಾಟಕದವರು.

ಈ ಘಟನೆಯಿಂದ ನಿಮ್ಮ ವೆಂಕಟೇಶಯ್ಯನ ಮನಸ್ಸು ಮುರಿದು ಹೋಗಿರಬೇಕು. ನೀರು ಎತ್ತಿ ಎತ್ತಿ ಅವರು ಅತಿಯಾಗಿ ಬಳಲಿದ್ದರು. ಮನೆಯಿಂದ ಬಂದ ಟೆಲಿಗ್ರಾಂನಿಂದಲೂ ಕಳವಳ ಗೊಂಡಿದ್ದರು. ಅಂದು ಅವರು ಹುಚ್ಚರಂತಾಗಿದ್ದರು.

ಎಲ್ಲರೂ ಮರುದಿನವೇ ಹೊರಡುವ ಏರ್ಪಾಡು ಮಾಡಿಕೊಂಡರು.

ಛಾರ್ಜಿಗಾದರೂ ಹಣಬೇಕಲ್ಲ. ಪರದೆ ಸೀನರಿಗಳನ್ನೇ ಇಲ್ಲಿ ಕಂಟ್ರಾಕ್ಟರರ ಬಳಿ ಒತ್ತೆಯಿಟ್ಟಿದ್ದಾರೆ. ಸ್ವಲ್ಪ ಸ್ವಲ್ಪ ಹಣವನ್ನು ಹಂಚಿಕೊಂಡು ಎಲ್ಲರೂ ಹೊರಟು ಹೋಗಿದ್ದಾರೆ.

ಮದ್ದೂರಾಯರು ಬಹುಶಃ ಬೀರಣ್ಣನ ಕಂಪೆನಿಗೆ ಸೇರಿರಬೇಕು. ಉಳಿದ ಕೆಲವರು ಹುಬ್ಬಳ್ಳಿಗೆ "ಲಲಿತ ಕಲಾ ಮಂಡಳಿ" ಯವರೊಡನೆ ಹೋದರೆಂದು ಕೇಳಿದೆ. ಆದರೆ ವೆಂಕಟೇಶಯ್ಯನ ಪತ್ತೆ ಸಿಗಲಿಲ್ಲ. ಲಲಿತಮ್ಮ ನವರೂ ಎಲ್ಲಿದ್ದಾರೋ ತಿಳಿಯದು.

ನೀವು ಆಡಿಹೋದ ನಾಟಕಗಳು ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತೆ ಕಾಣುತ್ತಿದೆ. ನಿಮ್ಮ ದೌರ್ಭಾಗ್ಯಕಾಗಿ ದುಃಖವಾಗುತ್ತಿದೆ.

ಕಲೆಗಾಗಲೀ ಕಲಾವಿದರಿಗಾಗಲೀ ಇದು ಕಾಲವಲ್ಲ. ಕನ್ನಡ ರಂಗ ಭೂಮಿಯ ಇಂದಿನ ಈ ದುರವಸ್ಥೆಗಾಗಿ ಕಣ್ಣೀರಿಡುತ್ತಿದ್ದೇನೆ.

ಇಂತೀ ನಮಸ್ಕಾರಗಳು.

ಗುರುಜೋಷಿ.

ಶ್ರೀಧರ ಕಾಗದವನ್ನೋದಿದ. ಗಳಗಳನೆ ಅಳುವಂತಾಯಿತು. ಈಗ ತಾನೇನು ಮಾಡಬೇಕು? ಯಾರನ್ನು ಆಶ್ರಯಿಸಬೇಕು? ಕಲೆಯ ಹಂಬಲ ದಿಂದ ಮತ್ತೆ ಹೊರಟರೆ, ಮತ್ತೆ ಮತ್ತೆ ಹೀಗಾದರೆ?....ತನ್ನ ಪಾಡೇನು?

ನಾಟಕ !........

ನಮ್ಮಲ್ಲಿ ಇದರ ಭವಿಷ್ಯ ಮುಗಿದು ಹೋಯಿತೆ? ಈ ದುರ್ದೆಸೆಯಿಂದ ನಾಟಕದವರು ಮತ್ತೆ ತಲೆಯೆತ್ತಲಾರರೇ?

ಪಾಪ!....ಅದನ್ನೇ ವೃತ್ತಿಯೆಂದು, ಜೀವನಕ್ಕಾಗಿ ನಾಟಕವನ್ನಾ ಶ್ರಯಿಸಿದ ಬಡಪಾಯಿಗಳ ಪಾಡೇನು?

ಮತ್ತೆ ಯಾವ ವೃತ್ತಿಯನ್ನೂ ಮಾಡಲರಿಯದ ಈ ನಿರಾಶ್ರಿತರಿಗೆ ಸರ್ಕಾರದವರಾದರೂ ಆಶ್ರಯಕೊಟ್ಟರೆ ನಾಟಕದವರು, ನಾಮ ಮಾತ್ರ ಕ್ಕಾದರೂ ಉಳಿದು ಕೊಂಡಾರು.

ಕಾಗದವನ್ನು ಮಡಿಚಿ ಜೇಬಿನಲ್ಲಿ ಹಾಕಿ ಕೊಂಡ. ಅಂಚೆ ಕಛೇರಿಯ ಮೆಟ್ಟಲಿಳಿದು ರಸ್ತೆಗೆ ಬಂದಾಗ, ಪುನಃ ವೆಂಕಟೇಶಯ್ಯ–ಲಲಿತರ ನೆನಪಾ ಯಿತು.

"....ಪಾಪ! ಅವರೂ ಹೀಗೆಯೇ ತೊಳಲಬೇಕೇ. ಬರೆಯಮೇಲೆ ಬರೆಗಳು ಬಿದ್ದರೆ ಬದುಕುವುದು ಹೇಗೆ? ಅವರೀಗ ಯಾರನ್ನು ಆಶ್ರಯಿಸ ಬೇಕು?"

ಶ್ರೀಧರ ನಾನಾ ಯೋಚನೆಗಳಿಂದ ತಪ್ತನಾಗಿ ರಸ್ತೆಯ ಮೇಲೆ ನಡೆಯುತ್ತಿದ್ದ. ಜೇಬಿನಲ್ಲಿದ್ದ ಕಾಗದಗಳ ನೆನಪಾಯಿತು. ವೆಂಕಟೇಶಯ್ಯ ಲಲಿತರಿಗೆ ತಾನು ಬರೆದ ಕಾಗದಗಳನ್ನು ಒಡೆದು ಪುನಃ ಓದಿದ.

ನಗು ಬಂತು ಅವನಿಗೆ. ಕಾಗದಗಳನ್ನು ಹರಿದು ಎಸೆದ—

"ಹುಚ್ಚು ಮನಸ್ಸು ಮರಳಿನ ಮೇಲೆ ಮನೆಯನ್ನು ಕಟ್ಟುತ್ತಿದೆ."

# ೨೭

"ತಂಗಿಯ ಮದುವೆಯ ಜೊತೆಯಲ್ಲಿ ಅಣ್ಣನ ಮದುವೆಯನ್ನೂ ಮಾಡಿಬಿಡಿ."—ಎಂದರು ಕೃಷ್ಣಯ್ಯ.

"ಈಗಿನ ಕಾಲದ ಹುಡುಗರು—ಅವರ ಧ್ಯೇಯ ಧೋರಣೆಗಳೇನೋ?"

—ಎಂದರು ಶ್ರೀಧರನ ತಂದೆ.

"ಹೇಗಾದರೂ ಈ ಮದುವೆಯೊಂದು ನಡೆದುಹೋದರೆ, ಕ್ರಮೇಣ ಈ ಹುಚ್ಚೂ ಕಡಿಮೆಯಾಗ್ತುತ್ತೆ"—ಎಂದರು ಕೃಷ್ಣಯ್ಯ.

ಶ್ರೀಧರನ ತಂದೆ ಬಹಳ ಹೊತ್ತು ಯೋಚಿಸಿದರು. ನಂತರ ಹೇಳಿದರು—

"ಶ್ರೀಧರನ ಬಳಕೆ ನಿಮಗೂ ಇದೆ. ನೀವೇ ಅವನನ್ನು ವಿಚಾರಿಸಿ ನೋಡಿ. ಅವನು ಒಪ್ಪಿದರೆ ಲಗ್ನ ಮಾಡಿ ಬಿಡೋಣ."

ಕೃಷ್ಣಯ್ಯನ ಮಗಳು....ಸರೋಜ. ಆಗತಾನೇ ಹರೆಯದ ಹದಿನೇಳರಲ್ಲಿ ಕಾಲಿಟ್ಟಿದ್ದಳು. ಮೆಟ್ರಿಕ್ ಪರೀಕ್ಷೆ ಮುಗಿಸಿದ್ದಳು.

ಕೃಷ್ಣಯ್ಯ ದೂರದವರೇನಲ್ಲ. ಅಂತೆಯೇ ಸರೋಜಳನ್ನೂ ಶ್ರೀಧರ ಯಾರೋ? ಅನ್ನುವಂತಿರಲಿಲ್ಲ.

ಈಗ ಎರಡು ವರುಷಗಳ ಕೆಳಗೆ ಕಾಲೇಜಿಗೆ ಹೋದಮೇಲೆ, ಶ್ರೀಧರ ಸರೋಜಳನ್ನು ನೋಡಿಯೇ ಇರಲಿಲ್ಲ. ನಾಟಕದ ಕಂಪೆನಿಯಿಂದ ಮನೆಗೆ ಬಂದಾಗ, ತನ್ನ ಮನೆಯವರೊಂದಿಗೆ, ತಂಗಿಯ ಲಗ್ನಕ್ಕಾಗಿ ಬಂದ ಸರೋಜಳನ್ನು ನೋಡಿ ವಿಸ್ಮಿತನಾಗಿದ್ದ.

ಎಷ್ಟು ಬೇಗ ದೊಡ್ಡವಳಾಗಿದ್ದಾಳೆ! ಎಷ್ಟು ಚೆನ್ನಾಗಿದ್ದಾಳೆ!

ಈಗ ಕೃಷ್ಣಯ್ಯ ಬಂದು ಪ್ರಶ್ನಿಸಿದ್ದು ಸಂತೋಷವಾಯಿತಾದರೂ, ತಾನು ಮದುವೆ ಮಾಡಿಕೊಳ್ಳುವುದು ಸಾಧ್ಯವೇ? ಎಂಬ ಸಮಸ್ಯೆ ತಲೆದೋರಿತು.

"ಒಂದು ಮನಸ್ಸು ಮಾಡಿಬಿಡು. ಹುಡುಗಿಯ ವಿಚಾರ ನಿನಗೆ ತಿಳಿದೇ ಇದೆ. ನಮ್ಮ ಮನೆಗೂ ಬಾ. ಬೇಕಾದರೆ ಮತ್ತೊಮ್ಮೆ ಅವಳನ್ನು ನೋಡಿಕೊಂಡು ಬಾ"—ಎಂದರು ಕೃಷ್ಣಯ್ಯ.

"ಅಂತಹ ಪದ್ಧತಿಗಳೇನೂ ಬೇಡ ಕೃಷ್ಣಯ್ಯ. ನಾನು ಅವಳನ್ನು ನೋಡಿದ್ದೇನೆ. ಅವಳೂ ನನ್ನನ್ನು ನೋಡಿದ್ದಾಳೆ. ಅಲ್ಲದೆ ಈ ವಧೂ ಪರೀಕ್ಷೆ, ವರ ಪರೀಕ್ಷೆಗಳ ವೈಖರಿಯನ್ನು ನೋಡಿ ಜಿಗುಪ್ಸೆ ಬಂದಿದೆ ನನಗೆ."

"ನಿನಗೇನೋ ಅವಳು ಹೊಸಬಳಲ್ಲ. ನೋಡುವ ಅಗತ್ಯವೂ ಇಲ್ಲ. ಆದರೆ ಏನೂ ತಿಳಿಯದವರು ಪರೀಕ್ಷೆ ಮಾಡಲೇ ಬೇಕಾಗುತ್ತೆ"

—ಎಂದರು ಕೃಷ್ಣಯ್ಯ ವಿನೋದವಾಗಿ.

ಪರೀಕ್ಷೆಮಾಡಲೂ ಕ್ರಮವಿದೆ ಕೃಷ್ಣಯ್ಯ. ಸಂತೆಯಲ್ಲಿಟ್ಟ ಸೌತೇ ಕಾಯಿಯನ್ನು ಹಿಂದೆ ಮುಂದೆ ತಿರುಗಿಸಿ ನೋಡುವಂತೆ, ನಮ್ಮಲ್ಲನೇಕರು ಹೆಣ್ಣನ್ನು ನೋಡುವುದು ವ್ಯಾಪಾರೀ ಮನೋಭಾವದಿಂದಲೇ."

"ನೀನು ಬಿಡು ಎಲ್ಲದರಲ್ಲೂ ಕೊಂಕು ಹುಡುಕುತ್ತೀಯೆ."

—ಕೃಷ್ಣಯ್ಯ ಅಭಿಮಾನದಿಂದ ನಗುತ್ತಾ ಹೇಳಿದರು. "ಹೋಗಲಿ ಬಿಡು. ನೀನು ಅವಳನ್ನು ನೋಡುವುದೂ ಬೇಡ. ಅವಳು ನಿನ್ನನ್ನು ನೋಡುವುದೂ ಬೇಡ. ಅದು ಹೇಗೂ ಎಲ್ಲರಿಗೂ ತಿಳಿದ ವಿಚಾರವೇ. ಈಗ ಮದುವೆಯ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು?"

"ಸಧ್ಯದಲ್ಲಿ ಮದುವೆಮಾಡಿಕೊಳ್ಳುವ ಮನಸ್ಸಿಲ್ಲ ನನಗೆ".

"ಏಕೆ?"

"ನನ್ನ ಜೀವನ ಭದ್ರವಾದ ತಳಹದಿಯ ಮೇಲೆ ನಿಂತಿಲ್ಲ. ಅಲ್ಲಿಯ ವರೆಗೆ ತಡೆಯಬೇಕೆಂದು ನನ್ನ ಇಷ್ಟ."

"ತಳಹದಿಯೇಕಿಲ್ಲ?....ಎಷ್ಟೋ ದಶಕಗಳಿಂದ ನಿಮ್ಮ ಹಿರಿಯರು ನಿಮ್ಮ ಜೀವನಕ್ಕೆ ತಳಹದಿ ಹಾಕಿಕೊಂಡೇ ಬಂದಿದ್ದಾರೆ. ಗದ್ದೆ, ತೋಟ, ಮನೆ, ದೇವರು ಯಾವುದಕ್ಕೆ ಕಡಿಮೆ ಮಾಡಿದ್ದಾನೆ? ಅದಕ್ಕಿಂತಲೂ ಭದ್ರ ವಾದ ತಳಹದಿ ಮತ್ತೇನಿದೆ ಹೇಳು?"

"ನನ್ನ ದೃಷ್ಟಿ ಅದಲ್ಲ. ನಾನು ಯಾವುದಾದರೂ ಒಂದು ಉದ್ಯೋಗ ವನ್ನು ಮಾಡಬೇಕು.

"ಹಿಂದಿನವರೆಲ್ಲ ಏನು ಮಾಡಿದರೋ ಅದನ್ನೇ ನೀನೂ ಮಾಡಬಹು ದಲ್ಲ. ಕೃಷಿತೋ ನಾಸ್ತಿ ಧುರ್ಭಿಕ್ಷಂ."

"ಕೃಷಿಯಲ್ಲಿ ನನಗೂ ಮನಸ್ಸಿದೆ. ಆದರೂ ಕಲೆಗಾಗಿ ಕೆಲಸಮಾಡ ಬೇಕೆಂಬ ಅಭಿಲಾಷೆಯಿದೆ."

"ಅದೂ ನಡೆಯಲಿ. ಕೃಷಿಯ ಜೊತೆಯಲ್ಲಿ ಕಲೆಯೂ ವೃದ್ಧಿ ಗೊಳ್ಳಲಿ. ಅದಕ್ಕೆ ಯಾರೂ ಬೇಡವೆನ್ನುವುದಿಲ್ಲ. ಮದುವೆಯಾಗುವುದ ರಲ್ಲಿ ಬಾಧಕವೇನಿದೆ?"

ಕೃಷ್ಣಯ್ಯನಿಗೆ ಉತ್ತರ ಹೇಳುವುದೇ ಕಷ್ಟಕ್ಕೆ ಬಂತು ಶ್ರೀಧರನಿಗೆ. ಏನು ಹೇಳಿದರೂ ಕೃಷ್ಣಯ್ಯ ತಮ್ಮ ಪಟ್ಟನ್ನು ಬಿಟ್ಟುಕೊಡಲಿಲ್ಲ.

"ಕಲೆ"....ಎಂಬ ಶಬ್ದದ ಬದಲು "ನಾಟಕ"—ಎಂಬ ಶಬ್ದವನ್ನುಪ ಯೋಗಿಸಿದರೆ ಕೃಷ್ಣಯ್ಯ ಮೂಗು ಮುರಿಯುತ್ತಾರೆಂದು ಅವನಿಗೆ ಗೊತ್ತು. ತಾನು ನಾಟಕದವನೆಂದು ಹೇಳಿಕೊಳ್ಳಲೂ ಅವಮಾನವಾಗುವಂತಿತ್ತು ಅವನ ಸ್ಥಿತಿ.

ಇಬ್ಬರೂ ಸ್ವಲ್ಪ ಹೊತ್ತು ಮೌನ.

ನಂತರ ಕೃಷ್ಣಯ್ಯ ಅನಿರೀಕ್ಷಿತವಾಗಿ ಕೇಳಿದರು—"ಅಥವಾ ಮತ್ತೇ ನಾದರೂ ದಾರಿ ನೋಡಿಕೊಂಡಿದೀಯೋ?"

"ಏನು?"

"ಈಗೇನು ಎಲ್ಲಾ ಕಡೆಗಳಲ್ಲೂ "Love Marriage"ಗಳು ಹೆಚ್ಚಿಕೊಂಡಿವೆ."

ಕೃಷ್ಣಯ್ಯ ಲೋಕರೂಢಿಯಾಗಿ ಆಡಿದ ಮಾತಾದರೂ ಶ್ರೀಧನರ ಮನಸ್ಸಿನಲ್ಲಿ ಮಥಿಸುತ್ತಿದ್ದ ವಿಚಾರಸರಣಿಯನ್ನು ಕೆಣಕಿತ್ತು ಅದು. ಅವನು ಕೇಳಿದ—

"ನೀವು ಪ್ರೇಮವಿವಾಹದ ವಿರೋಧಕರೇ?"

"ಪ್ರೇಮವಿವಾಹದ ವಿರೋಧಕ ನಾನಲ್ಲ. ಇಂದಿನ ಹುಡುಗರಿಗೆ "ಪ್ರೇಮ" ಎಂಬ ಪದದ ಅರ್ಥವೇ ಸರಿಯಾಗಿ ತಿಳಿದಿಲ್ಲ.

ಒಬ್ಬರಿಗೆ ಗತಿಯಿಲ್ಲವಾಗಿ, ಮತ್ತೊಬ್ಬರಿಗೆ ಮರೆಯಿಲ್ಲವಾಗಿ, ಅಕಸ್ಮಾ ತ್ತಾಗಿ ಆಗುವ ಕೂಡಿಕೆಗಳೇ ಪ್ರೇಮವೆಂದು ಕರೆಯಲ್ಪಡುತ್ತಿದೆ. ಇದು ಪ್ರೇಮವಲ್ಲ ಪ್ರಾರಬ್ಧ! ಇಂತಹ ವಿವಾಹಗಳು ಪ್ರೇಮವಿವಾಹಗಳಲ್ಲ ಪ್ರಾರಬ್ಧ ವಿವಾಹಗಳು! ನಮ್ಮ ಸಮಾಜದಲ್ಲಿ ಇದರ ದುಷ್ಪರಿಣಾಮಗಳು

ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದೆ."

"ಪ್ರೀತಿಸಿದವರನ್ನು ವಿವಾಹವಾಗುವುದು ತಪ್ಪೇ?"

"ನಾವು ಯಾರನ್ನು ಪ್ರೀತಿಸುತ್ತೇವೆಯೋ ಅವರನ್ನೇ ವಿವಾಹವಾಗುವುದು ಪಾಶ್ಚಾತ್ಯರಿಂದ ಬಂದ ಪದ್ಧತಿ. ನಾವು ಯಾರನ್ನು ವಿವಾಹವಾಗುತ್ತೇವೆಯೋ ಅವರನ್ನೇ ಪ್ರೀತಿಸುವುದು ನಮ್ಮ ದೇಶದ ಸಂಸ್ಕೃತಿ. ಇವೆರಡರಲ್ಲಿ ಯಾವುದಕ್ಕೆ ಅಗ್ರಸ್ಥಾನವಿದೆ ಯೋಚಿಸಿ ನೋಡು."

ಒಂದೇ ಮಾತಿನಲ್ಲಿ ಕೃಷ್ಣಯ್ಯ ಶ್ರೀಧರನ ನಾನಾ ಸಮಸ್ಯೆಗಳನ್ನು ಕೆಣಕಿ ಅವುಗಳಿಗೆ ಉತ್ತರ ಹೇಳಿದ್ದರು. ಶ್ರೀಧರನ ಮನಸ್ಸಿನೊಳಗಿನ ವಿಚಾರಗಳನ್ನು ತಿಳಿದು ಮಾತನಾಡುತ್ತಿರುವಂತೆ ಅವರು ಉತ್ತರಿಸುತ್ತಿದ್ದರು.

ಲಲಿತಳ ಬಗ್ಗೆ ಅಸ್ಪಷ್ಟವಾಗಿ ಸುಳಿದಾಡುತ್ತಿದ್ದ ಸಮಸ್ಯೆಗಳಿಗೆ ಅಪ್ರತ್ಯಕ್ಷವಾಗಿ ಉತ್ತರ ದೊರೆಯುತ್ತಿತ್ತು.

"ಯಾವುದಕ್ಕೂ ನಾನು ರಾತ್ರಿ ಯೋಚಿಸಿ ನಾಳೆ ತಿಳಿಸುತ್ತೇನೆ."

"ಯೋಚನೆ ಮಾಡು. ರಾತ್ರಿಯಲ್ಲ ನಾಲ್ಕು ದಿನ ಯೋಚಿಸಿ ನಂತರ ಹೇಳು. ನಿಮ್ಮ ತಂದೆಯವರಿಗೂ ವಯಸ್ಸಾಗಿದೆ. ಅವರ ಜವಾಬ್ದಾರಿಯನ್ನು ನೀನು ಹೊರುವ ಕಾಲ ಇದು. ಈ ಮದುವೆಯಾದರೆ ಅವರ ಮನಸ್ಸಿಗೂ ನೆಮ್ಮದಿ. ನಮ್ಮ ಹುಡುಗಿ ಒಳ್ಳೆಯ ಮನೆ ಸೇರಿದಳು ಅಂತ ನಮ್ಮ ಹೆತ್ತ ಕರುಳಿಗೂ ತೃಪ್ತಿ."

ಕೃಷ್ಣಯ್ಯನ ವಾತ್ಸಲ್ಯಪೂರ್ಣನುಡಿಗಳು ಶ್ರೀಧರನ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನು ಮಾಡಿದ್ದುವು. ಅವರನ್ನು ವಿರೋಧಿಸುವ ಶಕ್ತಿಯೇ ಇಲ್ಲದಷ್ಟು ಶ್ರೀಧರ ಅಬಲನಾದ.

ಅವರು ಹೊರಟುಹೋದನಂತರ ಅವನು ಯೋಚಿಸತೊಡಗಿದ.

ಮದುವೆ!.... ...

ಅದು ಜೀವನದಲ್ಲಿ ನಡೆಯಬೇಕಾದ ಸಂಸ್ಕಾರ.

ನಾಟಕದಲ್ಲಿರಲಿ, ಮನೆಯಲ್ಲಿರಲಿ, ಯಾವ ಉದ್ಯೋಗವನ್ನೇ ಮಾಡಲಿ ಅಥವಾ ಮಾಡದಿರಲಿ, ಮದುವೆ ಮನುಷ್ಯನಾದವನಿಗೆ ಒಂದಲ್ಲ ಒಂದು ದಿನ ನಡೆಯಬೇಕು.

ಸರೋಜ ಎಲ್ಲ ದೃಷ್ಟಿಯಿಂದಲೂ ತನಗೆ ಒಪ್ಪಿತಳಾದವಳೆಂದು ಶತ ಸ್ಸಿದ್ಧವಾದರೂ ಲಲಿತಳ ಬಗ್ಗೆಯೂ ಅವನ ಅನುಕಂಪವಿತ್ತು.

ಆದರೂ ಒಂದುಬಾರಿಯೂ ಅವಳು ಮದುವೆಯ ಮಾತನ್ನೇ ಎತ್ತಿಲ್ಲ. ಈ ಕಠಿಣವಾದ ಬಾಳಿಗೆ ಮತ್ತೊಬ್ಬರಿಗೆ ತೊಡಗಿಸಿಕೊಳ್ಳುವ ಉದ್ದೇಶವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾಳೆ. ಈ ಮಾತನ್ನವಳು ಸಂಕೋಚದಿಂದ ಹೇಳಿರಬಹುದೇ? ಅಥವಾ ನನ್ನನ್ನು ಪರೀಕ್ಷಿಸಲಿಕ್ಕಾಗಿ ಹೇಳಿರಬಹುದೇ?

ಏನಾದರಾಗಲಿ ಒಮ್ಮೆ ಅವಳನ್ನು ತಿಳಿದುಬಿಡೋಣ.

ವಿಳಾಸ!....ಎಂತಹ ಮೂರ್ಖ. ಅವಳ ಮನೆಯ ವಿಳಾಸವನ್ನೂ ಕೇಳದೆ ಬಂದೆನಲ್ಲ. ಮತ್ತೆ ಬರುತ್ತೇನಲ್ಲ ಸಧ್ಯ ಎಂಬ ದೃಢತೆಯಿಂದ ಅಂದು ಯಾವುದೂ ಬೇಡವಾಯಿತು. ಈಗ ಅವಳೆಲ್ಲಿದ್ದಾಳೆಂದು ಹುಡುಕುವುದು?

ಇದ್ದಕ್ಕಿದ್ದಂತೆಯೇ ಒಮ್ಮೆ ಶ್ರೀಧರನಿಗೆ ತನ್ನ ತಂದೆಯ ದೀನವದನ ಎದುರಾಯಿತು.

ಕೇವಲ ನಾಟಕದ ಕಂಪೆನಿಯಲ್ಲಿ ನಾನಿದ್ದ ಮಾತ್ರದಿಂದಲೇ ಅವ ಮಾನಿತರಾಗಿ ತಲೆತಗ್ಗಿಸಿದ ಅವರು—ನಾನು ಲಲಿತಳನ್ನು ಮದುವೆ ಮಾಡಿಕೊಂಡರೆ ಏನುಮಾಡಿಕೊಂಡಾರು?

ಇಷ್ಟಕ್ಕೇ ನಗುವ ಜನ, ಅಷ್ಟಾದಮೇಲೆ ಗಹ ಗಹಿಸಿ ನಕ್ಕು ಬಿಟ್ಟಾರು.

ನಿಜ! ಆ ಪತಿತ ಜೀವನದ ಬಗ್ಗೆ ಸಹಾನುಭೂತಿ ತೋರಿಸಬಹುದು. ಸಹಕರಿಸಲು ಸಾಧ್ಯವಿಲ್ಲ.

ಸರೋಜ!........ಲಲಿತ!....

ಒಬ್ಬಳು ಮುಗ್ಧೆ!....ಮತ್ತೊಬ್ಬಳು ಪತಿತೆ!

ಇದು ಬಿರಿಯುತ್ತಿರುವ ಮಲ್ಲಿಗೆ!'....ಅದು ಆಗಲೇ ಅರಳಿದಹೂ!

ಇನ್ನು ಜೀವನದಲ್ಲಿ ಸುಖಶಾಂತಿಗಳನ್ನು ಇವಳೂ ಕೊಡಬಲ್ಲಳು. ಅವಳನ್ನು ಮದುವೆಯಾದಲ್ಲಿ ಅವಳಿಗಾಗುವ ಅನುಕೂಲಕ್ಕಿಂತ ನನಗಾಗುವ ತೊಂದರೆಯೇ ಹೆಚ್ಚು.

ಯಾವ ಯೋಚನೆಗೂ ಮೊದಲಾಗಿ ಮದುವೆಯಾಗಿರೆಂದು ಅವಳು

ನನ್ನನ್ನೂ ಕೇಳಿಲ್ಲ. ಆಗುವೆನೆಂದು ನಾನು ಅವಳಿಗೂ ವಚನವಿತ್ತಿಲ್ಲ. ವೃಥಾ ತಲೆ ಕೆಡಿಸಿಕೊಳ್ಳಬೇಕೇಕೆ?

ಶ್ರೀಧರ ಸರೋಜಳನ್ನೇ ಮದುವೆಯಾಗುವ ತೀರ್ಮಾನಕ್ಕೆ ಬಂದ.

ಕೃಷ್ಣಯ್ಯನಿಗೆ ಕಾಶೀಯಾತ್ರೆ ಮಾಡಿಬಂದಷ್ಟು ಸಂತೋಷವಾಯಿತು. ಅವರ ಜಯಕ್ಕಾಗಿ ಮನ್ಸಿನಲ್ಲಿಯೇ ಹಿಗ್ಗಿದರು.

ಶ್ರೀಧರ ಕಲೆಯನ್ನು ಮುಂದೊಡ್ಡದೆ ಮದುವೆಗೆ ಸಮ್ಮತಿಸಿದ್ದು ಅವನ ತಂದೆಗೆ ಆಶ್ಚರ್ಯವಾಯಿತು.

"ಇನ್ನು ದಿನಗಳೆದರೆ ಹೇಗೋ, ಹುಡುಗಬುದ್ಧಿ! ಶುಭಸ್ಯ ಶೀಘ್ರಂ" —ಎಂದರು ಕೃಷ್ಣಯ್ಯ.

"ಮುಹೂರ್ತವಿಡಿಸಿ"—ಎಂದರು ಶ್ರೀಧರನ ತಂದೆ.

ಬಂದು ಬಾಂಧವರೆದುರಿನಲ್ಲಿ ಒಂದು ದಿನ ಮಂಗಳಕಾರ್ಯ ನಡೆದು ಹೋಯಿತು. ಸರೋಜ!....ಶ್ರೀಧರನ ಸಹಧರ್ಮಿಣಿಯಾದಳು. ಬಾಳ ಗೆಳತಿಯಾಗಿ ಬಂದು ಕೂಡಿದಳು.

# ೨೮

ಒಂದು ತಿಂಗಳನಂತರ!........

ಅದೊಂದು ಮಧ್ಯಾಹ್ನ ಪೋಸ್ಟ್ ಮ್ಯಾನ್ ಲಕೋಟೆಯೊಂದನ್ನು ತಂದು ಕೊಟ್ಟ. ಅದರ ಮೇಲ್ಗಡೆ "ಮಂಡ್ಯ" ಎಂದು ಮುದ್ರಿತವಾಗಿತ್ತು.

ಮಂಡ್ಯದಲ್ಲಿ ಯಾರಿದ್ದಾರೆ? ಶ್ರೀಧರ ತನ್ನ ಕೋಣೆಗೆ ಬಂದ. ಕುತೂಹಲದಿಂದ ಕಾಗದ ಒಡೆದ.

ಶ್ರೀಯುತ ಶ್ರೀಧರ್‌ರವರಿಗೆ ಲಲಿತಳ ನಮಸ್ಕಾರಗಳು:—

ಇಷ್ಟು ದಿವಸಗಳು ಕಾಗದ ಬರೆಯದಿದ್ದುದಕ್ಕಾಗಿ ನಿಮಗೆ ಬೇಸರವಾಗಿರಬಹುದು. ನಾನೇನು ಮಾಡಲಿ? ವಿಧಿ ಎಲ್ಲಿ ಹೋದರೂ ನನ್ನ ಬೆನ್ನು ಬಿಡುವಂತೆ ಕಂಡುಬರುತ್ತಿಲ್ಲ.

ಬೇಲೂರಿನಿಂದ ಹೊರಟವಳು ನನ್ನ ಊರಿಗೆ ಹೋದೆ. ಬೇಲೂರಿನ ಕಂಪೆನಿ ನೀವು ಹೊರಟುಹೋದ ಮರುದಿನವೇ ಮುಳುಗಿ ಹೋದ ಸಮಾಚಾರ ನಿಮಗೆ ತಿಳಿದಿರಬಹುದು.

ಮುಂದೆ ಕೆಲಸವಿಲ್ಲದೇ ಕೆಲವು ದಿವಸಗಳು ಕಾಲಕಳೆದೆ.

ಕುಳಿತು ತಿನ್ನುವ ಅನುಕೂಲ ನಮಗಿಲ್ಲವೆಂದು ನಾನು ಮೊದಲೇ ತಿಳಿಸಿದ್ದೇನೆ. ಪುನಃ ಸಂಪಾದನೆಗೆ ಹೊರಡಬೇಕು.

"ಬಾ" ಎಂದು ಕರೆಯುವವರು ಬಹಳ ಮಂದಿ. ಹೋಗಲು ಯೋಗ್ಯವಾದ ಸ್ಥಳಗಳು ಮಾತ್ರ ಅಪರೂಪ. ಕರೆದಲ್ಲಿಗೆಲ್ಲಾ ನಾನು ಹೋಗುವುದಿಲ್ಲ. ನನ್ನ ಮನಸ್ಸಿಗೆ ಸರಿಕಂಡಲ್ಲಿ, ಯೋಗ್ಯ ಸಹವಾಸ ದೊರೆಯಬಹುದಾದಲ್ಲಿ ಮಾತ್ರ ಹೋಗುತ್ತೇನೆ. ಹೀಗಾಗಿ ಕೆಲದಿನಗಳು ಕೆಲಸವಿಲ್ಲವಾಯಿತು.

ನಂತರ ಬೀರಣ್ಣನವರ ಕಂಪೆನಿಗೆ ಕರೆಬಂತು. ಅಲ್ಲಿಗೆ ನಾನು ಹೋಗುತ್ತಲೇ ಇರಲಿಲ್ಲ. ತಾವು ತಮ್ಮ ಬಳಗ ಎನ್ನುವ ಮನೋಭಾವದ ಈ ಜನ ಇತರರ ಉನ್ನತಿಯನ್ನು ಸಹಿಸುವುದಿಲ್ಲ. ಆದರೂ ಈ ಬಾರಿ ವಿಧಿಯಿಲ್ಲದೆ ಅಲ್ಲಿಗೆ ಹೋದೆ.

ಅಲ್ಲಿ ನಿಮ್ಮನ್ನು ಕರೆಸಿಕೊಳ್ಳೋಣವೆಂದು ಮನಸ್ಸಾಯಿತು. ಆದರೇನು

ಮಾಡುವುದು, ಇಂತಹ ಸ್ಥಳಗಳಲ್ಲಿ ಹೊಸಬರಿಗೆ ಸ್ಥಳವಿಲ್ಲ. ಅವರು ಮುಂದೆ ಬರಲು ಅವಕಾಶವೂ ಇಲ್ಲ.

ಇಲ್ಲಿ ನಾಟಕಗಳನ್ನು ನೋಡಿದರೆ ನಾಚಿಗೆಯಾಗುತ್ತಿದೆ. ಕಾಲ ಇಷ್ಟು ಮುಂದುವರಿದಿದ್ದರೂ ಇನ್ನೂ "ಬಹಳ ಹಿಂದೇ ಇದ್ದಾರೆ." ನಟರಿಗಾಗಲೀ–ಅಭಿನಯಕ್ಕಾಗಲೀ ಇಲ್ಲಿ ಸ್ಥಳವಿಲ್ಲ. ಸಾವಿರಾರು ರೂಪಾಯಿಗಳನ್ನು ನೀರಿನಂತೆ ಸುರಿದು ಅಳವಡಿಸಿದ ದೃಶ್ಯಸಂಯೋಜನೆಗಾಗಿ ಜನ ಮರುಳಾಗುತ್ತಿದ್ದಾರೆ. ಅನೇಕ ಘಟಾನುಘಟಿ ಪಾತ್ರಧಾರಿಗಳು ಕೈತುಂಬಾ ಸಂಬಳ ತೆಗೆದುಕೊಂಡು, ಅರಮನೆಯಲ್ಲಿ ಕಟ್ಟಿಹಾಕಿದ ಆನೆಗಳಂತೆ ಮಲಗಿ ನಿದ್ರಿಸುತ್ತಿದ್ದಾರೆ. ಅವರ ಪ್ರತಿಭೆ ಮಂಕಾಗಿದೆ. ಅವರ ಕಲೆ ಕುಂಠಿತವಾಗಿದೆ.

ಯಶಸ್ಸು ಅಡಗಿದರೂ ಚಿಂತೆಯಿಲ್ಲ, ಹೊಟ್ಟೆಯಾದರೂ ತುಂಬುತ್ತಿದೆಯಲ್ಲ ಎಂದು ತೃಪ್ತರಾಗಿ ಗೊರಕೆ ಹೊಡೆಯುತ್ತಿದ್ದಾರೆ.

ಇಂತಹ ಸ್ಥಳದಲ್ಲಿ ಹೆಚ್ಚು ದಿನ ಇರುವುದು ನನ್ನಿಂದ ಸಾಧ್ಯವಾಗದೇ ಹೊರಟುಬಂದೆ.

ಇಲ್ಲಿ ಮಂಡ್ಯದಲ್ಲಿ ಕಲಾಭಿಮಾನೀ ಸಂಘದವರು ನಾಟಕಗಳನ್ನಭಿನಯಿಸುತ್ತಿದ್ದಾರೆ. ವೆಂಕಟೇಶಯ್ಯನವರೊಬ್ಬರನ್ನು ಬಿಟ್ಟು ಮತ್ತೆಲ್ಲ ನಿಮ್ಮ ಹಳೆಯ ಸ್ನೇಹಿತರೂ ಬಂದು ಕೂಡಿದ್ದಾರೆ.

ವೆಂಕಟೇಶಯ್ಯ!....ಅವರ ವಿಚಾರ ಬಂದಾಗ ದುಃಖವಾಗುತ್ತಿದೆ. ಅವರ ಹೆಂಡತಿಗೆ "ಸೀರಿಯಸ್" ಅಂತ ಬೇಲೂರಿಗೆ ಟೆಲಿಗ್ರಾಂ ಬಂದಿತ್ತು. ಆದರೂ ನಾಟಕಕ್ಕಾಗಿ ಅವರು ಒಂದು ದಿನ ನಿಂತರು. ಮರುದಿನ ಅವರು ಊರಿಗೆ ಹೋದಾಗ ಅವರ ಹೆಂಡತಿ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದರು. ಸಣ್ಣಪುಟ್ಟ ಮಕ್ಕಳು—ಬಡತನದ ಸಂಸಾರ ಅನ್ನ ಬೇಯಿಸಿ ಹಾಕಲೂ ಮನೆಯಲ್ಲಿ ಜನರಿಲ್ಲ. ಜೀವನಕ್ಕಾಗಿ ಮೈಸೂರಿನಲ್ಲಿ ಒಂದು ಚಿಕ್ಕ ಅಂಗಡಿ ಹಚ್ಚಿದಾರೆಂದು ಕೇಳಿದೆ. ಅವರಿನ್ನು ನಾಟಕದ ಕಂಪೆನಿಗೆ ಬರುವುದಿಲ್ಲ.

ಅಡಿಗೆಯನ್ನೂ ಮಾಡಿಕೊಂಡು, ಮಕ್ಕಳನ್ನೂ ನೋಡಿಕೊಂಡು—ಹೊಟ್ಟೆಹೊರೆದುಕೊಳ್ಳಲು ಅಂಗಡಿಯನ್ನೂ ನಿರ್ವಹಿಸುವ ಅವರ ಕಠಿಣ ಸ್ಥಿತಿಯನ್ನು ಕೇಳಿದರೆ ಎಂಥವರಿಗೂ ಕನಿಕರ ಬರುವುದು ಸಹಜ."

ಕಾಗದವನ್ನು ಓದುತ್ತಿದ್ದಂತೆ ದುಃಖ ಬಂತು ಶ್ರೀಧರನಿಗೆ. ಕಣ್ಣೀರ

ನ್ನೊರೆಸಿಕೊಂಡು ಮುಂದೆ ಓದಿದ—

"ನಾಟಕವೆಂದರೆ ನಿಮಗೆ ಹೆಚ್ಚಿನ ಅಭಿಮಾನ. ಅಭಿಮಾನ ಮಾತ್ರ ವಲ್ಲ, ಯೋಗ್ಯತೆಯೂ ಉಂಟು. ನೀವು ಚೆನ್ನಾಗಿ ಅಭಿನಯಿಸಬೇಕು— ಯಶಸ್ಸನ್ನು ಗಳಿಸಬೇಕೆಂದು ನನ್ನ ಬಯಕೆ.

ಅದೃಷ್ಟವಶಾತ್ ನಾವಿಂದು ಮಂಡ್ಯದಲ್ಲಿದ್ದೇವೆ. ರೈತರ ಸ್ವರ್ಗ ಇದು.

ತಾಯಿ ಕಾವೇರಿಯ ನಾಲೆಗಳ ಮಧ್ಯೆ ಹರಡಿಕೊಂಡ ವಿಸ್ತಾರವಾದ ಗದ್ದೆಯ ಬಯಲು, ಕಬ್ಬಿನ ಬೆಳೆ, ಎಲ್ಲೆಲ್ಲೂ ಸಳಸಳನೆ ಹರಿಯುವ ನಾಲೆಯ ನೀರು, ಇವುಗಳ ಮಧ್ಯೆ ನಿಮ್ಮನ್ನು ಕಾಣಬೇಕು. ನಿಮ್ಮ ಕವಿಹೃದಯದಿಂದ ಹೊರಡುವ ಮಾತುಗಳನ್ನು ಕೇಳಬೇಕೆನ್ನಿಸಿದೆ. ಈ ನನ್ನ ಬಯಕೆಯನ್ನು ಈಡೇರಿಸುವಿರೆಂದು ನಂಬಿದ್ದೇನೆ.

ಕೂಡಲೇ ಹೊರಟುಬನ್ನಿ. ನಿಮ್ಮ ನೆನಹಿನಲ್ಲೇ ಇರುವ—

"ಲಲಿತ."

ಶ್ರೀಧರ ಕಾಗದವನ್ನೋದಿ ಮಂಕಾಗಿಹೋದ. ಕೊನೆಗೂ ಅವಳು ತನ್ನನ್ನೇ ನಂಬಿಕೊಂಡಿದ್ದಾಳೆಯೇ? ಆಸೆ ತೋರಿಸಿ ಅನ್ಯಾಯ ಮಾಡಿದಂತಾಯಿತೇ? ಅವಳಿಗೀಗ ಏನೆಂದು ಉತ್ತರ ಬರೆಯುವುದು?

"ಯಾರ ಕಾಗದ ಅದು?"

—ಎಂದಳು ಸರೋಜ ಹಿಂದಿನಿಂದ.

ಶ್ರೀಧರ ಬೆಚ್ಚಿಬಿದ್ದ. ಆದರೂ ಅದನ್ನು ಮುಚ್ಚಿಕೊಂಡು ಹೇಳಿದ—

"ನನ್ನ ಸ್ನೇಹಿತರದು."

"ಎಷ್ಟು ಮುದ್ದಾಗಿದೆ ಅಕ್ಷರ!"

—ಅವಳೆಂದಳು, ತಾನು ತಂದಿರುವ ಕಾಫಿಯನ್ನು ಮೇಜಿನ ಮೇಲಿಡುತ್ತಾ.

ಶ್ರೀಧರ ಬೇಗಬೇಗ ಕಾಗದವನ್ನು ಮಡಿಸಿದ.

ಸರೋಜಳಿಗೆ ಏನೋ ಹೊಳೆದಂತಾಯಿತು. ಮತ್ತೆ ಕೇಳಿದಳು—

"ಯಾವ ಸ್ನೇಹಿತರು ಬರೆದಿದ್ದಾರೆ?....ಸಧ್ಯ ನಾಟಕದವರಲ್ಲವಷ್ಟೇ."

"ನಾಟಕದವರೇ"

—ಎಂದ ಶ್ರೀಧರ, ಓರೆ ನೋಟದಿಂದ ಅವಳ ಮುಖದಲ್ಲಾಗುವ

ಬದಲಾವಣೆಯನ್ನು ವೀಕ್ಷಿಸುತ್ತಾ.

"ಏನೆಂದು ಬರೆದಿದ್ದಾರೆ? "—ಅಸಹನೆಯಿಂದ ಕೇಳಿದಳು ಸರೋಜ.

"ಮತ್ತೆ ಬಾ ಎಂದು ಬರೆದಿದ್ದಾರೆ."

ಸರೋಜಳ ಎದೆ ನಡುಗಿತು. ತನ್ನ ಕಳವಳವನ್ನು ತೋರ್ಪಡಿಸದೇ ನಗುತ್ತಾ ಕೇಳಿದಳು—

"ಹೋಗುತ್ತೀರಾ? "

"ಹೋಗಬೇಕು."

"ಊ್ಹೂ...." ಎಂದಳವಳು ಅಳುವನ್ನು ಅಣಕಿಸುವ ಧ್ವನಿಯಲ್ಲಿ. "ನೀವು ಹಾಗೇನಾದರೂ ಮಾಡಿದರೆ ನಾನು ಸುಮ್ಮನಿರುವುದಿಲ್ಲ."

"ಏನು ಮಾಡುತ್ತೀ? "

"ನಾನೂ ನಿಮ್ಮ ಹಿಂದೆಯೇ ಬಂದುಬಿಡುತ್ತೇನೆ."

"ಒಳ್ಳೆಯದೇ ಆಯಿತು. ಇಬ್ಬರೂ ಒಟ್ಟಿಗೇ ಹೋಗಿಬಿಡೋಣ. ನೀನೂ ಪಾರ್ಟು ಮಾಡುತ್ತೀಯೇನು?"

"ಥೂ....ಸುಮ್ಮನಿರಿ. ಬಾಯಿಗೆ ಬಂದಂತೆ ಅಪದ್ಧ ಹೇಳಬೇಡಿ."

"ಏಕೆ? ಹೆಂಗಸರು ಬಣ್ಣ ಹಚ್ಚಬಾರದೇನು?"

"ಅವೆಲ್ಲಾ ಮಾತು ಈಗೇಕೆ. ನಾನು ಬರೊಲ್ಲ. ನೀವೂ ಹೋಗೋದ್ನು ಬೇಡ."

—ಎಂದಳವಳು ಶ್ರೀಧರನ ಗುಂಗುರು ಕೂದಲುಗಳ ನಡುವೆ ತನ ಬೆರಳುಗಳನ್ನಾಡಿಸುತ್ತಾ.

"ನಾನೂ ಹೋಗಕೂಡದೇ! "

"ಕೂಡದು....ಅಂತಲೇ ನನ್ನನ್ನು ನಿಮ್ಮ ಕೊರಳಿಗೆ ಗಂಟುಹಾಕಿದ್ದಾರೆ."

"ಅಂದರೆ? "

"ಕುಂಟೆ ಕೊರಳಿಗೆ ಬಿದ್ದಮೇಲೆ ಹಸು ಬೇಲಿ ಹಾರೊಲ್ಲ ಅಂತ.... ತಿಳಿಯಿತೇ? "

—ಎಂದಳು ಸರೋಜ ಅವನ ಮುಖದಬಳಿ ಮುಖವನ್ನು ತಂದು ನಸುನಗುತ್ತಾ.

ಶ್ರೀಧರ ಬೆಪ್ಪಾಗಿ ನೋಡಿದ.

ಕಮಲ ದಳಗಳ ಮಧ್ಯೆ ಸಿಕ್ಕಿಕೊಂಡ ಮತ್ತಭೃಂಗಗಳಂತೆ ಚಂಚಲ ವಾದ ಅವಳ ನಯನಗಳು, ತಮ್ಮ ಚಾಂಚಲ್ಯವನ್ನು ತೊರೆದು ಸ್ಥಿರವಾಗಿ ನೋಡುತ್ತಿದ್ದುವು ಶ್ರೀಧರನನ್ನೇ.

ಮನಸ್ಸಿನ ಓಟವನ್ನು ಸೆಳೆದು ನಿಲ್ಲಿಸಿತ್ತು ಈ ದೃಷ್ಟಿ,....ಓಡುವ ಕುದುರೆಯ ಕಡಿವಾಣವನ್ನೆಳೆದಂತೆ.

ಅಬ್ಬ!....ಎಷ್ಟು ಶಕ್ತಿಯಿದೆ ಈ ನೋಟಕ್ಕೆ.

ಕೈಕಾಲುಗಳಿಗೆ ಸಂಕೋಲೆ ಹಾಕಿ, ಕಲ್ಲು ಗೋಡೆಗಳ ಮಧ್ಯೆ ಬಂಧಿಸಿಟ್ಟಿದ್ದರೂ....ಅವೆಲ್ಲವನ್ನೂ ಕಿತ್ತುಕೊಂಡು ಹಾರುತ್ತಿದ್ದೆ. ಆದರೆ ಈ ನೋಟವನ್ನು ಮಾತ್ರ ಎದುರಿಸಲಾರೆ. ಈ ಪ್ರೇಮದ ಹೊಳೆಯನ್ನು ದಾಟಲಾರೆ."

"................................."

"ಕಾಫಿ ಕುಡಿಯಿರಿ ಮೊದಲು. ಆರಿಹೋದೀತು."

—ಎಂದಳವಳು ಕಾಫಿಯ ಲೋಟವನ್ನು ಅವನ ಕೈಗೆ ಕೊಡುತ್ತಾ.

ಶ್ರೀಧರ ಎವೆಯಿಕ್ಕದೆ ಅವಳನ್ನೇ ನೋಡುತ್ತಿದ್ದ—

ಎಷ್ಟು ಚುರುಕು! ಎಷ್ಟು ಸೂಕ್ಷ್ಮ! ಎಂತಹ ಜೋಡಿ!

೨೯

ಇವತ್ತೇ ಕಾಗದ ಬರುವುದೆಂದು ನಿರೀಕ್ಷಿಸಿದ್ದಳು ಲಲಿತ. ನಿರೀಕ್ಷೆಯಂತೆ ಕಾಗದ ಕೈಸೇರಿತು. ಕುತೂಹಲ ಉತ್ಸಾಹಗಳಿಂದ ಒಡೆದಳು. ಶ್ರೀಧರ ಬರೆದಿದ್ದ—

ಶ್ರೀಮತಿ ಲಲಿತರವರಿಗೆ!........

ನಿಮ್ಮ ಕಾಗದ ತಲುಪಿತು. ಮರಳುಗಾಡಿನ ಮಧ್ಯೆ ಹರಿಯುವ ನದಿ. ತನ್ನ ಮಾರ್ಗಕ್ಕೆ ಸ್ವಲ್ಪ ತಡೆಬಂದರೂ....ತನ್ನ ದಿಕ್ಕನ್ನು ಬದಲಿಸಿ ಮತ್ತೊಂದು ಮಾರ್ಗವನ್ನು ಹಿಡಿಯುವಂತೆ ನಮ್ಮ ಜೀವನ!. ನಾವೆಷ್ಟು ಪ್ರಯತ್ನದಿಂದ ನಮ್ಮ ಜೀವನವನ್ನು ರೂಪಿಸಲೆತ್ನಿಸಿದರೂ ನಾವು ಎದುರಿಸಲಾರದ ಮತ್ತೊಂದು ಶಕ್ತಿಯ ಕೈವಾಡವಿಲ್ಲಿದೆ.

ಅದನ್ನೇ ದೈವವಾದಿಗಳು "ವಿಧಿ...." "ಅದೃಷ್ಟ" ಮುಂತಾದ ನಾನಾ ಹೆಸರುಗಳಲ್ಲಿ ಕರೆಯಬಹುದು. ಇಂತಹ ಒಂದು ಅದೃಶ್ಯಶಕ್ತಿ ಇಂದು ನನ್ನನ್ನು ಬದಲಿಸಿದೆ.

ನಾನೀಗ ವಿವಾಹಿತನಾಗಿರುವೆನೆಂದು ತಿಳಿದು ನಿಮಗೆ ಆಶ್ಚರ್ಯವಾಗಬಹುದು....ಅಥವಾ ದುಃಖವಾಗ ಬಹುದು. ವಿವಾಹಿತನಾಗುವ ಮುನ್ನ ನನ್ನ ಕರ್ತವ್ಯದ ಬಗ್ಗೆ ಆಳವಾಗಿ ಯೋಚಿಸಿದ್ದೇನೆ. ನಾನಿಡುವ ಹೆಜ್ಜೆ ತಪ್ಪೆಂದು ಕಂಡುಬರಲಿಲ್ಲ. ಹೀಗೇ ಆಗಬೇಕಿತ್ತು. ಆಗಿಹೋಯಿತು.

ಪುನಃ ಕಂಪೆನಿಗೆ ಬರುವ ಇಚ್ಛೆ ನನಗಿದ್ದರೂ ಅದು ಸಾಧ್ಯವಿಲ್ಲ. ನನ್ನನ್ನು ನಂಬಿರುವ ಮುಗ್ಧ ಜೀವಿಗಾಗಲೀ, ನನ್ನ ತಂದೆ ತಾಯಿಯರಿಗಾಗಲೀ ಮತ್ತೆ ದುಃಖವನ್ನು ತಂದೊಡ್ಡುವುದು ಯೋಗ್ಯವಲ್ಲ.

ನಿಮ್ಮ ಅಂತ:ಕರಣ ವಿಶ್ವಾಸಗಳಿಗಾಗಿ ನಾನು ಚಿರ ಋಣಿಯಾಗಿದ್ದೇನೆ. ನನ್ನಿಂದ ನಿಮಗೆ ತೊಂದರೆಯಾಗಿದ್ದರೆ ಕ್ಷಮಿಸಿರೆಂದು ಪ್ರಾರ್ಥಿಸುತ್ತೇನೆ.

ವಿಶ್ವಾಸದಿಂದ ಪತ್ರ ಬರೆಯಬೇಕಾಗಿ ಕೇಳಿಕೊಳ್ಳುತ್ತೇನೆ.

ಇಂತೀ— ಶ್ರೀಧರ.

ಕಾಗದವನ್ನೋದಿ ಗರಹೊಡೆದವಳಂತೆ ನಿಂತಳು ಲಲಿತ. ಅವಳ

ಕನಸಿನ ಕಟ್ಟಡಗಳೆಲ್ಲ ಕುಸಿದು ಬಿದ್ದುವು. ಹಾಳು ಹಂಪೆಯಂತೆ ಹಳೆಯ ನೆನಪುಗಳು ಮರುಕಳಿಸಿದುವು. ಇಂದಿನ ಪಾಳನ್ನು ನೋಡಿ, ಅಂದಿನ ವೈಭವವನ್ನು ನೆನೆದಂತೆ. ಹಿಂದಿನ ಶ್ರೀಧರ ನೆನಪಿಗೆ ಬಂದ.

ಸೋಮವಾರ ಪೇಟೆಯ ಕಿತ್ತಿಲೆ ತೋಟಗಳಲ್ಲಿ ಕವಿಯಾಗಿ ಜೊತೆಗೂಡಿದ ಶ್ರೀಧರ, ಬೇಲೂರಿಗೆ ಬಂದಾಗ ದಾರ್ಶನಿಕನಾಗಿದ್ದ.

ಸಮಾಜವನ್ನು ನಿರ್ಭಯವಾಗಿ ಖಂಡಿಸುವ ತೀಕ್ಷ್ಣವಾದ ಮಾತು, ಉಜ್ವಲವಾದ ಮುಖ, ಹೊಳೆಯುವ ಕಣ್ಣುಗಳನ್ನು ನೆನೆಸಿಕೊಂಡಾಗ,.... ಅಂದಿನ ಶ್ರೀಧರ....ಇಂದು ತನ್ನ ವ್ಯಕ್ತಿತ್ವವನ್ನು ಕಳೆದು ಕೊಂಡಿದ್ದಾನೆ ಎನ್ನಿಸಿತು ಅವಳಿಗೆ.

"ಗಂಡಸರು ಎಲ್ಲರೂ ಅಷ್ಟೆ. ಹೀಗೆಂದು ನಂಬುವುದಕ್ಕೇ ಸಾಧ್ಯವಿಲ್ಲ. ಕ್ಷಣ ಕ್ಷಣಕ್ಕೆ ಬಣ್ಣ ಬದಲಾಯಿಸುತ್ತಿರುತ್ತಾರೆ ಬಟ್ಟೆ ಬಣಜಿಗ ಹಾವಿ ನಂತೆ"—ಎಂದುಕೊಂಡಳು.

ಒಂದುಕಡೆ ಉದ್ವೇಗ!....ಮತ್ತೊಂದುಕಡೆ ದುಃಖ.

"ಅವರನ್ನೇಕೆ ಅನ್ನಬೇಕು? ನಾನೇ ನನ್ನ ಮನಸ್ಸನ್ನು ಸ್ಪಷ್ಟಪಡಿಸದಿದ್ದ ಮೇಲೆ ಅವರ ತಪ್ಪೇನಿದೆ?

ಇಷ್ಟಾಗಿ ನನ್ನಬಾಳು ಎಂದೋ ಹಾಳಾಗಿ ಹೋಗಿದೆ. ಈ ಹಾಳಿನಲ್ಲಿ, ಈ ಕೊಳೆಯಲ್ಲಿ ಅವರ ಶುದ್ಧ ಬಾಳನ್ನೇಕೆ ಬೆರೆಸಬೇಕು? ನನಗಾಗಿ ಮತ್ತೊಬ್ಬರನ್ನೇಕೆ ಸಮಾಜದ ಕತ್ತರಿಗೆ ಒಡ್ಡಬೇಕು?"

ದುಃಖ ಉಮ್ಮಳಿಸಿ ಬಂತು. ಕಾಗದವನ್ನು ಕೈಯಲ್ಲಿ ಹಿಡಿದು ಕೊಂಡೇ ಬಿಕ್ಕಿ ಬಿಕ್ಕಿ ಅತ್ತಳು ಲಲಿತ. ಅಳುವಿನ ಘಟ್ಟ ಮುಗಿದ ಮೇಲೆ ಮತ್ತೆ ಮನಸ್ಸು ಹೇಳಿತು—

"ಎಂದೋ ಹಾಳಾದ ಬಾಳಿಗಾಗಿ ಇಂದೇಕೆ ಅಳಬೇಕು?"

ಸೆರಗಿನಿಂದ ಕಣ್ಣನ್ನೊರೆಸಿಕೊಂಡು ಮೇಲಕ್ಕೆದ್ದಳು. ಕಿಟಕಿಯಿಂದ ಹೊರಗೆ ನೋಡಿದಳು.

ನಿನ್ನೆ ಸುಂದರಳಾಗಿ ಕಂಡ ಪ್ರಕೃತಿ ಇಂದು ಮಂಕಾಗಿದ್ದಳು. ನಿನ್ನೆಗೂ ಇವತ್ತಿಗೂ ಅದೇನು ಬದಲಾವಣೆ? ಯಾರು ಬದಲಾಗಿರುವುದು?

ಪ್ರಕೃತಿಯೋ?........ಮನಸ್ಸೋ?.

ಉಹ್ಞು—ಪ್ರಕೃತಿ ಇದ್ದಂತೆಯೇ ಇರುತ್ತಾಳೆ. ಈ ಚಂಚಲ ಮನಸ್ಸು ತನಗೆ ಬೇಕಾದಂತೆ ಪ್ರಪಂಚವನ್ನು ಕಾಣುತ್ತಿದೆ. ನಮಗೇ ಮೋಸ ಮಾಡುತ್ತಿದೆ.

ಕಿಟಕಿಯನ್ನು ಮುಚ್ಚಿ ಪುನಃ ಮಲಗಿದಳು ಲಲಿತ.

# ಮೂರನೆಯ ಭಾಗ

# ೩೦

ಎಚ್ಚರಿರು ಲೋಕದಲಿ; ಮತ್ಸರತೆ ತುಂಬಿಹುದು;
ವಿಧಿಯ ಕೈಕತ್ತಿ ಬಲು ಹರಿತವಾಗಿಹುದು.
ನಿನ್ನ ಬಾಯೊಳು ಮಿಠಾಯಿಯ ದೈವವಿಟ್ಟೊಡಂ
ನುಂಗದಿರು; ನಂಜವರೊಳಿದ್ದೀತು, ನೋಡು.

ಡಿ. ವಿ. ಜಿ.

ಮಲೆನಾಡಿನ ಶ್ರೀಮಂತ ಪುತ್ರ ವಾಸಪ್ಪಹೆಗಡೆ. ಐವತ್ತು ಎಕರೆ ಅಡಕೆಯ ತೋಟ! ಮುನ್ನೂರು ಎಕರೆಗಳಷ್ಟು ಗದ್ದೆ! ಅರಮನೆಯಂತಹ ಮನೆ! ಪಾಳೆಯಗಾರರ ಕಾಲ ಹೇಗಿತ್ತೆಂದು ಊಹಿಸಲು ಸಾಕಷ್ಟು ಕುರುಹುಗಳಿರುವ ಹಳ್ಳಿಯ ವಾತಾವರಣ! ಇದಾವುದನ್ನೂ ತಮ್ಮೊಡನೆ ತೆಗೆದುಕೊಂಡು ಹೋಗದೆ, ತಮ್ಮ ಏಕಮಾತ್ರ ಪುತ್ರನಿಗಾಗಿ ಬಿಟ್ಟು ಮೃತರಾಗಿದ್ದರು ವಾಸಪ್ಪಹೆಗಡೆಯ ತಂದೆ.

ವಾಸಪ್ಪಹೆಗಡೆಯ ವಿದ್ಯಾಭ್ಯಾಸ ಬಿರುಸಿನಿಂದ ಸಾಗಿತು. ಮನಸ್ಸು ಮಾಡಿದ್ದರೆ ಲೋಯರ್ ಸೆಕೆಂಡರಿಯನ್ನು ದಾಟಬಹುದಿತ್ತು. ಅದು ಹೆಗಡೆಗೆ ಬೇಕಾಗಲಿಲ್ಲ.

L. S. ಫೇಲ್ ಆದಮೇಲೆ ಶಾಲೆಗೆ ಶರಣುಹೊಡೆದ.

ಅದೊಂದು ಕಾಲ! ಮಳೆಗಾಲದ ಹುಚ್ಚುಪ್ರವಾಹದಂತೆ ಪದಾರ್ಥಗಳ ಬೆಲೆ ಏರಿಬಿಟ್ಟಿತು. ಅಡಕೆಗಂತೂ ತಲೆ ಬೆಲೆಯಾಯಿತು. ಮೊದಲೇ ಗಟ್ಟಿಕುಳ. ಅಡಕೆಯ ಬೆಲೆ ಮಣಕ್ಕೆ ಐವತ್ತು....ಅರವತ್ತು ಆದಾಗ ಕೇಳಬೇಕೆ?—

ಒಂದು ಕಾರಿನ ಜೊತೆಗೆ ಆರು ಕಾರು ಬಂತು.

ಹೆಗಡೆ ಹುಟ್ಟಿದ್ದು ಭೂಮಿಯ ಮೇಲೆ ಆದರೂ, ಬೆಳೆದದ್ದು ಕಾರಿನ ಮೇಲೇ. ಮನಸ್ಸು ಓಡಿದತ್ತ ಅವನ ಕಾರೂ ಓಡುತ್ತಿತ್ತು. ಹೆಗಡೆಯ ಮನಸ್ಸೂ ಕಾರಿನ ಯಂತ್ರ ಎರಡೂ ಒಂದೇ. ಇದು "ಹಾ" ಎಂದರೆ ಅದು "ಹೂ" ಎನ್ನುತ್ತಿತ್ತು.

ಶಿವಮೊಗ್ಗೆಗೆ ಹೋಗಬೇಕು—"ಹೂ." ಅಲ್ಲಿ ಹೋಟಲಿನಲ್ಲಿ ಕಾಫಿ

ಕುಡಿದು ಹೊರಬರುವಾಗ ಬೆಂಗಳೂರಿನ ನೆನಪಾದರೆ ಅಲ್ಲಿಗೂ ಸೈ. ರಾತ್ರಿ–ಹಗಲು, ಹಳ್ಳ–ಕೊಳ್ಳ, ಏರು–ಇಳಿ, ಒಂದರ ಪರಿವೆಯೂ ಅದಕ್ಕಿಲ್ಲ.

ಪೆಟ್ರೋಲು ನೀರಿಗಿಂತಲೂ ಅಗ್ಗವಾಗಿತ್ತು ಹೆಗಡೆಗೆ.

ಅವನಿಗೂ ನಾಟಕದ ಖಯಾಲಿ. ಇದೇ ಖಯಾಲಿಯ ಮತ್ತೂ ಕೆಲವರು ಅವನೊಡನೆ ಸೇರಿಕೊಂಡ ನಟಶೇಖರರು. ಅವರು ನಾಟಕ ಆಡಬೇಕು. ಆಡುತ್ತಲೂ ಇದ್ದರು.

ಮಲೆನಾಡಿನ ಶ್ರೀಮಂತರ ಮನೆಯ ಮುಂಭಾಗದ ವಿಶಾಲವಾದ ಅಡಕೆಯ ಚಪ್ಪರ ಇವರ ಥಿಯೇಟರ್. ಅದಕ್ಕಾಗಿ ಬೇಕಾದ ಪರದೆ ಸೀನರಿಗಳೆಲ್ಲ ಸಿದ್ಧವಾಗಿರುತ್ತಿತ್ತು. ಹಳ್ಳಿಯ ಜಾತ್ರೆಗಳಾದರೆ ಈ ಕಂಪೆನಿ ಬೇರೆ ಚಪ್ಪರ ಕಟ್ಟಿಕೊಂಡು ಅಲ್ಲಿಯೂ ನಾಟಕವಾಡುತ್ತಿತ್ತು.

"ಹೆಗಡೇರ ಪಾಲ್ಟು"—ಅಂದರೆ ತೀರಿತು. ಹಳ್ಳಿಯ ಜನಕ್ಕೆ ಅಂದೇ ಹಬ್ಬ. ಮಕ್ಕಳು ಮರಿಗಳೊಂದಿಗೆ ಬಂದು ಥಿಯೇಟರೆನ್ನಿಸಿಕೊಳ್ಳುವ ಚಪ್ಪರದ ಬಳಿ ಕಾದು ನಿಲ್ಲುತ್ತಿದ್ದರು. ಹೆಗಡೇರ ಕಾರು ಬಂದಾಗ ಅವರೆಲ್ಲರೂ ಅಲ್ಲಿ ಹೋಗಿ ಮುತ್ತಿಕೊಳ್ಳುತ್ತಿದ್ದರು.

ಅವರವರ ಯೋಗ್ಯತಾನುಸಾರ ಹೋಗಿ ಕುಳಿತುಕೊಳ್ಳಬಹುದು. ಟಿಕೆಟ್ ಪುಸ್ತಕ ಪ್ರಿಂಟ್ ಮಾಡಿಸಿದ್ದರೂ, ದುಡ್ಡು ಕೊಡಲೇಬೇಕೆಂಬ ನಿಯಮವೇನಿರಲಿಲ್ಲ. ಯಾರಿಗೂ ಸಂಬಳ ಕೊಡಬೇಕಾಗಿರಲಿಲ್ಲವಾದ್ದರಿಂದ ಹೆಗಡೆಗೆ ನಾಟಕದ ಹಣದ ಅಗತ್ಯವೂ ಇರಲಿಲ್ಲ.

ಜಾತ್ರೆಯ ಕೊನೆಯಲ್ಲಿ ಎಂಟುನೂರು, ಸಾವಿರ ರೂಪಾಯಿಗಳ "ಬಿಲ್ಲು" ಕೈಗೆ ಬರುತ್ತಿತ್ತು. ಅವನ್ನೆಲ್ಲಾ ಕಾಸೂ ಬಿಡದೆ ತೀರ್ಮಾನ ಮಾಡಿ, ಕೊನೆಯ ನಾಟಕದ ಕಡೆಯ ದೃಶ್ಯದ ಮುನ್ನ ರಂಗಭೂಮಿಯ ಮೇಲೆ ನಿಂತು,—ಕಲೆ!....ಇಂದಿನ ರಂಗಭೂಮಿಯ ದೌರ್ಭಾಗ್ಯ!....ಈ ಬಗ್ಗೆ ದೀರ್ಘ 'ಭಾಷಣ'ಮಾಡಿ, ಅವರೆಲ್ಲರೂ ತನ್ನೊಡನೆ ಸಹಕರಿಸಿ, ಕಲೆಯ ಸೇವೆಯನ್ನು ಮಾಡಿದ್ದಕ್ಕಾಗಿ ಅಭಿನಂದಿಸಿ....ಹೊರಟುಬರುತ್ತಿದ್ದ.

ಹೀಗಾಗಿ ಹೆಗಡೆ ಎಂದರೆ ನಾಟಕ. ನಾಟಕ ಎಂದರೆ ಹೆಗಡೆ ಎನ್ನುವಷ್ಟು ಜನಜನಿತನಾಗಿಬಿಟ್ಟಿದ್ದ.

ನಾಟಕದ ಕಂಪೆನಿಗಳು ಎಲ್ಲಿದ್ದರೂ ಹೆಗಡೆ ಬಿಡುತ್ತಿರಲಿಲ್ಲ. ನಲವತ್ತು

ಮೈಲಿ ದೂರದಲ್ಲಿರಲಿ, ನೂರುಮೈಲಿಯಾಚೆಯಲ್ಲಿಯಿರಲಿ, ಮಧ್ಯಾಹ್ನ ಕಾಫಿ ಕುಡಿದು, "ಪೆಟ್ರೋಲ್" ಹಾಕಿಕೊಂಡು ಹೊರಟರೆ ರಾತ್ರಿ ನಾಟಕದ ಹೊತ್ತಿಗೆ ಹಾಜರ್. ಅಲ್ಲಿ ನಾಟಕದವರ ಪರಿಚಯವಾದರೆ, ಅದು ಯಾರೇ ಆಗಲಿ, ತನ್ನ ಕಾರಿನಲ್ಲಿ ಕೂರಿಸಿಕೊಂಡು, ಸುತ್ತಮುತ್ತಲಿನ ಪ್ರೇಕ್ಷಣೀಯ—ಅಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಿ, ತನ್ನ ಜೊತೆಯಲ್ಲಿ ಅವರಿರುವಾಗ ತಿನ್ನುವಷ್ಟು ಕುಡಿಯುವಷ್ಟು ಹಣ ಸುರಿದು, ಹಿಂದಿರುಗುತ್ತಿದ್ದ.

ನೀರಿಗಿಂತಲೂ ಪೆಟ್ರೋಲು ಅಗ್ಗ, ಪೆಟ್ರೋಲಿಗಿಂತಲೂ ಹಣ ಅಗ್ಗ, ಪೆಟ್ರೋಲು–ಹಣ ಎರಡಕ್ಕಿಂತಲೂ ಹೆಗಡೆ ಅಗ್ಗವಾಗಿದ್ದ ನಾಟಕದವರ ಭಾಗಕ್ಕೆ.

"ರಸಿಕ ರಂಜನ ಮಂಡಳಿ"ಯವರು ಶಿವಮೊಗ್ಗೆಯಲ್ಲಿ ಕ್ಯಾಂಪ್ ಹಾಕಿದಾಗ, ಹೆಗಡೆಯ ಕಾರು ಅಲ್ಲಿಗೂ ಓಡಿತು. "ಸೊಯ್...." ಎಂದು ಬಂದು "ಗಪ್" ಎಂದು ನಿಂತಿತು ಥಿಯೇಟರಿನ ಬಳಿ.

ಜರಿಪೇಟದ ಮ್ಯಾನೇಜರ್ ದೊರೆಸ್ವಾಮಿ ಬಾಗಿಲಿನಲ್ಲೇ ನಿಂತಿದ್ದ. ಯಾರೋ ದೊಡ್ಡ ಮನುಷ್ಯರಿವರೆಂದು ವಿನಯ ಗಾಂಭೀರ್ಯಗಳಿಂದ ಕಾರಿನ ಬಳಿ ಓಡಿಬಂದು ಕೈಕಟ್ಟಿಕೊಂಡು ನಿಂತ.

"ಫಸ್ಟ್ ಕ್ಲಾಸಿಗೆ ಒಂದು ಟಿಕೆಟ್"

—ಎನ್ನುತ್ತಾ ನೋಟಿನ ಕಂತೆಗಳ ಮಧ್ಯದಿಂದ ಒಂದನ್ನೆಳೆದು ಕೊಟ್ಟ ಹೆಗಡೆ.

ದೊರೆಸ್ವಾಮಿ ನಾಟಕದಲ್ಲೇ ಹುಟ್ಟಿ ನಾಟಕದಲ್ಲೇ ಬೆಳೆದವನು. ಮುಖ ನೋಡಿದೊಡನೆ ಜಾತಕ ಬರೆಯುವಷ್ಟು ಚತುರ ಜ್ಯೋತಿಷಿ. ತಲೆಯಮೇಲೆ ಸರ್ಚ್‍ಲೈಟು ಸಿಕ್ಕಿಸಿಕೊಂಡು ಮೊಲದ ಬೇಟೆಯಾಡುವ ಬೇಟೆಗಾರನಷ್ಟು ಸೂಕ್ಷ್ಮ....ಚುರುಕು....ಅವನ ದೃಷ್ಟಿ. ಅವನು ಗುರಿಯಿಟ್ಟು ಹೊಡೆದ ಗುಂಡು ಎಂದೂ ಗಾಳಿಗೆ ಹಾರಿಲ್ಲ.

"ಹ....ಹ....ಹ....ಟಿಕೇಟಿರಲಿ, ತಾವು ದಯಮಾಡಬೇಕು"

—ಅಂದ ದೊರೆ ಅತಿವಿನಯದಿಂದ.

ಠೀಕಾಗಿ ಕಾರಿನಿಂದಿಳಿದ ಹೆಗಡೆ. ಕಾರಿನ ಗ್ಲಾಸುಗಳನ್ನೇರಿಸಿದ.

"ದಪ್" ಎಂದು ಬಾಗಿಲನ್ನು ಮುಚ್ಚಿ ಬೀಗ ಹಾಕಿದ. ಎದೆ ನಿಮಿರಿಸಿಕೊಂಡು ಗಂಭೀರ ಹೆಜ್ಜೆಗಳನ್ನಿಡುತ್ತಾ ಗೇಟಿನ ಬಳಿ ಸಾರಿದ.

"ಟಿಕೆಟು"—ಎಂದ ಹೆಗಡೆ.

"ತಾವು ಒಳಗೆ ದಯಮಾಡ್ಸಿ ಸಾರ್....ಟಿಕೆಟಿಗೇಕೆ ಆತುರ?"

—ಎಂದ ದೊರೆಸ್ವಾಮಿ ಹೆಗಡೆ ಕೊಟ್ಟ ಹತ್ತುರೂಪಾಯಿಗಳ ನೋಟನ್ನು ಜೇಬಿಗಿಳಿಸುತ್ತಾ.

"ಹೀಗೆ ಬರಬೇಕು. ಮಧ್ಯಕ್ಕೆ ದಯಮಾಡಬೇಕು....ಬೇಡ ಬೇಡ ....ಈಚೆ ಪಕ್ಕದಲ್ಲಿ ಕುಳಿತರೇ ಚೆನ್ನ"—ಎನ್ನುತ್ತಾ ಮುಂದಿನ ಸಾಲಿನಲ್ಲಿ ಎಡಭಾಗದ ಸೋಫಾದ ಮೇಲೆ ಹೆಗಡೆಯನ್ನು ಕೂರಿಸಿದ ದೊರೆಸ್ವಾಮಿ.

ಇದು ಅವನು ಉರುಳು ಒಡ್ಡುವ ಕಂಡಿ. ಸ್ಟೇಜಿನಲ್ಲಿ ಎಡಭಾಗದ ವಿಂಗನ್ನು ಓರೆಮಾಡಿದಾಗ, ಈ ಕುರ್ಚಿಯ ಮೇಲೆ ಕುಳಿತ ಜನಕ್ಕೆ ನಾಟಕ ಮಾತ್ರವಲ್ಲದೆ ಸೈಡುವಿಂಗಿನ ಬಳಿನಿಂತ ನಟೀನಟರೂ ಕಾಣಿಸುವಂತಿತ್ತು. ಸಮಯ ಕಾದು ದೊರೆಸ್ವಾಮಿ ಸ್ಟೇಜಿನ ಕೆಲಸದವರಿಗೆ ಈ ವಿಂಗನ್ನು ಓರೆ ಮಾಡುವಂತೆ ಹೇಳುತ್ತಿದ್ದ. ಕುರ್ಚಿಯಮೇಲೆ ಕುಳಿತು ನಾಟಕ ನೋಡುವ ಪ್ರಾಣಿಯದೃಷ್ಟಿ ಈಕಡೆ ಹರಿದರೆ ಶಿಕಾರಿ ಬಿದ್ದಂತೆ.

ದೊರೆ ತನ್ನ ಕಂಪೆನಿಗೆ ಹೆಣ್ಣುಗಳನ್ನು ಆಯುವಾಗ ಬಹಳ ಎಚ್ಚರಿಕೆ ವಹಿಸುತ್ತಿದ್ದ. ಹೆಣ್ಣಿನ ಬಣ್ಣದ ಬೆಲೆ ಅವನಿಗೆ ಗೊತ್ತು. ತನ್ನ ಕೆಲಸಕ್ಕೆ ಅನುಕೂಲರಾಗುವಂತಹ ಹೆಂಗಸರನ್ನೇ ಹುಡುಕಿ ತರುತ್ತಿದ್ದ.

ಅವನ ಸೌಭಾಗ್ಯವೋ, ಇವಳ ಅದೃಷ್ಟವೋ— ಈ ಕಂಪೆನಿಯ ಪ್ರಮುಖ ನಟಿ ಅನಸೂಯಳೇ.

ಬೆಂಗಳೂರನ್ನು ಬಿಟ್ಟು ಮತ್ತೆಲ್ಲೂ ಕದಲದ ಅನಸೂಯಳನ್ನು ಪ್ರಯತ್ನ ಪೂರ್ವಕ ಹಿಡಿದು ತಂದಿದ್ದ ದೊರೆ....ಅಡಿಕೆ ತೋಟದ ಸಾಹುಕಾರ್ರುಗಳ ಪರಿಚಯ ಮಾಡಿಸ್ತೇನೆ ಅಂತ ಆಸೆ ತೋರಿಸಿ.

ದೊರೆಸ್ವಾಮಿಯ "ವೈರ್ ಲೆಸ್ ಟೆಲಿಗ್ರಾಂ" ಅನಸೂಯಳ ಕಿವಿಗೆ ಬಿತ್ತು. ಎಂದಿಗಿಂತಲೂ ಹೆಚ್ಚಿನ ಮುತುವರ್ಜಿಯಿಂದ "ಮೇಕಪ್" ಮಾಡಿಕೊಳ್ಳಲಾರಂಭಿಸಿದಳು.

ಕೆನ್ನೆಯ ಕೆಂಪು ಮತ್ತಷ್ಟು ಏರಿತು. ಕಣ್ಣಿನ ಕಪ್ಪು ರೆಪ್ಪೆಯಂಚನ್ನು

ಸೂಕ್ಷ್ಮವಾಗಿ ಗುರುತಿಸಿ ಸ್ಪಷ್ಟವಾಗಿ ಶೋಭಿಸಿತು. ಕೃತಕ ಹುಬ್ಬು ತನ್ನ ಮಾಮೂಲಿನ ಸ್ಥಳವನ್ನು ಬಿಟ್ಟು ಮೇಲೇರಿ...ಬಿಲ್ಲಿನಂತೆ ಬಾಗಿತು. ಮಧ್ಯಾಹ್ನದಿಂದಲೂ ಸಿಕ್ಕಿಸಿ ಕೊಂಡಿದ್ದ "ಕರ್ಲ್ ಕ್ಲಿಪ್"ಗಳು,....ತಲೆಗೂದಲನ್ನು ಗುಂಗುರು ಗುಂಗುರಾಗಿ ರೂಪಿಸಿದ್ದುವು.

ಮೊಣಕಾಲ ಕೆಳಗಿನವರೆಗೆ ಥಳಥಳಿಸುವ ಜರತಾರಿ ಲೇಸಿನ ಲಂಗ; ಅದರ ಮೇಲೆ ತೆಳುವಾದ ಸೀರೆ. ಅದು ಇದ್ದಂತೆಯೂ ಇರಬೇಕು....ಇಲ್ಲದಂತೆಯೂ ಕಾಣಿಸಬೇಕು.

ಬಿಗಿದು ಕಟ್ಟಿದ ಬಾಡಿ. ಹಿಂದುಗಡೆ ತಿರುಗಿನಿಂತಾಗ ಕುಬುಸದ ಬಟ್ಟೆಯನ್ನೂ ತೂರಿ ಕಾಣಿಸಬೇಕು ಅದ್ದರ ಲಾಡಿ.

ನಾಟಕ ಪ್ರಾರಂಭವಾಯಿತು. ಮೊದಲ ನೃತ್ಯವೇ ಅನಸೂಯಳ ನೃತ್ಯ. ಹೆಜ್ಜೆ ತಪ್ಪಲಿ....ಗೆಜ್ಜೆ ಕಳಚಲಿ ಅದು ನೃತ್ಯವೇ.

ಅಲ್ಲದೆ ಹೆಗಡೆಗೆ ಹೆಜ್ಜೆ ಕಟ್ಟಿಕೊಂಡೇನಾಗಬೇಕು? ಅವನ ಕಣ್ಣಿದ್ದುದು ಹೆಜ್ಜೆಯ ಮೇಲೂ ಅಲ್ಲ, ಗೆಜ್ಜೆಯ ಮೇಲೂ ಅಲ್ಲ.

ಅವಳು ಬಾಗಿದಾಗ, ಅವಳು ಬಳುಕಿದಾಗ, ಕೈಗಳು ಮೇಲೆಹೋದಾಗ, ಕೆಳಗೆಬಂದಾಗ,....ಹಿಗ್ಗುವ ಕುಗ್ಗುವ ಎದೆಯ ವೈಖರಿಯನ್ನು ನೋಡಿ ಬೆರಗಾದ ಹೆಗಡೆ.

ಒಳಗೆ ನಿಂತು ಸೈಡುವಿಂಗಿನ ಸಂದಿನಿಂದ ಹೆಗಡೆಯನ್ನೇ ನೋಡುತ್ತಿದ್ದ ದೊರೆಸ್ವಾಮಿಯ ಕಣ್ಣಿಗೆ ಇದು ಬೀಳದಿರಲಿಲ್ಲ. ಭೇಷ್! ಎಂದು ಕೊಂಡ. ನೃತ್ಯ ಮುಗಿಯುತ್ತ ಬಂತು. ಮುಗ್ಧನಾಗಿ ನೋಡುತ್ತಿದ್ದ ಹೆಗಡೆ.

ಎದೆಯನ್ನು ಮುಂದೆ ಮಾಡಿ, ಕುತ್ತಿಗೆಯನ್ನು ಅತ್ತತಿರುಗಿಸಿ, ಕಣ್ಣುಗಳನ್ನು ಇತ್ತ ಹೊರಳಿಸಿ, ಒಮ್ಮೆ ಒಯ್ಯಾರದಿಂದ ತನ್ನ ದೃಷ್ಟಿಯನ್ನು ಹೆಗಡೆಯ ಮೇಲೆಸೆದು, ಸರ್ರನೆ ಸುತ್ತಿದಳು ಅನಸೂಯ.

ಈ ಬೆಡಗುಗಣ್ಣಿನ ಓರನೋಟ, ಕವಣೆಯ ಕಲ್ಲಿನಂತೆ ಸುಯ್ಯೆಂದು ಬಡಿಯಿತು ಹೆಗಡೆಗೆ.

ಈ ಹಿತ ಪ್ರಹಾರದಿಂದ ಚೇತರಿಸಿ ಕೊಳ್ಳುವಷ್ಟರಲ್ಲೇ ಪರದೆ ಬಿದ್ದು ಬಿಟ್ಟಿತು.

ಭೇಷ್! ಭೇಷ್! ಎನ್ನುತ್ತಾ ಅನಸೂಯಳ ಬೆನ್ನುತಟ್ಟಿದ ದೊರೆ

ಸ್ವಾಮಿ, ಅವಳು ಒಳಗೆ ಬಂದಾಗ.

ನಶ್ಯದ ಡಬ್ಬಿಯನ್ನು ತೆಗೆದು ಚಿಟಿಕೆ ನಶ್ಯವನ್ನು ಮೂಗಿಗೇರಿಸಿ, ಕರವಸ್ತ್ರದಿಂದ ಮೂಗನ್ನೊರೆಸಿಕೊಳ್ಳುತ್ತಾ ಸ್ಟೇಜಿನ–ಹಿಂಬಾಗಿಲಿನಿಂದ ಹೊರಗೆ ಬಂದ. ಮೊದಲನೆಯ ಗೇಟಿಗೆ ಬಂದು, ಕುರ್ಚಿಯ ಹೊಂಡಕ್ಕಿಳಿದು, ಹೆಗಡೆಯ ಪಕ್ಕದಲ್ಲಿದ್ದ ಖಾಲಿ ಕುರ್ಚಿಯನ್ನಲಂಕರಿಸಿದ.

ಮತ್ತೆ ಅನಸೂಯಳ ದೃಶ್ಯ....

ಅವಳ ಉಡಿಗೆ ಆಗಲೇ ಬದಲಾಗಿತ್ತು. ನೀಳವಾಗಿ ಇಳಿಬಿದ್ದ ಜಡೆ ಈಗ ಅಂದವಾಗಿ ಸುತ್ತಿಕೊಂಡಿತ್ತು. ಮುಂಗುರುಳು ಉಂಗುರದಂತೆ ಬಾಗಿ ಹಣೆಯನ್ನು ಮುತ್ತಿಡುತ್ತಿದ್ದುವು. ಅವಳೊಮ್ಮೆ ಮತ್ತೆ ಹೆಗಡೆಯನ್ನು ನೋಡಿದಳು. ಮುಗುಳುನಕ್ಕು ಅತ್ತ ತಿರುಗಿದಳು, ಉಳಿದ ಪ್ರೇಕ್ಷಕರಿಗೆ ಇದು ಅರ್ಥವಾಗದಂತೆ.

ಹೆಗಡೆ ಈ ಲೋಕದಲ್ಲಿರಲಿಲ್ಲ.

"ಸಿಗರೇಟು ಸೇದ್ತೀರಾ ಸಾರ್ ? "—ಅಂದ ದೊರೆ.

ಕನಸಿನ ಲೋಕದಿಂದ ಕೆಳಗಿಳಿದಂತಾಯಿತು ಹೆಗಡೆಗೆ—"ಬೇಡ ! ಬೇಡ ! "—

"ತೆಗೆದುಕೊಳ್ಳಿ ಸಾರ್ ! ಪರವಾಯಿಲ್ಲ."

—ದೊರೆ ಸಿಗರೇಟು ಪ್ಯಾಕನ್ನು ಮುಂದೆ ಹಿಡಿದ.

"ಥಿಯೇಟರಿನ ಒಳಗಡೆ ಸಿಗರೇಟು ಸೇದಬಾರದು ಅಂತ ಸರ್ಕಾರದ ಆಜ್ಞೆಯಿದೆ ಅಲ್ಲವೇ? "—ಎಂದ ಹೆಗಡೆ ಅನುಮಾನದಿಂದ.

"ಸರ್ಕಾರ ಅಂದ್ರೆ ಏನು ಅಂತ ತಿಳ್ಕೊಂಡಿದೀರಾ ಸಾರ್! ನಾವೇ ಸರ್ಕಾರ. ಸರ್ಕಾರವೇ ನಾವು. ನಾಟ್ಕದೋರು ಅಂದ್ರೆ ಸರ್ಕಾರದವರೂ ಮಾತಾಡ್ಸೋಕೆ ಬರೊಲ್ಲ. ಎಳೆಯಿರಿ ನಿಮಗೇಕೆ ಭಯ."

ಹೆಗಡೆ ಸಿಗರೇಟು ಹಚ್ಚಿದ.

"ಕಾಫಿ ತರಿಸಲೇ? "

"ಬೇಡ."

ಮತ್ತೆ ಪರದೆ ಬಿತ್ತು. ದೊರೆಸ್ವಾಮಿ ಏನೋ ಕೆಲಸವಿರುವವನಂತೆ ಎದ್ದು ಹೋದ.

ಪರದೆ ಮೇಲಕ್ಕೆದ್ದಾಗ ಅನಸೂಯಳನ್ನೇ ನೋಡಬಯಸುತ್ತಿತ್ತು ಹೆಗಡೆಯ ಕಣ್ಣು. ರಂಗದ ಮೇಲಲ್ಲದಿದ್ದರೂ ಒಳಗಡೆಯಾದರೂ ಕಾಣಿಸುವಳೋ ಎಂದು ಇಣಿಕಿ ನೋಡಿದ.

ಏನಾಶ್ಚರ್ಯ! ವಿಂಗಿನ ಬಳಿ ಅವಳು ನಿಂತಿದ್ದಾಳೆ. ಅವಳ ದೃಷ್ಟಿ ತನ್ನ ಕಡೆಗೇ ಇದೆ....ಉಹ್ಞು ಮತ್ತೆ ಅತ್ತ ತಿರುಗಿಬಿಟ್ಟಳು. ಅವಳ ಹಿಂದುಗಡೆಯೇ ನಿಂತಿದ್ದಾನೆ ದೊರೆಸ್ವಾಮಿ, ಅವಳ ಬೆನ್ನು ಇವನ ಎದೆಗೆ ತಗುಲುವಷ್ಟು ಸಮೀಪದಲ್ಲಿ.

"ಈ ಪುಣ್ಯಾತ್ಮನ ಭಾಗ್ಯವೇ ಭಾಗ್ಯ."—ಎಂದುಕೊಂಡ ಹೆಗಡೆ.

ನಾಟಕ ಸಾಂಗವಾಗಿ ನಡೆಯುತ್ತಿತ್ತು. ದೊರೆಸ್ವಾಮಿ ಪುನಃ ಬಂದು ಹೆಗಡೆಯ ಬಳಿ ಕುಳಿತುಕೊಂಡ.

"ತಮಗೂ ನಾಟಕ ಅಂದ್ರೆ ತುಂಬಾ ಅಭಿಮಾನವಂತೆ."

—ಅಂದ ದೊರೆ. ಹೌದೆನ್ನುವಂತೆ ನಕ್ಕ ಹೆಗಡೆ.

"ತಾವೂ ಕಂಪೆನಿ ಮಾಡಿದೀರಂತೆ? "

"ಮಾಡಿದೀನಿ. ಇದ್ರೂ ನಮ್ಮದೆಲ್ಲಾ ಏನು ನಾಟ್ಕ ಬಿಡಿ, ಹೀಗೇ ಚಟಕ್ಕೆ ಆಡೋದು".

"ಉಂಟೇ ಸಾರ್! ಅದೂ ಕಲೆ ಅಲ್ವೆ? ನಾವು ಹೊಟ್ಟೆಪಾಡಿಗಾಗಿ ಕಂಪ್ನಿ ಕಟ್ಟಿಕೊಂಡು ಒದ್ದಾಡೋ ಜನ ಏನು ಸಾಧಿಸಬಲ್ಲೆವು ಹೇಳಿ. ದೇವರು ಕೊಟ್ಟ ಅನುಕೂಲವಿರೋ ತಮ್ಮಂಥವರೇ ಮುಂದೆ ಬಂದು ಕಲೆಯ ಸೇವೆ ಮಾಡಬೇಕು ಸಾರ್!"

ದೊರೆಸ್ವಾಮಿಯ ಮಾತಿನಿಂದ ಹೆಗಡೆ ಉಬ್ಬಿಹೋದ— "ಕಲೆಗಾಗಿ ನಾನೂ ಬಹಳ ಕಳೆದಿದ್ದೇನೆ".

"ತಾವು ಬಾಯಿ ಬಿಟ್ಟು ಹೇಳಬೇಕೇ ಸಾರ್ ಅದನ್ನೆಲ್ಲ. ಇಷ್ಟು ದಿನ ಈ ಕಸಬು ಮಾಡ್ಕೊಂಡಿರೋ ನಮಗೆ ಅವೆಲ್ಲ ಗೊತ್ತಾಗೊಲ್ವೆ. ತಮ್ಮ ಮುಖದ ವರ್ಚಸ್ಸೇ ಸಾಕ್ಷಿ ತಮ್ಮಲ್ಲಿರೋ ಕಲಾಭಿಮಾನಕ್ಕೆ".

"ವರ್ಷಕ್ಕೆ ನಾಲ್ಕಾರಾದರೂ ನಾಟಕ ಆಡದೇ ಇದ್ದರೆ ಸಮಾಧಾನವೇ ಇಲ್ಲ ನನಗೆ".

"ಕಲೇನ ಮುಚ್ಚಿಡೋಕೆ ಸಾಧ್ಯವೇ ಸಾರ್! ತಾವು ಹಳ್ಳಿಯಲ್ಲಿದ್ದರೇ

ನಾಯಿತು....ರತ್ನ ಎಲ್ಲಿ ಬಿದ್ದಿದ್ದರೂ ರತ್ನವೇ. ಅದರ ಪ್ರಭೆ ಹೇಗೆ ಅಡಗೀತು?"

"ನನ್ನ ಹತ್ರ ಸಾವಿರಾರು ರೂಪಾಯಿಗಳ ನಾಟಕದ ಸಾಮಾನುಗಳಿವೆ. ಪರದೆ–ಸೀನರಿ–ಹಾರ್ಮೋನಿಯಂ–ತಬಲ...."

—ಇನ್ನೂ ಏನೇನೋ ಹೇಳುವುದರಲ್ಲಿದ್ದ ಹೆಗಡೆ.

"ಕೇಳಿದೇನೆ ಕೇಳಿದೇನೆ, ತಮ್ಮ ವಿಚಾರ ಎಲ್ಲ ತಿಳಿದುಕೊಂಡಿದೇನೆ ಸಾರ್! ತಾವು! ತಮ್ಮಮನೆ!....ತಮ್ಮವಂಶ!....ತಮ್ಮ ಬಂಧುಗಳು!....ತಮ್ಮ ಅನುಕೂಲ....ಎಲ್ಲ ಈ ಬಡಪಾಯಿಗೆ ಗೊತ್ತಿದೆ."

ಜರಿ ರುಮಾಲನ್ನು ಧರಿಸಿ, ಇಸ್ತ್ರಿಕೋಟು ಹಾಕಿಕೊಂಡು, ಮಲ್ಲಿನ ಪಂಚೆಯನ್ನುಟ್ಟು, ಕಂಠಕೌಪೀನವನ್ನು ಬಿಗಿದುಕೊಂಡ ಈ 'ಬಡಪಾಯಿ' ಮತ್ತೊಂದು ಚಿಟಿಕೆ ನಶ್ಯವನ್ನು ಮೂಗಿಗೇರಿಸಿದ—

"ತಾವು ಕಾಫಿ ತೆಗೆದುಕೊಳ್ಳಲೇ ಇಲ್ಲ".

"ಬೇಡ".

"ಇಲ್ಲಿ ಇಷ್ಟೊಂದು ಜನ ಕುಳಿತಿದ್ದಾರಲ್ಲ ಅಂತ ತಮಗೆ ಸಂಕೋಚವೇನೋ?....ಬನ್ನಿ ಒಳಗೆ ಹೊಗೋಣ ಸ್ಟೇಜಿನೊಳಗೇ ತರಿಸ್ತೇನೆ ಕಾಫೀನ".

ಸ್ಟೇಜಿನ ಒಳಗೆ ಎಂದು ಕೇಳಿದ ಕೂಡಲೇ ಕಿವಿ ನಿಮಿರಿತು ಹೆಗಡೆಗೆ. ಅವನ ಕಣ್ಣು ತನ್ನಷ್ಟಕ್ಕೆ ಸೈಡು ವಿಂಗಿನ ಕಡೆ ತಿರಗಿತು—

ಅಲ್ಲಿ ಎಲ್ಲಿಯೋ ನೋಡುತ್ತ ನಿಂತಿದ್ದಳು ಅನಸೂಯ.

"ಹೋಗೋಣ್ವೆ ಸಾರ್! "—ಎಂದ ದೊರೆ ಪುನಃ.

"ಹೂ"—ಎಂದು ಮೇಲೆದ್ದ ಹೆಗಡೆ.

ಥಳಕು ಬೆಳಕುಗಳಿಂದ ಕುರುಡಾಗಿ ಹೆಗಡೆ ಗ್ರೀನು ರೂಮಿನಲ್ಲಿ ಕಾಲಿಟ್ಟ. ಕನ್ನಡಿಗಳ ಮುಂದೆ ಸಾಲಾಗಿ ಕುಳಿತಿದ್ದರು ನಟರು ಮೇಕಪ್ ಮಾಡಿಕೊಳ್ಳುತ್ತಾ. ಕೆಲವರು ಪಾತ್ರದ ಬಟ್ಟೆಗಳನ್ನು ಬದಲಾಯಿಸುತ್ತಿದ್ದರು. ತಂತಿಯ ಮೇಲೆ ಕಳಚಿಟ್ಟ ಥಳುಕಿನ ಬಟ್ಟೆಗಳು ಪಳಪಳನೆ ಹೊಳೆಯುತ್ತಿದ್ದುವು.

"ಇಷ್ಟೇ ಸ್ವಾಮಿ ಬಡವರ ಬಂಡವಾಳ. ಇದೇ ನೋಡಿ ಬಡವರ ಕಂಪೆನಿ ಗ್ರೀನ್‌ರೂಮು."

"ನಮ್ಮ ಕಂಪೆನಿಗೂ ಇಲ್ಲಿಗೂ ಎಷ್ಟು ವ್ಯತ್ಯಾಸ." ಎಂದುಕೊಂಡ ಹೆಗಡೆ.

ದೊರೆಸ್ವಾಮಿ ಎಲ್ಲವನ್ನೂ ತೋರಿಸುತ್ತಾ ಮುಂದುವರೆದ—

"ಇದು ಜಂಗಲು ಸೀನು ; ಇದು ಕೃಷ್ಣಲೀಲಾಕ್ಕೆ ಬೇಕಾಗುವ ರಥ; ಇದು ನೋಡಿ ಬಿಲ್ಲುಗಳು; ಈ ವಿಂಗುಗಳೆಲ್ಲಾ ನೆಲದ ಮೇಲೆ ನಿಂತಿಲ್ಲ, ಗಡಗಡೆಯ ಮೇಲೆ ನೇತಾಡುತ್ತಿವೆ. ಟ್ರಿಕ್‌ಸೀನು ಮಾಡುವಾಗ ಇವೆಲ್ಲಾ ಅಗತ್ಯ ನಮಗೆ.

ಹೇಳಿದ್ದಕ್ಕೆಲ್ಲ ಹೂ ಎನ್ನುತ್ತಾ ಹೋದ ಹೆಗಡೆ. ಮತ್ತೆ ಏನು ಹೇಳಲೂ ಅವನಿಂದ ಸಾಧ್ಯವಾಗುವಂತಿರಲಿಲ್ಲ.

"ಈ ನೀರು ಏಕೆ"—ಅಂದ ಹೆಗಡೆ, ಸ್ವಿಚ್ ಬೋರ್ಡಿನ ಬಳಿ ಇದ್ದ ಪಿಂಗಾಣಿಯ ಕೊಳವೆಯನ್ನು ತೋರಿಸುತ್ತಾ.

"ಮುಟ್ಟಬೇಡಿ ಸಾರ್! ಕೈಹಾಕಿದರೆ ಅಪಾಯ! ಅದು ಡಿಮ್ಮರ್ ಅಂತ ಬೆಳಕನ್ನು ಮಂಕು ಮಾಡಲು ಬೇಕಾಗುತ್ತೆ."

ಹೆಗಡೆ ಮಂಕನಂತೆ ನೋಡುತ್ತಾ ಹೋದ.

ಮುಂದಿನ ದೃಶ್ಯ ನಡೆಯುತ್ತಿತ್ತು. ಹಿಂದಿನ ದೃಶ್ಯಕ್ಕಾಗಿ ನಟನಟಿಯರು ರಸ್ತೆಯ ಪರದೆ ಮೇಲೇಳುವುದನ್ನೇ ನಿರೀಕ್ಷಿಸುತ್ತಾ ಸಿದ್ಧರಾಗಿ ನಿಂತಿದ್ದರು. ಅವರ ಮಧ್ಯೆ ಗಂಡು ಹೆಣ್ಣುಗಳ ಪರಿವೆಯೇ ಇಲ್ಲದಂತೆ ತೂರಿಕೊಂಡು ಹೋದ ದೊರೆಸ್ವಾಮಿ.

ಹೆಗಡೆ ಎರಡು ಹೆಜ್ಜೆ ಮುಂದಿಟ್ಟ. ಹೆಂಗಸರೆದುರು ಹೆಜ್ಜೆ ಹಾಕಲು ಕಾಲು ನಡುಗುತ್ತಿತ್ತು.

"ಟಪ್"—ಎಂದು ದೀಪವಾರಿಹೋಯಿತು.

"ಬೇಗ ದಾಟಿಬಿಡಿ ಸಾರ್! ಪರದೆ ಎತ್ತಿಬಿಡ್ತಾರೆ."

—ಎಂದು ಅವಸರದಿಂದ ಕೂಗಿದ ದೊರೆ.

ಕತ್ತಲಲ್ಲಿ ತಡವರಿಸುತ್ತಾ ಗಾಬರಿಯಿಂದ ಓಡಿಬಂದ ಹೆಗಡೆ. ಹೆಗಡೆ ಒಳಗೆ ದಾಟಿದ ನಂತರ ಪರದೆ ಮೇಲೆದ್ದಿತು. ದೀಪಗಳು ಹತ್ತಿಕೊಂಡವು.

ರಂಗದ ಮತ್ತೊಂದು ಭಾಗವನ್ನು ತೋರಿಸತೊಡಗಿದ ದೊರೆಸ್ವಾಮಿ. ಹೆಂಗಸರ ಗ್ರೀನುರೂಮಿನ ಬಳಿ ಬಂದ.

"ಇದು ಹೆಂಗಸರ ಗ್ರೀನ್‌ರೂಮು. ಇಲ್ಲಿ ಮೇಕಪ್ ಮಾಡಿಕೊಳ್ಳು ವುದು ಹೆಂಗಸರು ಮಾತ್ರ."

ಹೆಗಡೆ ಎರಡು ಹೆಜ್ಜೆ ಮುಂದಿಟ್ಟ. ಇಣಿಕಿ ನೋಡಿದ.

ಎದುರಲ್ಲೇ ಕುಳಿತಿದ್ದಳು ಅನಸೂಯ, ಕೇವಲ ಲಂಗ ಬಾಡಿಗಳಲ್ಲಿ. ಕನ್ನಡಿಯಲ್ಲಿ ಮುಖವನ್ನು ನೋಡುತ್ತಾ ಎರಡೂ ಕೈಗಳಿಂದ ತನ್ನ ತುರು ಬನ್ನು ಅಲಂಕರಿಸಿಕೊಳ್ಳುತ್ತಿದ್ದಳು.

ಒಂದು ಪಕ್ಕದಿಂದ ನೋಡಿದ ಹೆಗಡೆ.

ತಿರುಗಿ ನೋಡಿ, ಗಾಬರಿಯಾದವಳಂತೆ ಸರ‍್ರನೆ ಮೇಲೆದ್ದಳು ಅನ ಸೂಯ.

ಸಟ್ಟನೆ ಹಿಮ್ಮೆಟ್ಟಿದ ಹೆಗಡೆ, ಹಿಂದುಗಡೆಯೇ ನಿಂತ ದೊರೆಸ್ವಾಮಿಗೆ ಬಲವಾಗಿ ಡಿಕ್ಕಿ ಕೊಡುತ್ತಾ.

"ಏನಾಯ್ತು ಸಾರ್!"

—ದೊರೆಸ್ವಾಮಿ ಕಳವಳಗೊಂಡವನಂತೆ ಕೇಳಿದ ಹೆಗಡೆಯ ಭುಜ ವನ್ನು ಗಟ್ಟಿಯಾಗಿ ಹಿಡಿದುಕೊಂಡು.

"ಯಾರೋ ಇದ್ದಾರೆ ಒಳಗೆ."

"ಯಾರು ಒಳಗೆ? ಈ ಪರದೇನಾದರೂ ಎಳೆದುಕೊಳ್ಳಬಾರದೇ ?"

—ಎಂದ ದೊರೆಸ್ವಾಮಿ ಸಹನೆಯಿಲ್ಲದವನಂತೆ.

"ಯಾರಿಗೆ ಗೊತ್ತು, ನೀವು ಬರ‍್ತೀರಾ ಅಂತ!"

—ಅಂದಳು ಅನಸೂಯ ಕೋಗಿಲೆಯನ್ನು ಅಣಕಿಸುವಂತೆ.

ಈ ಇಂಪಿನೊಂದಿಗೆ ಒಳಗಿನಿಂದ ಬರುವ ಮಲ್ಲಿಗೆಯ ತಂಪು ಮೂಗಿಗೆ ಬಡಿಯುತ್ತಿತ್ತು ಹೆಗಡೆಗೆ.

* * * *

ರಂಗದ ಪಕ್ಕದಲ್ಲೇ ಸೈಡುವಿಂಗಿನ ಬಳಿ ಕುರ್ಚಿ ಹಾಕಿಸಿದ ದೊರೆ ಸ್ವಾಮಿ—

"ಇಲ್ಲಿಗೂ ನಾಟ್ಯ ಕಾಣುತ್ತೆ....ನೋಡ್ತಾ ಇರಿ ಸಾರ್!"

ಪುನಃ ಅನಸೂಯಳ ದೃಶ್ಯ. ಈ ಬಾರಿ ಕರಿಯ ಸೀರೆ ಕರಿಯ ಕುಪ್ಪಸಗಳನ್ನು ಧರಿಸಿದ್ದಳು. ಕಪ್ಪು ಕೆಂಪುಗಳ ಸಮ್ಮಿಶ್ರಣದಿಂದ, ವಿದ್ಯು

ದ್ವೀಪದ ಬೆಳಕಿನಲ್ಲಿ ಅಪ್ಸರೆಯಂತೆ ಕಂಡಳು ಹೆಗಡೆಯ ಕಣ್ಣಿಗೆ.

ದೃಶ್ಯ ಮುಗಿದು ಅವಳು ಒಳಗೆ ಬಂದಾಗ ದೊರೆ ಅವಳನ್ನು ಸಮೀಪಕ್ಕೆ ಕರೆದ—

"ಇವರು ಮಲೆನಾಡಿನ ಭಾರಿ ಶ್ರೀಮಂತರು. ಒಳ್ಳೆಯ ಕುಟುಂಬದವರು. ಕಲೆ ಅಂದರೆ ತುಂಬಿದ ಅಭಿಮಾನ."

"ನಮಸ್ಕಾರ!"

—ಅಂದಳವಳು ನಮ್ರತೆಯಿಂದ ಎರಡೂ ಕೈಗಳನ್ನು ಜೋಡಿಸಿ. ಅವಳು ನಮಸ್ಕರಿಸುವ ಚಮತ್ಕಾರಕ್ಕೆ ಎಂಥವರೂ ಬಲಿಬೀಳಬೇಕು. ನಾಟಕಗಳಲ್ಲಿ ದಕ್ಷತೆಯಿಂದ ಅಭಿನಯಿಸುವ ಯೋಗ್ಯತೆಯಿಲ್ಲದಿದ್ದರೂ, ಗಂಡಸರನ್ನು ಆಕರ್ಷಿಸುವ 'ಯಕ್ಷಿಣಿ'ಯನ್ನವಳು ಕಲಿತಿದ್ದಳು.

ಹೆಗಡೆ ದಂಗಾಗಿ ನೋಡಿದ ಅಷ್ಟೆ. ಯಾರಿಗೂ ಪ್ರತಿ ನಮಸ್ಕಾರ ಮಾಡುವ ಅಭ್ಯಾಸ ಅವನದಲ್ಲ.

"ಇವರು ಅನಸೂಯಾದೇವಿ ಅಂತ. ತಾವು ಇವರ ಹೆಸರನ್ನು ಕೇಳಿರಬಹುದು. ಆಗಾಗ ಪೇಪರುಗಳಲ್ಲಿ ಬರ್‍ತಾ ಇರುತ್ತೆ. ಕೆಲವು ಸಿನಿಮಾಗಳಲ್ಲೂ ಪಾರ್ಟು ಮಾಡಿದ್ದಾರೆ."—ಅಂದ ದೊರೆ.

"ಯಾವುದರಲ್ಲಿ? "—ಎಂದು ಕೇಳಿದ ಹೆಗಡೆ. ಅವನು ಯಾವ ಸಿನಿಮಾವನ್ನೂ ಬಿಟ್ಟಿರಲಿಲ್ಲ.

"ಬಹಳ ಹಿಂದೆ....ಹಿಂದೆ....ಹಿಂದಿ ಚಿತ್ರ...."ಫೈಟಿಂಗ್ ಗರ್ಲ್! "....ನೋಡಿದೀರಾ?"

ಹೆಗಡೆಗೆ ಈ ಚಿತ್ರದ ನೆನಪೇ ಇದ್ದಂತಿರಲಿಲ್ಲ.

"ನೋಡಿಲ್ಲ"—ಅವನೆಂದ.

"ಅದರಲ್ಲಿ 'ಥರ್ಡ್ ಹೀರೋಯಿನ್' ಇವರೇ."

ಮತ್ತೇನೋ ಕೇಳಬೇಕೆಂದಿದ್ದ ಹೆಗಡೆ. ಅಷ್ಟರಲ್ಲೇ ದೊರೆಸ್ವಾಮಿ ಮೂಗಿಗೆ ನಶ್ಯ ಏರಿಸಲಾರಂಭಿಸಿದ.

"ಕಾಫಿ ಬಂತು........"

"ಅತಿಥಿಗಳು ಮನೆಗೆ ಬಂದಿದಾರೆ. ನೀನೇ ಕೊಟ್ಟುಬಿಡು ಕಾಫೀನ."

—ಅಂದ ದೊರೆ ಅನಸೂಯಳನ್ನು ಕುರಿತು.

ಅವಳು ನಾಚಿಕೊಂಡಂತೆ ತಲೆತಗ್ಗಿಸಿದಳು.

"ಹೂ" ಎಂದ ದೊರೆ.

ಕೆಟಲಿನಿಂದ ಕಾಫಿಯನ್ನು ಲೋಟಕ್ಕೆ ಹಾಕಿದಳು ಅನಸೂಯ. ಹೆಗಡೆಯ ಮುಂದೆ ಹಿಡಿದಳು—

"ತೆಗೆದುಕೊಳ್ಳಿ."

ಹೆಗಡೆ ಲೋಟಕ್ಕೆ ಕೈಹಾಕಿದ. ಕೈಗೆ ಕೈ ತಗುಲಿತು.

"ನೀವೂ ತೆಗೆದುಕೊಳ್ಳಿ."—ಎಂದ ಹೆಗಡೆ.

"ನನಗೀಗ ಸಮಯವಿಲ್ಲ. ಡ್ರೆಸ್ ಛೇಂಜುಮಾಡಿ ಬರಬೇಕು."

—ಎನ್ನುತ್ತಾ ಗಡಿಬಿಡಿಯಿಂದ ಹೊರಟುಹೋದಳು ಅನಸೂಯ.

* * * *

"ಹೊರಗೆ ಹೋಗೋಣವೇ ಸಾರ್!"—ಅಂದ ದೊರೆ.

"ನಾನು ಇಲ್ಲಿದ್ದರೆ ನಿಮಗೆ ತೊಂದರೆಯೇನು?"—ಅಂದರು ಹೆಗಡೆಯವರು.

"ತೊಂದ್ರೆ ನನಗಲ್ಲ. ಕಂಪೆನಿ ಹೆಣ್ಣು ಮಕ್ಕಳು ತಿರುಗಾಡೋ ಸ್ಥಳ. ಅವರಿಗೆ ಸಂಕೋಚವಾಗುತ್ತಲ್ಲಾ ಅಂತ."

"ಹೋಗೋಣ."

—ಎಂದು ಮನಸ್ಸಿಲ್ಲದ ಮನಸ್ಸಿನಿಂದ ಮೇಲೆದ್ದ ಹೆಗಡೆ.

ಹೊರಗ ಬಂದು ಪುನಃ ತನ್ನ ಸ್ಥಳದಲ್ಲಿ ಕುಳಿತ. ಮ್ಯಾನೇಜರು, ಪ್ರೊಪ್ರೈಟರು, ಸಮಯ ಬಂದ್ರೆ ಕಸ ಗುಡಿಸುವವನೂ ಆಗಬಲ್ಲ ದೊರೆಸ್ವಾಮಿಯೂ ಹೆಗಡೆಯ ಪಕ್ಕದಲ್ಲಿ ಬಂದು ಕುಳಿತ.

* * * *

"ಈ ಊರು ಏನೂ ಸುಖವಿಲ್ಲ ಸಾರ್. ಬಹಳ ಪೆಟ್ಟು ಕೊಟ್ಟುಬಿಟ್ಟಿತು."—ದೊರೆಸ್ವಾಮಿ ತನ್ನ ಮಾಮೂಲಿನಂತೆ ಪೀಠಿಕೆ ಹಾಕಿದ.

"ಕಲೆಗೆ ಕಾಲ ಇಲ್ಲ ಮೇನೇಜ್ರೆ"—ಎಂದರು ಹೆಗಡೆಯವರು.

"ಯಾಕೆ ಹೇಳ್ತೀರಿ ನಮ್ಮ ತಾಪತ್ರಯವನ್ನ. ಬೆಳಗಾದರೆ ಎಣಿಸಬೇಕು ಐನೂರು ರೂಪಾಯಿ. ಆಗೋ ಕಲೆಕ್ಷನ್ ನೋಡ್ತೀರೋ—ಗೊತ್ತಿದೆಯಲ್ಲ ನಿಮಗೆ ನಾಟಕದ ಕಂಪೆನಿ ಹಣೆ ಬರಹ".

"ಪಾಪ! ಪಾಪ! ತುಂಬಾ ಕಷ್ಟ"

—ಹೆಗಡೆ ಸಹಾನುಭೂತಿಯಿಂದ ನುಡಿದ.

"ಕಷ್ಟ ಯಾರಿಗೆ ಹೇಳಿಕೊಳ್ಳೋಣ ಸಾರ್! ಎಲ್ಲ ಬಾಯಿನಲ್ಲಿ ಪಾಪ ಅನ್ನೋರೆ ಹೊರತು ಕೈನಲ್ಲಿ ಏನೂ ಮಾಡೊಲ್ಲ".

ಹೆಗಡೆ ಚುರುಕಾದ.

"ಇವತ್ತು ಸಾಯಂಕಾಲ ತಮ್ಮ ಮುಖ ಕಂಡಾಗಲೇ ನಮ್ಮ ಭಾಗದ ದೇವರನ್ನು ಕಂಡಷ್ಟು ಸಂತೋಷವಾಯಿತು. ತಾವು ದೊಡ್ಡ ಮನಸ್ಸು ಮಾಡಿದರೆ...."

"ಏನು?"—ಎಂದ ಹೆಗಡೆ.

"ಯತ್ಕಿಂಚಿತ್ ಸಹಾಯ. ನಾಳೆ ಒಂದೇ ದಿನ. ಮತ್ತೆ ನಾಡಿದ್ದು ನಿಮ್ಮ ಹಣವಾಪಸ್ ಮಾಡಿಬಿಡ್ತೇನೆ".

"ಎಷ್ಟು?"

"ಹೆಚ್ಚು ಬೇಡ. ಐನೂರು ಮಾತ್ರ ದೇವ್ರು. ಈ ಐನೂರರಲ್ಲಿ ಇನ್ನೂರು ರೂಪಾಯಿ ನಾನು ಅನಸೂಯಾ ದೇವಿಯವರೊಬ್ಬರಿಗೇ ಕೊಡ ಬೇಕು".

ಗಾಬರಿಯಾದ ಹೆಗಡೆ.

"ಈ ತಿಂಗಳು ನಾನು ಅವರಿಗೆ ಸಂಬಳಾನೇ ಕೊಟ್ಟಿಲ್ಲ".

"ನಾನು ಹಣ ತಂದಿಲ್ಲ".

"ತಮ್ಮ ಹತ್ರ ಇರೊಲ್ವೆ ಸಾರ್! ಲಕ್ಷ್ಮಿಪುತ್ರರು ನೀವು. ಚೆಕ್ ಪುಸ್ತಕ ಜೇಬಿನಲ್ಲಿಟ್ಟುಕೊಂಡೇ ಓಡಾಡೋರು. ನನಗೆಲ್ಲಾ ತಿಳಿದಿದೆ ಸಾರ್! ತಮ್ಮ ಮನೆ....ತಮ್ಮ ವಂಶ....ತಮ್ಮ ಧಾರಾಳ....

ಹೆಗಡೆ ಮಾತಾಡಲಿಲ್ಲ. ದೊರೆಸ್ವಾಮಿ ಹೊರಟು ಹೋದ.

* * * *

ನಾಟಕ ಬಿಟ್ಟಮೇಲೆ ಹೆಗಡೆ ಕಾರಿನಲ್ಲಿ ಕುಳಿತ.

"ಸ್ವಲ್ಪ ಇರ್ತೀರಾ ಸಾರ್! ದಯವಿಟ್ಟು. ಅನಸೂಯಾದೇವೀನೂ ಬರ್ತಾರಂತೆ. ಹಾಗೇ ನಮ್ಮನ್ನ ಮನೆ ಹತ್ರ ಬಿಟ್ಟುಬಿಟ್ಟು ತಾವು ದಯ ಮಾಡ್ಸಿ".

ತನ್ನ ಕಾರಿನ ಮೇಲೆ ಅನಸೂಯ! ಇದು ತನ್ನ ಭಾಗ್ಯವೋ....ತನ್ನ ಕಾರಿನ ಭಾಗ್ಯವೋ?

ಕಾರು ನಿಲ್ಲಿಸಿ ಕಾದು ಕುಳಿತ ಹೆಗಡೆ.

ಕತ್ತಲಿನಲ್ಲಿ ಬಂದು ಕಾರಿನಲ್ಲಿ ಕುಳಿತಳು ಅನಸೂಯ. ಅವಳ ಮುಖ ನೋಡಬೇಕೆಂದು ಬಯಸಿದ ಹೆಗಡೆಗೆ ಕತ್ತಲಿನಲ್ಲಿ ಸ್ಪಷ್ಟವಾಗಿ ಕಾಣಿಸಲಿಲ್ಲ. ಹಿಂದಿನ ಸೀಟಿನಲ್ಲಿ ಅವಳೊಡನೆ ದೊರೆಸ್ವಾಮಿಯೂ ಬಂದು ಕುಳಿತ.

ಕಾರು ಹೊರಟಿತು.

"ಆವಾಗ ನಾನು ಹೇಳಿದ್ದು" —ಎಂದ ದೊರೆ ಪುನಃ.

"ಏನು ವಿಚಾರ?"—ಅಂದಳು ಅನಸೂಯ.

"ನಮ್ಮ ನಮ್ಮ ವಿಚಾರ, ಹೀಗೇ ಇರುತ್ತಲ್ಲ ವ್ಯವಹಾರ".

"ನನಗೆ ಹೇಳಬಾರದೇ?"

"ನಾಳೇ ಬಟವಾಡೆಗೆ ಸ್ವಲ್ಪ ಹಣ ಕೇಳಿದೆ. ಕೊಡುವ ಮನಸ್ಸೂ ಇದೆ ಸಾಹುಕಾರ್ರಿಗೆ. ನಮ್ಮ ನಂಬಿಕೆಯಿಲ್ಲ ಅಂತ ತೋರುತ್ತೆ ಅಷ್ಟೆ".

"ನಂಬಿಕೆ ಪ್ರಶ್ನೆ ಅಲ್ಲ ಮೇನೇಜ್ರೆ" —ಎಂದರು ಹೆಗಡೆಯವರು.

"ಮತ್ತೇನು ಸ್ವಾಮಿ?"—ಎಂದ ದೊರೆ.

"ಹಣ ಇಲ್ಲ ಅಂತ ಕಾಣುತ್ತೆ. ಪಾಪ ಏಕೆ ಒತ್ತಾಯ ಮಾಡ್ತೀರಿ?" —ಅಂದಳು ಅನಸೂಯ.

ಹೆಗಡೆಗೆ ಈ ಏಟು ಬಲವಾಗಿ ಬಿತ್ತು. ಅನಸೂಯಳೆದುರು ತನ್ನ ಶ್ರೀಮದ್ಗಾಂಭೀರ್ಯ ಮುಗುಚಿ ಕೊಂಡಿತ್ತು.

"ಎಷ್ಟು ಕೇಳಿದಿರಿ?"—ಅವನೆಂದ.

"ಐನೂರು ಮಾತ್ರ. ತಾವು ಹಣವನ್ನೇ ಕೊಡಬೇಕು ಅಂತೇನಿಲ್ಲ. ಚೆಕ್ ಬರೆದು ಕೊಟ್ರೂ ಸಾಕು. ನನಗೇ ಕೊಡಿ ಅಥವಾ ನನ್ನ ಅನುಮಾನ ಇದ್ರೆ, ಅನಸೂಯಾ ದೇವಿಯವರ ಹೆಸರಿಗೇ ಕೊಡಿ,– ಎಲ್ಲ ಒಂದೇ".

ಕಂಪೆನಿ ಮನೆಯೆದುರು ಕಾರುನಿಂತಿತು. ಹೆಗಡೆ ಜೇಬಿನಿಂದ ಚೆಕ್ ಪುಸ್ತಕ ತೆಗೆದ—

"ತಮ್ಮ ಹೆಸರು".

"ದೊರೆಸ್ವಾಮಿ, B. A. ಅಂತ".

"ನೀವು ಗ್ರ್ಯಾಜುಯೇಟೋ?"

"ಅದಾಗಿದ್ರೆ ಈ ಕಸುಬು ಯಾಕೆ ಬೇಕಿತ್ತು ದೇವ್ರು. ನನ್ನ ಹುಟ್ಟೂರು ಬೆಂಗಳೂರು....ಅದಕ್ಕಾಗಿ B. ನಮ್ಮ ಅಪ್ಪನ ಹೆಸರು ಅಪ್ಪಣ್ಣ ಅಯ್ಯಂಗಾರ್ ಅಂತ, ಅವರ ಸ್ಮರಣಾರ್ಥವಾಗಿ A. ಈ ಎರಡೂ ಒಟ್ಟಿಗೆಸೇರಿ "B. A." ಆಗಿದೆ.

"ಹಾಗಾದ್ರೆ ಈ B. A. ನಿಮ್ಮ ಹೆಸರಿನ ಹಿಂದೆ ಬರಬೇಕು".

"ಹಿಂದಿದ್ರೇನು....ಮುಂದಿದ್ರೇನು? ಈ ಜನಿವಾರದವರಿಗೆ ಎರಡೂ ಒಂದೆ ಅಲ್ವೆ ದೇವ್ರು? ಆದ್ದರಿಂದ ಈಎರಡಕ್ಷರ ಹೆಸರಿನ ಮುಂದೇ ಹಾಕಿಕೊಳ್ಳುವುದು ನನ್ನ ರೂಢಿ".

ಚೆಕ್ ಬರೆದು ಕೈಗೆ ಕೊಟ್ಟ ಹೆಗಡೆ.

"ತುಂಬಾ ಥ್ಯಾಂಕ್ಸ್"—ಎನ್ನುತ್ತಾ ಕಾರಿನಿಂದಿಳಿದ ದೊರೆ.

"ನಾನು ಹೊರಡುತ್ತೇನೆ. ಅನಸೂಯಾದೇವಿ ಬೇರೆ ಮನೆ ಮಾಡಿದಾರೆ. ಒಂದು ಫರ್ಲಾಂಗ್ ಆಚೆಯಿದೆ. ಅವರು ತೋರಿಸ್ತಾರೆ ಮನೇನ, ದಯವಿಟ್ಟು ಬಿಟ್ಟುಬಿಟ್ಟು ಹೋಗಿ".

*　　*　　*　　*

ಹೆಗಡೆಗೆ ಸ್ಟಿಯರಿಂಗ್ ಹಿಡಿಯುವುದಕ್ಕೂ ಕೈನಡುಗುತ್ತಿತ್ತು. ಭಯದಿಂದಲ್ಲ ಉದ್ವೇಗದಿಂದ.

"ಇದೇ ಮನೆ"—ಎಂದಳವಳು.

"ಹೋಗ್ಬಿಟು ಬರ್ತೀರಾ ನಮಸ್ಕಾರ!"

—ಎಂದ ಹೆಗಡೆ ತನ್ನ ಜೀವಮಾನದಲ್ಲಿ ಮೊಟ್ಟಮೊದಲು ಕೈ ಮುಗಿಯುತ್ತಾ.

"ಬಡವರ ಮನೆಗೆ ತಾವೂ ಬರಬಾರದೇನು?"

ಹೆಗಡೆ ಮೌನ. ಅವನ ರಕ್ತದ ಒತ್ತಡ ಹೆಚ್ಚಾಯಿತು.

"ಬಂದು ಹೋಗಿ. ಕಾಫಿ ಮಾಡ್ತೇನೆ. ಕುಡುಕೊಂಡು ಹೋಗುವಿರಂತೆ".

ಅವಳನ್ನು ಮೀರುವ ಶಕ್ತಿಯಿರಲಿಲ್ಲ. ಮನಸ್ಸೂ ಇರಲಿಲ್ಲ. ಕಾರಿನಿಂದಿಳಿದು ಮನೆಯನ್ನು ಪ್ರವೇಶಿಸಿದ.

ಅನಸೂಯ ಕಾಫಿ ಮಾಡಿ ತಂದುಕೊಟ್ಟಳು.

ಮತ್ತೆ ಮಾತಿಗೇ ಅವಕಾಶ ಕೊಡಲಿಲ್ಲ—"ಹೋಗಿ ಬಿಟ್ಟು ಬರ್ತ್ತೀರಾ?" —ಅವಳೆಂದಳು.

ಹೆಗಡೆ ಇದನ್ನು ನಿರೀಕ್ಷಿಸಿರಲಿಲ್ಲ. ಬೆಪ್ಪಾಗಿ ಹೊರಗೆಬಂದ.

ಕಾರು ಮುಂದೆ ಹೊರಟಿತು.

ನಾಟಕಕ್ಕೆ ಹೋಗುವ ಮುನ್ನ ದೊರೆಸ್ವಾಮಿಯ ಕೈಲಿ ಕೊಟ್ಟ ಹತ್ತು ರೂಪಾಯಿಗಳ ನೆನಪೇ ಬರಲಿಲ್ಲ ಹೆಗಡೆಗೆ.

## ೩೧

ಗಂಡಸರ ಮನೋಭಾವ ಅದರಲ್ಲೂ ಹಣದ ಹಮ್ಮಿರುವ ಯುವಕರ ದೌರ್ಬಲ್ಯದ ಅರಿವು ಅನಸೂಯಳಿಗಿತ್ತು. ಹೆಗಡೆ ಅವಳಿಗೆ ಹೊಸಬನಾದರೂ ಹೆಗಡೆಯಂತಹ ಜನ ಹೊಸಬರಾಗಿರಲಿಲ್ಲ.

ಕಾಮುಕ ಗಂಡಸಿನ ಅಂತಿಮ ಮನೋಭೀಷ್ಟ ತೃಪ್ತಿ. ಅದು ತೀರಿತೆಂದರೆ ಅವನಿಗೆ ಇದು ಬೇಡಾಗಿ ಮತ್ತೊಂದನ್ನು ಹುಡುಕುತ್ತಾನೆ.

ಹೆಗಡೆಗೆ ತಾನು ಒಪ್ಪಿದರೆ, ಒಂದು ದಿನವಿದ್ದಾನು. ಒಂದು ತಿಂಗಳಿದ್ದಾನು ? ಇದರಿಂದ ತನಗಾಗುವ ಉಪಯೋಗವೇನು?

ಅವಳ ಕಣ್ಣು ಅವನ ಆಸ್ತಿಯ ಮೇಲೆ ಬಿತ್ತು. ದೊರೆಸ್ವಾಮಿ ಮರುದಿನ ಬೆಳಗ್ಗೆ ಬಂದವನೇ ಹೆಗಡೆಯ ಎಲ್ಲ ವಿಚಾರಗಳನ್ನೂ ಆಮೂಲಾಗ್ರವಾಗಿ ಪಠಿಸಿಬಿಟ್ಟಿದ್ದ.

"ಕೇಳು ಅನಸೂಯ! ಇದೇ ನಿನಗೆ ಸಮಯ. ನೂರು ಇನ್ನೂರಕ್ಕೆ ಆಸೆ ಮಾಡಿದೆಯೋ ನಿನಗೆ ಅಷ್ಟೇ ಪ್ರಾಪ್ತಿ. ಈ ಮೀನು ಬುಟ್ಟಿಗೆ ಹಾಕಿಕೊಂಡೆಯೋ ಒಂದು ಛಾನ್ಸ್."—

ಅಂತ ಹೇಳಿದ್ದ ಚಾಣಕ್ಯ ದೊರೆ. ಅದಕ್ಕೆ ಉಪಾಯವನ್ನೂ ಸೂಚಿಸಿದ್ದ—

"ರೊಟ್ಟಿ ಕೈಯಲ್ಲಿ ಹಿಡಿದುಕೊಂಡು ಮುಂದೆ ಹೋಗ್ತಾ ಇರು. ನಾಯಿ ಬಾಯಿ ಕಳೆದು ಕೊಂಡು ನೀನು ಹೋದಲ್ಲೆಲ್ಲಾ ಬೆನ್ನಟ್ಟಿಕೊಂಡು ಬರುತ್ತೆ. ಕೊರಳಿಗೆ ಹಗ್ಗ ಹಾಕದೇ ರೊಟ್ಟಿ ರುಚಿ ತೋರಿಸಿದೆಯೋ ನೀನು ಕೆಟ್ಟಿ."

ಈ ಪಾಠವನ್ನು ದೊರೆ ಹೊಸದಾಗಿ ಹೇಳಿಕೊಡಬೇಕಾಗಿರಲಿಲ್ಲ ಅನಸೂಯಳಿಗೆ. ಅವಳ ಹುಟ್ಟಿನೊಂದಿಗೆ ಬಂದ ಪಾಠ ಅದಾಗಿತ್ತು. ದೊರೆಯ ಮಾತು, ದೊರೆಯ ಸಹಕಾರ ಅವಳ ಕಾರ್ಯಕ್ಕೆ ಉತ್ತೇಜನ ಕೊಟ್ಟಿತು. ಸಹಾಯ ಮಾಡಿತು.

ಹೆಗಡೆ ಪ್ರತಿದಿನವೂ ನಾಟಕಕ್ಕೆ ಬರಲಾರಂಭಿಸಿದ. ದೊರೆ ಪ್ರತಿದಿನವೂ ಒಳಗೆ ಕರೆದುಕೊಂಡು ಹೋಗಿ ಕಾಫಿ ಕೊಡಿಸುತಿದ್ದ. ಸೈಡುವಿಂಗಿ

ನಲ್ಲೇ ಕುಳಿತು ನಾಟಕ ನೋಡಲು ಏರ್ಪಾಟು ಮಾಡಿಕೊಟ್ಟ.

ಅನಸೂಯ ಬಣ್ಣದ ಚಿಟ್ಟೆಯಂತೆ ಹಾರಾಡುತ್ತಿದ್ದಳು ಕಣ್ಣೆದುರಿಗೆ. ದಿನದಿನವೂ ಅವನ ಮನಸ್ಸಿನ ಬಯಕೆ ವೃದ್ಧಿಯಾಗುತ್ತಾ ಹೋಯಿತು. ಅನಸೂಯಳಿಗಾಗಿ ಎಷ್ಟು ಖರ್ಚಾದರೂ ಚಿಂತೆಯಿಲ್ಲ, ಅವಳ ಮನ ಒಲಿಸಿಕೊಳ್ಳಬೇಕು. ಅವಳ ತನು ತನ್ನದಾಗಬೇಕು. ಅದಕ್ಕಾಗಿ ನಾನಾ ರೀತಿಯಲ್ಲಿ ಯತ್ನಿಸಲಾರಂಭಿಸಿದ.

ಅವನು ಯತ್ನಿಸಿದಷ್ಟೂ, ಅವನ ಬಯಕೆ ತೀವ್ರವಾದಷ್ಟೂ—ಕನ್ನಡಿಯ ಗಂಟಾಗಿ ಮಾಯವಾಗುತ್ತಿದ್ದಳು ಅನಸೂಯ. ಮತ್ತೂ ಮತ್ತೂ ದೂರಾಗಿ ನಡೆಯುತ್ತಿದ್ದಳು ಆ ಜೀವಂತ ಮರೀಚಿಕೆ.

ತನ್ನ ಕಾರ್ಯ ಸಾಧಿಸಲೇ ಬೇಕೆಂಬ ಛಲ ಮೂಡಿತು ಹೆಗಡೆಗೆ.

* * * *

ಅಂದು ನಾಟಕವಿರಲಿಲ್ಲ.

"ಇವತ್ತು ನಮಗೆ ರಜ ಇದೆ. ಆಗುಂಬೆಯಲ್ಲಿ "ಸನ್‌ಸೆಟ್" ಬಹಳ ಚೆನ್ನಾಗಿ ಕಾಣುತ್ತಂತೆ. ಕರೆದುಕೊಂಡು ಹೋಗುತ್ತೀರಾ ಹೆಗಡೆಯವರೇ!" —ಎಂದಳು ಅನಸೂಯ.

ಹೆಗಡೆಗೆ ಇದಕ್ಕಿಂತಲೂ ಸುಸಮಯ ಮತ್ತೆ ಇರಲಿಲ್ಲ. ಅವನ ಕಾರು ಜಾಗ್ರತೆ ಗ್ಯಾರೇಜಿಗೆ ಓಡಿತು. ಕೆಲವು ದಿವಸಗಳಿಂದ ಹೆಚ್ಚಿನ ಕೆಲಸವಿಲ್ಲದೆ ಬಿದ್ದಿದ್ದ ಅದು, ಮಧ್ಯೆ ಕೈಕೊಡದಂತೆ ಮುನ್ನೆಚ್ಚರಿಕೆಯ ರಿಪೇರಿಯಾಯಿತು.

ಮಧ್ಯಾಹ್ನ ಅವಳನ್ನು ಕೂರಿಸಿಕೊಂಡು ಹೆಗಡೆಯವರ ಸವಾರಿ ಆಗುಂಬೆಗೆ ದಯಮಾಡಿಸಿತು.

ದಾರಿಯುದ್ದಕ್ಕೂ ಕನಸು ಕಟ್ಟುತ್ತಿದ್ದ ಹೆಗಡೆ. ಅನಸೂಯ ತನ್ನ ಜೊತೆಯಲ್ಲಿ ಹೊರಟಿರುವುದು "ಅದಕ್ಕಾಗಿಯೇ" ಅಂತ. ಇಂದು ತನ್ನ ಆಸೆ ಫಲಿಸುವುದೆಂದು ಸಂತೋಷದಿಂದ ಕಾರನ್ನು ಓಡಿಸಿದ.

ಆ ಸಂಜೆ................

ಪಶ್ಚಿಮ ಸಮುದ್ರ ನೀಲಗಗನವನ್ನು ಚುಂಬಿಸುತ್ತಾ ಎತ್ತರದಲ್ಲಿ ಗೋಚರಿಸುತ್ತಿತ್ತು. ಘಾಟಿಯ ಅಂಚಿನಲ್ಲಿ ಈ ದೃಶ್ಯವನ್ನು ಕಾಣಲಿಕ್ಕಾಗಿ ಕಟ್ಟಿದ ಕಟ್ಟೆಯಮೇಲೆ ನಿಂತಿದ್ದರು ಹೆಗಡೆ ಅನಸೂಯ.

ನಿಮಿಷ ನಿಮಿಷಕ್ಕೂ ಬಣ್ಣಗಳನ್ನು ಬದಲಾಯಿಸುತ್ತಾ ತಟ್ಟೆಯಂತೆ ತಿರುಗುವ ಸೂರ್ಯ ಇಗೋ ಅಗೋ ಅನ್ನುವಾಗ ಕಡಲ ನಡುವೆ ಅಡಗಿಕೊಂಡ.

ಹಿಂದೆ ನಿಂತ ಹೆಗಡೆ ಅನಸೂಯಳ ಭುಜದಮೇಲೆ ಕೈಹಾಕಿದ.

ಪಕ್ಕಕ್ಕೆ ಸರಿದಳವಳು.

ಹೆಗಡೆ ಧೈರ್ಯಮಾಡಿ ಅವಳ ಕೈಗಳನ್ನು ಹಿಡಿದ.

ಕೊಸರಿ ಬಿಡಿಸಿ ಕೊಂಡಳು ಅನಸೂಯ. ಕುಪಿತ ನಾಗಿಣಿಯಂತೆ ಕ್ರೂರ ದೃಷ್ಟಿಯನ್ನು ಬೀರಿದಳು.

ಹೆಗಡೆ ನಡುಗಿಹೋದ. ಯಾವುದಕ್ಕೂ ಹೆದರದ ಅವನ ಎದೆಯೂ ಅಲ್ಲಾಡಿತು ಈ ನೋಟದಿಂದ.

"ನೀವು ಇಂಥ ದೊಡ್ಡ ಮನುಷ್ಯರು ಅಂತ ನನಗೆ ಗೊತ್ತಾಗಲಿಲ್ಲ. ನಂಬಿಸಿ ಕುತ್ತಿಗೆ ಕೊಯ್ಯುವ ಮೋಸಗಾರರು" —ಸಿಟ್ಟಿನಿಂದ ಹೇಳಿದಳು ಅನಸೂಯ.

ಹೆಗಡೆಗೆ ಬಾಯೇ ಬರಲಿಲ್ಲ. ಹೆಂಗಸರು ಯಾರೂ ಅವನನ್ನಿಷ್ಟು ತುಚ್ಛವಾಗಿ ಕಂಡಿರಲಿಲ್ಲ.

"ನಿಮಗೆ ಇಂಥದೇ ಅಭ್ಯಾಸ ಅಂತ ಕಾಣುತ್ತೆ. ಎಷ್ಟು ಜನ ಹುಡುಗಿಯರನ್ನು ಹಾಳುಮಾಡಿದ್ದೀರಿ? "

ಅವಮಾನ ತಾತ್ಸಾರಗಳ ನಡುವೆ ಬೆಂದುಹೋದ ಹೆಗಡೆ.

"ಬಹಳ ದೊಡ್ಡ ಕೆಲಸ ಮಾಡಿದಿರಿ! ನನ್ನನ್ನು ಕಳಿಸಿಕೊಡಿ, ನಾನು ಹೊರಟು ಹೋಗುತ್ತೇನೆ....ಸಾಕು ನಿಮ್ಮ ಸಹವಾಸ."–ಎಂದಳವಳು ಪುನಃ ಅದೇ ಧ್ವನಿಯಲ್ಲಿ.

ಈ ಯಾವ ಮಾತುಗಳನ್ನೂ ಲಕ್ಷ್ಯಕ್ಕೆ ತೆಗೆದುಕೊಳ್ಳುವ ಕಾಲ ಇದಾಗಿರಲಿಲ್ಲ ಹೆಗಡೆಗೆ. ಹುಚ್ಚು ಮನಸ್ಸು ಅವಳನ್ನೇ ಬಯಸುತ್ತಿತ್ತು. ಮತ್ತೆ ಮುಂದುವರೆದ.

ಅನಸೂಯ ಓಡಿದಳು....ಘಾಟಿಯ ರಸ್ತೆಯಲ್ಲಿ ಹೆದರಿ ಓಡುವ ಹರಿಣಿಯಂತೆ–ನಾಟಕವನ್ನೇ ಅಭಿನಯಿಸಿದಳು.

ಹೆಗಡೆ ಅವಳ ಹಿಂದೇ ಓಡಿದ.

ಭಯ ಕಾತರಗಳಿಂದ ಹೆಗಡೆಯ ಕಾಲು ಉಳುಕಿತು. 'ಹಾಯ್' ಎಂದು ಕುಳಿತ.

ಗಾಬರಿಯಾಗಿ ಬಂದಳು ಅನಸೂಯ.

ಹೆಗಡೆ ಮೇಲೆದ್ದ. ಕಾಲು ಉಳುಕಿ ಕುಂಟುತ್ತ ನಿಂತ.

"ಏನಾಯಿತು?"—ಎಂದಳವಳು ಕನಿಕರದ ಧ್ವನಿಯಲ್ಲಿ.

"ಈಗಲಾದರೂ ಕನಿಕರವಾಯಿತಲ್ಲ."—ಎನ್ನಿಸಿತು ಹೆಗಡೆಗೆ.

"ಛೆ! ನಾನು ಎಂತಹ ಅನ್ಯಾಯ ಮಾಡಿದೆ."

—ಅನಸೂಯಳ ಕಣ್ಣುಗಳಲ್ಲಿ ಹನಿಯನ್ನು ಕಂಡು ಅಚ್ಚರಿಯಾಯಿತು ಹೆಗಡೆಗೆ.

"ತುಂಬಾ ನೋವಾಯಿತೇ?"

"ಸಾಧಾರಣ ಆಗಿದೆ."

ಹೆಗಡೆ ಕುಂಟುತ್ತಾ ಕಾರಿನ ಕಡೆ ನಡೆದ. ಹಿಂದಿನಿಂದ ಬಂದು ಕುಳಿತಳು ಅನಸೂಯ. ಕಾರು ಹೊರಟಿತು. ಬಂಗಲೆಯ ಬಳಿ ಕಾರನ್ನು ನಿಲ್ಲಿಸಿ ಹೇಳಿದ ಹೆಗಡೆ—

"ನೀವು ಹೋಗುವುದಾದರೆ ಹೋಗಬಹುದು. ಬಸ್ಸಿನಲ್ಲಿ ಕಳಿಸುತ್ತೇನೆ."

"ಏಕೆ?"

"ಕಾಲು ನೋವಾಗಿದೆ ಬ್ರೇಕು ತುಳಿಯಲು ಸಾಧ್ಯವಿಲ್ಲ."

"ನಾನು ಒಬ್ಬಳೇ ಬಸ್ಸಿನಲ್ಲಿ ಹೋದರೆ ಜನ ಏನು ತಿಳಿದುಕೊಂಡಾರು? ನಿಮಗೆ ಏನಾಯಿತು ಅಂತ ಮ್ಯಾನೇಜರ್ರು ಕೇಳಿದರೆ ನಾನೇನು ಉತ್ತರ ಹೇಳಲಿ?"

"ನಡೆದದ್ದನ್ನು ಹೇಳಿ."

"ನಾಚಿಕೆಯಾಗುವುದಿಲ್ಲವೇ? ಇಲ್ಲಿ ಏನೋ ಆಯಿತೆಂದು ನಿಮ್ಮ ಮೇಲೆ ಅವರೆಲ್ಲರೂ ತಪ್ಪು ತಿಳಿದುಕೊಳ್ಳುತ್ತಾರೆ."

"ಅದಕ್ಕೆ ನಾನೇನು ಮಾಡಲಿ?"

"ನೀವೂ ಬನ್ನಿ. ಇಬ್ಬರೂ ಬಸ್ಸಿನಲ್ಲೇ ಹೋಗೋಣ. ಕೇಳಿದವರಿಗೆ ಕಾರು ಕೆಟ್ಟುಹೋಯಿತು ಅಂದುಬಿಡೋಣ."

"ಕುಂಟುತ್ತಾ ನಡೆದು ನಾನೆಲ್ಲಿಗೂ ಬರಲಾರೆ."

"ಮತ್ತೆ?"

"ಇಲ್ಲೆ T. B. ನಲ್ಲಿ ಬಿಟ್ಟು ಉಳಿದುಕೊಂಡು ಬಿಡುತ್ತೇನೆ."

"ನಿಮ್ಮನ್ನು ಈ ಸ್ಥಿತಿಯಲ್ಲಿ ಬಿಟ್ಟು ನಾನೊಬ್ಬಳೇ ಹೋಗುವುದೇ?"

"ಹೋದರೇನಂತೆ?"

"ಪಾಪ! ನಿಮ್ಮ ನೋವಿಗೆ ನಾನೇ ಕಾರಣಳಾದೆ. ಎಂತಹ ಪಾಪಿ ನಾನು!"

—ಅನಸೂಯ ಸೆರಗನ್ನು ಕಣ್ಣಿಗೆ ಒತ್ತಿಕೊಂಡಳು.

"ಆಗುವುದು ಆಗಿ ಹೋಯಿತಲ್ಲ ನಿಮಗೇಕೆ ಯೋಚನೆ ಹೊರಡಿ."

"ನಾನು ಅಷ್ಟು ಕೃತಘ್ನಳೆಂದು ತಿಳಿದಿರಾ?"

"ಏಕೆ."

"ಒಟ್ಟಿಗೇ ಬಂದು, ನಿಮ್ಮನ್ನು ಸಂಕಟಕ್ಕೆ ಗುರಿಮಾಡಿ, ನಾನೊಬ್ಬಳೇ ಹೊರಟು ಹೋದರೆ....ನನ್ನನ್ನು ದೇವರು ಮೆಚ್ಚಲಾರ."

"ಮತ್ತೇನು ಮಾಡುತ್ತೀರಿ?"

"ಹೇಗೂ ನಾಟಕವಿಲ್ಲ. ಬೆಳಗ್ಗೆ ಕಾಲು ಗುಣವಾಗಬಹುದು."

ಆಶ್ಚರ್ಯವಾಯಿತು ಹೆಗಡೆಗೆ. ಹೋಗೆಂದು ಬಲಾತ್ಕರಿಸುವ ಅಗತ್ಯ ಕಾಣಲಿಲ್ಲ. ಬಂಗಲೆಯಲ್ಲಿ ರೂಮು ತೆಗೆದುಕೊಂಡ.

ರಾತ್ರಿ ಬಂಗಲೆ "ಮೇಟಿ" ಯ ಬಳಿ ದುಡ್ಡು ಕೊಟ್ಟು ಬಿರತಿ ಎಣ್ಣೆ ತರಿಸಿದಳು ಅನಸೂಯ.

"ಏಕೆ"—ಎಂದ ಹೆಗಡೆ.

"ಎಣ್ಣೆ ಉಜ್ಜಿದರೆ ಉಳುಕು ಹೋಗುತ್ತೆ."

"ಯಾರು ಉಜ್ಜುವವರು?"

"ನಾನೇ? ಮನುಷ್ಯರಿಗೆ ಮನುಷ್ಯರಾಗದೇ ಮರ ಆದೀತೇ?"

ಏನಾಶ್ಚರ್ಯ? ಏನುಭಾಗ್ಯ? ಎಂದ ಹೆಗಡೆ.

ಕಾಲಿಗೆ ಎಣ್ಣೆಯನ್ನು ಹಚ್ಚಿ ಉಜ್ಜುತ್ತಿದ್ದಳು ಅನಸೂಯ. ಕಾಡಿಗೆ ಬೆಂಕಿ ಹಿಡಿದು ಉರಿಯುವಂತಾಗಿತ್ತು ಹೆಗಡೆಗೆ. ದೀಪದ ಮುಂದ ಪ್ರಕಾಶ ದಲ್ಲಿ ಅವಳ ಬೆವರಿದ ಮುಖವನ್ನು ನೋಡಿದಾಗ, ಬೆಂಕಿ ಉರಿಯುವಾಗ

ಬಿರುಗಾಳಿ ಬಂದಂತೆ—ಒಳಗಿನ ಕಾಮಾಗ್ನಿ ದಾವಾನಲವಾಗಿ ಹಬ್ಬುತ್ತಿತ್ತು ಹೆಗಡೆಯ ಹೃದಯದಲ್ಲಿ. ಮುಂದೆ ತಡೆಯುವುದೇ ಅಸಾಧ್ಯವಾಗಿತ್ತು.

ಅವಳ ಕೈಗಳನ್ನು ಹಿಡಿದು ತನ್ನ ಕಡೆ ಎಳೆದುಕೊಳ್ಳಲೆತ್ನಿಸಿದ.

"ತಾಳ್ಮೆ ತೆಗೆದುಕೊಳ್ಳಿ. ಅದೊಂದು ವಿಚಾರ ಬಿಟ್ಟುಬಿಡಿ. ದಯವಿಟ್ಟು ನನ್ನ ಮಾನ ಭಂಗ ಮಾಡಬೇಡಿ"

—ಎಂದು ಅಂಗಲಾಚಿದಳು ಅನಸೂಯ ಅಳುವ ಧ್ವನಿಯಲ್ಲಿ.

ವಿಚಿತ್ರ ಸನ್ನಿವೇಶದಲ್ಲಿ ತೊಳಲುವ ಹೆಗಡೆ ಕಂಗಾಲಾಗಿ ಹೋದ—

"ನೀನು ಅಂಥವಳಲ್ಲವೇ?"

"ಥೂ...." ಎಂದಳವಳು. "ಕಾಮುಕರ ಕಣ್ಣಿಗೆ ಹೆಣ್ಣುಗಳೆಲ್ಲರೂ ಸೂಳೆಯರಾಗಿ ಕಾಣುತ್ತಾರೆ."

"ಹಾಗೆಂದು ನಾನು ಹೇಳಲಿಲ್ಲ."

"ಮತ್ತೆ ಹಾಗೆಂದರೆ ಅರ್ಥವೇನು? ನಾನು ಅಗ್ಗದ ಮಾಲೆಂದು ಭಾವಿಸಿದಿರಾ? ದುಡ್ಡಿಗಾಗಿ ಮರ್ಯಾದೆ ಬಿಡುವವಳು ನಾನಲ್ಲ....ನನಗೂ ಮಾನ ಮರ್ಯಾದೆಗಳಿವೆ."

"ಇಲ್ಲವೆಂದು ನಾನು ಹೇಳಿಲ್ಲ. ನನ್ನ ಮನಸ್ಸೀಗ ದುರ್ಬಲವಾಗಿದೆ."

"ಅದಕ್ಕೆ ನಾನೇನು ಮಾಡಲಿ. ನಿಮಗಾಗಿ ನಿಮ್ಮ ದಾಕ್ಷಿಣ್ಯಕ್ಕಾಗಿ ನೀತಿಯನ್ನು ಬಿಡಲೇ?"

"ಇದೊಂದು ಬಾರಿ."

"ಸಾಧ್ಯವಿಲ್ಲ! ಗಂಡಸರು ನೀವು ಮರುಳು ಮಾತುಗಳನ್ನಾಡಿ ನಮ್ಮನ್ನು ಕೆಡಿಸಿ ಸುಲಭವಾಗಿ ಜಾರಿಕೊಳ್ಳುತ್ತೀರಿ. ಮುಂದೆ ನನ್ನ ಗತಿಏನು?"

"ನಿಮಗೆ ಯಾವ ಭಯ?"

"ಸಮಾಜದ ಭಯ. ನಾಳೆ, ನಿಮ್ಮ ದಾಕ್ಷಿಣ್ಯಕ್ಕೊಳಗಾಗಿ ಅಚಾತುರ್ಯಗಳಾದರೆ, ಸಮಾಜದಲ್ಲಿ ತಲೆತಗ್ಗಿಸಬೇಕಾದವಳು—ನಾನು!....ನೀವಲ್ಲ!"

ಅನಸೂಯಳೂ ಸಮಾಜಕ್ಕೆ ಹೆದರುವಳೆಂಬ ಅರಿವಾದದ್ದು ಹೆಗಡೆಗೆ ಈಗ ಮಾತ್ರ. ಇದುವರೆಗೆ ತಾನು ಅವಳಲ್ಲಿಟ್ಟ ದುರ್ಭಾವನೆ ತಪ್ಪು ಎನ್ನಿಸಿತು.

"ಹಾಗಾದರೆ ಇದುವರೆಗೂ ನೀನು ಶುದ್ಧಳಾಗಿಯೇ ಇರುವಿಯಾ?"

"ದೇವರ ದಯೆಯಿಂದ ನನ್ನಮಾನವನ್ನು ನಾನು ಕಾಪಾಡಿ ಕೊಂಡಿ

ದ್ದೇನೆ. ಮದುವೆಯಾದ ಗಂಡನೊಬ್ಬನಲ್ಲದೆ ಮತ್ತೆ ಯಾರೂ ನನ್ನ ಬಳಿ ಬರುವ ಸಾಮರ್ಥ್ಯವನ್ನು ಪಡೆದಿಲ್ಲ."

ಹೆಗಡೆಯ ಮನಸ್ಸಿನಲ್ಲಿ ಕತ್ತಲಿನಲ್ಲಿ ಬೆಳಕನ್ನು ಕಂಡ ಹಾಗಾಯಿತು:

"ನೀನು ಮದುವೆಯಾಗುತ್ತೀಯಾ?"

"ಯೋಗ್ಯಜನ ಸಿಕ್ಕಿದರೆ ಖಂಡಿತವಾಗಿ."

"ಆ ಭಾಗ್ಯ....ನನಗಿದೆಯೇ...."

ನಾಚಿಗೆಯನ್ನು ನಟಿಸಿ, ತಲೆತಗ್ಗಿಸಿದಳು ಅನಸೂಯ.

"ಖಂಡಿತವೇ."

"ನಾಟಕ ಸಿನಿಮಾಗಳಲ್ಲಿ ಬೇಸರ ಬಂದು ಬಿಟ್ಟಿದೆ ನನಗೆ, ಯಾರಾದರೂ ತುತ್ತು ಅನ್ನಹಾಕಿ ಬೆಚ್ಚಗಿರುವ ಮನೆಯಲ್ಲಿಟ್ಟರೆ ಅವರ ಪಾದ ಸೇವೆ ಮಾಡಿಕೊಂಡು ಬಿದ್ದಿರುತ್ತೇನೆ."

ಹೆಗಡೆಗೆ ಏನೇನೋ ಆಗಿಹೋಯಿತು. ಕನಸಿನ ಸಾಮ್ರಾಜ್ಯದ ಸೃಷ್ಟಿ ಪ್ರಾರಂಭವಾಯಿತು.

"ಆದರೆ ನಿಮ್ಮಂತಹ ಪುಣ್ಯವಂತರ ಕೈಹಿಡಿಯುವ ಭಾಗ್ಯ ಈ ನಾಟಕದ ಹೆಣ್ಣಿಗೆಲ್ಲಿ ಬರಬೇಕು?"

—ಎಂದು ನಿಟ್ಟುಸಿರಿಟ್ಟಳು ಅನಸೂಯ. ಸ್ವಲ್ಪ ಹೊತ್ತಿನಲ್ಲೇ ಬಿಕ್ಕಿ ಬಿಕ್ಕಿ ಅಳುತ್ತಿರುವಂತೆ ಕೇಳಿಸಿತು ಹೆಗಡೆಗೆ. ದೀಪದ ಮಂದ ಪ್ರಕಾಶದಲ್ಲಿ ಕಣ್ಣೀರು ಹರಿಯುತ್ತಿತ್ತೋ ಇಲ್ಲವೋ ಸ್ಪಷ್ಟವಾಗಿ ಕಾಣಿಸಲಿಲ್ಲ ಹೆಗಡೆಗೆ.

ಎಂತಹ ಭಾಗ್ಯ! ಒಬ್ಬಳು ಸಿನಿಮಾನಟಿ, ಫೈಟಿಂಗ್‌ಗರ್ಲ್‌ನ ಥರ್ಡ್ ಹೀರೋಯಿನ್, ಇಂದು ನನಗಾಗಿ, ಈಕಾಡಿನ ಪ್ರಾಣಿಗಾಗಿ, ಕಣ್ಣೀರಿಡುತ್ತಿದ್ದಾಳೆ.

"ನೀನು ಅಳಬೇಡ ನಾನು ಖಂಡಿತವಾಗಿ ಲಗ್ನವಾಗುತ್ತೇನೆ"—ಎಂದನವನು ಅಭಯಕೊಡುತ್ತಾ.

"ಇದಕ್ಕೆ ಸಾಕ್ಷಿ?"

"ಧರ್ಮಸ್ಥಳದ ಮಂಜುನಾಥ ದೇವರ ಆಣೆಯಾಗಿ" ಎಂದುಬಿಟ್ಟ ಹೆಗಡೆ.

ಕುಡುಕನ ಕಣ್ಣಿಗೆ ಚರಂಡಿಯ ಬದಿಯೇ ಸುಪ್ಪತ್ತಿಗೆಯಾಗಿ ಕಾಣು ವಂತೆ, ಕಾಮದಿಂದ ಉನ್ಮತ್ತವಾದ ಹೆಗಡೆಯ ಮನಸ್ಸಿಗೆ ಅನಸೂಯಳೇ ಪರಮ ಪವಿತ್ರಳಾಗಿ ಕಂಡಳು.

ಮನೆ....ಮಠ....ಹೆಂಡತಿ....ಮಕ್ಕಳು ಮರೆತು ಹೋದರು.

"ಅಭಯ ಕೊಟ್ಟೆನಲ್ಲ ಈಗಲಾದರೂ ನಿನ್ನ ಒಪ್ಪಿಗೆಯಿದೆಯೇನು?"

—ಎಂದು ಕೇಳಿದ ಹೆಗಡೆ.

"ಈಗೇನು ಅವಸರ. ಹೇಗೂ ನಾವು ಗಂಡಹೆಂಡಿರಾಗುತ್ತೇವಲ್ಲ. ಮದುವೆಯಾಗದೇ ಕೆಟ್ಟ ಕೆಲಸಗಳನ್ನು ಮಾಡುವುದಕ್ಕೆ ನನ್ನ ಮನಸ್ಸು ಒಪ್ಪುವುದಿಲ್ಲ."

ಎಂತಹ ಹೆಣ್ಣು ಇವಳು! ವೇಶ್ಯೆಯಂತೆ ಇವಳನ್ನು ನೋಡಿದ ನನ್ನ ಕಣ್ಣುಗಳು ಇಂಗಿ ಹೋಗಬಾರದೇ? ಪವಿತ್ರಳಾಗಿರುವ ಇವಳನ್ನು ಅನಾಚಾರ ದಿಂದ ಕೆಡಿಸುವ ಯತ್ನಮಾಡಿದ ನಾನೆಂತಹ ಘಾತುಕ!

ಘಮ ಘಮಿಸುವ ಮೃಷ್ಟಾನ್ನ ಭೋಜನವನ್ನು ಎದುರಿಟ್ಟುಕೊಂಡು, ಹಸ್ತೋದಕಕ್ಕಾಗಿ ಕಾಯುತ್ತ ಕುಳಿತ, ಹಸಿದ ಬ್ರಾಹ್ಮಣನಂತೆ—ಹೆಗಡೆ ಮರುದಿನ ಬೆಳಗಿನವರೆಗೂ ಕಾಯಬೇಕಾಯಿತು.

ಉಳುಕಿದ ಕಾಲೂ ಕೆಲಸಮಾಡಿತು. ಕಾರು ಘಾಟಿ ಇಳಿಯಿತು. ಮಂಗಳೂರಿಗೆ ಓಡಿತು. ಪರಿಚಯದವರು ಸಾಕ್ಷಿಹಾಕಿದರು.

ಆಧುನಿಕ ಗಾಂಧರ್ವ ವಿವಾಹಕ್ಕೆ ಸಹಿಹಾಕಿದ ಹೆಗಡೆ.

ಅನಸೂಯ ಹೆಗಡೆಯ ಹೆಂಡತಿಯಾದಳು. ಅವನ ಆಸ್ತಿಯ ಹಕ್ಕುದಾರಳಾದಳು!

# ೨೨

ನಾಟಕದಲ್ಲಿ ಎಲ್ಲರೂ ರಾತ್ರಿ ವೇಷ ಹಾಕಿದರೆ, ಹಗಲೇ ವೇಷ ಹಾಕುತ್ತಿದ್ದ ದೊರೆಸ್ವಾಮಿ. ಅನೇಕ ವರ್ಷಗಳಿಂದ, ನಾನಾ ಕಡೆ ನೀರನ್ನು ಕುಡಿದು ಅವನಿಗೆ, ಜನಗಳ ನಡೆ, ನುಡಿ, ಸ್ವಭಾವಗಳ ಪರಿಚಯ ಚೆನ್ನಾಗಿತ್ತು. ಅವರುಗಳ ಮನೋದೌರ್ಬಲ್ಯವನ್ನು ಹಿಡಿದು, ಅದನ್ನು ತನ್ನ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳುವ ತಂತ್ರವನ್ನು ಚೆನ್ನಾಗಿ ಬಲ್ಲವನಾದ್ದರಿಂದ, ....ಅವನ ಕಂಪೆನಿ ಇನ್ನೂ ತಲೆಯೆತ್ತಿಕೊಂಡು ನಡೆಯುತ್ತಿತ್ತು.

ತನ್ನ ಕೆಲಸಕ್ಕಾಗಿ ಅಧಿಕಾರಿಗಳನ್ನು ಕಾಣುವಾಗ, ನಮ್ರತೆ....ಭಯ ....ಗಾಂಭೀರ್ಯಗಳ ಈ ಮೂರ್ತಿ, ನಟನಟಿಯರನ್ನು "ಬುಕ್" ಮಾಡುವಾಗ ಸೌಹಾರ್ದತೆ, ಉದಾರತೆಗಳನ್ನು ಸಹಜವಾಗಿ ವ್ಯಕ್ತಪಡಿಸುವ ದಕ್ಷತೆಯುಳ್ಳದ್ದಾಗಿತ್ತು.

ಅವನ ಉಡುಪೂ ಅಷ್ಟೆ. ಮುಖ ಬದಲಾಯಿಸಿದಂತೆ, ಮೈಮೇಲಿನ ಬಟ್ಟೆಯೂ ಬದಲಾಗಿ ಬಿಡುತ್ತಿತ್ತು. ನಟಿಯ ಬಳಿ ಮಾತನಾಡಲು ಹೋಗುವಾಗ, ಮಲ್ಲಿನ ಪಂಚೆ, ಸಿಲ್ಕು ಜುಬ್ಬ ಧರಿಸಿ, ಹೆಗಲ ಮೇಲೆ ಸಣ್ಣಂಚಿನ ಜರಿಯ ಶಲ್ಯವನ್ನು ಹೊದ್ದು, ಬೆರಳುಗಳಿಗೆ ಥಳಥಳಿಸುವ ಉಂಗುರವನ್ನು ಹಾಕಿಕೊಂಡು ಹೋಗುವ ದೊರೆ—ಅಮಲ್ದಾರರ ಬಳಿ ಲೈಸನ್ಸ್ ಕೇಳಲು ಹೋಗುವಾಗ ಪಂಚೆ, ಕೋಟು, ಟೈಗಳನ್ನು ಕಟ್ಟಿ, ತಲೆಯ ಮೇಲೆ ಜರಿಯ ರುಮಾಲನ್ನಿಟ್ಟುಕೊಂಡು ಹಳೆಯ ಲಾಯರಂತೆ ಕಂಗೊಳಿಸುತ್ತಿದ್ದ.

ಡಿ. ಸಿ. ಸಾಹೇಬರ ಬಳಿ ಹೋಗುವಾಗ, ಸರ್ಜುಸೂಟು ಧರಿಸಿ, ಹ್ಯಾಟ್ ಹಾಕಿಕೊಂಡು 'ಟಿಪ್‌ಟಾಪ್' ಆಗಿ ನಡೆಯುತ್ತಿದ್ದ....ಈಗ ತಾನೇ ಲಂಡನ್ನಿನಿಂದ ಇಳಿದು ಬಂದ ಸರ್ಜನರಂತೆ.

ಮಂತ್ರಿಗಳೆಂದರಂತೂ ಅವನಿಗೆ ಲೆಕ್ಕಕ್ಕೂ ಇಲ್ಲ, ವೆಚ್ಚಕ್ಕೂ ಇಲ್ಲ.

ಮಲ್ಲು ಪಂಚೆಯ ಮೇಲೆ ಖಾದಿ ಷೆರ್ವಾನಿಯನ್ನು ತೊಟ್ಟು, ತಲೆಯ ಮೇಲೆ ಅದಕ್ಕೆ ಹೊಂದುವ ಟೋಪಿಯನ್ನಿಟ್ಟು ಹೊರಟುಬಿಡುತ್ತಿದ್ದ ಅವರ ಮನೆಗೆ. ಮಂತ್ರಿಗಳನ್ನು ಆಫೀಸಿನಲ್ಲಿ ಕಾಣುವ ಅಭ್ಯಾಸವನ್ನೇ ಇಟ್ಟುಕೊಂಡಿರಲಿಲ್ಲ ದೊರೆ.

ಕಲೆ! ಸಂಸ್ಕೃತಿ! ಎಂದು ಮಾತನಾಡಿದಾಗ ಅವರ ತಲೆ ತಿರುಗಿ ಬಿಡುತ್ತಿತ್ತು. 'ಸಕುಟುಂಬ ಸಪರಿವಾರ ಸಮೇತರಾಗಿ' ಬಿಟ್ಟಿ ನಾಟಕ ನೋಡಬಹುದೆಂಬ ಅವರ ಅಂತರ್ಗತ ಮನೋಭಾವ—ಕಲಾಭಿಮಾನದ ಮುಸುಕನ್ನು ಧರಿಸಿ ಹೊರಗೆ ಕಾಣಿಸಿಕೊಳ್ಳುತ್ತಿತ್ತು.

ಮೊದಲ ನಾಟಕಕ್ಕೆ ಅವರದೇ ಅಧ್ಯಕ್ಷತೆ. ಮರುದಿನ ಪತ್ರಿಕೆಗಳ ಲ್ಲೆಲ್ಲಾ ಇದೇ ಸಮಾಚಾರ. ದೊರೆಸ್ವಾಮಿ ರಂಗಮಂಟಪದಲ್ಲಿ ನಿಂತು, ಮಾನ್ಯ ಮಂತ್ರಿಗಳನ್ನು ಸ್ವಾಗತಿಸಿ, ಅವರಿಗೆ ಹಾರ ತುರಾಯಿಗಳನ್ನರ್ಪಿ ಸುವ ಚಿತ್ರ ಪ್ರಕಟವಾಗಿ ಬಿಡುತ್ತಿತ್ತು. ತಾಳ ಬೇಡ, ತಂತಿ ಬೇಡ, ಮನೆ ಮನೆಗೂ ಮುಟ್ಟುತ್ತಿತ್ತು ಈ ಸಂದೇಶ.

ಇದು ಅವನ ಪ್ರಚಾರ ಸಾಧನ! ....

ಬೆಟ್ಟವನ್ನೂ ಎತ್ತಿಡ ಬಲ್ಲೆನೆಂಬ ಎದೆಗಾರಿಕೆ, ಸಮುದ್ರವನ್ನೂ ಹಾರ ಬಲ್ಲೆನೆಂಬ ಧೈರ್ಯ, ಅದನ್ನು ಸಾಧಿಸುವಾಗ ನೀತಿ—ನಡತೆಗಳಾವುದನ್ನೂ ಲಕ್ಷಿಸದೆ ಮುನ್ನುಗ್ಗುವ ಕಠಿಣ ಮನೋವೃತ್ತಿ—ಇವು ದೊರೆ ಇಷ್ಟು ಕಾಲ ಕಂಪೆನಿ ನಡೆಸಲು ಶಕ್ತಿಯನ್ನಿತ್ತಿತ್ತು.

ಇಂಥವನೆದುರು ಹೆಗಡೆ ಹಕ್ಕಿಯ ಪುಕ್ಕ.

* * * *

"ನಮ್ಮ ಮದುವೆಯ ವಿಚಾರ-ಯಾರಿಗೂ ಹೇಳಬೇಡ ಗುಟ್ಟಾಗಿರಲಿ."

—ಅಂದ ಹೆಗಡೆ ಮಂಗಳೂರಿಂದ ಬರುತ್ತಾ.

"ಅಷ್ಟು ಭಯವೇಕೆ ನಿಮಗೆ"—ಎಂದಳು ಅನಸೂಯ

"ಇದು ನಮ್ಮ ಮನೆಗೆ ತಿಳಿಯಬಾರದು. ಒಮ್ಮೆಗೇ ತಿಳಿದರೆ ಗಲಾಟೆಯಾಗಬಹುದು."

"ಅವರೇಕೆ ಗಲಾಟೆಮಾಡುತ್ತಾರೆ. ಗಂಡಸರು ಎಷ್ಟೂ ಮದುವೆ ಮಾಡಿ ಕೊಳ್ಳಬಹುದು. ನನ್ನಂತಹ ಹೆಂಗಸಿಗಾದರೆ ಅವೆಲ್ಲ ಭಯ."

—ಎಂದು ಚುಚ್ಚಿ ನುಡಿದಳು ಅನಸೂಯ.

"ಸಧ್ಯಕ್ಕೆ ಗುಪ್ತವಾಗಿರುವುದರಲ್ಲಿ ಬಾಧಕವೇನು?"

"ಹೆಂಗಸರ ಹಾಗೆ ನೀವೇ ಹೆದರಿಕೊಂಡರೆ ನಾನೇನು ಮಾಡಲಿ? ನನಗೇನು ನೀವು ಹೇಗೆ ಹೇಳುತ್ತೀರೋ ಹಾಗೆ."

*   *   *   *

ದೊರೆಸ್ವಾಮಿ ಏನಾಗಬಹುದೆಂದು ಊಹಿಸಿದ್ದನೋ ಅದು ಹಾಗೆಯೇ ನಡೆದುಹೋಗಿತ್ತು. ಮುಂದಾಗಬೇಕಾದ ವಿಚಾರವ ಬಗ್ಗೆ ಈಗಾಗಲೇ ನಿರ್ಧರಿಸಿಕೊಂಡಿದ್ದ. ಹೆಗಡೆಯವರ ಕಾರು ಬಂದಾಗಲೇ ಸೂಕ್ಷ್ಮವನ್ನರಿತು ಕೇಳಿದ ದೊರೆ ಸ್ವಾಮಿ—

"ಯಜಮಾನರು ಸೌಖ್ಯವೋ."

"ಹು"—ಎಂದ ಹೆಗಡೆ ನಗುತ್ತಾ.

"ಅಮ್ಮಾವ್ರು...."

"ತಮ್ಮ ದಯದಿಂದ...."—ಅಂದಳು ಅನಸೂಯ.

"ನನ್ನ ದಯ ಏನು? ಎಲ್ಲ ಆ ದೇವರ ದಯ"

—ಎಂದು ಆಕಾಶಕ್ಕೆ ಕೈತೋರಿಸಿದ ದೊರೆ.

"ಎಲ್ಲಾ ನಿಮ್ಮಿಬ್ಬರಲ್ಲೇ ಮುಗಿದುಹೋಯಿತೋ ಅಥವಾ ನಮಗೂ ಏನಾದರೂ ಇದೆಯೋ?"

"ಏನು?"

"ಮತ್ತೇನೂ ಇಲ್ಲ. ಸುಖ ಹೇಗೂ ತಮ್ಮ ಪಾಲಿಗೆ ಆಯಿತು. ಈ ಬಡವ ಸಿಹಿನಾದ್ರೂ ತಿನ್ನೋಣ ಅಂತ."

"ನಡೆಯಿರಿ"—ಅಂದ ಹೆಗಡೆ.

ದೊರೆ ಕಾರನ್ನೇರಿದ. ಹೋಟಲಿಗೆ ಹೋಗಿ ಕುಳಿತ ನಂತರ ಅಲ್ಲಿದ್ದ ಸಿಹಿ ಪದಾರ್ಥಗಳೆಲ್ಲವನ್ನು ಒಂದೊಂದು ಪ್ಲೇಟು ತರಹೇಳಿದ ಹೆಗಡೆ.

"ಅಷ್ಟೊಂದು...."—ಅಂದ ದೊರೆ ಗಾಬರಿಯಾಗಿ.

"ತಿನ್ನಿ ಸ್ವಾಮಿ....ಇದಕ್ಕೆಲ್ಲ ನೀವೆ ಮೂಲಕಾರಣರು. ತಾವು ಮಾಡಿದ ಉಪಕಾರ, ತಮ್ಮ ವಿಶ್ವಾಸಕ್ಕಾಗಿ ನಾನು ಚಿರಋಣಿ"—ಎಂದರು ಹೆಗಡೆಯವರು.

"ಮುಂದೇನು ಮಾಡಬೇಕು ಅಂತ ಇದೀರಾ!"

—ಜಿಲೇಬಿಯನ್ನು ಕಚ್ಚಿ ಹೀರುತ್ತಾ ಮಧ್ಯೆ ಕೇಳಿದ ದೊರೆ.

"ಅಂದರೆ?"

"ಅಮ್ಮಾವ್ರನ್ನ ಮನೆಗೆ ಕರ್ಕೊಂಡು ಹೋಗ್ತೀರೋ?"

"ಸದ್ಯ....ಇಲ್ಲ."

"ಮತ್ತೆ?"

"ಹೀಗೇ ಎಲ್ಲಾದರೂ ಇರಬೇಕು."

"ಎಲ್ಲಾದರೂ ಯಾಕೆ? ನಮ್ಮ ಕಂಪೆನಿ ಇದೆಯಲ್ಲ. ಇದೇ ತಮ್ಮ ಮನೆ ಅಂತ ತಿಳಿದುಕೊಂಡಿದ್ದು ಬಿಡಬಹುದಲ್ಲ."

ದೊರೆಯ ಮಾತು ಹೌದೆನ್ನಿಸಿತು ಹೆಗಡೆಗೆ. ಅವನು ಯೋಚಿಸುತ್ತಿರುವಷ್ಟರಲ್ಲೇ ದೊರೆ ಪುನಃ ಹೇಳಿದ—

"ಈ ಬಡವನ ಮನೆ ಒಳಗೆ ಹೇಗಿರೋದು ಅಂತ ತಮಗೆ ಅಸಮಾಧಾನವೇನೋ?"

"ಅಂಥದೇನಿಲ್ಲ."

"ಇರದೇ ಇರುತ್ತೆಯೆ ಸ್ವಾಮಿ. ನನ್ನಂತಹ ಹೊಟ್ಟೆಗಿಲ್ಲದವನೇ ಮತ್ತೊಬ್ಬರ ಕೈಕೆಳಗಿರಲಾರದೇ ಕಂಪೆನಿ ಮಾಡಿಕೊಂಡು ಒದ್ದಾಡ್ತಾ ಇರೋವಾಗ, ತಮ್ಮಂತಹ ಲಕ್ಷ್ಮೀಪುತ್ರರು ಹೇಗಿರೋದು ಸಾಧ್ಯ?"

"ಮತ್ತೆ ನಿಮ್ಮ ಅಭಿಪ್ರಾಯ?"

"ವಹಿಸಿಕೊಂಡು ಬಿಡಿ ಸ್ವಾಮಿ. ನನಗೂ ಕಂಪೆನಿ ನಡೆಸೋದು ಬೇಸರ ಬಂದುಬಿಟ್ಟಿದೆ. ಹಾಯಾಗಿ ಹೋಗಿ ಊರಿನಲ್ಲಿ ಕುಳಿತು ಬಿಡುತ್ತೇನೆ."

"ವಹಿಸಿ ಕೊಂಡರೆ?...."

"....ತಾವೇ ಯಜಮಾನರು. ಅಮ್ಮಾವ್ರೇ ಮೇನೇಜ್ರು."

"ನನಗೆ ಮನೆಯಲ್ಲಿ ಕೆಲಸ ಇರುತ್ತೆ."

"ಇದ್ದರೇನಾಯಿತು? ಕೆಲಸ ಇದ್ದಾಗ ಮನೆಗೆ ಹೋಗಿ. ಅಮ್ಮಾವ್ರು ಕಂಪೆನಿ ನಡೆಸುತ್ತಾರೆ ನಾಲ್ಕು ದಿನ. ವಿರಾಮವಾದಾಗ ಕಂಪೆನಿಗೆ ಬನ್ನಿ. ಮನೆಯವರನ್ನೂ ನೋಡಿದಂತಾಗುತ್ತೆ, ಅಮ್ಮಾವ್ರನ್ನೂ ಮೆಚ್ಚಿಸಿದಂತಾಗುತ್ತೆ–ತಮ್ಮ ಕಾರಿಗೂ ಕೆಲ್ಸಸಿಗುತ್ತೆ."

ದೊರೆಸ್ವಾಮಿಯ ಪ್ರತಿಮಾತೂ ಹೆಗಡೆ ತಾನೇ ಅವನ ಬಾಯಿಂದ ಹೇಳಿಸಿ ಹೊರಡಿಸಿದಂತಿತ್ತು. ಮತ್ತೆ ಯಾವ ಯೋಚನೆಗಿಂತಲೂ ಕಂಪೆನಿ ಮಾಡಿ ಅನಸೂಯಳನ್ನು ಇಲ್ಲಿಬಿಟ್ಟು–ತಾನು ಮನೆಗೂ ಇಲ್ಲಿಗೂ ತಿರುಗಾಡು

ತ್ತಿರುವುದೇ ಯೋಗ್ಯವೆನ್ನಿಸಿತು.

ಊರಿನಿಂದ ಹೊರಟ ಗಳಿಗೆ ಅಮೃತ ಗಳಿಗೆಯಿರಬೇಕು. ಇಂತಹ ಹೆಣ್ಣು ದೊರೆಯಿತು. ಜೊತೆಯಲ್ಲಿ ಕಂಪೆನಿಯೂ ಕೈಗೆ ಬರುತ್ತದೆ. ಮೊದಲಿನಿಂದಲೂ ಕಂಪೆನಿ ಕಟ್ಟಿಕೊಂಡು ತಿರುಗಾಡುವ ಚಪಲವಿದ್ದ ಹೆಗಡೆಗೆ ದೊರೆಸ್ವಾಮಿಯ ಮಾತು ಪಥ್ಯವಾಯಿತು. ತನ್ನ ಉತ್ಸುಕತೆಯನ್ನು ತೋರ್ಪಡಿಸದೇ ಹೇಳಿದ—

"ಕಂಪೆನಿ ವಹಿಸಿ ಕೊಂಡರೆ ನಡೆಸೋದು ಕಷ್ಟ."

"ಏನು ಹುಡುಗುಟದ ಮಾತಾಡ್ತೀರಿ ದೇವ್ರು. ತಮ್ಮಂಥವರಿಗೇ ಅಸಾಧ್ಯವಾಗಿರೋದು ನನ್ನಂತ ಬಡವನಿಗೆ ಸಾಧ್ಯವೇ ದೊರೆ...."

"ಅನುಭವವಿಲ್ಲ."

"ಅನುಭವ ಬರೋದು ಅನುಭವಿಸಿದ ಮೇಲೆ ಮಾತ್ರ ದೇವ್ರು. ಹಾಗು ನಿಮಗೆ ಅನುಭವ ಇಲ್ಲ ಅಂದ್ರೆ, ನಿಮ್ಮ ಅಮ್ಮಾವ್ರಿರ್ತಾರಲ್ಲ ಜೊತೆಗೆ, ಹೇಳಿ ಕೊಡೋದಕ್ಕೆ—"

—ಒಂದು ಕಣ್ಣು ಸಣ್ಣದು ಮಾಡಿ, ಮತ್ತೊಂದು ಕಣ್ಣು ದೊಡ್ಡದು ಮಾಡಿ ಅನಸೂಯಳ ಕಡೆ ನೋಡಿದ ದೊರೆ.

ಹೆಗಡೆ ಕಂಪೆನಿ ಮಾಡಿದರೆ ಅದುಬೇರೆ ತನ್ನದು ಬೇರೆಯಾಗಿರಲಿಲ್ಲ ಅನಸೂಯಳಿಗೆ. ನಷ್ಟವಾದರೆ ಹೆಗಡೆ ಬಲವಾಗಿರೋವಾಗ ಅವಳಿಗೇತರ ಭಯ.

"ಮನಸ್ಸು ಮಾಡಿ"—ಎಂದಳು.

* * * *

ಹೆಗಡೆ ಕಾರು ಪುನಃ ಹೊರಟಿತು. ಕಂಪೆನಿ ಮಾಡುವುದು, ಕಂಪೆನಿ ನಡೆಸುವುದು ಯಾವುದೂ ಕಷ್ಟವೆಂದು ಕಾಣಲಿಲ್ಲ ಹೆಗಡೆಗೆ. ತನ್ನಲ್ಲಿರುವ ಪರದೆಸೀನರಿಗಳನ್ನೇ ತರಬೇಕೆಂದು ಕೊಂಡ. ಈವಿಚಾರ ದೊರೆಗೆ ತಿಳಿಸಿದಾಗ ಅವನು ಅತಿದೈನ್ಯದಿಂದ ಹೇಳಿದ—

"ಹಾಗೆ ಮಾಡಿ ಈಬಡವನ ಹೊಟ್ಟೆ ಮೇಲೇ ಕಲ್ಲು ಹಾಕಬೇಡಿ ದೇವ್ರು. ಕಂಪೆನಿ ನಿಮಗೆ ವಹಿಸಿ ಕೊಟ್ಟ ಮೇಲೆ ಪರದೆಸೀನರಿ ಕಟ್ಟಿಕೊಂಡು ನಾನೇನು ಮಾಡಲಿ. ಈ ಕಸುಬನ್ನೇ ಬಿಡೋ ಬಡಪಾಯೀನ

ಉಪವಾಸ ಹಾಕ ಬೇಡಿ ದೊರೆ."

"ಅವುಗಳಿಗೆಲ್ಲ ಹಣ ಬಹಳ ಬೇಕಾಗುತ್ತೆ."

"ಎಷ್ಟಾದೀತು ದೇವ್ರು. ಒಟ್ಟಿಗೆ ಅಷ್ಟು ಹಣಕೊಟ್ಟು ಬಿಡಿ. ಬಡವನಿಗೆ ಧರ್ಮ ಅಂತ ತಿಳೀರಿ ನಿಮಗೆ ಸಮಾಧಾನ ಇಲ್ದಿದ್ರೆ. ರಾತ್ರಿ ನಾನೊಂದು ಪಟ್ಟಿಮಾಡಿಕೊಂಡು ಬರ್ತೀನಿ."

* * * *

ರಾತ್ರಿ ದೊರೆಸ್ವಾಮಿಯ ಪಟ್ಟಿ ಸಿದ್ಧವಾಗಿತ್ತು. ಪರದೆ ಸೀನರಿ—ಕುರ್ಚಿ—ಬೆಂಚು—ಬಿಲ್ಲು—ಬಾಣ—ಕನ್ನಡಿ—ಹಣಿಗೆ ಬೆಂಡಿನ ಸರ....ತಟ್ಟಿ ಬುಟ್ಟಿ ಎಲ್ಲ ಸೇರಿ ಒಟ್ಟಿಗೆ ಹತ್ತು ಸಾವಿರ ರೂಪಾಯಿಯಾಗಿತ್ತು.

ಪಟ್ಟಿಯನ್ನು ವಿವರವಾಗಿ ನೋಡುವ ತಾಳ್ಮೆಯಿರಲಿಲ್ಲ ಹೆಗಡೆಗೆ· ತಡಮಾಡಿದರೆ ದೊರೆಸ್ವಾಮಿ ತನ್ನ ಮನಸ್ಸನ್ನೆಲ್ಲಿ ಬದಲಾಯಿತ್ತಾನೋ ಎಂದು ಕಳವಳವಾಗಿತ್ತು ಅವನಿಗೆ.

ಕೇವಲ ರಾತ್ರಿಯಲ್ಲೇ ರಂಗಭೂಮಿಯನ್ನು ನೋಡಿದ ಅವನಿಗೆ ಅಲ್ಲಿರುವ ಪ್ರತಿಯೊಂದು ಸಾಮಾನೂ ಬೆಳ್ಳಿ ಬಂಗಾರವಾಗಿತ್ತು. ಕಳ್ಳನಾದರೂ ಕಣ್ಣು ಮುಚ್ಚಿಕೊಂಡು ಕೊಡಬೇಕು ಹತ್ತು ಸಾವಿರ....

ಹತ್ತು ಸಾವಿರ !....ಒಂದೇ ವರ್ಷದ ಅಡಕೆಯ ಲಾಭ !

"ಒಪ್ಪಿಗೆಯಿದೆ...."—ಎಂದುಬಿಟ್ಟ ಹೆಗಡೆ.

ದೊರೆಯ ಸ್ವಭಾವವನ್ನು ತಿಳಿದ ಅನಸೂಯ, ನಡುವೆ ಬಾಯಿ ಹಾಕಿದಳು—"ಅಷ್ಟೊಂದು! "

ಹೆಗಡೆ ತನ್ನ ವ್ಯವಹಾರದಲ್ಲಿ ಹೆಂಗಸರು ಬಾಯಿಹಾಕುವುದನ್ನು ಎಂದೂ ಸಹಿಸುತ್ತಿರಲಿಲ್ಲ. ಮನೆಯಲ್ಲಾದರೂ ತನ್ನ ಹೆಂಡತಿಯ ಸ್ಥಳ ಅಡಿಗೆ ಮನೆಯಷ್ಟಕ್ಕೇ ಮಿತವಾಗಿರಬೇಕೆನ್ನುವ ಮನೋಭಾವ ಅವನದು.

ಅನಸೂಯಳ ಮಾತು ತನ್ನ ಘನತೆಗೆ ಕುಂದೆನ್ನಿಸಿತು. ಗಂಡನಾಗಿ ಮೊದಲಬಾರಿಗೆ ತನ್ನ ಹಕ್ಕನ್ನು ಚಲಾಯಿಸುತ್ತಾ ಹೇಳಿದ—

"ನೀನು ಒಳಗೆ ಹೋಗು ನಿನಗೇಕೆ ಈ ವಿಚಾರ."

ಪ್ರೇಮಿಸಿದ ಹೆಣ್ಣೇ ಜೋರು ಜಬರದಸ್ತುಗಳಿಗೆ ಬಾಗದಿರುವಾಗ ಕಾಮಿಸಿದ ಹೆಣ್ಣು ಬಾಗೀತೇ. ಆದರೂ ಇಷ್ಟು ಬೇಗ ಎದುರಾಡಿ ವಿರಸವನ್ನು

ಪ್ರಾರಂಭಿಸುವ ಇಷ್ಟವಿಲ್ಲದೇ ಕೋಪವನ್ನು ನುಂಗಿಕೊಂಡು ಅಲ್ಲೇ ನಿಂತಳು.

"ಯಜಮಾನ್ರು ಹೇಳ್ತಾ ಇದ್ದಾರೆ. ತಾವು ಒಳಗೆ ಹೋಗಬಾರದೇ? ಇಷ್ಟು ಬೇಗ ಹೀಗಾದರೆ ಹೇಗೆ?"

—ಅಂದ ದೊರೆ ತುಟಿಗಳಲ್ಲಿ ಜೊಲ್ಲು ಸುರಿಸುತ್ತಾ.

"ಹಾಳಾಗಿ ಹೋಗಿ."

—ಎಂದು ಶಪಿಸಿ ಒಳಗೆ ಹೋದಳು ಅನಸೂಯ.

"ನಾಳೆ ಪತ್ರ ಬರೆಸೋಣ"—ಅಂದ ಹೆಗಡೆ.

"ಕಳ್ಳ ಹೊಕ್ಕ ಮನೆಗೆ ಎಣ್ಣೆ ದಂಡ ಅಂತ ಈ ಜುಜ್ಬಿ ಬಾಬಿಗೆಲ್ಲ ಸ್ಟಾಂಪು ಖರ್ಚು ಬೇರೆ ಕೇಡು."—ಅಂದ ದೊರೆ.

ಅದೂ ಸರಿಯಾದ ಸಲಹೆ ಎನ್ನಿಸಿತು ಹೆಗಡೆಗೆ. ಅದೇ ರಾತ್ರಿ ಹತ್ತು ಸಾವಿರ ರೂಪಾಯಿಗಳಿಗೆ ಚೆಕ್ ಬರೆದು ದೊರೆಸ್ವಾಮಿಗೆ ಕೊಟ್ಟ.

* * * *

"Bank" ಬಾಗಿಲು ತೆಗೆದ ಕೂಡಲೇ ಹಣಕ್ಯಾಷ್ ಮಾಡಿಸಿಕೊಂಡು ಕಂಬಿಕಿತ್ತ ದೊರೆಸ್ವಾಮಿ.

ಮಧ್ಯಾಹ್ನ ಸಂಬಳಕ್ಕಾಗಿ ಬಂದರು ಕಂಪೆನಿ ನಟರು.

"ಮುಂದಿನ ಜವಾಬ್ದಾರಿ ಮಾತ್ರ ನನ್ನದು "—ಎಂದ ಹೆಗಡೆ.

"ಕಂಪೆನಿ ವಹಿಸಿಕೊಂಡ ಮೇಲೆ ಹಿಂದಿನದೂ ಸೇರಿತು."—ಅವರೆಂದರು.

ಹೆಗಡೆಗೆ ಮೊದಲ ಪೆಟ್ಟು ಬಿದ್ದುದು ಈಗ. ಅವರೆಲ್ಲರ ಸಂಬಳ ಚುಕ್ತು ಮಾಡಿದ.

ಮರುದಿನ ಬೆಳಗ್ಗೆ ಅವರೆಲ್ಲರೂ ಹೊರಟುನಿಂತಿದ್ದರು.

"ಎಲ್ಲಿಗೆ"—ಅಂದ ಹೆಗಡೆ.

"ದೊರೆ ಕಂಪನಿಗೆ"—ಅಂದರು ನಟರು.

"ಅವರು ಕಂಪೆನಿ ಮಾಡೊಲ್ಲ".

"ಮುಂದಿನವಾರ ಬೆಂಗಳೂರಲ್ಲೇ ಕ್ಯಾಂಪು."

ಬೆಪ್ಪಾಗಿ ಹೋದ ಹೆಗಡೆ.

"ಕಂಪೆನಿ ನಾನು ವಹಿಸಿಕೊಂಡಿದ್ದೇನೆ".

"ಕಂಪೆನಿ ವಹಿಸಿಕೊಂಡಿದ್ದೀರ; ನಮ್ಮನ್ನು ವಹಿಸಿ ಕೊಳ್ಳುವ ಹಕ್ಕು ನಿಮಗೆಲ್ಲಿ ಬಂತು?"

"ಮೂರು ತಿಂಗಳ ಅಡ್ವಾನ್ಸು" –ಎಂದರು ಮತ್ತೆ ಕೆಲವರು.

ಮುಖ್ಯರಾದವರೆಲ್ಲಾ ರೈಲುಹತ್ತಿದರು. ಸಂಬಳ ಭರ್ತಿಯವರನ್ನು ಹಾಗೆಯೇ ಬಿಟ್ಟಿದ್ದ ದೊರೆಸ್ವಾಮಿ. ಅವರೆಲ್ಲಾ ಮೂರು ಮೂರು ತಿಂಗಳು ಅಡ್ವಾನ್ಸ್ ಪಡೆದು ನಿಂತರು.

ಹೆಗಡೆ ಮುಂದಿನ ಕ್ಯಾಂಪು ಹಡುಕಬೇಕಾಯಿತು.

ದೊರೆಸ್ವಾಮಿ ಅದೇ ವಾರದಲ್ಲಿ ಹೊಸಸೆಟ್ ಸಿದ್ಧ ಪಡಿಸಿಕೊಂಡು ಬೆಂಗಳೂರಲ್ಲಿ ಕ್ಯಾಂಪ್ ಹಾಕಿದ.

"ಸುಸಮಯ....ರಸಿಕರಂಜನ ಮಂಡಳಿ....ಇವರು ಬೆಂಗಳೂರಿನಲ್ಲಿನ ............ಥಿಯೇಟರಿನಲ್ಲಿ, ಇದೇ ಭಾನುವಾರದಿಂದ ಅಮೋಘಪ್ರಾರಂಭ–"

ಪತ್ರಿಕೆಗಳಲ್ಲಿ ಬಂದ ಪ್ರಕಟಣೆಯನ್ನು ನೋಡಿ ಬೆರಗಾದ ಹೆಗಡೆ.

## ೩೩

ಹೆಗಡೆ ಕ್ಯಾಂಪು ಹಾಕಿದರೂ ತನ್ನ ಮನೆಯವರಿಂದ ಮತ್ತು ತನ್ನವರಿಂದ ದೂರನಾಗಿಯೇ ಹಾಕಬೇಕಾಗಿತ್ತು. ತನ್ನ ವಿಚಾರಗಳು ಕೂಡಲೆ ಗೊತ್ತಾಗಬಾರದೆಂಬ ಅಭಿಪ್ರಾಯದಿಂದ ಅವನು ದೂರ ಹೋಗಬೇಕಿತ್ತು.

ಹೊಸಪೇಟೆಯಲ್ಲಿ ಕ್ಯಾಂಪು ಹಾಕುವ ತೀರ್ಮಾನಕ್ಕೆ ಬಂದ. ಬಿರುಸಿನಿಂದ ಓಡಾಡಿದ. ಅಲ್ಲಿ ಮೇದಾರ ಜಂಬಣ್ಣನವರಿಗೆ ಥಿಯೇಟರು ಕಟ್ಟಲು ಸಾವಿರದ ಮುನ್ನೂರು ರೂಪಾಯಿಗಳಿಗೆ ಕಂಟ್ರಾಕ್ಟು ಕೊಟ್ಟ.

"ಹದಿನೈದು ದಿನದಲ್ಲಿ ಥಿಯೇಟರ್ ಆಗಬೇಕು. ನಮ್ಮ ಜನ ಎಲ್ಲ ಬರುತ್ತಾರೆ"—ಅಂದ ಹೆಗಡೆ.

ಸಂತೆ ನೆರೆಯುವ ಮುನ್ನ ಕಳ್ಳರು ನೆರೆದಂತೆ ಪ್ರತ್ಯೇಕ ಮನೆಯನ್ನು ಗೊತ್ತುಮಾಡಿ ಮೊದಲಾಗಿ ಅನಸೂಯಳನ್ನು ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟ. ಅವಳು ಹೇಳಿದಲ್ಲೆಲ್ಲಾ, ತನಗೆ ತಿಳಿದಲ್ಲೆಲ್ಲಾ ಕಾರು ಹಾಕಿಕೊಂಡು ಹೋಗಿ ಅವರು ಕೇಳಿದಷ್ಟು ಕೊಟ್ಟು ಯಾರೂ ಎಂದೂ ಕೊಡಲಾರದ ಸಂಬಳ ಮಾತನಾಡಿ ನಟನಟಿಯರನ್ನು ಕರೆದುಕೊಂಡು ಬಂದ. ಅವರೆಲ್ಲರಿಗಾಗಿ ಕಂಪೆನಿ ಮನೆಯನ್ನೂ ಮಾಡಿದ.

ಶಿವಮೊಗ್ಗೆಯಲ್ಲಿ ರಾತ್ರಾರಾತ್ರಿ ಪರದೆ ಸೀನರಿಗಳನ್ನು ಬಿಚ್ಚಿಸಿದ. ಈಗ ಗೊತ್ತಾಯಿತು ಹೆಗಡೆಗೆ ಅವುಗಳ ಬಂಡವಾಳ. ಎಲ್ಲ ಮುಟ್ಟಿದೊಡನೆ "ಪರ್" ಎಂದು ಹರಿದು ಹೋಗುತ್ತಿತ್ತು.

ಕುರ್ಚಿ ಸಾಗಿಸಲು ಲಾರಿಗೆ ಹಾಕುವಾಗ "ಫರ್ನಿಚರ್" ಅಂಗಡಿಯವನು ಓಡಿ ಬಂದ. ಬರುಬರುತ್ತಲೇ ರೌದ್ರಾವತಾರ ತಾಳಿದ್ದ—

"ಏನು ಸ್ವಾಮಿ ಹುಡುಗಾಟ! ಈ ಹಗಲು ದರೋಡೆ ಯಾವಾಗ ಕಲಿತಿದ್ದು ನೀವು?"

ಹೆಗಡೆಗೆ ಕಾಲು ನಡುಗಲಾರಂಭಿಸಿತು.

"ಏನು?"—ಅವನೆಂದ.

"ಕುರ್ಚಿನೆಲ್ಲ ಲಾರಿ ಮೇಲೆ ತುಂಬಿ ಬಿಟ್ಟಿದ್ದೀರಲ್ಲ, ಅದೇನು ಕೊಟ್ಟೋರಿಗೆ ವಾಪಸ್ ಕೊಡೋ ಬಾಬಿಲ್ಲವೋ ನಾಟಕದವರಿಗೆ!"

"ಇದನ್ನೆಲ್ಲ ನಾನು ಕೊಂಡಿದ್ದೇನೆ".

"ಯಾವ ಮನೆಹಾಳಾರಿ ಕೊಟ್ಟದ್ದು. ಅದು ಹೇಗ್ರಿ ಬಾಡಿಗೆಗೆ ತಂದ ಕುರ್ಚಿನ ಕ್ರಯಕ್ಕೆ ಕೊಡ್ತಾನೆ."

"ಕೊಟ್ಟು ಬಿಟ್ಟಿದ್ದಾರಲ್ಲ".

"ತಗೊಂಡೋರು ನಿಮ್ಮ ತಲೆ ಎಲ್ಲಿಗೆ ಹೋಗಿತ್ತು? ನಾಳೆ ಬೀದಿ ಸಾಲಿನ ಮನೆ ಎಲ್ಲ ಕೊಟ್ಟು ಬಿಡ್ತಾನೆ ತಗೊಂಡು ಬಿಡಿ".

ಹೆಗಡೆ ತಣ್ಣಗಾಗಿ ಹೋದ.

"ಕಿರ್ಲೋಸ್ಕರ್ ಕಂಪೆನಿ ಕಬ್ಬಿಣದ ಕುರ್ಚಿ ನೂರು ನನ್ನದು. ದಯ ವಿಟ್ಟು ಇಳಿಸಿಕೊಡಿ."

ಊರಿನವರೆಲ್ಲಾ ಮುತ್ತಿಕೊಂಡು ಹೆಗಡೆ ಮಾಡುತ್ತಿದ್ದ ಅನ್ಯಾಯ ಕ್ಕಾಗಿ ನಿಂದಿಸ ತೊಡಗಿದರು. ಹೆಗಡೆ ಕುರ್ಚಿಗಳನ್ನು ಕೆಳಗಿಳಿಸಿದ.

"ಬಾಡಿಗೆ?...." ಎಂದು ಕೇಳಿದ ಅಂಗಡಿಯವನು.

"ಅದೂ ಕೊಟ್ಟಿಲ್ಲವೇ ?"

"ಇಲ್ಲ ಇಪ್ಪತ್ತೈದು ರೂಪಾಯಿ ಬಾಕಿ ಇದೆ."

ಜನ ಮುತ್ತಿಕೊಳ್ಳುತ್ತಿದ್ದರು. ಸರ್ರನೆ ಇಪ್ಪತ್ತೈದು ರೂಪಾಯಿ ಗಳನ್ನೆಸೆದು ಅಲ್ಲಿಂದ ಜಾರಿದ ಹೆಗಡೆ.

ಲಾರಿ ಹೊಸಪೇಟೆಗೆ ಬಂತು. ಥಿಯೇಟರು ಸಿದ್ಧವಾಗಿತ್ತು. ನಟ ನಟಿಯರೂ ಭರ್ತಿಯಾದರು. ಮೊದಲು ನಾಟಕದ ಪ್ರಚಾರ ನಡೆಯಿತು.

ದೊರೆಸ್ವಾಮಿ ಕಂಪೆನಿ ಪದಾರ್ಥಗಳನ್ನು ಕೊಟ್ಟಿದ್ದರೂ ಕಂಪೆನಿ ಹೆಸರನ್ನು ಮಾತ್ರ ಕೊಟ್ಟಿರಲಿಲ್ಲ. ಅದೇ ಹೆಸರಿನಿಂದ ಆಗಲೇ ಬೆಂಗಳೂರಿನಲ್ಲಿ ಯಶಸ್ವಿಯಾಗಿ ನಾಟಕಗಳು ನಡೆಯುತ್ತಿರುವುದು ಪತ್ರಿಕೆಗಳಲ್ಲಿ ಬರುತ್ತಿತ್ತು. ಹೆಸರಿನ ಮಹತ್ವವೂ ತಿಳಿದಿರಲಿಲ್ಲ ಹೆಗಡೆಗೆ.

ತನ್ನ ಕುಲದೇವರು ತಿರುಪತಿ ವೆಂಕಟೇಶ.

"ಅದೇ ಹೆಸರಿಟ್ಟು ಬಿಡಿ"—ಅಂದಳು ಅನಸೂಯ.

ಮೊದಲ–ತಿರುಪತಿ ತೆಗೆದು—"ವೆಂಕಟೇಶ ಕೃಪಾ ಪೋಷಿತ ನಾಟಕ ಮಂಡಳಿ"—ಎಂದು ನಾಮಕರಣ ಮಾಡಿದ.

* * * *

ಮೊದಲ ನಾಟಕದ ದಿನ....

ಮಧ್ಯಾಹ್ನ ಮೂರು ಗಂಟೆಗೆ ಯಾರೋ ಒಬ್ಬಳು ಮುದುಕಿ, ಸುಮಾರು ಒಂದೂವರೆ ವರುಷದ ಮಗುವನ್ನು ಎತ್ತಿಕೊಂಡು, ಮನೆಯ ಕಡೆಗೇ ಬರುತ್ತಿದ್ದಳು.

"ಯಾರೋ?"—ಎಂದುಕೊಂಡ ಹೆಗಡೆ.

"ಅಮ್ಮಾ!...."—ಎನ್ನುತ್ತ ಓಡಿ ಹೋದಳು ಅನಸೂಯ.

"ಇವಳ ಅಮ್ಮಾನೂ ಇಲ್ಲಿಗೆ ಬಂದುಬಿಟ್ಟಳೆ? ಹೆಗಲ ಮೇಲಿರುವ ಮಗು ಯಾರದ್ದು ?"

—ಹೆಗಡೆಯ ಎದೆ ಡಬಡಬನೆ ಹೊಡೆದುಕೊಳ್ಳಲಾರಂಭಿಸಿತು.

ಅನಸೂಯ ಓಡಿಹೋಗಿ ಮಗುವನ್ನೆತ್ತಿಕೊಂಡಳು. ಅದರ ಕೆನ್ನೆಗಳಿಗೆ ಮುತ್ತಿಟ್ಟಳು. ತನ್ನ ಎದೆಗೆ ಅವಚಿಕೊಂಡಳು.

"ಯಾರ ಮಗು ಇದು? ಇವಳೇಕೆ ಹೀಗೆ ಮಾಡುತ್ತಿದ್ದಾಳೆ? ಇವಳ ಅಮ್ಮನದೇ? ಅಷ್ಟು ವಯಸ್ಸಾದ ಮುದುಕಿಗೆ ಇಷ್ಟು ಚಿಕ್ಕ ಮಗುವಿರಲು ಸಾಧ್ಯವೇ ? ಅಥವಾ ಇವಳ ಮಗುವೇ ?........"

ಹೆಗಡೆ ಭಯಗ್ರಸ್ತನಾದ. ಅವನ ಅಂಗಾಂಗಗಳು ನಡುಗತೊಡಗಿದವು.

ಮುದುಕಿ ಬರಬರುತ್ತಾ ಅನಸೂಯಳನ್ನು ಗದರಿಸುತ್ತಲೇ ಬಂದಳು—

"ನಿನಗೆ—ಎಲ್ಲಿ ಹೋದರೂ ಹಾಗೇ. ಮಗುವಿನ ನೆನಪೇ ಇರುವುದಿಲ್ಲ. ನಾನಂತೂ ನಿನ್ನ ಭಾಗಕ್ಕೆ ಇದ್ದೂ ಸತ್ತ ಹಾಗಾಯಿತಲ್ಲ ಈ ಮಗೂನಾದ್ರೂ ಸಾಕೋದು ಬೇಡವೇ. ಸಾಯೋ ಕಡೇಕಾಲಕ್ಕೆ ಇವೆಲ್ಲ ನನಗೆ ಬೇಕಾಗಿದೆ!"

"ನಾನು ಸುಮ್ಮನೆ ಕೂತಿದ್ದೆನೆ ಅಮ್ಮ? ಕೆಲಸವಿತ್ತು ಬರಲಿಕ್ಕೆ ಆಗಲಿಲ್ಲ."

"ಅದೆಂಥ ಕೆಲ್ಸಾನೇ? ಹೊಟ್ಟೇಲಿ ಹುಟ್ಟಿದ ಮಗುವನ್ನೂ ಮರೆತು."

—ಮುದುಕಿ ಬಡಬಡಿಸುತ್ತಲೇ ಇದ್ದಳು.

"ಒಳಗೆ ನಡೆ ಅಮ್ಮ. ಇಲ್ಲಿ ಯಾಕೆ ಸುಮ್ಮನೆ ಕೂಗಾಡ್ತೀಯ ರಸ್ತೆ ಪಕ್ಕದಲ್ಲಿ."

—ಅಂದಳು ಅನಸೂಯ ಅಸಹನೆಯಿಂದ.

"ನನ್ನದೆಲ್ಲಾ ಕೂಗಾಟ. ನಮ್ಮನ್ನು ಕಂಡ್ರೆ ನಿಮಗೆಲ್ಲಾ ಹಾಗೇ ಆಗೋದು. ಅದಕ್ಕೇ ನಾನು ಹೇಳೋದು ನಿನ್ನ ಮಗು ತಗೊಂಡು ನೀನು ಹೊರಟುಹೋಗಿಬಿಡು, ಈ ಮುದಿಕೊರಡಿಗೆ ಇದನ್ನೆಲ್ಲಾ ಅಂಟಿಸಬೇಡ ಅಂತ."

ಕಂಬದಂತೆ ನಿಂತಿದ್ದ ಹೆಗಡೆ. ಮುದುಕಿಯ ದೃಷ್ಟಿ ಈಗ ಹೆಗಡೆಯನ್ನು ಕಂಡಿತ್ತು. ಅವನನ್ನು ಕುರಿತು ಮತ್ತೆ ಕೂಗಾಡಿದಳು ಮುದುಕಿ—

"ಹೇಳ್ರಿ....ನೀವಾದ್ರೂ ಬುದ್ಧಿ ಹೇಳ್ರಿ. ಹೊಟ್ಟೇಲಿ ಹುಟ್ಟಿದ ಮಗುವನ್ನೂ ಮರೆತು ಯಾವ ತಾಯಿ ಇರ್‍ತಾಳ್ರಿ ತಿಂಗಳುಗಟ್ಟಲೆ. ಇಷ್ಟು ವಯಸ್ಸಾದ್ರೂ ಇನ್ನೂ ಬುದ್ಧಿ ಬಂದಿಲ್ಲವಲ್ರಿ ಇವಳಿಗೆ."

"ಒಳಗೆ ಹೋಗ್ತೀಯೋ ಇಲ್ಲವೋ ಅಮ್ಮ?"

—ಅನಸೂಯ ಅಗಲವಾಗಿ ಕಣ್ಣು ಬಿಟ್ಟು ಗದರಿದಳು.

ಮುದುಕಿ ಮಗುವನ್ನೆತ್ತಿಕೊಂಡು ಒಳಗೆ ಹೋದಳು.

"ಯಾರದು ಈ ಮಗು?"

—ಹೆಗಡೆ ಕ್ರೋಧ ಆವೇಶಗಳಿಂದ ಕೇಳಿದ.

"ನನ್ನದೇ?"

—ಎಂದಳವಳು ದೃಢವಾಗಿ.

"ಮೊದಲೇ ಏಕೆ ಹೇಳಲಿಲ್ಲ."

"ಏನೆಂದು?"

"ಮಗುವಿದೆಯೆಂದು."

"ಹೇಳಿದ್ದರೆ ಏನು ಮಾಡುತ್ತಿದ್ದಿರಿ?"

"ನನಗೆ ಮದುವೆ ಬೇಡವಾಗಿತ್ತು."

"ಸಹವಾಸ!.....ಬೇಕಿತ್ತು ಅಲ್ಲವೆ?"

—ವ್ಯಂಗ್ಯವಾಗಿ ಕೇಳಿದಳು ಅನಸೂಯ. ತಲೆತಗ್ಗಿಸಿ ಹೋದ ಹೆಗಡೆ.

"ನನಗೆ ನೀನು ಮೋಸ ಮಾಡಿದೆ."

"ಏನು ಮೋಸ?"

"ಮಗುವಿನ ವಿಚಾರ ತಿಳಿಸಬೇಕಿತ್ತು."

"ಮಗುವಿನಿಂದ ನಿಮಗಾದ ತೊಂದರೆಯೇನು?"

ಇದಕ್ಕೂ ಉತ್ತರ ಸಿಗಲಿಲ್ಲ ಹೆಗಡೆಗೆ. ಸ್ತಬ್ಧನಾದ. ಸ್ವಲ್ಪ ಸುಧಾರಿಸಿಕೊಂಡು ಪುನಃ ಕೇಳಿದ—

"ನಾನು ಯಾರ ಸಹವಾಸವನ್ನೂ ಮಾಡಿಲ್ಲವೆಂದು ಹೇಳಿದೆ."

"ಹೌದು ಹೇಳಿದೆ."

"ಹಾಗೆ ಹೇಳಿ ನನ್ನನ್ನು ವಂಚಿಸಿ ಮದುವೆಯಾದೆ."

"ವಂಚಿಸಿದವರು ಯಾರು? ನಾನೋ? ನೀವೋ?"

"ನೀನು!"

"ಸಾಕು ಸುಮ್ಮನಿರಿ! ಮದುವೆಯಾಗಿರೆಂದು ನಾನು ಹೇಳಿದೆನೆ? ನಾನೆಷ್ಟು ಬೇಡ ಬೇಡವೆಂದು ಅಂಗಲಾಚಿಕೊಂಡರೂ........ಉನ್ಮತ್ತರಂತೆ ವರ್ತಿಸಿದಿರಿ."

"ಪರಮಪವಿತ್ರಳು ನಾನೆಂದು ನೀನು ಜೊಗಳಲಿಲ್ಲವೇ?"

"ನಾಲಿಗೆ ಬಿಗಿಹಿಡಿದು ಮಾತನಾಡಿ. ಅಂದೇನು ನಡೆಯಿತೆಂದು ಜ್ಞಾಪಿಸಿಕೊಳ್ಳಿ. ಅಂದಿನ ನನ್ನ ಸಂದರ್ಭದಲ್ಲಿ ನಿಮ್ಮಿಂದ ತಪ್ಪಿಸಿಕೊಳ್ಳುವುದೇ ಅಸಾಧ್ಯವಾಗಿತ್ತು. ನನಗೆ ಮದುವೆಯಾಗಿದೆ. ನನಗೆ ಮಗುವಿದೆ ಎಂದು ಹೇಳಿದ್ದರೆ ನೀವು ನನ್ನನ್ನು ಬಿಡುತ್ತಿದ್ದಿರಾ? ರಾತ್ರಿ ಇದ್ದು ಬೆಳಗ್ಗೆ ಓಡಿಹೋಗುತ್ತಿದ್ದಿರಿ. ಆಗ ಸಮಾಜದೆದುರು ನೀವೇ ಸಭ್ಯರಾಗಿ ನಿಲ್ಲುತ್ತಿದ್ದಿರಿ. ನನ್ನನ್ನು ಪವಿತ್ರಳೇ ಎಂದು ಪ್ರಶ್ನಿಸುವ ಮೊದಲು ನಿಮ್ಮನ್ನು ನೀವು ಅರಿತುಕೊಳ್ಳಿ. ನೀವು ಪವಿತ್ರರೇ? ನಿಮಗೆ ಮದುವೆಯಾಗಿಲ್ಲವೇ? ನಿಮಗೂ ಮಕ್ಕಳಿಲ್ಲವೇ? ಮತ್ತೇಕೆ ನನ್ನನ್ನು ಬಯಸಿದಿರಿ?—

ನಾನು ಮಾಡಿದ್ದು ವ್ಯಭಿಚಾರ! ನೀವು ಮಾಡಿದ್ದು ವ್ಯವಹಾರ! ಅಲ್ಲವೇ?"

"ನೀನು ನಾಯಿಯಲ್ಲ ಮಾರಿ."

"ಬಾಯಿದೆಯೆಂದು ಆರ್ಭಟಿಸಬೇಡಿ. ಗಂಡಸು ಏನು ಮಾಡಿದರೂ ಅಪರಾಧವಲ್ಲವೆಂಬುದನ್ನು ನಾನು ಬಲ್ಲೆ. ನನ್ನ ತಪ್ಪಿದ್ದರೆ ಕ್ಷಮಿಸಿಬಿಡಿ. ಬೇಡವಾದರೆ ಕಳಿಸಿಕೊಡಿ. ಈಗೇನು ಕೊಳ್ಳೆಹೋಗಿಲ್ಲ. ನಿಮ್ಮ ಸಾಮ್ರಾಜ್ಯ ಉರುಳಿಹೋಗಿಲ್ಲ. ಒತ್ತಾಯವಾಗಿ ನಿಮ್ಮ ಕೊರಳಿಗೆ ನಾನು ಗಂಟು

ಬಿದ್ದಿಲ್ಲ.”

—ಅನಸೂಯ ಅಳತೊಡಗಿದಳು.

ಮತ್ತೆ ಮಾತಾಡಲು ಬಾಯಿಬಾರದೇ ಹೆಗಡೆ ಸರಸರನೆ ಕಾರಿನ ಬಳಿ ಹೋದ. ಅವನ ಹಿಂದುಗಡೆಯೇ ಬಂದಳು ಅನಸೂಯ.

“ಎಲ್ಲಿಗೆ ಹೋಗುತ್ತೀರಿ?”

ಹೆಗಡೆ ಮಾತನಾಡಲಿಲ್ಲ. ಕಾರನ್ನು ಹತ್ತಲು ಯತ್ನಿಸಿದ.

ಅನಸೂಯ ಅವನ ಕಾಲುಗಳನ್ನು ಬಲವಾಗಿ ಹಿಡಿದುಕೊಂಡಳು. ಬಿಕ್ಕಿಬಿಕ್ಕಿ ಅಳತೊಡಗಿದಳು.—

“ಇಷ್ಟಕ್ಕಾಗಿಯೇ ನೀವು ನನ್ನನ್ನು ಮದುವೆಯಾದಿರಾ? ಬೇಕಾದಾಗ ಮದುವೆಯಾಗಿ, ಬೇಡವಾದಾಗ ಬಿಟ್ಟು ಹೋಗಲು ನಾನು ಪಶುವೆಂದು ತಿಳಿದಿರಾ? ನಿಮಗೆ ಹಾಗೆ ಹೋಗಬೇಕೆಂದಿದ್ದರೆ ನನ್ನ ಒತ್ತಾಯವಿಲ್ಲ. ಇವತ್ತು ರಾತ್ರಿ ನಾಟಕವಿದೆ. ಜನ ಏನೆಂದಾರು? ಹಾಕಿದ ಹಣದ ಗತಿಯೇನು?

“ನಾನು ಬೇಡವಾದಲ್ಲಿ ದೂರವಿರುತ್ತೇನೆ. ನಾಟಕ ನಡೆಸಿ. ನಿಮ್ಮ ಕರ್ತವ್ಯವನ್ನು ಮಾಡಿ. ನನ್ನನ್ನು ಬಿಡುವುದು ಎಷ್ಟು ಹೊತ್ತಿನ ಕೆಲಸ.”

ಕೋಪೋದ್ರೇಕಗಳಿಂದ ಹೊಯ್ದಾಡುತ್ತಿದ್ದ ಹೆಗಡೆಯ ಮನಸ್ಸಿಗೆ ಅನಸೂಯಳ ಅಶ್ರುಭರಿತ ನಯನಗಳು ಎದುರಾದುವು. ಅವಳ ಕೊನೆಯ ಮಾತುಗಳು ಅವನನ್ನು ಜಾಗೃತನಾಗುವಂತೆ ಮಾಡಿತು.

“ಆಗುವುದು ಆಗಿಹೋಯಿತು. ಮತ್ತೆ ಊರಲ್ಲೆಲ್ಲಾ ಹರಡಿ—ಮಾನ ಕಳೆದುಕೊಳ್ಳುವುದಕ್ಕಿಂತಾ ಹೇಗಾದರೂ ಕೆಲವು ದಿನಗಳಿದ್ದು ನಿಧಾನವಾಗಿ ಜಾರುವುದೇ ಸರಿಯೆನ್ನಿಸಿತು.

“ಒಳಗೆ ನಡೆಯಿರಿ”—ಎಂದಳು ಅನಸೂಯ ಅವನ ಕೈಗಳನ್ನು ಹಿಡಿದು ಎಳೆಯುತ್ತಾ.

ಹೆಗಡೆಯ ಪ್ರತಿಭಟನೆ ನಡೆಯಲಿಲ್ಲ, ಅವನ ಶಕ್ತಿ ಉಡುಗಿಹೋಗಿತ್ತು. ಮೂಗುದಾರ ಹಾಕಿದ ಎತ್ತಿನಂತೆ ಅವಳನ್ನು ಹಿಂಬಾಲಿಸಿದ.

* * * *

ಹೆಗಡೆಯ ಆಫೀಸು ರೂಮಿನೊಳಗಡೆ ಮುದುಕಿ ಏನೇನೋ ಕೆಲಸ

ಮಾಡುತ್ತಿದ್ದಳು. ಅವಳ ಕೆಲಸದ ಗಡಿಬಿಡಿಯಲ್ಲಿ ಹೊರಗಡೆಯ ಧ್ಯಾನವೇ ಅವಳಿಗಿರಲಿಲ್ಲ. ಅಲ್ಲಿದ್ದ ಪದಾರ್ಥಗಳನ್ನು ಅತ್ತಿಂದಿತ್ತ ಇತ್ತಿಂದತ್ತ ಸರಿಸುತ್ತಾ ಸ್ಥಳ ಮಾಡಿಕೊಳ್ಳುತ್ತಿದ್ದಳು.

ಚಾಪೆಯ ಮೇಲೆ ಆಯಾಸದಿಂದ ಬಳಲಿದ ಮಗು ಮಲಗಿದಲ್ಲೇ ಕಿರುಚಿಕೊಳ್ಳುತ್ತಿತ್ತು.

"ಏನು ಮಾಡ್ತಾ ಇದ್ದಿ ಅಮ್ಮ"—ಅನಸೂಯ ಅಸಹನೆಯಿಂದ ಕೇಳಿದಳು.

"ಈ ತೊಲೆಗೆ ಮೊಳೆ ಹೊಡೆದರೆ ಸರಿಯಾಗುತ್ತೆ ಅಲ್ಲವೇನೇ?"—

—ಅಂದಳು ಮುದುಕಿ ಅನಸೂಯಳನ್ನು ಕುರಿತು. ಹೆಗಡೆಯ ಟಿಕೆಟ್ ಪುಸ್ತಕಗಳ ಟ್ರಂಕನ್ನು ಕಾಲುಬುಡದಲ್ಲಿಟ್ಟು, ಅದರ ಮೇಲೆ ನಿಂತುಕೊಂಡು, ಕಲ್ಲುಗುಂಡಿನಿಂದ ತೊಲೆಗೆ ಮೊಳೆ ಕುಟ್ಟಲಾರಂಭಿಸಿದಳು.

"ತೊಟ್ಟಿಲು ಎಲ್ಲಿವೆ?"—ಎಂದು ಕೇಳಿದಳು ಅನಸೂಯ.

"ತೊಟ್ಲೂ ತರೋಣ ಅಂತ ಇದ್ದೆ. ಈ ರೈಲಿನ ಗಲಾಟೇಲಿ ಮಗುವನ್ನು ತರೋದೇ ತಾಪತ್ರಯ ಆಗಿಹೋಯಿತು.'

"ಮತ್ತೆ ಮಳೆ ಏಕೆ ಹೊಡೀತಿದ್ದಿ?"

"ಸಧ್ಯಕ್ಕೆ ಈ ಸೀರೆ ಕಟ್ಟಿ ಮಗು ಮಲಗಿಸೇನೆ.....ರೀ....ನಿಮ್ಮ ಹೆಸರೇನೋ ಗೊತ್ತಿಲ್ಲ ನನಗೆ....ಪೇಟೆಗೆ ಎಲ್ಲಾದರೂ ಹೋದರೆ, ದಯವಿಟ್ಟು ಈ ಮಗೂಗೆ ಒಂದು ತೊಟ್ಟಿಲು ತಂದು ಕೊಡ್ತೀರಾ?"

ಇದನ್ನು ಕೇಳಿ ಹೆಗಡೆಯ ಎದೆಗೆ ಗುಂಡು ಬಿದ್ದಂತಾಯಿತು. ದೊಪ್ಪನೆ ಹಾಸಿಗೆಯ ಮೇಲೆ ಬಿದ್ದ.

ಎಚ್ಚರವಾಗಿ ನೋಡಿದಾಗ....ಅನಸೂಯ ಅವನ ಬಳಿ ಕುಳಿತು ಸೆರಗಿನಿಂದ ಗಾಳಿ ಹಾಕುತ್ತಿದ್ದಳು. ಪಕ್ಕದಲ್ಲಿ ಸೀರೆಯ ಗಂಟಿನಲ್ಲಿ ಮಗು ಮಲಗಿತ್ತು. ಮುದುಕಿ ಏನೇನೋ ಗೊಣಗುತ್ತಾ ತೂಗುತ್ತಿದ್ದಳು.

ಹೊರಗಡೆ ನಾಟಕದ ಚೀಟಿ ಹಂಚುವ ಬ್ಯಾಂಡಿನ ಶಬ್ದ ಕೇಳಿಬರುತ್ತಿತ್ತು.

* * *

ಮನೆಗೆ ಹೋಗಿ, ಮುದುಕಿಯನ್ನು ಮಗುವಿನೊಡನೆ ಕಳಿಸಿಕೊಟ್ಟು ಮೇನೇಜ್ರು ದೊರೆಸ್ವಾಮಿ, ಬೆಂಗಳೂರಲ್ಲೇ ಈ ದೃಶ್ಯವನ್ನು ಕಲ್ಪಿಸಿಕೊಂಡು ಪಕಪಕನೆ ನಗುತ್ತಿದ್ದ.

# ೩೪

ಬೆರಳು ಕೊಟ್ಟರೆ ಹಸ್ತ ನುಂಗುವ ಕಂಪೆನಿಯ ಜನಕ್ಕೆ ಹೆಗಡೆಯ ವಿಚಾರ ಹೆಗಡೆಗಿಂತಾ ಚೆನ್ನಾಗಿ ತಿಳಿದುಹೋಗಿತ್ತು. ಮೊದಲ ದಿನವೇ ಅವನ ಹುಮ್ಮಸ್ಸು ಮಾಯವಾಗಿತ್ತು.

ರಾತ್ರಿ ಅನಸೂಯಳನ್ನು ಕಾರಿನ ಮೇಲೆ ಕೂರಿಸಿಕೊಂಡು ನಾಟಕ ಮಂದಿರಕ್ಕೆ ಕರೆದುಕೊಂಡು ಬಂದ ಹೆಗಡೆ. ಇಬ್ಬರೂ ಒಟ್ಟಿಗೆ ಒಳಗೆ ದಾಟುವಾಗ, ಕನ್ನಡಿಯ ಮುಂದೆ ಕುಳಿತು ಬಣ್ಣಕ್ಕೆ ಸಿದ್ಧನಾಗುತ್ತಿದ್ದ ಸಿದ್ದಯ್ಯ ನಮ್ರತೆಯಿಂದ ಮೇಲಕ್ಕೆದ್ದ.

“ನಮಸ್ಕಾರ ಯಜಮಾನ್ರಿಗೆ.”

“ನಮಸ್ಕಾರ....” ಎಂದು ಪ್ರತಿ ನಮಸ್ಕರಿಸಲಿಲ್ಲ ಹೆಗಡೆಯವರು. ಸುಮ್ಮನೆ ತಲೆದೂಗಿದರು.

ಹೆಗಡೆಯ ವರ್ತನೆ ಅವನಿಗೆ ಹೊಸದಾಗಿತ್ತು. ಹೆಗಡೆ ಪ್ರತಿ ನಮಸ್ಕರಿಸಲೂ ಅಹಂಕಾರವುಳ್ಳ ಮೂರ್ಖನೆಂಬುದು ಈಗ ತಿಳಿಯಿತು ಅವನಿಗೆ.

“ಅಮ್ಮಾವ್ರಿಗೂ ನಮಸ್ಕಾರ!”—ಎಂದ ಸಿದ್ದಯ್ಯ. ನಸುನಕ್ಕಳು ಅನಸೂಯ.

ಈ ವರ್ತನೆಯಿಂದ ಅವನ ಮನಸ್ಸು ಮುರಿಯಿತು. ಕಿಚ್ಚು ಕೆರಳಿತು. ವಕ್ರಧ್ವನಿಯಲ್ಲಿ ಕೇಳಿದ—

“ಏನು ತಾವಿಬ್ಬರೇ ದಯಮಾಡಿಸಿದಿರಲ್ಲ.”

ಈ ಕೊಂಕು ಅನಸೂಯಳಿಗೆ ಅರ್ಥವಾಯಿತು. ಹೆಗಡೆ ಕುತೂಹಲದಿಂದ ನೋಡಿದ.

“ತಮ್ಮ ಅತ್ತೆಮ್ಮನವರೂ ಬಂದಿದ್ದಾರಂತೆ.”

ಹೆಗಡೆ ಮೌನ.

“ಹ್ಞಾ....ಅಮ್ಮನೂ ಬಂದಿದ್ದಾಳೆ”—ಅಂದಳು ಅನಸೂಯ.

“ಮತ್ತೆ ತಮ್ಮ ಕುಮಾರಕಂಠೀರವನನ್ನೇಕೆ ಕರೆದುಕೊಂಡು ಬರಲಿಲ್ಲ ಹೆಗಡೆಯವರೇ?”

ಹೆಗಡೆಯ ಮುಖಕ್ಕೆ ಸೆಗಣಿ ಎರಚಿದಂತಾಯಿತು ಈ ಮಾತು. ಕೇಳಿಯೂ ಕೇಳದವನಂತೆ ಸ್ವಿಚ್ ಬೋರ್ಡಿನ ಕಡೆ ನಡೆದ.

"ಅವನಿಗೆ ನೆಗಡಿ, ಕೆಮ್ಮು. ಈ ಥಂಡೀಲಿ ಏಕೆ ಅಂತ ಮನೇಲೆ ಬಿಟ್ಟು ಬಂದಿದ್ದೇವೆ."

—ಅಂದಳು ಅನಸೂಯ ಮುಖ ಗಂಟು ಹಾಕಿಕೊಂಡು. ಮತ್ತೆ ಮಾತಿಗವಕಾಶವಿಲ್ಲದಂತೆ ತನ್ನ ಗ್ರೀನ್ ರೂಮಿನ ಕಡೆ ನಡೆದಳು.

ಅವಳು ಮುಂದೆ ಹೋದಾಗ, ಕೈಯಿಂದ ಹಣೆ ಚಚ್ಚಿಕೊಂಡು ಆಕಾಶ ತೋರಿಸಿದ ಸಿದ್ದಯ್ಯ. ನಾಟಕವೊಳಗಿನ ನಾಟಕ ನೋಡಿ ಉಳಿದ ನಟರೂ ಒಳಗೊಳಗೇ ನಕ್ಕರು.

ನಾಟಕ ನಡೆಯಿತು. ಒಂದೂ ಪ್ರ್ಯಾಕ್ಟೀಸಿಲ್ಲದ ನಾಟಕ, ಅಡ್ಡ ಕಸಬಿಗಳ ಕಸುಬಿನಂತೆ ಯದ್ವಾತದ್ವಾ ಆಯಿತು. ಜನ ಗೇಲಿಮಾಡಲಾರಂಭಿಸಿದರು.

ಮೊದಲ ನಾಟಕ ನಾಟಕದವರ ಯಶಸ್ಸು ಅಪಯಶಸ್ಸುಗಳ ಒರೆಗಲ್ಲು. ಅದು ಬಿದ್ದುಹೋದರೆ ನಾಟಕದವರು ಊರು ಬಿಡುವುದು ಒಳ್ಳೆಯದು.

ಎರಡನೆಯ ದಿನ ಮೊದಲನೆಯ ದಿನಕ್ಕಿಂತಾ ಜನ ಕಡಿಮೆಯಾದರು.

ಹೆಗಡೆಗೆ ಈಗಾಗಲೇ ಮತ್ತೆ ಆರೆಂಟು ಸಾವಿರ ರೂಪಾಯಿಗಳು ಕೈಬಿಟ್ಟುಹೋಗಿತ್ತು.

ನಾಟಕದವರ ಬಾಯಿ ಒಡಕು ಮಡಕೆಯಂತೆ. ಅದಕ್ಕೆ ಯಾವುದನ್ನೂ ಮುಚ್ಚಿಡುವ ಅಭ್ಯಾಸವಿಲ್ಲ. ಮರುಬೆಳಗ್ಗೆ ಕಾಫಿ ಕುಡಿಯಲು ನಟರು ಹೋದ ಹೋಟೆಲುಗಳಲ್ಲೆಲ್ಲಾ ಹೆಗಡೆಯವರ ಚರಿತ್ರೆ ಹೊರಗೆ ಬಂತು.

ಹೋಟೆಲು ಪ್ರಸಾರ ಕೇಂದ್ರ—ಅಲ್ಲಿಂದ ಅದು ಸಾಯಂಕಾಲದೊಳಗೇ ಊರೆಲ್ಲ ಹಬ್ಬಿತು.

ಹೆಗಡೆ ಕಂಪೆನಿ ಮಾಲೀಕನೆಂಬ ಗೌರವವಾಗಲೀ, ಹೆಗಡೆಯ ಕಂಪೆನಿ ನಾಟಕದ ಕಂಪೆನಿಯೆಂಬ ಬೆಲೆಯಾಗಲೀ ಉಳಿಯಲಿಲ್ಲ.

ಹುಡುಗಿಯರ ಷೋಕಿಗಾಗಿ ಕಂಪೆನಿ ಮಾಡಿದ ವಿಟಪುರುಷನಾದ ಹೆಗಡೆ. ಅವನ ಕಂಪೆನಿ ವೇಶ್ಯೆಯರ ಗುಡಿ ಎಂಬ ಭಾವನೆ ಬೆಳೆದು ಹೋಯಿತು ಜನರಲ್ಲಿ.

ಹೆಗಡೆಯ ಮೇಲೆ ಮರುದಿನದಿಂದ ಹೋಟೆಲು ಸರ್ವರುಗಳು ಬಗೆ ಬಗೆಯಕವನಗಳನ್ನು ಕಟ್ಟಿ ಪ್ರೋಸ್ಟ್ ಕಾರ್ಡಿನಲ್ಲಿ ಬರೆದು ಕಳಿಸತೊಡಗಿದರು.

ಹೂವಿದ್ದಲ್ಲಿ ದುಂಬಿಗಳು ಹಾರಾಡತೊಡಗುವಂತೆ ಹೆಗಡೆಯ ಮನೆ ಬಾಗಿಲಿನ ರಸ್ತೆಯಲ್ಲಿ ಜನ ಬೆಳಗಿನಿಂದ ಸಂಜೆಯವರೆಗೂ ತಿರುಗಲಾರಂಭಿಸಿದರು.

ಕಾರುಗಳು ನಿಮಿಷಕ್ಕೊಮ್ಮೆ ಅತ್ತಿಂದಿತ್ತ ಇತ್ತಿಂದತ್ತ ಓಡತೊಡಗಿದುವು.

ಬಳಸು ದಾರಿಯಾದರೂ, ರೈಲ್ವೆ ಸ್ಟೇಷನ್ನಿಗೆ ಹೋಗುತ್ತಾ ಜಟಕಾದವರು ಅದೇ ಮಾರ್ಗದಲ್ಲಿ ಬರಲಾರಂಭಿಸಿದರು. ಮನೆಯೆದುರು ಬಂದಾಗ ಇವರ ಸಿನಿಮಾ ಸಂಗೀತ, ಸೀಟಿಗಳ ವೈಖರಿಯನ್ನು ನೋಡಿ ಬೀದಿಯವರೆಲ್ಲಾ ಬೆರಗಾದರು.

ಅನಸೂಯ ಮನೆ ಹೊರಗೆ ಜಗುಲಿಗೆ ಬಂದಳೆಂದರೆ ಸಾಕು. ಕಿವಿಯಿಂದ ಕಿವಿಗೆ ವರ್ತಮಾನ ಹಬ್ಬಿ ಊರ ತುದಿಯವರೆಗೂ ತಲುಪುತ್ತಿತ್ತು.

ಹೊಲಿಗೆಯವರು ಕೆಲಸ ಬಿಟ್ಟೇಳುತ್ತಿದ್ದರು. ಬೀಡಿ ಫ್ಯಾಕ್ಟರಿಯವರು ಬಾಡಿಗೆ ಸೈಕಲ್ ತೆಗೆದುಕೊಂಡು ಮನೆಯೆದುರು ಮೆರವಣಿಗೆ ಬರುತ್ತಿದ್ದರು.

ಎಲ್ಲರೂ ತಮ್ಮ ತಮ್ಮ ಮಟ್ಟದಲ್ಲಿ ತಮ್ಮ ಪ್ರೇಮವನ್ನು ಪ್ರದರ್ಶಿಸುವವರೇ....

ಪ್ರೇಮ ಪ್ರದರ್ಶನ! ....

ಯಾವುದೋ ಹೆಣ್ಣು ಯಾವುದೋ ಗಂಡು ಆದರೂ ಎಲ್ಲರಿಗೂ ಆಸೆ. ಇಲ್ಲಿ ಮೇಲು ಕೀಳುಗಳಿಲ್ಲ, ನೀತಿ ಅನೀತಿಗಳಿಲ್ಲ, ನ್ಯಾಯ ಅನ್ಯಾಯಗಳಿಲ್ಲ, ಸಾಧ್ಯಾಸಾಧ್ಯತೆಯ ಪ್ರಶ್ನೆಯಂತೂ ಮೊದಲೇ ಇಲ್ಲ. ಹೆಣ್ಣಿನ ಮುಂದೆ ಹುಚ್ಚನಂತೆ ಕುಣಿಯುತ್ತಾನೆ ಗಂಡು. ಇದೇ ಪ್ರಪಂಚದ ಮಾಯೆ.

ಮನೆಯ ಮುಂದೆ ಬಂದಾಗ ಕೆಟ್ಟು ನಿಲ್ಲುವ ಕಾರುಗಳೆಷ್ಟೋ! ಪ್ಯಾಚಾಗುವ ಸೈಕಲ್ಲುಗಳೆಷ್ಟೋ ?

ಯಾವ ಆಟ ಬೇಕು? ಯಾವ ನೋಟ ಬೇಕು? ಯಾವ ಸರ್ಕಸ್ ಬೇಕು?ಎಲ್ಲವನ್ನೂ ಕಾಣಬಹುದು ನಾಟಕದ ಕಂಪೆನಿಯ ಮನೆಯ ಬಾಗಿಲಿ

ನಲ್ಲೇ.

ನಾನಾ ರೀತಿಯ, ನಾನಾ ಉಡುಪಿನ, ನಾನಾ ಖಯಾಲಿಯ ಜನ, ಹಗಲಿರುಳೂ ಅಲೆಯುತ್ತಿರುತ್ತಾರೆ ಇಲ್ಲಿ ತಲೆ ಕೆಟ್ಟ ಸಭ್ಯರಂತೆ.

ಇವೆಲ್ಲವೂ ಹೊಸದಾಗಿತ್ತು ಹೆಗಡೆಗೆ. ಸಾವಿರಗಟ್ಟಲೆ ಹಣ ನೀರಿನಂತೆ ಹರಿದುಹೋಯಿತಾದರೂ, "ನೀನೇ" ಎಂದು ಮಾತನಾಡಿಸುವವರಿರಲಿಲ್ಲ. "ಅಯ್ಯೋ!" ಎಂದು ಪಶ್ಚಾತ್ತಾಪ ಪಡುವವರಿರಲಿಲ್ಲ. "ಪಾಪ" ಎಂದು ಮರುಗುವವರೂ ಇರಲಿಲ್ಲ.

ನೀರಿನಲ್ಲಿ ಬಿದ್ದ ದಾತೀಕರಿಲ್ಲದ ಹೆಣವನ್ನು ಮೀನು ಮೊಸಳೆಗಳು ಕಿತ್ತು ತಿನ್ನುವಂತೆ, ಹೆಗಡೆಯ ಹಣ ದಿಕ್ಕುಪಾಲಾಗಿ ಹೋಯಿತು.

ಹಣ ಹೋದ ಕೊರಗು, ಅಂತರಂಗದ ದುಗುಡ, ಹೊರಗಡೆಯಿಂದ ನಿತ್ಯವೂ ಬರುವ ಹಂಗಿಸುವ ಪತ್ರಗಳು—ಅವನನ್ನು ಹುಚ್ಚನನ್ನಾಗಿ ಮಾಡಿದುವು—ಸುತ್ತಮುತ್ತಲೂ ಮೀನು—ಮೊಸಳೆ—ತಿಮಿಂಗಿಲಗಳಿಂದ ಕೂಡಿದ ಭೀಭತ್ಸ ಸಾಗರದ ನಡುಗಡ್ಡೆಯಲ್ಲಿ ಏಕಾಂಗಿಯಾಗಿರುವಂತೆ ನಡುಗತೊಡಗಿದ.

ಈಗ ಮನೆಯ ನೆನಪಾಯಿತು. ಹೆಂಡತಿ ಮಕ್ಕಳ ನೆನಪಾಯಿತು. ಅವರಿಗೆ ತಾನು ಮಾಡಿದ ದ್ರೋಹಕ್ಕೆ, ಅನ್ಯಾಯಕ್ಕೆ ಆಗುತ್ತಿರುವ ಪ್ರಾಯಶ್ಚಿತ್ತವಿದೆನ್ನಿಸಿತು. ಇದರಿಂದ ಮುಕ್ತನಾಗುವುದು ಹೇಗೆ? ತನ್ನ ಕಷ್ಟವನ್ನರಿತು ಸಹಾನುಭೂತಿ ತೋರಿಸುವವರಾದರೂ ಯಾರಿದ್ದಾರೆ?

ಹೆಗಡೆಗೆ ಶ್ರೀಧರನ ನೆನಪಾಯಿತು. ಅವನು ಕೆಲಕಾಲ ನಾಟಕದ ಕಂಪೆನಿಯಲ್ಲಿದ್ದುದೂ ಗೊತ್ತಿತ್ತು. ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವರು, ಒಂದೇ ಊರಿನವರಂತೆ ಇದ್ದವರು—ಹೆಗಡೆ ಶ್ರೀಧರ.

ಅದೇ ಮರುಬೆಳಗ್ಗೆ ಹೆಗಡೆಯ ಕಾರು ಅಲ್ಲಿಂದ ಹೊರಟಿತು.

# ನಾಲ್ಕನೆಯ ಭಾಗ

## ೩೫

ಮನೆಯೆದುರು ಕಾರು ನಿಲ್ಲಿಸಿ ಕೆಳಗಿಳಿದ ಹೆಗಡೆ. ಅನಿರೀಕ್ಷಿತವಾಗಿ ಬಂದ ಹೆಗಡೆಯನ್ನು ಕಂಡು ಶ್ರೀಧರ ಚಕಿತನಾದ. ಅವನನ್ನು ಈ ಸ್ಥಿತಿಯಲ್ಲಿ ಎಂದೂ ನೋಡಿರಲಿಲ್ಲ ಅಥವಾ ಹೀಗಿರಬಹುದೆಂದು ಕಲ್ಪಿಸುವಂತೆಯೂ ಇರಲಿಲ್ಲ.

ಸದಾ ಇಸ್ತ್ರಿ ಬಟ್ಟೆಗಳನ್ನು ಧರಿಸುತ್ತಿದ್ದ ಹೆಗಡೆ ಮಲಿನ ವಸ್ತ್ರಗಳನ್ನು ತೊಟ್ಟಿದ್ದ. ಮುಖದ ಕಾಂತಿ ಕುಗ್ಗಿತ್ತು. ಕೆನ್ನೆಗಳು ತಮ್ಮ ಶೋಭೆಯನ್ನು ಕಳೆದುಕೊಂಡಿದ್ದುವು. ತಲೆಗೂದಲು ಬಾಚದೇ ಅನೇಕ ದಿನಗಳಾದಂತೆ ಸಿಕ್ಕುಸಿಕ್ಕಾಗಿ ಹರಡಿಕೊಂಡಿತ್ತು.

"ಎಲ್ಲಿಗೆ ಬಂದಿದೆ ನಿಮ್ಮ ಕೆಲಸಗಳು?"

—ಎಂದ ಹೆಗಡೆ ಬಾಗಿಲು ದಾಟುತ್ತಾ.

"ಅದು ಮುಗಿಯುವಂತೆಯೇ ಇಲ್ಲ."

"ಎಲ್ಲರಿಗೂ ರಜವಿದೆ, ಬೇಸಾಯಗಾರರಿಗೆ ಮಾತ್ರ ರಜವೇ ಇಲ್ಲ."

"ವ್ಯವಸಾಯ ವಿಚಿತ್ರವಾದ ಕಸುಬು. ಅದರಲ್ಲಿ ನಿತ್ಯವೂ ರಜ, ನಿತ್ಯವೂ ಕೆಲಸ. ಬೇಕಾದಾಗ ಕೆಲಸ ಮಾಡಬಹುದು, ಮನಸ್ಸು ಬಂದಾಗ ರಜಾ ತೆಗೆದುಕೊಳ್ಳಬಹುದು."

"ನಾಟಕಕ್ಕಿಂತಾ ಇದೇ ಸುಖವಾದ ವೃತ್ತಿ ಅಲ್ಲವೇ?"

"ನಾಟಕವನ್ನು ವೃತ್ತಿಯೆಂದು ಕರೆಯುವ ನಂಬಿಕೆಯೇ ನನಗಿಲ್ಲ. ಅದೇ ವೃತ್ತಿಯನ್ನಾಶ್ರಯಿಸಿದ ಬಹುಮಂದಿ ಜೀವನದಲ್ಲಿ ಸೋತು ಹೋಗಿದ್ದಾರೆ."

ಶ್ರೀಧರನ ಮಾತು ಹಿಡಿಸಿತು ಹೆಗಡೆಗೆ. ನಾಟಕ ಮುಟ್ಟಿದವರ ಮೈ ಸುಡುವ ಅಗ್ನಿಯಾಗಿತ್ತು.

ಸರೋಜ ಕಾಫಿ ತಂದುಕೊಟ್ಟು ಹೋದಳು.

"ನೀವೇಕೆ ಇಷ್ಟು ಸೋತುಹೋಗಿದ್ದೀರಿ."—ಶ್ರೀಧರ ಕೇಳಿದ.

"ಕೆಲಸ ವಿಪರೀತವಾಗಿತ್ತು, ಅಷ್ಟೆ....ಈಗ ಬಿಡುವಾಗಿದೆ. ಅದಕ್ಕಾಗಿ ನಾನು ಹಂಪೆಗೆ ಹೋಗಿಬರೋಣವೆಂದು ಮನಸ್ಸು ಮಾಡಿದ್ದೇನೆ."

ಹಂಪೆ! ವಿಜಯನಗರದರಸರ ರಾಜಧಾನಿ! ಪಂಪಾ ಸರೋವರ! ರಾಮಾಯಣಕಾಲದ ಕಿಷ್ಕಿಂಧೆ!

"ಕಾರಿನಲ್ಲೇ ಹೋಗುತ್ತೀರಾ"—ಶ್ರೀಧರ ಕೇಳಿದ.

"ಹೌದು. ಅದಕ್ಕಾಗಿ ನಿಮ್ಮನ್ನೂ ಕರೆದುಕೊಂಡು ಹೋಗೋಣವೆಂದು ಬಂದೆ. ನನಗೆ ಒಬ್ಬನಿಗೇ ಬೇಸರ."

"ನಿಮಗೆ ಈ ಬುದ್ಧಿ ಬಂದಿರುವುದು ನನ್ನ ಅದೃಷ್ಟ".

"ತುಂಗಭದ್ರಾ ಜಲಾಶಯವನ್ನೂ ನೋಡಬಹುದು. ಅದು ಅಲ್ಲೇ ಸಮೀಪದಲ್ಲಿದೆ."

"ನಾವು ಹೊಸಪೇಟೆಯಲ್ಲಿ ಇಳಿದುಕೊಳ್ಳಬೇಕಾಗಬಹುದು."

"ಹೌದು ನಾನೂ ಅದನ್ನೇ ಯೋಚಿಸಿದ್ದೇನೆ"—ಎಂದ ಹೆಗಡೆ ಸಮಾಧಾನದಿಂದ ನಗುತ್ತಾ.

"ಯಾವಾಗ ಹೊರಡುತ್ತೀರಿ?"—ಶ್ರೀಧರ ಕೇಳಿದ.

"ಈಗಲೇ".

"ನಾನು ಸಿದ್ಧನಾಗಿಲ್ಲ."

"ಅದಕ್ಕೆಷ್ಟು ಹೊತ್ತು, ಬೆಡ್ಡಿಂಗ್ ಕಟ್ಟಿಬಿಡಿ."

ಸದಾ ತಿರುಗಾಡಿ ಅಭ್ಯಾಸವಿರುವ ಶ್ರೀಧರನಿಗೆ ಹೊರಡುವುದು ತಡವಾಗಲಿಲ್ಲ.

ಶ್ರೀಧರ ಕಾರಿನ ಮೇಲೆ ಕುಳಿತ. ಹೆಗಡೆ ಸ್ಟಿಯರಿಂಗ್ ಹಿಡಿದ.

"ಬೇಗ ಬಂದುಬಿಡಿ ಹಾಗೇ ಮತ್ತೆಲ್ಲಾದರೂ ನಾಟಕದ ಕಂಪೆನಿಗೆ ಹೋಗಿಬಿಡಬೇಡಿ."—ಎಂದಳು ಸರೋಜ ವಿನೋದವಾಗಿ.

"ಇವಳಿಗಿನ್ನೂ ನನ್ನ ಮೇಲೆ ಅನುಮಾನ."

—ಅಂದ ಶ್ರೀಧರ ಹೆಗಡೆಯನ್ನು ಕುರಿತು.

ಹೆಗಡೆ ಮಾತನಾಡಲಿಲ್ಲ. ಮನಸ್ಸಿನಲ್ಲೇ ನಕ್ಕ. ಕಾರು ಹೊರಟಿತು.

* * * *

ಶಿವಮೊಗ್ಗೆಯನ್ನು ದಾಟಿ ಹರಿಹರದ ಮಾರ್ಗ ಹಿಡಿಯಿತು. ಇಷ್ಟೂ ಹೊತ್ತು ಬೇರೆ ಬೇರೆ ವಿಚಾರಗಳನ್ನು ಮಾತಾಡುತ್ತಿದ್ದ ಹೆಗಡೆ ನಿಧಾನವಾಗಿ ನಾಟಕದ ವಿಷಯವನ್ನೆತ್ತಿದ.

"ನೀವು ಬೆಂಗಳೂರಲ್ಲಿದ್ದಾಗ ನಿಮ್ಮೊಡನೆ ಯಾರು ಯಾರಿದ್ದರು?"

"ವೆಂಕಟೇಶಯ್ಯ—ನರೇಂದ್ರ—ಮದ್ದೂರಾಯ—ರತ್ನಾಕರ...."

"ಹೆಂಗಸರು."

"ಹೇಳಿಕೊಳ್ಳುವಂತಹ ಜನ ಅವರಲ್ಲ."

"ಅವರ ಹೆಸರು."

"ಅನಸೂಯಾದೇವಿ ಅಂತ...."

"ಅವರ ನಡತೆ ಹೇಗೆ?"

ಹೆಗಡೆ ಏಕಾಏಕಿ ಈ ಪ್ರಶ್ನೆಯನ್ನು ಕೇಳುವ ಉದ್ದೇಶವೇನೆಂದು ಶ್ರೀಧರ ಯೋಚಿಸತೊಡಗಿದ.—ಅನಸೂಯಳ ವಿಚಾರದಲ್ಲಿ ಅವನಿಗೆ ಮೊದಲಿಂದಲೂ ಅನುಮಾನವಿತ್ತು.—

"ಹೆಂಗಸರ ನಡತೆಯ ವಿಚಾರದಲ್ಲಿ ಮಾತನಾಡುವುದು ಮೂರ್ಖತನ. ನಿಜವೆಂದು ನಂಬುವುದೂ ಸಾಧ್ಯವಿಲ್ಲ. ಸುಳ್ಳೆಂದು ಸಾಧಿಸುವುದೂ ಅಸಾಧ್ಯ."

"ನಿಮ್ಮ ಅನುಭವದಿಂದ ಹೇಳಿ."

ಶ್ರೀಧರನಿಗೆ ನರೇಂದ್ರನ ನೆನಪಾಯಿತು. ಅಂದು ರಾತ್ರಿ ಉಂಗುರಗಳು ಬದಲಾದಾಗ ಅನಸೂಯಳ ಬಗ್ಗೆ ಅವನಾಡಿದ ಮಾತುಗಳ ನೆನಪು ಬಂತು. ಆದರೂ ಅದನ್ನು ಹೆಗಡೆಯೊಡನೆ ಏಕಾಏಕಿ ಹೇಳುವುದು ಯೋಗ್ಯವಲ್ಲ. ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು ಅಂದುಕೊಂಡು ಸುಮ್ಮನಾದ.

"ನಿಮಗೇಕೆ ಅವಳ ವಿಚಾರ?"

"ತಿಳಿದುಕೊಳ್ಳುವ ಅಗತ್ಯವಿತ್ತು ಕೇಳಿದೆ".

ಹೆಗಡೆ ತನ್ನ ಚರಿತ್ರೆಯನ್ನು ಪ್ರಾರಂಭಿಸಿದ. ರಸಿಕರಂಜನ ಮಂಡಳಿಯವರ ನಾಟಕ ನೋಡಲು ತಾನು ಬಂದದ್ದು. ದೊರೆಸ್ವಾಮಿಯ ಪರಿಚಯವಾದದ್ದು. ಅನಸೂಯಳನ್ನೂ ಕೂಡಿಕೊಂಡು ಕಂಪೆನಿ ವಹಿಸಿಕೊಂಡದ್ದು, ನಂತರ ಹೊಸಪೇಟೆಗೆ ಕ್ಯಾಂಪು ಹೋದ ವಿಚಾರಗಳನ್ನೆಲ್ಲ ವಿವರವಾಗಿ ಹೇಳಿದ ಹೆಗಡೆ.

ಕೇಳಿ ಮೂಕನಾದ ಶ್ರೀಧರ. ನಾಟಕ ನೋಡಲು ಬಂದ ಹೆಗಡೆ

ವಿಧಿಯ ಕೈಗೊಂಬೆಯಾಗಿ ಕಂಪೆನಿ ಸುತ್ತಿಕೊಂಡಿದ್ದಾನೆ. ಅನಸೂಯಳ ಬಲೆಗೆ ಬಿದ್ದಿದ್ದಾನೆ. ನಮ್ಮ ಜೀವನದಲ್ಲಿ ಒಂದು ಕ್ಷಣ ತಪ್ಪಿ ನಡೆದರೂ ಎಷ್ಟು ಅನಾಹುತಗಳಾಗುತ್ತವೆ!

ಕವಲೊಡೆದ ಕಾಡುದಾರಿಯಲ್ಲಿ ನಾವು ನಡೆಯುತ್ತಿದ್ದೇವೆ. ಎಲ್ಲ ದಾರಿಗಳೂ ನಮ್ಮ ಕಣ್ಣಿಗೆ ಒಂದೇ. ಇದರಲ್ಲಿ ಊರಿನ ದಾರಿ ಯಾವುದು? ಕಾಡಿನ ದಾರಿ ಯಾವುದು? ಎಂಬುವನ್ನು ಯಾತ್ರಿಕ ತನ್ನ ಅನುಭವದಿಂದಲೇ ತಿಳಿದುಕೊಳ್ಳಬೇಕೇ ಹೊರತು ...ಇದೇ ಮಾರ್ಗವೆಂದು ನಿರ್ದಿಷ್ಟವಾಗಿ ತೋರುವ ದಿಕ್ಸೂಚಿ ಜೀವನದಲ್ಲಿಲ್ಲ.

"ನೀವು ಬಹಳ ದುಡುಕಿದಿರಿ!"

—ಎಂದ ಶ್ರೀಧರ ಸಂಕಟದಿಂದ.

"ನಿಜವೆಂದು ಈಗ ತೋರುತ್ತಿದೆ. ಇದರಿಂದ ಸುಮಾರು ಹದಿನಾರು ಹದಿನೆಂಟು ಸಾವಿರ ರೂಪಾಯಿಗಳು ಕೈಬಿಡುವ ಸಂಭವವಿದೆ."

"ಅಷ್ಟೊಂದು !"

"ಅಷ್ಟು ಹೋಗಿದೆ. ಪುನಃ ಅದು ಬರುವ ಸಂಭವ ನನಗೆ ಕಾಣು ತ್ತಿಲ್ಲ. ಹೋಗಿದ್ದಕ್ಕಾಗಿ ನನಗೆ ಚಿಂತೆಯೂ ಇಲ್ಲ. ಆದರಿಂದು ಹಣ ಕ್ಕಿಂತಲೂ ಮಿಗಿಲಾಗಿ ಮಾನ ಹೋಗಿದೆ."

"ಹೇಗೆ ?"

ಹೆಗಡೆ ತನಗೆ ನಿತ್ಯವೂ ಬರುವ ಹಂಗಿಸುವ ಪತ್ರಗಳ ಒಂದೆರಡು ಉದಾಹರಣೆಗಳನ್ನು ಹೇಳಿದ—

"ಜನಗಳ ಅಸಹ್ಯವಾದ ಮಾತುಗಳಿಂದ ತಲೆ ಕೆಟ್ಟು ಹೋಗಿದೆ. ನಾನು ಕಂಪೆನಿ ಮಾಡಿದ ಉದ್ದೇಶ ಹೆಂಗಸರ ಷೋಕಿಗಾಗಿಯಲ್ಲ....ಕಲೆಗಾಗಿ ಎಂಬುದನ್ನು ಸಾಧಿಸಿ ತೋರಿಸಬೇಕಾಗಿದೆ."

"ಅದು ಹೇಗೆ ಸಾಧ್ಯವಾದೀತು. ಜನರ ಮನಸ್ಸಿನಲ್ಲಿ ರೂಢವಾದ ಅಭಿಪ್ರಾಯವನ್ನು ಬದಲಿಸುವುದು ಕಷ್ಟ".

"ಸುಮ್ಮನೆ ಹೊರಟರೆ ಅಲ್ಲಿ ನನ್ನ ತಪ್ಪನ್ನು ಒಪ್ಪಿಕೊಂಡು ಹೊರ ಟಂತಾಗುತ್ತೆ. ಇನ್ನೆಷ್ಟು ಹಣ ಹೋದರೂ ಚಿಂತೆಯಿಲ್ಲ. ಉತ್ತಮವಾದ ಜನರನ್ನು ಕೂಡಿಸಿ ಒಳ್ಳೆಯ ನಾಟಕಗಳನ್ನಾಡಿಸಬೇಕು. ಅದಕ್ಕಾಗಿ

ನಿಮ್ಮಲ್ಲಿಗೆ ಬಂದೆ."

"ನಾಟಕ ಬೇಡವೆಂದು ಮನೆಯಲ್ಲಿ ಕುಳಿತವನಿಗೆ ಕಠಿಣವಾದ ಜವಾಬ್ದಾರಿಯನ್ನು ಹೊರಿಸುತ್ತಿದ್ದೀರಿ. ನಾನು ಪುನಃ ನಾಟಕದ ಕಂಪೆನಿಗೆ ಬಂದೆನೆಂದು ತಿಳಿದರೆ ಮನೆಯಲ್ಲಿ ಗಾಬರಿಯಾಗುತ್ತಾರೆ."

"ಅದು ನನಗೆ ಗೊತ್ತು. ಅದಕ್ಕಾಗಿಯೇ ನಾನು ಅಲ್ಲಿ ಯಾವ ವಿಚಾರವನ್ನೂ ಹೇಳದೆ ಗುಟ್ಟಾಗಿದ್ದದ್ದು."

ಎಂತಹ ಶೋಚನೀಯ ಸ್ಥಿತಿ! ಲಲಿತ ಕಲೆಗಳಲ್ಲಿ ಅಗ್ರಸ್ಥಾನ ನಾಟಕಕ್ಕಿದೆಯಾದರೂ, ನಮ್ಮ ಕನ್ನಡ ರಂಗಭೂಮಿಯ ಇಂದಿನ ಅವ್ಯವಸ್ಥೆಗಳಿಂದಾಗಿ, ಅದನ್ನು ಪ್ರವೇಶಿಸುವವರು ಕಳ್ಳರಂತೆ ತಲೆತಗ್ಗಿಸಿಕೊಂಡು ಹೋಗಬೇಕಾಗಿದೆ....

ದುಃಖಿತನಾದ ಶ್ರೀಧರ.

## ೩೬

ಹೊಸಪೇಟೆಯನ್ನು ಸಮೀಪಿಸುವಾಗ ರಾತ್ರಿ ಹನ್ನೆರಡು ಗಂಟೆಯ ಮೇಲಾಗಿತ್ತು. ತುಂಗಭದ್ರೆಯ ಅಣೆಕಟ್ಟನ್ನು ಅಲಂಕರಿಸುವ ಸಾಲು ದೀಪಗಳು ದೂರದಿಂದಲೇ ಶೋಭಿಸತೊಡಗಿದುವು. ಈಗಲೇ ಬಂದು ಹೋಗಿರೆಂದು ಅವು ಕೈಬೀಸಿ ಕರೆಯುವಂತಿತ್ತು.

"ಕಾರನ್ನು ತಿರುಗಿಸಿ ಒಂದುಕ್ಷಣ........ಜಲಾಶಯವನ್ನು ನೋಡಿಕೊಂಡೇ ಹೋಗೋಣ."

"ಎಷ್ಟು ಆತುರ ನಿಮಗೆ....ವೈಕುಂಠಕ್ಕೆ ಹೋಗೋದಕ್ಕೆ."

ಹೆಗಡೆಯ ಮಾತು ತಕ್ಷಣ ಅರ್ಥವಾಗಲಿಲ್ಲ ಶ್ರೀಧರನಿಗೆ. ಸ್ವಲ್ಪ ಯೋಚಿಸಿದ ನಂತರ ತುಂಗಭದ್ರಾ ಜಲಾಶಯದ ಇಬ್ಬದಿಯಲ್ಲಿನ ಪ್ರವಾಸಿ ಮಂದಿರಗಳ ನೆನಪಾಯಿತು—

"ನಾವಂತೂ ಸತ್ತಮೇಲೆ ವೈಕುಂಠಕ್ಕೂ ಹೋಗುವುದಿಲ್ಲ. ಕೈಲಾಸದಲ್ಲೂ ಸ್ಥಳವಿಲ್ಲ. ಬದುಕಿರುವಾಗಲೇ ನೋಡಿ ಬಿಡೋಣ"

—ಅಂದ ಶ್ರೀಧರ ನಗುತ್ತಾ.

"ಈಗ ನಾಟಕ ನಡೆಯುತ್ತಿದೆ. ಮೊದಲು ಅಲ್ಲಿಗೆ ಹೋಗೋಣ. ವಿರಾಮವಾದಾಗ ವೈಕುಂಠ ಕೈಲಾಸಗಳಿಗೆ ಹೋಗೋಣ.

ಕಾರು ಮುಂದುವರೆಯಿತು—

ಊರಿಗೆ ಹೊಂದಿಕೊಂಡು ಆದರೂ ಹೊರಗಡೆಯಿರುವ ವಿಶಾಲವಾದ ಬಯಲಿನ ಮಧ್ಯೆ—"ವೆಂಕಟೇಶ ಕೃಪಾ ಪೋಷಿತ ನಾಟಕಮಂಡಳಿ"ಯವರ ಥಿಯೇಟರ್ ನಿಂತಿತ್ತು.

ಅಂದವಿಲ್ಲದ ಆಕಾರ, ಅಸ್ತವ್ಯಸ್ತವಾಗಿ ಕಟ್ಟಿದ ತಟ್ಟಿಗಳು—ಗೂನು ಬೆನ್ನಿನ ಮುದುಕಿಯ ನೆನಪು ತರುವಂತಿತ್ತು.

ಸುತ್ತುಮುತ್ತಲಿನ ಹೊಲಸು ಪ್ರದೇಶದಲ್ಲಿ ಕಾಲಿಡುವುದೇ ಅಸಾಧ್ಯವಾಗಿತ್ತು.

"ಎಲ್ಲೇ ಹೋಗಲಿ ನಾಟಕದವರಿಗೆ ಸಿಕ್ಕುವುದು ಇಂತಹ ಸ್ಥಳವೇ. ಒಳ್ಳೆಯ ಥಿಯೇಟರುಗಳಂತೂ ಇಲ್ಲ....ಊರಿನ ಮಧ್ಯೆ ಚೊಕ್ಕಟವಾಗಿರುವ

ಒಂದೇ ಒಂದು ಎಕರೆ ಸ್ಥಳವೂ ನಾಟಕದವರ ಭಾಗಕ್ಕೆ ದೊರಕಲಾರದು."

—ಶ್ರೀಧರ ವೇದನೆಯಿಂದ ಹೇಳಿದ.

ನಾಟಕ ನಡೆಯುತ್ತಿತ್ತು. ಹೆಗಡೆ ಶ್ರೀಧರ ಇಬ್ಬರೂ ಕುರ್ಚಿಯ ಹೊಂಡಕ್ಕೆ ಇಳಿದರು. ಪ್ರೇಕ್ಷಕರ ಜೊತೆಯಲ್ಲಿ ಕುಳಿತರು.

ಕುರ್ಚಿ ಬೆಂಚುಗಳ ಬಹುಭಾಗ ಖಾಲಿಯಾಗಿತ್ತು. ನೆಲ ಚಾಪೆ ಗಳಲ್ಲಿದ್ದ ಅಲ್ಪಸ್ವಲ್ಪ ಜನರೂ ಕೆಲವರು ಅಲ್ಲಲ್ಲೇ ಮಲಗಿ ನಿದ್ರಿಸುತ್ತಿದ್ದರು. ಈ ನಿದ್ರೆಯ ರೋಗ ನಟರಿಗೂ ಸೋಕಿತ್ತೋ ಏನೋ, ಆಗತಾನೇ ಹಾಸಿಗೆ ಯಿಂದೆದ್ದು ಬಂದವರಂತೆ—ಬಲಾತ್ಕಾರವಾಗಿ ಕಣ್ಣುಬಿಟ್ಟು ಮಾತನಾಡು ತ್ತಿದ್ದರು.

ಓರೆಕೋರೆಯಾಗಿ ಕಟ್ಟಿದ ರಂಗಮಂಟಪದಲ್ಲಿ ಕಳೆಯೇ ಇರಲಿಲ್ಲ.

"ಇರುವಷ್ಟು ಪರದೆ ಸೀನರಿಗಳನ್ನಾದರೂ ಅಚ್ಚುಕಟ್ಟಾಗಿ, ಓರಣ ವಾಗಿ ಕಟ್ಟಿಸಬಾರದಿತ್ತೇ?"

"ಅದಾವುದರ ಕಡೆಗೂ ಗಮನಕೊಡುವುದೇ ಸಾಧ್ಯವಾಗಲಿಲ್ಲ."

"ಬೆಳಕಿನ ವ್ಯವಸ್ಥೆಯೂ ಸರಿಯಾಗಿಲ್ಲ. ರಂಗಮಂಟಪ ಮದುವೆಯ ಮಂಟಪವಲ್ಲ. ಇಲ್ಲಿ ಈ ಸಾಲುದೀಪಗಳ ಅಗತ್ಯವಿಲ್ಲ."

"ಬೆಳಕು ಬೇಡವೇ?"

"ಬೆಳಕು ಬೇಕು ಆದರೆ ಬಲ್ಬುಗಳು ಕಾಣಬೇಕು."

"ಏಕೆ?"

"ರಂಗಭೂಮಿ ಅರಮನೆಯಾಗಬೇಕು, ಬಡವನ ಮನೆಯೂ ಆಗ ಬೇಕು; ಊರೂ ಆಗಬೇಕು—ಕಾಡೂ ಆಗಬೇಕು. ಕಾಡಿನ ಮರಗಳ ಮಧ್ಯೆ ಬಲ್ಬುಗಳನ್ನು ತೂಗುಬಿಟ್ಟಿದ್ದರೆ ಪ್ರೇಕ್ಷಕರು ಹಾಸ್ಯಮಾಡುತ್ತಾರೆ."

"ನಮ್ಮ ಹಳ್ಳಿಯಲ್ಲಿ ನಾವು ನಾಟಕವಾಡುವಾಗ ಇದಾವುದರ ಕಡೆ ಲಕ್ಷ್ಯವನ್ನೇ ಕೊಡುತ್ತಿರಲಿಲ್ಲ."

"ಕೊಡಬೇಕಾದ ಅಗತ್ಯವೂ ಇಲ್ಲ. ತಾವು ತಮ್ಮವರೆದುರು ವಿನೋದ ಕ್ಕಾಗಿ ಆಡುವ ನಾಟಕಗಳಿಗೂ, ಅದನ್ನೇ ವೃತ್ತಿಯನ್ನಾಗಿಟ್ಟುಕೊಂಡು ಆಡುವ ನಾಟಕಗಳಿಗೂ ಅಂತರವಿದೆ. ಅವರವರ ವೃತ್ತದಲ್ಲಿ ಅವರು ಹೇಗೆ ಕುಣಿದರೂ ಚಂದವೇ!

ಅದೇ ಪರ ಊರಿನಲ್ಲಿ, ಇತರರ ತಪ್ಪನ್ನೆ ಎತ್ತಿ ಹಿಡಿಯುವ ಪ್ರೇಕ್ಷಕರು, ವಿಮರ್ಶಕರ ಮಧ್ಯೆ ಬಹಳ ಎಚ್ಚರಿಕೆಯಿಂದಿರಬೇಕು. ಹಾಕಿದ ಹಣ, ಗಳಿಸಿದ ಯಶಸ್ಸು, ನಾಶವಾಗದಂತೆ ಜಾಗೃತರಾಗಿರಬೇಕು.

ಎಷ್ಟೇ ಹೆಸರುವಾಸಿಯಾದ ಅಮೆಚೂರು ಸಂಘವಾದರೂ ತಮ್ಮ ಊರನ್ನು ಬಿಟ್ಟು ಮತ್ತೊಂದೂರಿಗೆ ಹೋದಾಗ ಅಲ್ಲಿ ಅಪಯಶಸ್ವಿಗಳಾಗುವುದು ಈ ಕಾರಣದಿಂದಲೇ."

"ನಿಮ್ಮ ಕಸಬುದಾರಿಗಳಿಗಿಂತ ನಮ್ಮ ಅಮೆಚೂರು ನಟರೇ ಬಹಳ ಮೇಲು"—ಎಂದ ಹೆಗಡೆ ಹೆಮ್ಮೆಯಿಂದ.

"ಹಾಗೆಂದು ಹೇಳಿಕೊಳ್ಳುತ್ತಾ ನಿಮ್ಮಂತೆಯೇ ಅನೇಕರು ಭುಜ ತಟ್ಟಿಕೊಳ್ಳುತ್ತಾರೆ. ಕಸಬುದಾರಿಗಳನ್ನು ಬಾಯಿಗೆ ಬಂದಂತೆ ನಿಂದಿಸುತ್ತಿದ್ದಾರೆ. ಇದಕ್ಕಾಗಿ ನಾವು ದುಃಖಪಡಬೇಕಾಗಿದೆ."

"ಕೆಲವು ಕಾಲ ನೀವು ಕಂಪೆನಿಯಲ್ಲಿದ್ದು ಕಸಬುದಾರಿಗಳ ಮೇಲಿನ ಅಭಿಮಾನದಿಂದ ಹೀಗೆ ಹೇಳುತ್ತಿದ್ದೀರಿ."

"ಅಭಿಮಾನದಿಂದಲ್ಲ, ಅನುಭವದಿಂದ. ಮಡಕೆ ಮಾಡುವ ಕುಂಬಾರನಾದರೂ....ಕಾಲಕಳೆದಂತೆ, ಅನುಭವ ಹೆಚ್ಚಿದಂತೆ, ತನ್ನ ಕೆಲಸದಲ್ಲಿ ಪಳಗುತ್ತಾ ಬರುತ್ತಾನೆ. ಕಸಬು ಸಿದ್ಧಿಸುವುದು ಅನುಭವದಿಂದ ಎಂಬುದನ್ನು ಯಾರೂ ಅಲ್ಲಗಳೆಯಲಾರರು.

ನಾಟಕವೂ ಕೆಲವರ ವೃತ್ತಿ. ಎಷ್ಟೆಷ್ಟು ನಾಟಕಗಳಲ್ಲಿ ಅವರು ಪಳಗುತ್ತಾರೋ ಅಷ್ಟಷ್ಟೂ ಅವರಲ್ಲಿನ ಕಲೆ ವರ್ಧಿಸುತ್ತಾ ಹೋಗುತ್ತದೆ. ವರ್ಷಕ್ಕೆ ನಾಲ್ಕಾರು ನಾಟಕಗಳನ್ನು ಆಡುವವರೊಡನೆ........ಇವರನ್ನು ಹೋಲಿಸಿ ನೀವು ತೆಗಳಿದರೆ, ನಿಮಗೆ ತಿಳುವಳಿಕೆಯಿಲ್ಲವೆಂದು ಭಾವಿಸಬೇಕಾಗಿದೆ."

ಮಾತು ನಡೆಯುವಾಗ ನಾಟಕವೂ ನಡೆಯುತ್ತಿತ್ತು. ನೀರಸ ನಾಟಕ ನೋಡಿದರೂ ಒಂದೇ ಬಿಟ್ಟರೂ ಒಂದೇ ಆಗಿ ಕಾಣುತ್ತಿತ್ತು.

ಸ್ಟೇಜಿನ ಹುಡುಗನೊಬ್ಬನು ಹೆಗಡೆಯ ಬಳಿ ಬಂದ—"ನೀವಿಬ್ಬರೂ ಒಳಗೆ ಬರಬೇಕಂತೆ ಅಮ್ಮಾವ್ರು ಹೇಳಿ ಕಳಿಸಿದ್ದಾರೆ."

ಇಷ್ಟೂ ಹೊತ್ತು ಅನಸೂಯಳ ದೃಶ್ಯ ಬಂದಿರಲಿಲ್ಲವಾದ್ದರಿಂದ

ಅವಳು ರಂಗಭೂಮಿಯ ಮೇಲೆ ಬಂದೇ ಇರಲಿಲ್ಲ.

"ಅವರ ದೃಶ್ಯ ಮುಗಿಯಲಿ....ನಂತರ ಒಳಗೆ ಹೋಗೋಣ"—ಎಂದ ಶ್ರೀಧರ.

"ಇನ್ನೂ ಬಹಳ ಹೊತ್ತಿದೆ. ಈ ಛಳಿಯಲ್ಲಿ ಏಕೆ ಕುಳಿತುಕೊಳ್ಳುವುದು. ಏಳಿ ಒಳಗೆ ಹೋಗೋಣ."

ದುಡ್ಡುಕೊಟ್ಟು ನಡುಗುತ್ತಾ ಕುಳಿತ ಪ್ರೇಕ್ಷಕರನ್ನು ನೋಡಿದ ಶ್ರೀಧರ. ಏನು ಪಾಪ ಮಾಡಿ ಈ ನಾಟಕ ನೋಡುವುದಕ್ಕೆ ಬಂದಿದ್ದಾರೋ ಎನ್ನಿಸಿತು ಅವನಿಗೆ.

* * * *

ಗ್ರೀನ್‌ರೂಮಿನ ಬಾಗಿಲಿನಲ್ಲಿ ನಿಂತು ಅನಸೂಯ "ನಮಸ್ಕಾರ ಶ್ರೀಧರರಾಯರಿಗೆ"—ಎನ್ನುತ್ತಾ ಕೈಮುಗಿದಳು.

"ನಮಸ್ಕಾರ! ಆರೋಗ್ಯವಾಗಿದ್ದೀರಾ?"—ಎಂದ ಶ್ರೀಧರ ನಗುತ್ತಾ.

ಅನಸೂಯ ಮೇಕಪ್ಪಿನಲ್ಲಿದ್ದಳು. ಬೆಂಗಳೂರಿನಲ್ಲಿ ಕಂಡಾಗಿಂತಲೂ ಹೆಚ್ಚು ಸುಂದರಳಾಗಿದ್ದಳು. ಅಂಗಾಂಗಗಳು ತುಂಬಿಕೊಂಡಿದ್ದವು. ವ್ಯಕ್ತಿತ್ವ ಮೊದಲಿಗಿಂತಲೂ ಆಕರ್ಷಕವಾಗಿತ್ತು. ಮಾತೂ ಮಧುರವಾಗಿತ್ತು.

ಇಷ್ಟೂ ಹೊತ್ತು ಹೆಗಡೆ ಮೋಸಹೋಗಿದಾನೆ ಎಂದುಕೊಳ್ಳುತ್ತಿದ್ದ ಶ್ರೀಧರನ ಮನಸ್ಸೂ ಒಮ್ಮೆ ಚಲಿಸಿತು. ಹೆಗಡೆ ಜಾರಿಬಿದ್ದುದು ಆಶ್ಚರ್ಯವಲ್ಲ ಎನ್ನಿಸಿತು.

ಅನಸೂಯ ಈಗಾಗಲೇ ತರಿಸಿಟ್ಟಿದ್ದ ಕಾಫಿಯನ್ನು ಲೋಟಗಳಿಗೆ ಬಗ್ಗಿಸಿದಳು. ಮೊದಲನೆಯ ಲೋಟವನ್ನು ಹೆಗಡೆಯ ಮುಂದೆ ಹಿಡಿದಳು.

"ಅವರಿಗೆ ಕೊಡು ಮೊದಲು"—ಎಂದ ಹೆಗಡೆ ಶ್ರೀಧರನನ್ನು ಸೂಚಿಸುತ್ತಾ.

ಕಾಫಿಯಾಯಿತು.

"ಬೆಂಗಳೂರಲ್ಲಿ ಕಂಡಮೇಲೆ ನಿಮ್ಮನ್ನೆಲ್ಲೂ ನೋಡಲೇ ಇಲ್ಲ ನಾನು"—ಎಂದಳು ಅನಸೂಯ.

"ಕಾರಣವಿಲ್ಲ. ಕೆಲವು ದಿನದಲ್ಲೇ ನಾನು ಕಂಪೆನಿ ಬಿಟ್ಟುಬಿಟ್ಟೆ."

"ನಾಟಕ ಅಂದರೆ ಅಷ್ಟು ಅಭಿಮಾನದಿಂದಿದ್ದಿರಿ? ಈಗ ನಾಟಕ ಬೇಡ

ವಾಯಿತೆ?"

"ನಾಟಕ ಬೇಕು. ನಾಟಕದ ಕಂಪೆನಿ ಬೇಡವಾಯಿತು."

—ಅನಸೂಯ ಮೋಹಕವಾಗಿ ನಕ್ಕುಬಿಟ್ಟಳು.

ನಟರನ್ನೆಲ್ಲಾ ಪರಿಚಯ ಮಾಡಿಸಿದ ಹೆಗಡೆ. ಇವನೂ ಕೆಲವು ಕಾಲ ಕಂಪೆನಿಗೆ ಮಣ್ಣು ಹಾಕಿದ್ದಾನೆಂದು ತಿಳಿದು ಬಂದಾಗ ಅವರೆಲ್ಲರಿಗೂ ಶ್ರೀಧರನ ಬಗ್ಗೆ ಅಭಿಮಾನ ಮೊಳೆಯಿತು.

ಅಂದಿನ ನಾಟಕ ಮುಗಿಯಿತು.

## ೩೭

ಮರುದಿನ ನಟರೆಲ್ಲರನ್ನೂ ವಿಚಾರಿಸಿದ ಶ್ರೀಧರ. ಹೆಗಡೆ ಕಂಪೆನಿಯ ದುರವಸ್ಥೆಗೆ ಕಾರಣವನ್ನು ವಿವರವಾಗಿ ತಿಳಿಯಬೇಕಾಗಿತ್ತು. ಅದಕ್ಕೆ ಮತ್ತೆ ಮಾರ್ಗವನ್ನು ಹುಡುಕಿ ಸರಿಮಾಡಬೇಕೆಂಬ ಅಪೇಕ್ಷೆಯಿತ್ತು.

ಸಿದ್ದಯ್ಯ ಹೇಳಿದ—

ಯಜಮಾನ್ರಿಗೆ ನಾಟ್ಕ ಬ್ಯಾಡಾಗದ್ರಿ, ಮತ್ತs ನಮುಗ್ಯಾಕೆ ಬೇಕಾಗ್ತದಿ."

"ನಾಟಕ ಬೇಡದಿದ್ದರೆ ಕಂಪೆನಿ ಏಕೆ ಮಾಡ್ತಾ ಇದ್ರು"—ಎಂದು ಕೇಳಿದ ಶ್ರೀಧರ.

"ಹೆಂಗಸ್ರ ಷೋಕಿಗಾಗಿ ಅವರು ಕಂಪ್ನಿ ಮಾಡ್ತ್ಯಾರ್ರಿ, ಹೊಟ್ಟೆಪಾಡಿಗಾಗಿ ನಾವು ಪಾರ್ಟು ಮಾಡ್ತೀವ್ರಿ. ಮತ್ತs ನಾಟಕ ಹೆಂಗs ಚಂದಾದೀತ್ರಿ."

"ನೀವು ತಪ್ಪು ತಿಳಿದುಕೊಂಡಿದೀರಿ."

"ಆ ಮಾತು ಬಿಟ್ಟುಬಿಡ್ರಿ....ಆ ಯಪ್ಪನ ಪರಿಚಯ ನಮುಗಿಲ್ಲಿದ್ರೂ, ಆ ಯಮ್ಮನ ಗುಣಾ ಗೊತ್ತು ಬಿಡ್ರಿ—ಇಂತಾ ಎಷ್ಟು ಮಂದೀನ ನುಂಗ್ಯಾಳೋ ಆ ಮಾತಾಯಿ !"

"ಅವರವರು ಏನಾದರೂ ಮಾಡಿಕೊಳ್ಳಲಿ. ಅದನ್ನು ಕಟ್ಟಿಕೊಂಡು ನಮಗೇನಾಗಬೇಕು. ನಾಟಕವನ್ನು ಯಶಸ್ವಿಯಾಗಿಸುವುದು ನಟರ ಕರ್ತವ್ಯ."

"ಜನ ಹೆಂಗ ಬಂದಾರ್ರಿ ಗುಣ ಇಲ್ಲದ ಮ್ಯಾಗೆ. ಊರಾಗೆಲ್ಲ ಗುಲ್ಲಾಗ್ಬಿಟ್ಟೈತಿ ಈ ವಯ್ಯನ ಸಮಾಚಾರ. ನಮುಗ ಬೀದಿ ಮ್ಯಾಗೆ ತಲೆ ಎತ್ಕಂಡು ತಿರ್ಗಾಕೂ ಸಿಗ್ಗಾಗ್ತತಿ."

"ನಾಟಕ ಕೆಟ್ಟುಹೋದರೆ ನಿಮಗೂ ಕೆಟ್ಟ ಹೆಸರಲ್ಲವೇ."

"ಮುಂದಿಗೆ ನಾವು ಹೊಸಬ್ರಲ್ರಿ. ಹತ್ತೊಂಬತ್ನೂರ ನಲವತ್ತೈದರಾಗೆ ಇದೇ ಊರಾಗೆ ಅದ್ಧೂರಿಯಾಗಿ ನಡದದ್ರಿ ನಮ್ಮ ಕಂಪ್ನಿ. ಜನ ನಮ್ಮನ ಯಾಕ ಅಂದಾರು ಬಿಡ್ರಿ........ನಡದಷ್ಟು ದಿನ ನಡಿತತಿ."

ಮೈಸೂರಿನವರಂತೆ ಮಾತನಾಡುತ್ತಿದ್ದ ಶ್ರೀಧರ. ಬಳ್ಳಾರಿಯವರಂತೆ

ಉತ್ತರ ಕೊಡುತ್ತಿದ್ದ ಸಿದ್ಧಯ್ಯ.

"ನಾಡು ಒಂದಾದರೂ ನುಡಿ ಒಂದಾಗಲಾರದು"—ಎನ್ನಿಸಿತು ಶ್ರೀಧರನಿಗೆ.

ಮೈಸೂರಿನವರು, ಮಂಗಳೂರಿನವರು, ಬಳ್ಳಾರಿಯವರು ಒಬ್ಬರ ಭಾಷೆ ಮತ್ತೊಬ್ಬರಿಗೆ ಅರ್ಥವಾಗದಷ್ಟು ಅಂತರವಿದೆ ನಮ್ಮಲ್ಲಿ.

"ನಮ್ಮದು ಗಂಡು ಭಾಷೇನ್ರೀ ಯಪ್ಪ"—ಎಂದು ಬಳ್ಳಾರಿಯ ಮಾವ ಮೀಸೆ ತಿರುವಿದರೆ,

"ನಿಮ್ಮ ಹೆಣ ಮಗಳು ನೆಟ್ಗಿದಾಳ್ರಿ."

—ಎಂದು ಯೋಗಕ್ಷೇಮ ತಿಳಿಸಿ ಕುಚೋದ್ಯ ಮಾಡುತ್ತಾನೆ ಮೈಸೂರಿನ ಅಳಿಯ.

ಒಬ್ಬರ ಭಾಷೆಯನ್ನು ಕೇಳಿ ಮತ್ತೊಬ್ಬರು ನಗುತ್ತಾರೆ. ಮಂಗಳೂರಿನವರು ಮೈಸೂರಿಗೆ ಬಂದರೆ, ಮೈಸೂರಿನವರು ಬಳ್ಳಾರಿಗೆ ಹೋದರೆ, ಬಳ್ಳಾರಿಯವರು ಮಡಕೇರಿಗೆ ಹೋದರೆ, ಈ ಭಾಷಾ ವೈವಿಧ್ಯ ಕಲಾವಿದರ ಪ್ರತಿಭೆಯನ್ನು ಕುಗ್ಗಿಸುತ್ತದೆ. ಅವರ ಗಂಟಲು ಕಟ್ಟಿದಂತಾಗುತ್ತದೆ.

ಭಾಷಾ ಕ್ಷೇತ್ರದ ವ್ಯಾಪ್ತಿಯಿಲ್ಲದೇ ತಮ್ಮ ಭಾಷೆ ಸರಿಯಾಗಿ ಅರ್ಥವಾಗುವ ಹತ್ತಾರು ಊರುಗಳಲ್ಲೇ ನಾಟಕದವರು ಸುತ್ತುತ್ತಿರಬೇಕು.

ಒಂದೇ ಕರ್ನಾಟಕವಾದರೂ, ಒಂದೇ ಕನ್ನಡ ಭಾಷೆಯಾಗದ ಹೊರತು ನಮ್ಮಲ್ಲಿನ ನಾಟಕ, ಚಲನಚಿತ್ರ, ಸಾಹಿತ್ಯಗಳು ವಿಶಾಲ ವ್ಯಾಪ್ತಿಯನ್ನು ಹೊಂದಲಾರವು.

—ಎನ್ನಿಸಿತು ಶ್ರೀಧರನಿಗೆ

ನಟರು ಯಾರಿಗೂ ಹೆಗಡೆಯ ಮೇಲೆ ಅಭಿಮಾನವಿಲ್ಲವೆಂದು ದೃಢಪಟ್ಟಿತು. ಊರಿನವರಿಗಂತೂ ಮತ್ತೂ ತಾತ್ಸಾರದ ವ್ಯಕ್ತಿಯಾಗಿದ್ದ ಹೆಗಡೆ.

ಕಳೆದ ಹಣ—ಕೊಂಡ ಅಪಯಶಸ್ಸು ಪುನಃ ಚೇತರಿಸಿಕೊಳ್ಳಲು ಸಾಧ್ಯವಿಲ್ಲದಷ್ಟು ಪ್ರಬಲವಾಗಿತ್ತು.

## ೩೮

ಹೆಗಡೆ ಶ್ರೀಧರ ಅಂದು ಮಧ್ಯಾಹ್ನ ತುಂಗಭದ್ರಾ ಜಲಾಶಯದ ಕಡೆ ಹೊರಟರು.

ಹಾವಿನಂತೆ ಬಳಸಿ ಹೋಗುವ ಗುಡ್ಡದ ಹಾದಿಯಲ್ಲಿ ವೈಕುಂಠಕ್ಕೇರುತ್ತಾ ಕಾರು ಮುಂದುವರೆಯಿತು. ಪ್ರವಾಸಿ ಮಂದಿರದ ಬಳಿ ಬಂದು ನಿಂತಿತು.

ಬೆಳ್ಳಿಯ ತಗಡನ್ನು ಹಾಸಿದಂತೆ ದೂರ ದೂರದ ವರೆಗೂ ತುಂಬಿ ನಿಂತಿದ್ದಳು ತುಂಗಭದ್ರೆ !

ಜಲಾಶಯದ ಪೂರ್ಣ ದೃಶ್ಯವನ್ನು ಕಾಣಲಿಕ್ಕಾಗಿ ಕಟ್ಟಿರುವ ಶಿಖರ (Tower) ವನ್ನೇರಿ, ಕಟಕಟೆಯನ್ನು ಹಿಡಿದು ನಿಂತು ನೋಡಿದ ಶ್ರೀಧರ. ಒಳಗಡೆ ಇನ್ನು ಸ್ಥಳವೇ ಇಲ್ಲವೆನ್ನುವಷ್ಟು ವಿಶಾಲವಾಯಿತು ಅವನ ಎದೆ! ಭದ್ರವಾಗಿ ಹಿಡಿದುಕೊಳ್ಳದಿದ್ದರೆ ಬೀಳಿಸಿಬಿಡುತ್ತೇನೆಂದು ಭರ್ರನೆ ಬೀಸತೊಡಗಿತು ತಂಗಾಳಿ!

ಕೆಳಗಡೆ ನೋಡಿದ ಶ್ರೀಧರ........

ವಿಶಾಲ ಜಲಧಿಯನ್ನು ತಡೆದು ನಿಲ್ಲಿಸಿತ್ತು ಅಣೆಕಟ್ಟು....ಪತಿಯೆಡೆಗೆ ಅವಸರದಿಂದ ಹೊರಟಿರುವ ಯುವತೀ ಮಾತೆಯನ್ನು, ತನ್ನ ನಳಿತೋಳ್ಗಳಿಂದಪ್ಪಿಕೊಂಡು, ಮೊಲೆ ಹಾಲಿಗಾಗಿ ತಡೆದು ನಿಲ್ಲಿಸಿದ ಎಳೆಮಗುವಿನಂತೆ.

ಮಗುವಿನ ಮೇಲಿನ ಮಮತೆಯಿಂದ, ತಾಯಿಯ ಎದೆಯ ಹಾಲ್ಗಡಲು ಉಕ್ಕಿ ಬಂದಿರಬೇಕು. ಆದ್ದರಿಂದಲೇ ಪ್ರೇಮಮಯೀ ಮಾತೆಯ ವಕ್ಷಸ್ಥಳದಿಂದ ಬಿರಿದು ಚಿಮ್ಮುತ್ತಿದೆ ಅಮೃತಧಾರೆ!

ಬತ್ತಲಾರದ, ಬತ್ತಬಾರದ ಅಮೃತಧಾರೆಯಿದು. ತಾಯಿ ತುಂಗಭದ್ರೆಯ ಸ್ತನ್ಯಪಾನವನ್ನುಣ್ಣುವ, ಅವಳ ಮಕ್ಕಳು ನಾವೆಷ್ಟು ಭಾಗ್ಯವಂತರು!

ಮತ್ತೊಂದು ಕಡೆ ತಿರುಗಿದ ಶ್ರೀಧರ!....

ಭೂದೇವಿಯ ಹಸಿರುಡೆಗೆ, ಬೆಳ್ಳಿಯಂಚಿನ ಮೆರುಗು ಕೊಟ್ಟಂತೆ, ದೂರ ದೂರದ ವರೆಗೂ ಹಬ್ಬಿ ಹರಿಯುತ್ತಿದೆ ಈ ಅಮೃತಧಾರೆ!

ನಂದನ ವನದ ನಿರ್ಮಾಣಕ್ಕಾಗಿ, ಬರಡು ಜೀವನಕ್ಕೆ ಸಂಜೀವಿನಿ

ಯನ್ನು ಹೊತ್ತು, ಬಳುಕುತ್ತಾ ಬರುತ್ತಿದ್ದಾರೆ ಅಪ್ಸರೆಯರು!

ನಮ್ಮ ಭಾಗ್ಯದ ಬಾಗಿಲು ತೆರೆಯಿತು. ಕೊರಡು ಕೊನರಿತು!, ಬರಡು ಹಯನಾಯಿತು!, ಬಸವಣ್ಣನವರ ವಾಣಿ ನಿಜವಾಗಿ, ಭೂಮಿ ಸ್ವರ್ಗವಾಯಿತು.

ಕವಿಹೃದಯ ಉಬ್ಬಿ, ಕಾವ್ಯ ಉಕ್ಕಿ ಹರಿದು, ಭಾವನಾಪರವಶನಾದ ಶ್ರೀಧರ!

ಮನಸ್ಸು ತನ್ನಷ್ಟಕ್ಕೇ ಹಾಡಿತು....

ಓ!....ತುಂಗಭದ್ರೆ!—ಸದಾಭದ್ರೆ ಸದಾಪೂರ್ಣೆ!
ಸೌಭಾಗ್ಯ ಸಂಪನ್ನೆ! ಚಿದ್ವಿಲಾಸದ ಚೆನ್ನೆ!
ನಮೋ! ನಮೋ!....ನಿಸರ್ಗಮಾತೆ!
ನಮೋ! ನಮೋ!....ಭೂಸ್ವರ್ಗದಾತೆ!

ಭಕ್ತಿಯಿಂದ ತಲೆವಾಗಿದ ಶ್ರೀಧರ!

* * * *

"ಕಂಪೆನಿ ನಡೆಸಲು ಸಾಧ್ಯವೇ ಇಲ್ಲವೇ?"

—ಪ್ರಶಾಂತ ಸರಸ್ಸಿನಲ್ಲಿ ಕಲ್ಲನ್ನೆಸೆದಂತೆ ಶ್ರೀಧರನ ಸುಖ ಸ್ವಪ್ನಕ್ಕೆ ಭಂಗವನ್ನೊಡ್ಡಿದ ಹೆಗಡೆ,

"ಇಲ್ಲಿ ಬಂದಾಗಲೂ ಈ ಜನ ತಮ್ಮ ತಾಪತ್ರಯಗಳನ್ನು ಮರೆಯುವುದಿಲ್ಲವಲ್ಲ! ಅನುಭವಿಸುವ ಹೃದಯವಿಲ್ಲದವನು ಎಲ್ಲಿದ್ದರೇನು? ಅವನಿಗೆ ಎಷ್ಟಿದ್ದರೇನು?

ಹಣ!........

ಈ ಹಣ! ಎಂದೂ ತನ್ನ ಒಡೆಯನಿಗೆ ಸುಖವನ್ನೀಯಲಾರದು. ಅವನನ್ನು ಕರೆದುಕೊಂಡುಹೋಗಿ ಗಲ್ಲಿಗಳಲ್ಲಿ ನುಗ್ಗಿಸುತ್ತದೆ, ಚರಂಡಿಯ ಬದಿಯಲ್ಲೇ ಮಲಗಿಸುತ್ತದೆ! ಅಥವಾ ಇಂತಹ ಸಂದಿಗ್ಧದಲ್ಲಿ ಸಿಕ್ಕಿಸಿ ಸಂಕಟವನ್ನೇ ತಂದೊಡ್ಡುತ್ತದೆ!

"ಮಾತೇಕೆ ಆಡುತ್ತಿಲ್ಲ ನೀವು? ಕಂಪೆನಿ ನಿಲ್ಲಿಸಿಬಿಡೋಣವೇ"

—ಹೆಗಡೆ ಪುನಃ ಕೇಳಿದ.

"ನಿಲ್ಲಿಸದೇ ಮತ್ತೆ ಮಾರ್ಗವೇ ಇಲ್ಲ. ಇಲ್ಲಿ ತಳಪಾಯವೇ ಭದ್ರ

ವಾಗಿಲ್ಲ. ಈ ಊರಿನಲ್ಲಿ ನೀವು ಏನೂ ಮಾಡಲಾರಿರಿ."

"ಬೇರೆ ಊರಿಗೆ ಕ್ಯಾಂಪು ಹಾಕೋಣ."

"ಹಣ ಹೆಚ್ಚಾಗಿದೆಯೆಂದು ಹುಚ್ಚು ಹುಚ್ಚಾಗಿ ಯೋಚಿಸಬಾರದು. ನಿಮ್ಮಲ್ಲಿರುವ ನಟರಿಗೆ ನಿಮ್ಮ ಮೇಲೆ ಅಭಿಮಾನವಿಲ್ಲ."

"ಅದಕ್ಕೇನು ಮಾಡಬೇಕು?"

"ನೀವು ಕಂಪೆನಿ ನಿಲ್ಲಿಸುವುದು ಕ್ಷೇಮ."

"ಹಾಗಿದ್ದರೆ ನಾನು ನಿಮ್ಮ ಬಳಿ ಬರುತ್ತಿರಲಿಲ್ಲ. ಇದು ಹೇಗಾದರೂ ಮುಂದುವರಿಯಬೇಕು."

"ನಾಟಕದ ಕಂಪೆನಿಯ ಬಂಡವಾಳ ಹಣವೆಂಬ ಭಾವನೆಯಿಂದ ನೀವು ಮಾತನಾಡುತ್ತಿದ್ದೀರಿ. ನಾಟಕದ ಕಂಪೆನಿಗೆ ಹಣವಲ್ಲ ಬಂಡವಾಳ —ನಾಟಕ!....ಅದು ಯಶಸ್ವಿಯಾಗಿ ನಡೆಯಬೇಕು. ಉತ್ತಮ ನಾಟಕಗಳು ನಿಮ್ಮ ಕೈಯಲ್ಲಿರಬೇಕು. ಅದಿಲ್ಲದೇ ನೀವೆಷ್ಟು ಹಣ ಸುರಿದರೂ ಸಮುದ್ರಕ್ಕೆ ಸಕ್ಕರೆ ಚೆಲ್ಲಿದಂತೆ."

"ನಾಟಕ ಯಶಸ್ವಿಯಾಗಲು ಏನು ಮಾಡಬೇಕು?"

"ಈಗಿರುವ ಜನರ ಜೊತೆಯಲ್ಲಿ, ತಮ್ಮ ಕರ್ತವ್ಯವನ್ನರಿತು, ನಿಮಗೂ ಉಪಯೋಗವಾಗುವ ದೃಷ್ಟಿಯಿಂದ ದುಡಿಯುವ ಹಿರಿಯ ತಲೆಗಳು ಬೇಕು."

"ಅಂಥವರು ಯಾರಿದ್ದಾರೆ?"

"ಇಂತಹ ಸ್ಥಳದಲ್ಲಿ ವೆಂಕಟೇಶಯ್ಯನಂಥವರೊಬ್ಬರಿದ್ದಿದ್ದರೆ ನಿಮ್ಮ ಸ್ಥಿತಿ ಇಷ್ಟು ಹದಗೆಡುತ್ತಿರಲಿಲ್ಲ."

"ಅವರನ್ನು ಕರೆಸಲು ಸಾಧ್ಯವಿಲ್ಲವೇ."

"ಅವರು ಈ ವೃತ್ತಿಯನ್ನೇ ಬಿಟ್ಟಿದ್ದಾರೆಂದು ಕೇಳಿದೆ."

"ಪ್ರಯತ್ನಿಸಿದರೆ?"

"ನನಗೆ ಅನುಮಾನ, ಆದರೂ ಪ್ರಯತ್ನಿಸಬಹುದು."

"ಹೇಗಾದರೂ ಮಾಡಿ ಎರಡು ತಿಂಗಳ ಮಟ್ಟಿಗಾದರೂ ಕರೆತನ್ನಿ. ಬೇರೆ ಕ್ಯಾಂಪು ಹಾಕಿ ಉತ್ತಮ ನಾಟಕಗಳನ್ನಭಿನಯಿಸೋಣ."

"ನಿಮ್ಮಲ್ಲಿ ನಾಟಕಗಳೂ ಇಲ್ಲ. ಹತ್ತಾರು ನಾಟಕಗಳು ಕೈಯಲ್ಲಿರಬೇಕು. ಸಮಯ ಬಂದಾಗ ಅವನ್ನು ತೂರುತ್ತಿರಬೇಕು."

"ಅಷ್ಟು ನಾಟಕ ಕಲಿತವರು ಯಾರಿದ್ದಾರೆ."

"ಮದ್ವೂರಾಯರಂತಹವರು ಒಬ್ಬರಿದ್ದರೆ ಎಲ್ಲ ನಾಟಕಗಳೂ ಕೈಯಲ್ಲಿದ್ದಂತೆ. ವೈಯಕ್ತಿಕವಾಗಿ ಅವರು ಘನವಾದ ವ್ಯಕ್ತಿಯಲ್ಲದಿದ್ದರೂ, ನಾಟಕದ ಕಂಪೆನಿಗೆ ಅತ್ಯಗತ್ಯವಾದ ಮನುಷ್ಯ."

"ಅವರು ಬರಬಹುದೇ."

"ಬರುತ್ತಾರೆ. ಸ್ವಲ್ಪಹಣದ ಆಸೆ. ಕೊಟ್ಟರೂ ಕೇಡಲ್ಲ."

"ಅವರಿಬ್ಬರನ್ನೂ ಕರೆತನ್ನಿ. ಒಳ್ಳೆಯ ನಾಟಕಗಳನ್ನು ಕಣ್ಣಿನಲ್ಲಿ ನೋಡಿಯಾದರೂ ಕಂಪೆನಿ ಮುಚ್ಚಿಬಿಡುತ್ತೇನೆ."

"ಇದೊಂದು ಕೊನೆಯ ಪ್ರಯತ್ನದ ಹೊರತು ಮತ್ತೇನೂ ಮಾಡಲು ನನಗೆ ಸಾಧ್ಯವಿಲ್ಲ. ಮೈಸೂರಿಗೆ ಹೋಗಿ ಅವರನ್ನು ವಿಚಾರಿಸುತ್ತೇನೆ."

"ಯಾವಾಗ ಹೊರಡುತ್ತೀರಿ?"

"ತಡಮಾಡಿದಷ್ಟೂ ತೊಂದರೆ ಹೆಚ್ಚು—ದಿನೇ ದಿನೇ ನೀರಿನಂತೆ ಹಣ ಕರಗುತ್ತಿದೆ."

"ನಾಳೆಯೇ ಹೋಗಿ."

"ಆಗಲಿ. ಅದನೆ ನಾನು ಬರುವವರೆಗೂ ಮುಂದಿನ ಕ್ಯಾಂಪಿನ ವ್ಯವಸ್ಥೆ ಮಾಡಬೇಡಿ. ನಾನು ಬಂದ ನಂತರ ಮಾತನಾಡೋಣ."

ಹೆಗಡೆಗೆ ಪುನಃ ಆಸೆ ಮೊಳೆಯಿತು. ಅವನ ಮುಖ ಪ್ರಸನ್ನವಾಯಿತು—

"ನಿಮ್ಮ ಮಾತಿನಿಂದ ಭರವಸೆಯಾಗುತ್ತಿದೆ. ಸಾವಿರಾರು ರೂಪಾಯಿಗಳು ಕಳೆದರೂ ಚಿಂತೆಯಿಲ್ಲ, ನಾಟಕ ಚೆನ್ನಾಗಿತ್ತೆಂದು ಜನರು ಹೇಳುವಂತಾಗಬೇಕು."

ಎಂತಹ ವಿಚಿತ್ರ ಸ್ಥಿತಿ!....

ಒಂದು ಕಡೆ ಹಣವಿಲ್ಲದೆ ಒದ್ದಾಡುವ ನಟರು! ಮತ್ತೊಂದು ಕಡೆ ಜನರಿಲ್ಲದೇ ಮಿಡುಕುವ ಬಂಡವಳಗಾರರು!

ಒಂದು ಕಡೆ ಹಣಕ್ಕಾಗಿ ಹೋರಾಟ! ಮತ್ತೊಂದು ಕಡೆ ಅದೇ ಹಣದ ಜೂಜಾಟ!

ಅಲ್ಲಿ ಸಂಗ್ರಾಮ!—ಇಲ್ಲಿ ಸಂಭ್ರಮ! ನಾಟಕ ಕೆಲವರಿಗೆ ಜೀವನ! ಕೆಲವರಿಗೆ ಖಯಾಲಿ!

ಒಂದೇ ರಂಗದ ಮೇಲೆ ಎರಡೂ ವಿರುದ್ಧ ಮುಖಗಳನ್ನು ಕಾಣ ಬಹುದು ನಾಟಕ ಪ್ರಪಂಚದಲ್ಲಿ.

"ನನ್ನ ಶಕ್ತಿಮೀರಿ ಯತ್ನಿಸುತ್ತೇನೆ. ಅದೃಷ್ಟವಿದ್ದಂತೆ ಆಗುತ್ತೆ"…. ಎಂದ ಶ್ರೀಧರ.

ಕತ್ತಲಾಗುತ್ತಾ ಬಂತು. ಕಟ್ಟೆಯಲ್ಲಿನ ದೀಪಗಳು ಹತ್ತಿಕೊಂಡವು. ಇಷ್ಟೊ ಹೊತ್ತು ಮೈಗೆ ಹಿತವಾಗಿ ಬೀಸುತ್ತಿದ್ದ ತಂಗಾಳಿ, ಥಂಡಿಗಾಳಿಯಾಗಿ ತೀಡತೊಡಗಿತು. ರಾತ್ರಿ ನಾಟಕವಿದ್ದುದರಿಂದ ಜಾಗ್ರತೆ ಹೋಗಬೇಕಾಗಿತ್ತು."

"ಹೋಗೋಣವೇ?"—ಎಂದ ಹೆಗಡೆ.

"ಹೋಗಬೇಕೇ?"—ಎನ್ನಿಸಿತು ಶ್ರೀಧರನಿಗೆ.

ಹೋಗದೇ ವಿಧಿಯಿರಲಿಲ್ಲ. ಮನಸ್ಸಿಲ್ಲದ ಮನಸ್ಸಿನಿಂದ ಶಿಖರವನ್ನಿಳಿದು ಕಾರಿನ ಮೇಲೆ ಬಂದು ಕುಳಿತ.

ಕಾರು ಕೆಳಗಿಳಿಯತೊಡಗಿತು….ವೈಕುಂಠದಿಂದ ಭೂಲೋಕಕ್ಕಿಳಿಯುವಂತೆ.

## ೨೯

ಮೈಸೂರಿನಲ್ಲಿ ವೆಂಕಟೇಶಯ್ಯನನ್ನು ಹುಡುಕುವುದು ಕಷ್ಟವಾಗಲಿಲ್ಲ ಶ್ರೀಧರನಿಗೆ.

ಮಾರ್ಕೆಟ್ಟಿನ ಬಳಿ ಹೋಟೆಲೊಂದಕ್ಕೆ ಹೊಂದಿಕೊಂಡು, ಅವರ ಮಿಠಾಯಿ ಅಂಗಡಿಯ ಪಕ್ಕದಲ್ಲೇ, ಇವರೊಂದು ಬೀಡಾ ಅಂಗಡಿ ಹಚ್ಚಿ ಬಿಟ್ಟಿದ್ದರು. ಎಷ್ಟು ದೂರದಿಂದಲೂ ಗುರುತಿಸಬಲ್ಲ ವ್ಯಕ್ತಿತ್ವ ವೆಂಕಟೇಶಯ್ಯನವರದು.

ಶ್ರೀಧರ ಬಂದಾಗ ವೆಂಕಟೇಶಯ್ಯ ಗಡಿಬಿಡಿಯಲ್ಲಿದ್ದರು. ಒಂದು ಕಡೆ ವ್ಯಾಪಾರ, ಮತ್ತೊಂದು ಕಡೆ ಬೀಡಾ ಕಟ್ಟುವ ಕೆಲಸ. ಆ ಕೈಗಳಿಗೆ ವಿರಾಮವೇ ಇರಲಿಲ್ಲ. ಖರ್ಚಾದಂತೆ ಮತ್ತೆ ಮತ್ತೆ ಎಲೆಗಳನ್ನು ಮಡಿಸಿ ತಂತಿಯ ಉಂಗುರಗಳಿಗೆ ಸಿಕ್ಕಿಸಿ ಇಡುತ್ತಿದ್ದರು ವೆಂಕಟೇಶಯ್ಯ.

"ಬಣ್ಣ ಹಚ್ಚುವ ಕೈ ಬೀಡ ಕಟ್ಟುವಂತಾಯಿತೇ"–ಎಂದು ದುಃಖಿತನಾದ ಶ್ರೀಧರ.

ಶ್ರೀಧರ ಮತ್ತೂ ಸಮೀಪಕ್ಕೆ ಬಂದ. ಎರಡು ವರ್ಷಗಳ ಹಿಂದೆ ಅಲ್ಲಲ್ಲಿ ಬೆಳ್ಳಗಾದ ತಲೆಗೂದಲು ಈಗ ಪೂರ್ತಿಯಾಗಿ ಬೆಳ್ಳಗಾಗಿತ್ತು! ಮೊದಲೇ ಕೃಶವಾದ ಶರೀರ ಈಗ ಮತ್ತೂ ಬಡಕಲಾಗಿತ್ತು. ಆದರೆ ಸದಾ ಪ್ರಕ್ಷುಬ್ಧತೆಯನ್ನು ಬಿಂಬಿಸುತ್ತಿದ್ದ ಅವರ ಮುಖ ಮುಂಡಳ ಈಗ ಪ್ರಶಾಂತವಾಗಿದೆ........ಬಿರುಗಾಳಿ ನಿಂತ ಮೇಲೆ ತಾನಾಗಿಯೇ ಶಾಂತವಾಗುವ ಸರಸ್ಸಿನಂತೆ.

ಯಾರೋ ಗಿರಾಕಿಯೆಂದು ತಲೆಯೆತ್ತಿದರು ವೆಂಕಟೇಶಯ್ಯ—

"ಶ್ರೀಧರ!...."

—ಅವರ ನಾಲಿಗೆ ತಾನಾಗಿಯೇ ನುಡಿಯಿತು.

ಅದೇ ಹಿಂದಿನ ಧ್ವನಿ! ಅದೇ ಮಮತೆಯ ನೋಟ!

"ಆರೋಗ್ಯವಾಗಿದ್ದೀರಾ ವೆಂಕಟೇಶಯ್ಯನವರೇ?"

—ಎಂದ ಶ್ರೀಧರ ತುಂಬು ಹೃದಯದಿಂದ.

"ಹೌದಪ್ಪಾ! ನೀನು ಕ್ಷೇಮ ತಾನೆ? ಯಾವಾಗ ಬಂದೆ ಮೈಸೂರಿಗೆ?"

"ಈಗ ತಾನೇ."

"ಮತ್ತೆ ಬರಿಗೈಯಲ್ಲಿ ಬಂದಿದ್ದೀಯೆ?"

"ನನ್ನ ಪದಾರ್ಥಗಳನ್ನೆಲ್ಲಾ ಹೋಟಲಿನಲ್ಲಿಟ್ಟಿದ್ದೇನೆ."

"ನಿನಗೆ ಬಡವನ ನೆನಪೆಲ್ಲಿ ಬರಬೇಕು? ನೇರವಾಗಿ ನಮ್ಮ ಮನೆಗೇ ಬಂದಿದ್ದರಾಗುತ್ತಿರಲಿಲ್ಲವೇ?"

"ನಿಮ್ಮ ವಿಳಾಸ ತಿಳಿದಿರಲಿಲ್ಲ."

"ಈಗ ತಿಳಿಯಿತಲ್ಲ. ತರಿಸಿಬಿಡು ನಿನ್ನ ಪದಾರ್ಥಗಳನ್ನೆಲ್ಲ. ಈ ವೆಂಕಟೇಶಯ್ಯ ಹಿಂದಿನ ವೆಂಕಟೇಶಯ್ಯನಾಗಿಲ್ಲ. ಅತಿಥಿ ಮನೆಗೆ ಬಂದರೆ, ಅನ್ನವೋ! ಗಂಜಿಯೋ!-ಇರುವುದನ್ನು ಬಡಿಸುವ ಶಕ್ತಿಯನ್ನು ಪಡೆದಿದ್ದಾನೆ"

"ನಿಮ್ಮ ಹೃದಯ ಎಂದಿಗೂ ವಿಶಾಲವಾದುದು."

"ಇದೇ ವಿಶಾಲ ಹೃದಯದ ವೆಂಕಟೇಶಯ್ಯನಲ್ಲಿಗೆ ಈಗ ಎರಡು ವರುಷಗಳ ಹಿಂದೆ ಯಾರಾದರೂ ಬಂದಿದ್ದರೆ....ಮಧ್ಯಾಹ್ನದ ಊಟಕ್ಕೆ ಯಾವುದಾದರೂ ನಾಟಕದ ಕಂಪೆನಿಗೆ ಕರೆದುಕೊಂಡು ಹೋಗುತ್ತಿದ್ದ."

"ನಾಟಕ ಬಿಟ್ಟಮೇಲೆ ನಿಮಗೆ ಅನುಕೂಲವಾಯಿತೇ?"

"ಖಂಡಿತವಾಗಿ....ನಿಂತಿದ್ದೀಯಲ್ಲ ಮೇಲೆ ಬಾ."

ಇಕ್ಕಟ್ಟಾದ ಅಂಗಡಿಯಲ್ಲಿ ಸ್ವಲ್ಪ ಸ್ಥಳ ಮಾಡಿಕೊಟ್ಟರು ವೆಂಕಟೇಶಯ್ಯ—

"ಸ್ಥಳ ಸಂಕೋಚ"—ಅವರೆಂದರು.

"ಪಟ್ಟಣದ ಜೀವನವೇ ಹಾಗೆ"—ಎಂದ ಶ್ರೀಧರ. ಕಷ್ಟಪಟ್ಟು ಕುಳಿತುಕೊಂಡ.

"ನಿನಗೆ ಮದುವೆಯಾಯಿತಂತೆ."

"ಹೌದು ಆ ಸಮಯ ನಾನು ನಿಮಗೆ ಕಾಗದ ಬರೆದೆ, ವಾಪಸಾಯಿತು."

"ಕಂಪೆನಿ ಕಥೆ ನಿನಗೆ ಗೊತ್ತಿರಬಹುದು. ಊರಿಗೆ ಬಂದ ಮೇಲೆ ಇಲ್ಲಿ ನನ್ನ ಹೆಂಡತಿಯೂ ತೀರಿಕೊಂಡಳು."

"ಕೇಳಿದ್ದೇನೆ ಅದನ್ನೆಲ್ಲಾ."

"ಯಾರು ಹೇಳಿದರು."

—ಕುತೂಹಲದಿಂದ ಕೇಳಿದರು ವೆಂಕಟೇಶಯ್ಯ.

"ಲಲಿತ ಕಾಗದ ಬರೆದಿದ್ದಳು."

—ಎನ್ನಬೇಕೆಂದು ಬಾಯಿತೆರೆದಿದ್ದ ಶ್ರೀಧರ. ಈ ಪತ್ರವ್ಯವಹಾರವನ್ನು ವೆಂಕಟೇಶಯ್ಯನಿಗೇಕೆ ತಿಳಿಸಬೇಕು? ಅದರಿಂದ ಅವಳಿಗೂ ತೊಂದರೆಯಾಗಬಹುದೆಂದು ಭಾವಿಸಿ ಮಾತು ತಿರುಗಿಸಿದ—

"ಯಾರು ತಿಳಿಸಿದರೆಂದು ನೆನಪಿಲ್ಲ ನನಗೆ."

"ನೀವೆಲ್ಲರೂ ಸೌಖ್ಯವಾಗಿದ್ದೀರಾ?"

"ಹೌದು."

"ನಿಮ್ಮ ತಂದೆಯವರು."

"ಅವರೂ ಸೌಖ್ಯ. ಅದೇನು ಅವರನ್ನೇ ಪ್ರತ್ಯೇಕವಾಗಿ ಕೇಳುತ್ತೀರಲ್ಲ?"

"ಅವರು ನಿನಗೆ ಅಂದು ಬರೆದ ಕಾಗದವನ್ನು ಇಂದಿಗೂ ನೆನೆಸಿಕೊಳ್ಳುತ್ತಿರುತ್ತೇನೆ. "ಜೀವನ!....ಮೊದಲು; ಕಲೆ!....ಅನಂತರ."—ಮುತ್ತಿನಂತಹ ಮಾತುಗಳಿವು. ಈ ಮಾತು ನನ್ನ ಜೀವನದ ಮೇಲೂ ಪರಿಣಾಮ ಮಾಡಿದೆ. ಅದಕ್ಕಾಗಿ ಅವರೆಂದರೆ ನನಗೆ ಪೂಜ್ಯಭಾವನೆ. ಈ ವಿಚಾರ ತಿಳಿಸಿ ಅವರಿಗೆ ನನ್ನ ನಮಸ್ಕಾರ ತಿಳಿಸಿಬಿಡು."

"ಜೀವನಕ್ಕಿಂತಲೂ ಕಲೆ ಶ್ರೇಷ್ಠವಲ್ಲವೇ?"

"ಜೀವನವೇ ಇಲ್ಲದ ಮೇಲೆ ಕಲೆ ಎಲ್ಲಿ ಬಂತು?

ಕಲೆ! ಕಲೆ! ಎಂದು ಒಪ್ಪಾಡದೇ ನನ್ನ ಜೀವನ ಮಾರ್ಗವನ್ನು ಮೊದಲು ನೋಡಿಕೊಂಡಿದ್ದಿದ್ದರೆ ನಾನಿಂದು ನನ್ನ ಹೆಂಡತಿಯನ್ನಿಷ್ಟು ಬೇಗ ಕಳೆದು ಕೊಳ್ಳುತ್ತಿರಲಿಲ್ಲ. ಮಕ್ಕಳನ್ನು ಬೀದಿ ಭಿಕಾರಿಗಳಾಗಗೊಡುತ್ತಿರಲಿಲ್ಲ. ಈ ಬಡತನದ ಬೇಗೆಯಲ್ಲಿ ಬೇಯುತ್ತಿರಲಿಲ್ಲ.

ಜೀವನದ ಮಟ್ಟ ಉತ್ತಮವಿಲ್ಲದ ಮನುಷ್ಯ ಮಹತ್ಕಾರ್ಯಗಳನ್ನು ಸಾಧಿಸಲಾರ, ಸಾಧಿಸಿದರೂ ತಕ್ಕ ಪ್ರತಿಫಲವನ್ನು ಹೊಂದಲಾರನೆಂಬುದಕ್ಕೆ ನಾನೇ ಒಬ್ಬ ಜೀವಂತ ಉದಾಹರಣೆ."

ವೆಂಕಟೇಶಯ್ಯ ಕಾಫಿಗೆ ಹೇಳಿಕಳಿಸಿದ್ದರು. ಕಾಫಿ ಬಂತು. ಕಾಫಿಯ ನಂತರ ತಾವೇ ಕಟ್ಟಿದ ಬೀಡವನ್ನು ಶ್ರೀಧರನಿಗೆ ಕೊಟ್ಟರು. ಬಾಯಲ್ಲಿ ಹಾಕಿಕೊಂಡ."

"ಹೇಗಿದೆ?"

"ಸೊಗಸಾಗಿದೆ! ಇಷ್ಟು ಸೊಗಸಾಗಿ ಬೀಡ ಕಟ್ಟುವುದನ್ನು ಯಾರು ಹೇಳಿಕೊಟ್ಟರು ನಿಮಗೆ?"

"ಹೊಟ್ಟೆ!....ತನಗೆ ಬೇಕಾದಾಗ ಎಲ್ಲವನ್ನೂ ಕಲಿಸಿಕೊಡುತ್ತದೆ."

ವೆಂಕಟೇಶಯ್ಯನ ಮಾತಿಗೆ ನಗಬೇಕೋ ಅಳಬೇಕೋ ಎರಡೂ ಗೊತ್ತಾಗಲಿಲ್ಲ ಶ್ರೀಧರನಿಗೆ.

ಎರಡು ಬೀಡಾ! ನಾಲ್ಕು ಸಿಗರೇಟು! ಒಂದು ಬೆಂಕಿ ಪಟ್ಟಣ!

—ಗಿರಾಕಿಗಳು ಬಂದು ಹೋಗುತ್ತಲೇ ಇದ್ದರು. ಕೈ ಕೆಲಸ ಮಾಡುತ್ತಲೇ ಇತ್ತು. ಬಾಯಿ ಮಾತಾಡುತ್ತಲೇ ಇತ್ತು.

"ಎಷ್ಟರ ಮಟ್ಟಿಗೆ ಪಳಗಿಬಿಟ್ಟರು ವೆಂಕಟೇಶಯ್ಯ!"

—ಶ್ರೀಧರನಿಗೆ ಇದೇ ಆಶ್ಚರ್ಯವಾಗಿತ್ತು.

* * * *

"ನೀನಂತೂ ಈಗ ಮನೆ ಸೇರಿಬಿಟ್ಟೆ. ನಾಟಕಗೀಟಕ ಎಲ್ಲ ಬಿಟ್ಟ ಹಾಗೆ,"

"ನಾಟಕವನ್ನು ನಾನು ಬಿಟ್ಟರೂ, ನಾಟಕ ನನ್ನನ್ನು ಬಿಟ್ಟಿಲ್ಲ."

"ಮತ್ತೆ ಪ್ರಾರಂಭವಾಯಿತೇ ಕಲಾಸೇವೆಗೆ?"

"ಬೇಡ ಬೇಡವೆಂದರೂ ತನ್ನ ಕಡೆ ಎಳೆದುಕೊಳ್ಳುವ ಸಾಮರ್ಥ್ಯವಿದೆ ನಾಟಕಕ್ಕೆ....ಈಗ ನಾನೊಂದು ಸಂದಿಗ್ಧದಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ."

ಶ್ರೀಧರ ಹೆಗಡೆಯ ವಿಚಾರಗಳನ್ನು ಪ್ರಸ್ತಾಪಿಸಿದ. ದೊರೆಸ್ವಾಮಿಯ ಹೆಸರು ಕೇಳಿದೊಡನೇ ರೇಗಿಹೋದರು ವೆಂಕಟೇಶಯ್ಯ—

"ಈಗ ಅಂಥವರಿಗೇ ಕಾಲ. ಸತ್ಯ ಸತ್ಯ ಎಂದು ಹೊಡೆದಾಡುವವರೆಲ್ಲಾ ಮೂಲೆಗೆ ಬೀಳುತ್ತಿದ್ದಾರೆ."

"ದೊರೆಸ್ವಾಮಿಯ ಕಂಪೆನಿ ಈಗ ಎಲ್ಲಿದೆ?"

"ಅದ್ಧೂರಿಯಾಗಿ ನಡೆಯುತ್ತಿದೆ. ಒಬ್ಬರ ಟೋಪಿ ಮತ್ತೊಬ್ಬರಿಗೆ ಹಾಕುತ್ತಾ, ತಾನು ಮಾತ್ರ ಯಾವುದರಲ್ಲೂ ಸಿಕ್ಕಿ ಬೀಳದೇ ನುಣುಚಿಕೊಂಡು ಕಂಪೆನಿ ನಡೆಸುತ್ತಿದ್ದಾನೆ."

"ಅವನು ಹೇಗೆ ಹಣ ಹೊಡೆದರೂ ಚಿಂತೆಯಿರಲಿಲ್ಲ. ಅನಸೂಯಳನ್ನು

ಹೆಗಡೆಯ ಜೀವನಕ್ಕೆ ಬೆರೆಸಬಾರದಿತ್ತು. ಇದೇ ಅವನು ಕಂಪೆನಿಮಾಡಿ ಹಣ ಕಳೆಯಲು ಮೂಲವಾಯಿತು."

"ಹೀಗೂ ಆಗಿದೆಯೇನು?"

"ಅದೇ ಅವನ ತಂತ್ರದ ಮೂಲವಾಯಿತು."

ಶ್ರೀಧರ ಅನಸೂಯ ಹೆಗಡೆಯರ ಸಂಬಂಧ ಬೆಳೆದ ರೀತಿಯನ್ನು ವಿವರವಾಗಿ ಹೇಳಿದ. ಕೇಳಿ ಸ್ತಬ್ಧರಾದರು ವೆಂಕಟೇಶಯ್ಯ. ಸ್ವಲ್ಪ ತಡೆದು ಹೇಳಿದರು—

"ಹೆಂಗಸರು ಮುಗ್ಧೆಯರು, ಅಬಲೆಯರು ಎಂದು ಕನಿಕರಪಡುವವರಿಗೆ ಇಂತಹ ಉದಾಹರಣೆಗಳನ್ನು ತೋರಿಸಬೇಕು. ಈ ಸಿನಿಮಾ ಯುಗದಲ್ಲಿ ಹೆಂಗಸು ಅಬಲೆಯಲ್ಲ....ಪ್ರಬಲೆ. ಅವಳೊಬ್ಬೊಬ್ಬಳು ಬೀಸುವ ಬಲೆಗೂ ಇಂದು ಅನೇಕ ತರುಣರು ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ."

"ಅಂತೆಯೇ—ಅಂತಹ ಗಂಡಸರೂ ನಮ್ಮಲ್ಲಿದ್ದಾರಲ್ಲವೇ?"

"ಗಂಡಸರೂ ಇದ್ದಾರೆ, ಹೆಂಗಸರೂ ಇದ್ದಾರೆ. ಅದು ಇಂದು ಎರಡೂ ಕಡೆಯೂ ಸಮತೂಕದಲ್ಲಿದೆ.

ಅಪರಾಧಿಗಳು ಗಂಡಸರಲ್ಲಿರುವಷ್ಟೇ ಮಂದಿ ಹೆಂಗಸರಲ್ಲೂ ಇದ್ದಾರೆ. ಹೆಣ್ಣನ್ನು ಗಂಡು ಕೆಡಿಸುತ್ತಿರುವಂತೆ, ಗಂಡನ್ನೂ ಹೆಣ್ಣು ಕೆಡಿಸುತ್ತಿದ್ದಾಳೆ.

ಗಂಡಸಿನ ವಿಚಾರ ಬಂದಾಗ, ಅವನನ್ನು—ವ್ಯಭಿಚಾರಿ;....ಕುಡುಕ ....ಸಮಾಜಘಾತುಕನೆಂದು ನಿರ್ಭಯನಾಗಿ ಖಂಡಿಸುತ್ತಿರುವ ನಮ್ಮ ಸಾಹಿತಿಗಳು—ಅದೇ ಹೆಂಗಸು ವ್ಯಭಿಚಾರಿಣಿಯೆಂದು ತಿಳಿಸಬೇಕಾದ ಸಂದರ್ಭ ಬಂದಾಗ........ಹೊಟ್ಟೆ, ಬಟ್ಟೆ, ಮಾನವೀಯತೆಯ ಪ್ರಶ್ನೆಗಳನ್ನು ಮುಂದೊಡ್ಡಿ,—ಹಾಗೆ ಮಾಡದೆ ಅವಳಿಗೆ ವಿಧಿಯೇ ಇರಲಿಲ್ಲ.... ಹಾಗೆ ಮಾಡಿದ್ದೇ ನ್ಯಾಯವೆಂದು ಸಾಧಿಸಿ, ಅಯ್ಯೋ ಪಾಪ! ಎಂದು ತಾವೂ ಅತ್ತು, ನಮ್ಮನ್ನೂ ಅಳಿಸಿಬಿಡುತ್ತಿದ್ದಾರೆ.

ನಮ್ಮ ತರುಣರು ಇಂತಹ ಹೆಂಗಸರ ಮೇಲಿನ ಸಹಾನುಭೂತಿಯಿಂದ ಅವರ ಮನೆಗಳನ್ನೇ ಹುಡುಕಿಕೊಂಡು ಹೋಗುವಂತೆ ಪ್ರಚೋದಿಸುತ್ತಿದ್ದಾರೆ!"

"ನಮ್ಮ ಸಮಾಜ ಇಷ್ಟು ಹೀನಸ್ಥಿತಿಯಲ್ಲಿದೆಯೇ?"

"ನಾಗರಿಕತೆಯ ಬೆಡಗಿನಲ್ಲಿ, ಸಂಸ್ಕೃತಿಗೆ ತಿಲಾಂಜಲಿಯನ್ನಿತ್ತು.... ಪಾತಾಳಕ್ಕಿಳಿಯುತ್ತಿದೆ ನಮ್ಮ ಸಮಾಜ. ಈ ಥಳುಕಿನ ಜೀವನದಲ್ಲಿ ಹೆಂಗಸಿನ ಹೆಜ್ಜೆಯನ್ನೇ ನಂಬುವುದು ಕಷ್ಟವಾಗಿದೆ."

"ನೀವೇಕೆ ಇಷ್ಟು ಉದ್ರಿಕ್ತರಾದಿರಿ?"

"ನೀರಿನಲ್ಲಾಡುವ ಮೀನಿನ ಹೆಜ್ಜೆಯನ್ನಾದರೂ ಗುರುತಿಸಬಹುದು, ಇಂತಹ ಹೆಂಗಸರ ನಡೆಯನ್ನು ಗುರುತಿಸುವುದು ಸಾಧ್ಯವಿಲ್ಲ. ಅದಕ್ಕೆ ಸಾಕ್ಷಿ ಈ ಅನಸೂಯ."

"ಅವಳು ಮತ್ತೇನು ಮಾಡಿದ್ದಾಳೆ?"

"ಅವಳಿಗೆ ಮೊದಲೊಂದು ಮದುವೆಯಾಗಿದೆ."

"ಯಾರೊಡನೆ?"

"ಅದೊಂದು ಹೊಲಸು ಕತೆ. ನಾವು ಬೆಂಗಳೂರಿನಲ್ಲಿದ್ದಾಗ ನಮ್ಮೊಡನೆ ನರೇಂದ್ರ ಅಂತ ಒಬ್ಬನಿದ್ದ ನೆನಪಿದೆಯೆ?"

ನರೇಂದ್ರನ ಹೆಸರು ಕೇಳಿದೊಡನೆ ಹಿಂದಿನ ಚಿತ್ರ ನೆನಪಿಗೆ ಬಂತು ಶ್ರೀಧರನಿಗೆ.

"ಹೌದು ಅವನಿಗೂ ಅವಳಿಗೂ ಸಂಬಂಧವಿತ್ತು."

"ಪಾಪ! ಅವನೀಗ ಹುಚ್ಚೂ ಅಲ್ಲ ಬೆಪ್ಪೂ ಅಲ್ಲವಾಗಿ ಅಲೆಯುತ್ತಿದ್ದಾನೆ ಮೈಸೂರಿನ ಬೀದಿಗಳಲ್ಲಿ."

"ಅವನಿಗೇನಾಯಿತು?"

"ಈ ಹೆಣ್ಣಿನ ಮಾಯೆಗೆ ಸಿಕ್ಕಿ ಬುದ್ಧಿ ಭ್ರಮಣೆಯಾಯಿತು. ನಾವು ಕೃಷ್ಣರಾಜಪುರವನ್ನು ಬಿಟ್ಟಮೇಲೆ ನರೇಂದ್ರ ಬೆಂಗಳೂರಲ್ಲೇ ಉಳಿದ. ಅವರವರಲ್ಲಿ ಹೆಚ್ಚಿನ ವಿಶ್ವಾಸವಿತ್ತಂತೆ. ಅವನನ್ನು ತಾನು ಮದುವೆಯಾಗುವುದಾಗಿ ಇವಳು ವಚನವಿತ್ತಳಂತೆ."

"ಹೌದು ಈ ವಿಚಾರವನ್ನೂ ನನಗೆ ತಿಳಿಸಿದ್ದ."

"ವಚನ ವಚನವಾಗಿಯೇ ಉಳಿಯಿತು. ಇವಳಿಗಾಗಿ ಅವನು ಸಾವಿರಾರು ರೂಪಾಯಿಗಳನ್ನು ಮನೆಯಿಂದ ತರಿಸಿಕೊಂಡು ಖರ್ಚು ಮಾಡಿದ. ಭಾರಿ ಶ್ರೀಮಂತ ಅವನಲ್ಲ. ಅವನ ಸತ್ವ ಮುಗಿದ ಮರುದಿನ ಅವನನ್ನು ಹೊರದೂಡಿದರು. ತಾಯಿಮಕ್ಕಳು ಬೇರೆ ಏರ್ಪಾಟು ಮಾಡಿದರು.

ಈ ಸಮಯ ಅನಸೂಯ ಮೂರುತಿಂಗಳ ಗರ್ಭಿಣಿ. ಚೆನ್ನಪಟ್ಟಣದ ಶ್ರೀಮಂತ ಹುಡುಗನೊಬ್ಬ ಇವರ ಮನೆಗೆ ಆಗಾಗ ಬರುತ್ತಿದ್ದನಂತೆ. ಅವನನ್ನು ಒಳಗೆ ಹಾಕಿಕೊಂಡು, ನಿನಗೇ ಮಗಳನ್ನು ಕೊಟ್ಟು ಮದುವೆ ಮಾಡುವೆನೆಂದಳು ಅನಸೂಯಳ ತಾಯಿ."

"ಅವನು ಒಪ್ಪಿದನೇ?"

"ಹುಡುಗರು ಏನೂ ಅರಿಯದವರು ಬಹು ಬೇಗ ಮೋಸ ಹೋಗುತ್ತಾರೆ. ನಿಮ್ಮ ತಂದೆಯವರು ಅಂದು ನಿನಗೆ ಬರೆದಂತೆ, ಈಗಿನ ಕಾಲದ ಯುವಕರೆಲ್ಲರೂ ಕವಿಗಳು—ನಟರು—ಕಾದಂಬರೀಕಾರರಾಗಿ ಬಿಟ್ಟಿದ್ದಾರೆ. ನಾಳೆ ಏನೇ ಆಗಲಿ, ಇಂದು ತಾವು ಮಾಡುತ್ತಿರುವುದು ಆದರ್ಶ ಕಾರ್ಯವೆಂದು ಮುನ್ನುಗ್ಗಿ ಜಾರಿ ಬೀಳುತ್ತಿದ್ದಾರೆ. ಈ ಯುವಕರಿಗೆ ತಾವು ಮಾಡಿದ್ದೆಲ್ಲವೂ ಆದರ್ಶವೇ....

ಕಣ್ಣು ಹೊಡೆಯೋದೇ—'Culture'
ಕಾಗದ ಕೊಡೋದೇ—'Love'
ಕದ್ದು ಕೂಡೋದೇ—'Romance'
ಒಟ್ಟಿಗೆ ಓಡಿಹೋದರೆ ಅದೇ—'Honey moon'
ಈ ಸ್ವೇಚ್ಛಾಚಾರಗಳೇ ಅಮರ ಪ್ರೇಮ!
ಇಷ್ಟಾದರೆ ತೀರಿತು ಈ ಜೀವ ಜೀವನಗಳು ಪ್ರೇಮಕ್ಕೇ ಮೀಸಲು!

ಎಲ್ಲರೂ ಲೈಲಾಮಜ್ನುಗಳು; ಎಲ್ಲರೂ ರೋಮಿಯೋ ಜೂಲಿಯಟ್‌ಗಳು; ಮಧ್ಯೆ ಬಂದವರೆಲ್ಲಾ 'ಪಾಪಿ'ಗಳಾಗಿ ಕಾಣಿಸುತ್ತಾರೆ ಈ ರತಿ—ಮನ್ಮಥರ ಕಣ್ಣಿಗೆ!

ಇದು ನಮ್ಮ ಸಿನಿಮಾದವರು ಮಾಡಿರುವ ಸಮಾಜ ಸೇವೆ! ಇದೇ ಅವರು ಕಲಿಸಿಕೊಟ್ಟಿರುವ ಪ್ರೇಮ ಪಾಠ!"

"ಲೈಲಾಮಜ್ನುಗಳೂ ಆದರ್ಶರೇ ಅಲ್ಲವೇ?"

"ಒಂದು ಗಂಡು ಒಂದು ಹೆಣ್ಣು ಅಗಲಲಾರದ ಪ್ರೇಮದಿಂದ ಬಂಧಿತರಾಗಿ, ಅದೇ ಪ್ರೇಮಕ್ಕಾಗಿ ತಮ್ಮ ಬಲಿದಾನ ಮಾಡಿದ ಮಾತ್ರಕ್ಕೆ ಅವರು ಆದರ್ಶರೇ? ಅವರಿಂದ ನಮ್ಮ ಸಮಾಜಕ್ಕಾದ ಲಾಭವೇನು? ದೇಶಕ್ಕಾದ ಲಾಭವೇನು? ದೇಶಕ್ಕಾದ ಉಪಕಾರವೇನು?

ಪ್ರಣಯದ ಪರಿಣಾಮ—ಹೊಳೆಯಲ್ಲೋ, ಕೆರೆಯಲ್ಲೋ, ಭಾವಿಯಲ್ಲೋ, ತಂತಿಯಲ್ಲೋ ಸಾವಿನಲ್ಲಿ ಪರ್ಯವಸಾನವಾಗುವುದಾದರೆ, ಅಂತಹ ಆದರ್ಶ....ನಾಟಕದವರಿಗೆ, ಸಿನಿಮಾದವರಿಗೆ, ಕಾದಂಬರೀಕಾರರಿಗೆ ಮೀಸಲಾಗಿರಲಿ.

ನಮಗೆ ಬೇಕಾಗಿರುವುದು, ಕಸ್ತೂರಿಬಾ—ಮಹಾತ್ಮಾ ಗಾಂಧೀಜಿಯವರಲ್ಲಿದ್ದಂತಹ ಪ್ರೇಮ; ಕಮಲಾದೇವಿ—ಜವಹರಲಾಲ್ ನೆಹ್ರೂರವರಲ್ಲಿದ್ದಂತಹ ಪ್ರೇಮ.

ತಮ್ಮ ಪ್ರೇಮದ ಬೆಳಕಿನಿಂದ ದೇಶವನ್ನೇ ಬೆಳಗಿಸಿದರು; ತಮ್ಮ ತ್ಯಾಗದ ಹಿರಿಮೆಯಿಂದ ಮಹದ್ ವ್ಯಕ್ತಿಗಳನ್ನು ರೂಪಿಸಿದರು; ಜನಮನಗಳಲ್ಲಿ ತಮ್ಮ ಅಮರ ಸ್ಮೃತಿಯನ್ನೊತ್ತಿ ಅಗಲಿದರು.

ಅವರ ಪ್ರೇಮವಿದ್ದುದು ಮೋಹಕ ಮುಖದಲ್ಲಲ್ಲ! ಬಣ್ಣದ ತುಟಿಯ ಮೇಲಲ್ಲ! ಬೆಡಗಿನ ಕಣ್ಣಿನಲ್ಲಲ್ಲ! ದೇಹದ ಜೇಟದಲ್ಲಂತೂ ಅಲ್ಲವೇ ಅಲ್ಲ! ಅದಿದ್ದುದು ತ್ಯಾಗದಲ್ಲಿ.

ಆ ತ್ಯಾಗವೇ ದೇಹ ಜೀವಗಳ ಮಿತಿಗೆ ಒಳಪಡದ ಅನಂತ ಪ್ರೇಮ! ಅದೇ ಭೌತಿಕ ಬಂಧನವನ್ನು ಗೆದ್ದು ಪ್ರಪಂಚವನ್ನೇ ಬೆಳಗಿಸಿದ ದಿವ್ಯ ಜ್ಯೋತಿ!

ಇವರ ಮುಂದೆ ನಿಮ್ಮ ಲೈಲಾಮಜ್ನುಗಳು ಇದ್ದರೇನು? ಸತ್ತರೇನು? ಅವರ ಇರುವಿಕೆಗಾಗಿ ಸಂತೋಷಪಡಬೇಕಾಗಿಲ್ಲ, ಸತ್ತರೆ ದುಃಖಪಡಬೇಕಾಗಿಯೂ ಇಲ್ಲ. ಇವರ ಆದರ್ಶ ಕುಡುಕನ ವೇದಾಂತ ಎರಡೂ ಒಂದೇ.

ಕಥೆಯಂತೆ ಕೇಳೋಣ, ನಾಟಕದಂತೆ ನೋಡೋಣ, ಕಾದಂಬರಿಯಾಗಿ ಓದೋಣ. ಆದರೆ ಮಾತ್ರ ಜೀವನದಲ್ಲಿ ಅವರ ಅನುಸರಣೆಗೆ ಹೋಗಿ ಮೂರ್ಖರಾಗುವುದು ಬೇಡ. ಜೀವನದಿಂದ ಕಾವ್ಯ ಹುಟ್ಟೀತು. ಕಾವ್ಯವೇ ಜೀವನವಾಗಲಾರದು."

ವೆಂಕಟೇಶಯ್ಯ ಸ್ಫೂರ್ತಿಯಿಂದ ಮಾತನಾಡುತ್ತಿದ್ದರು. ತುಟಿಯಲ್ಲಾಡಿಸದೇ ಕೇಳುತ್ತ ಕುಳಿತ ಶ್ರೀಧರ. ನಾಟಕದಲ್ಲಿ ಪಾತ್ರವಹಿಸಿದಾಗ ಆವೇಶದಿಂದಿರುವಂತೆ ಅವರು ತಮ್ಮ ಅಂಗಡಿ—ಜನ ಎಲ್ಲರನ್ನೂ ಮರೆತು ನುಡಿಯುತ್ತಿದ್ದರು.

"ಮಾತನಾಡುತ್ತಾ ಆಡುತ್ತಾ ಎಲ್ಲಿಗೋ ಹೋಗಿಬಿಟ್ಟೆ. ನಾನೇನು ಮಾಡಲಿ. ಇಂದಿನ ಯುವಕ ಯುವತಿಯರ ಹುಚ್ಚಾಟದಿಂದ ನನ್ನ ಹೃದಯಕ್ಕೆ ನೋವಾಗಿದೆ. ಆ ನೋವು ಈ ರೂಪದಲ್ಲಿ ಹೊರಗೆ ಬಂತು. ನಿಮ್ಮ ಚೆನ್ನಪಟ್ಟಣದ ಶ್ರೀಮಂತ ತರುಣ ಇಂತಹ ಹುಚ್ಚರಲ್ಲಿ ಒಬ್ಬ."

"ಮದುವೆ ನಡೆಯಿತೇ"

"ನಡೆಯಿತು. ಮದುವೆಯಾದೊಡನೆ ಅನಸೂಯ ಗರ್ಭವತಿಯೆಂಬ ವಿಚಾರವೂ ತಿಳಿದುಬಂತು. ಗಲಾಟೆಯಾಯಿತು. ಆ ಮಗು ತನ್ನದಲ್ಲ ವೆಂದು ಸಾಧಿಸುವುದೇ ಅವನಿಗೆ ಅಸಾಧ್ಯವಾಗಿ ಜೀವನಾಂಶವನ್ನು ಕೊಟ್ಟು ಕೈಬಿಟ್ಟ."

"ಅದು ಶಾಸ್ತ್ರೋಕ್ತ ವಿವಾಹವೇ ?"

"ರಿಜಿಸ್ಟರ್ಡ್ ಮ್ಯಾರೇಜ್ ಆಗಿದ್ದರಿಂದ ಸುಲಭವಾಗಿ ಬಿಡಲು ಅನು ಕೂಲವಾಯಿತು. ಹಣ ಹೋಯಿತು ಅಷ್ಟೆ."

"ನರೇಂದ್ರನ ಗತಿ!"

"ಅನಸೂಯ ಬೇರೆ ಮದುವೆಯಾದಾಗ ಇವನ ತಲೆ ಕೆಟ್ಟು ಹೋಯಿತು. ಈ ಆದರ್ಶಪ್ರೇಮ! ಭಗ್ನವಾಯಿತಲ್ಲಾ ಎಂಬ ಸಂಕಟ ದಿಂದ ಆ್ಯಸಿಡ್ ಕುಡಿದುಬಿಟ್ಟ ಮಹಾರಾಯ!"

ಶ್ರೀಧರನ ತಲೆ ಬಿಸಿಯಾಯಿತು. ಅನಸೂಯಳ ದುರ್ವರ್ತನೆಯ ಪರಿಣಾಮದಿಂದ ರಕ್ತ ಕುದಿಯತೊಡಗಿತು. ವೆಂಕಟೇಶಯ್ಯ ಮುಂದು ವರೆದರು—

"ಆ್ಯಸಿಡ್ ಕುಡಿದವನು ಸತ್ತುಹೋಗಿದ್ದರೆ ಚೆನ್ನಾಗಿತ್ತು ಈ ಸ್ಥಿತಿ ಯಲ್ಲಿ ಬದುಕಿ ಉಳಿಯುವುದಕ್ಕಿಂತ."

"ಅವನು ಬದುಕಿದ್ದು ಹೇಗೆ?"

"ಸಮೀಪದಲ್ಲಿದ್ದವರಿಗೆ ಈ ವಿಚಾರ ಗೊತ್ತಾಗಿ ಕೂಡಲೇ ವಿಕ್ಟೋ ರಿಯಾ ಆಸ್ಪತ್ರೆಗೆ ಸಾಗಿಸಿದರು. ವಿಷ ಶಮನವಾಯಿತು. ತಲೆ ಕೆಟ್ಟು ಹೋಯಿತು."

"ಅವನು ಊರಿಗೆ ಹೋಗಲಿಲ್ಲವೇ?"

"ಊರಿನಲ್ಲೇನಿದೆಯೆಂದು ಹೋಗಬೇಕು. ಆಸ್ತಿಯೆಲ್ಲ ಹೋದ

ಮೇಲೆ ಇರುವವಳೊಬ್ಬಳು ತಾಯಿ. ಅವಳಿಂದ ಏನುಮಾಡಲು ಸಾಧ್ಯ. ಆ ಜೀವಕ್ಕೊಂದು ನೋವು ಅಷ್ಟೆ."

"ಮತ್ತೆ ಮದುವೆಯಾಗಲಿಲ್ಲವೇ?"

"ತಲೆ ಕೆಟ್ಟ ಮೇಲೆ ಮದುವೆಯೆಲ್ಲಿ ಬಂತು! ನಾಯಿಯಂತೆ ಪುನಃ ಪುನಃ ಅನಸೂಯಳ ಮನೆಯ ಬಾಗಿಲಿನಲ್ಲಿ ಅಲೆಯಲಾರಂಭಿಸಿದ ಪ್ರೇಮ ಭಿಕ್ಷೆಗಾಗಿ."

"ಮತ್ತೆ ಪ್ರೇಮಭಿಕ್ಷೆ! ಇದಕ್ಕೇನೆನ್ನಬೇಕು !"

"ಇದಕ್ಕೆ ಅನ್ನಬೇಕು ಪ್ರೇ....ಮ....ಅಂತ."

ವೆಂಕಟೇಶಯ್ಯ "ಪ್ರೇಮ"ವನ್ನುಚ್ಚರಿಸುವಾಗ ವ್ಯಂಗ್ಯವಾಗಿ ತಮ್ಮ ಧ್ವನಿಯನ್ನು ಏರಿಸಿದ್ದರು.

"ಅವನ ಗತಿಯಾಯಿತಲ್ಲ; ಹುಟ್ಟಿದ ಮಗು....?"

"ಅದು ನರೇಂದ್ರನದೇ...."

"ಅನಸೂಯಳ ಮಗುವನ್ನು ನೋಡಿದಾಗಲೆಲ್ಲಾ ನನಗೆ ಮೊದಲೇ ಪರಿಚಯವಿದ್ದ ಮುಖದಂತೆ ಕಾಣುತ್ತಿತ್ತು. ಈಗ ತಿಳಿಯಿತು ಅದು ನರೇಂದ್ರನದೇ ಮುಖ."

"ಮುಖ ಅವನದಾದರೇನಂತೆ ಮಗು ಅವನದಲ್ಲವಾಯಿತು. ಮಗುವಿನ ಮೇಲಿನ ಮಮತೆಯಿಂದ, ಅದರ ಮುಖದರ್ಶನವನ್ನಾದರೂ ಮಾಡೋಣ ವೆಂದು, ಭಿಕ್ಷುಕನಂತೆ ದೀನನಾಗಿ ನರೇಂದ್ರ ಅವಳ ಮನೆಯ ಬಾಗಿಲಿಗೆ ಹೋದಾಗ....ಹುಚ್ಚ ಬಂದ....ಹುಚ್ಚ ಬಂದ....ಎಂದು ಮಗುವಿಗೆ ಕೈ ತೋರಿಸಿ, ಬಾಗಿಲು ಹಾಕಿಕೊಂಡು ಹೋಗುತ್ತಿದ್ದಳು ಈ ವಿದಗ್ಧೆ!...."

"ಅಬ್ಬ! ಇಂತಹ ಹೆಂಗಸರನ್ನು ಸಾಲು ಸಾಲಾಗಿ ನಿಲ್ಲಿಸಿ ಗುಂಡಿನಲ್ಲಿ ಹೊಡೆದರೂ ಪಾಪವಿಲ್ಲ!"

"ವಿಷಸರ್ಪಗಳಂತೆ ಈ ಕುಲಟೆಯರು. ತಮ್ಮ ಜೀವನದ ಪರಿವೆಯೂ ಅವಕ್ಕಿಲ್ಲ! ಮತ್ತೊಬ್ಬರ ಬಾಳಿನ ಬೆಲೆಯನ್ನೂ ಅರಿತಿಲ್ಲ! ಕಚ್ಚುವುದೊಂದೇ ಅವುಗಳ ಕೆಲಸ!"

"ಒಬ್ಬಳು ಹೆಂಗಸು ಇಷ್ಟು ಜನರಿಗೆ ಹಾನಿಯುಂಟುಮಾಡಿರುವುದನ್ನು ಕೇಳಿದರೆ ಭಯವಾಗುತ್ತಿದೆ."

"ಇಷ್ಟು ಪ್ರತ್ಯಕ್ಷವಾಗಿ ಕಂಡ ವಿಷಯಗಳು. ಇನ್ನು ಪರೋಕ್ಷವಾಗಿ ಎಷ್ಟು ನಡೆದಿದೆಯೋ."

ಹೋಗಲಿ ಬಿಡಿ ಅವಳ ವಿಚಾರ ಮಾತನಾಡಲೂ ಯೋಗ್ಯವಾಗಿಲ್ಲ. ನರೇಂದ್ರ ಇಲ್ಲಿಗೇಕೆ ಬಂದ?"

"ಅವನು ಎಲ್ಲಿರುತ್ತಾನೆ, ಏಕೆ ಬರುತ್ತಾನೆಂದು ಯಾರಿಗೆ ಗೊತ್ತು? ಮೈಸೂರಿಗೆ ಬಂದು ಕೆಲವು ದಿನಗಳಾಯಿತು. ಒಂದೊಂದು ದಿನ ಒಂದೊಂದು ಕಡೆ ತಿರುಗುತ್ತಾನೆ. ನನ್ನ ಅಂಗಡಿಗೆ ಬಂದಾಗ ನಾನೂ ಕಾಫಿ ಕುಡಿಯಲು ಕಾಸು ಕೊಡುತ್ತೇನೆ. ಬೀಡಿ ಎಳೆಯುತ್ತಾನೆ. ಮನೆಗೆ ಬಾ ಎಂದರೆ ಬರುತ್ತಾನೆ. ಒಳಗೆ ಬಾ ಎಂದು ಎಷ್ಟು ಬಲಾತ್ಕರಿಸಿದರೂ ಹೊಸಿಲ ಒಳಗೆ ಕಾಲಿಡುವುದಿಲ್ಲ. ಬಾಗಿಲಲ್ಲೇ ನಿಂತು ತುತ್ತು ಅನ್ನ ತಿಂದು ಹೊರಟುಹೋಗುತ್ತಾನೆ."

"ಹೇಗಿದ್ದವನು ಹೇಗಾಗಿ ಬಿಟ್ಟ"

—ನಿಟ್ಟುಸಿರಿಟ್ಟ ಶ್ರೀಧರ.

"ಪ್ರೇಮವಪ್ಪಾ! ಪ್ರೇಮ! ಪ್ರೇಮದ ಪ್ರಭಾವ ಅಷ್ಟಿಷ್ಟಲ್ಲ."

—ವ್ಯಂಗ್ಯವಾಗಿ ನುಡಿದು ಮೇಲೆದ್ದರು ವೆಂಕಟೇಶಯ್ಯ:

"ಊಟದ ಹೊತ್ತಾಯಿತು. ಬಾ. ಮನೆಗೆ ಹೋಗೋಣ."

"ಅಂಗಡಿಯಲ್ಲಿ?"

"ಹೋಟಲಿನವರು ನೋಡುತ್ತಿರುತ್ತಾರೆ."

ಇಬ್ಬರೂ ಮನೆಗೆ ಹೊರಟರು—

"ಇದನ್ನೆಲ್ಲಾ ಕೇಳಿದಾಗ ನಮ್ಮ ಹೆಗಡೆ ಸ್ಥಿತಿ ನೆನೆಸಿಕೊಂಡರೆ ಎದೆ ನಡುಗುತ್ತಿದೆ."

"ನಡುಗುವುದೇಕೆ? ಒಂದಲ್ಲ ಒಂದು ದಿನ ಹೇಗೂ ಬಿಡುಗಡೆಯಾಗುತ್ತದೆ. ಅವಳಿಗೂ ಅದೇ ಬೇಕಾಗಿರುವುದು. ಇರುವಷ್ಟು ದಿನ ಮಜವಾಗಿದ್ದು ಹೊರಡುವಾಗಲೂ ಗಂಟು ಕೀಳಬಹುದು. ನಿಮ್ಮ ಹೆಗಡೆಯವರು ಹೇಗೂ ಶ್ರೀಮಂತರು. ಕಬ್ಬಿಣದ ಪೆಟ್ಟಿಗೆಯಲ್ಲಿ ತುಕ್ಕು ಹಿಡಿಯುವ ನೋಟುಗಳಿಗೆ ಹೇಗಾದರೂ ಗತಿ ಕಾಣಿಸಬೇಕಲ್ಲ."

"ನೀವು ಕಮ್ಯುನಿಸ್ಟರಂತೆ ಮಾತನಾಡುತ್ತಿದ್ದೀರಿ."

"ಇದೂ ಕಮ್ಯುನಿಸಮ್ಮೇ! ಇಂತಹ ನಾಲ್ಕಾರು ಹೆಂಗಸರ ಸಹವಾಸ ಮಾಡಿದರೆ ಶ್ರೀಮಂತಿಕೆ ತನ್ನಷ್ಟಕ್ಕೇ ಕರಗಿಬಿಡುತ್ತೆ."

ಹೆಗಡೆಯ ಕಂಪೆನಿಗೆ ವೆಂಕಟೇಶಯ್ಯನನ್ನು ಕರೆಯಲು ಬಂದಿದ್ದ ಶ್ರೀಧರ. ಹೆಗಡೆಯನ್ನು ಅವರೂ ಹಗುರವಾಗಿ ಕಂಡಿದ್ದು ತಾನು ಬಂದ ಉದ್ದೇಶವನ್ನು ಸ್ಪಷ್ಟಪಡಿಸುವುದೇ ಬಿಕ್ಕಟ್ಟಿಗೆ ಬಂದಿತ್ತು. ವೆಂಕಟೇಶಯ್ಯನ ವಿಚಾರವನ್ನಿಷ್ಟು ಹೊತ್ತೂ ತಿಳಿದುಕೊಂಡು ಮತ್ತೆ ಅವರನ್ನು ಕಂಪೆನಿಗೆ ಬರುತ್ತೀರಾ ಎಂದು ಕರೆಯುವುದು ಮೂರ್ಖತನವೆನ್ನಿಸಿತು.

"ಈಗ ನಮ್ಮ ಹೆಗಡೆ ಕಂಪೆನಿ ಏನುಮಾಡಬೇಕೆಂದು ನಿಮ್ಮ ಅಭಿಪ್ರಾಯ?"

"ಉನ್ನತ ಉದ್ದೇಶವನ್ನಿಟ್ಟುಕೊಂಡು ಹೆಣಗಿದರೇ ನಡೆಯದಿರುವಾಗ, ಖಯಾಲಿ ಕಂಪೆನಿಗಳು ನಿಲ್ಲಲಾರವು. ನಿಲ್ಲಬೇಕಾದ ಅಗತ್ಯವೂ ಇಲ್ಲ."

"ಕಾರಣ ?"

ಷೋಕಿಗಾಗಿ ಕಂಪೆನಿಮಾಡುವ ಜನಗಳಿಂದ ಇಂದು ನಮ್ಮಲ್ಲಿನ ನಾಟಕದ ಕಲೆ ಉಳಿಯಬೇಕಾದ ಪಕ್ಷದಲ್ಲಿ, ಆ ಕಲೆ ಉಳಿಯುವುದಕ್ಕಿಂತಾ ಅಳಿಯುವುದೇ ಲೇಸು."

* * * *

ಮನೆ ದೂರದಲ್ಲಿರಲಿಲ್ಲ. ಚಿಕ್ಕದಾಗಿ ಅಚ್ಚುಕಟ್ಟಾಗಿತ್ತು. ಬಾಗಿಲು ಬೀಗ ಹಾಕಿತ್ತು. ವೆಂಕಟೇಶಯ್ಯ ಬಾಗಿಲಿನ ಬೀಗವನ್ನು ತೆಗೆದರು.

"ಹುಡುಗರೆಲ್ಲಾ ಎಲ್ಲಿ ಹೋಗಿದ್ದಾರೆ?"—ಎಂದ ಶ್ರೀಧರ.

"ಸ್ಕೂಲಿಗೆ ಹೋಗಿದ್ದಾರೆ."

ಮನೆಯೊಳಗಡೆ ಎಲ್ಲ ಪದಾರ್ಥಗಳೂ ಅವುಗಳಿರಬೇಕಾದ ಸ್ಥಳದಲ್ಲಿ ಅಚ್ಚುಗಟ್ಟಾಗಿ ಜೋಡಿಸಲ್ಪಟ್ಟಿದ್ದವು. ವೆಂಕಟೇಶಯ್ಯ ಗಂಡಸರಾಗಿ ಮನೆಯನ್ನಿಷ್ಟು ವ್ಯವಸ್ಥಿತವಾಗಿಟ್ಟಿರುವುದು ಆಶ್ಚರ್ಯವಾಯಿತವನಿಗೆ.

"ಇದು ಗಂಡಸರ ಸಂಸಾರ ಅಂತ ಹೇಳುವಂತೆಯೇ ಇಲ್ಲ."

"ಏಕೆ? "

"ನನಗೇಕೋ ಹಾಗನ್ನಿಸುತ್ತಿದೆ. ಮನೆಗೆಲಸಕ್ಕೆ ಜನರನ್ನಿಟ್ಟುಕೊಂಡಿದ್ದೀರಾ?"

"ಇನ್ನೂ ಆ ಮಟ್ಟಕ್ಕೇರಿಲ್ಲ ಈ ವೆಂಕಟೇಶಯ್ಯ."

"ಮತ್ತೆ ಹುಡುಗರಿಗೆಲ್ಲಾ ನೀವೇ ಅನ್ನ ಮಾಡಿ ಬಡಿಸುತ್ತೀರಾ?"

"ಕೆಲವು ದಿನ ಅದೂ ನಡೆಯಿತು. ಆದರೀಗ ನಾನು ಯಾವ ಯೋಚನೆಯನ್ನೂ ಹಚ್ಚಿಕೊಂಡಿಲ್ಲ."

"ಮತ್ತೆ?"

"ದೇವಿಯೊಬ್ಬಳ ಸಹಾಯ ದೊರೆತಿದೆ ನನಗೆ."

"ಯಾರು?"

"ನಿನಗೆ ತಿಳಿಯದ ವ್ಯಕ್ತಿಯೇನಲ್ಲ."

ಬಹಳ ಯೋಚಿಸಿದ ಶ್ರೀಧರ. ಅವನಿಗೆ ಹೊಳೆಯಲಿಲ್ಲ—

"ಯಾರು ಹೇಳಿಬಿಡಿ, ಅನವಶ್ಯಕವಾಗಿ ನನ್ನ ಕುತೂಹಲವನ್ನೇಕೆ ಕೆರಳಿಸುವಿರಿ?"

"ಲಲಿತ"—ಮೃದುವಾಗಿ ನಗುತ್ತ ಹೇಳಿದರು ವೆಂಕಟೇಶಯ್ಯ.

ಲಲಿತ! .... ವೆಂಕಟೇಶಯ್ಯನ ಸಹಾಯಕ್ಕಾಗಿ! ಇದೇನು ಕನಸೇ? ಕತೆಯೇ?

"ಅವರು ನಾಟಕದ ಕಂಪೆನಿಯಲ್ಲಿಲ್ಲವೇ?"

"ಇಲ್ಲ. ಬಿಟ್ಟು ಬಹಳ ದಿನಗಳಾಯಿತು."

"ಕಾರಣ?"

"ನಿನಗೆ....ನನಗೆ ಏನು ಕಾರಣವೋ ಅದೇ ರೀತಿಯ ಮತ್ತೊಂದು ಕಾರಣ ಅವಳಿಗೆ. ಸ್ವತಂತ್ರವಾಗಿ ಸಂಪಾದಿಸುವುದು ಗಂಡಸಿಗೆ ಎಷ್ಟು ಕಷ್ಟವೋ....ತನ್ನ ನೀತಿಯನ್ನು ಕಾಪಾಡಿಕೊಂಡು ಸಂಪಾದನೆ ಮಾಡುವುದು ಹೆಂಗಸಿಗೆ ಅದಕ್ಕಿಂತಲೂ ಕಠಿಣ. ಕಂಪೆನಿ ಜೀವನ ಅವಳಿಗೆ ಹಿಡಿಸಲಿಲ್ಲ."

"ಅವರದೂ ಒಂದು ದಾರುಣ ಜೀವನ."

—ಅನುಕಂಪೆಯಿಂದ ನುಡಿದ ಶ್ರೀಧರ.

"ಹೌದು! ತನ್ನ ವಿಷಯಗಳನ್ನೆಲ್ಲಾ ನನಗೂ ಒಂದು ದಿನ ಬಂದು ಹೇಳಿದಳು. ಕಾಮುಕ ದೃಷ್ಟಿಯಿಂದಲೇ ಹೆಣ್ಣನ್ನು ನೋಡುವ ಹಣವಂತರ ಕೈಕೆಳಗೆ ದುಡಿಯುವ ತನ ಸಂಕಟವನ್ನು ತೋಡಿಕೊಂಡಳು. ಅವಳ

ಮಾತೆಲ್ಲವೂ ನಿಜವಾಗಿತ್ತು."

"ಅವರು ಎಲ್ಲ ಕಂಪೆನಿಗೂ ಹೋಗುತ್ತಿರಲಿಲ್ಲ."

"ಹೌದು. ತನ್ನ ಮನಸ್ಸು ಹೊಂದಿದಲ್ಲೇ ದುಡಿಯುತ್ತಾ ಮೂರು ಮೂರು ತಿಂಗಳಿಗೂ ಕಂಪೆನಿ ಬದಲಾಯಿಸಿ ತಿರುಗುವುದು ಗಂಡಸಿಗಿಂತಲೂ ಹೆಂಗಸಿಗೆ ಕಠಿಣವಲ್ಲವೇ? "

"ನಿಜ! ಅವರು ನಾಟಕವನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳುವ ಅಗತ್ಯವಿರಲಿಲ್ಲ. ಮೆಟ್ರಿಕ್ಯುಲೇಷನ್ ಪರೀಕ್ಷೆ ಮುಗಿಸಿದ್ದಾರೆ."

"ಅದು ಅನುಕೂಲವೇ ಆಯಿತು. ಎಲ್ಲಿಯಾದರೂ ಖಾಯಂ ಕೆಲಸ ಕೊಡಿಸಿಬಿಡಿ ನನ್ನ ಪಾಡಿಗೆ ನಾನಿದ್ದುಬಿಡುತ್ತೇನೆಂದು ನನ್ನನ್ನು ಕೇಳಿದಳು. ಅವಳಿಗಾಗಿ ನಾನು ಕೆಲವು ದಿನ ತಿರುಗಾಡಿದೆ. ಅಧಿಕಾರಿಗಳೊಬ್ಬರ ಪರಿಚಯದಿಂದ ಮೈಸೂರಿನಲ್ಲೇ ಕೆಲಸ ಸಿಕ್ಕಿತು. ಅವಳೀಗ ಉಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸುತ್ತಿದ್ದಾಳೆ."

"ಮನೆ ?"

"ಇದೇನೆ. ಇದಕ್ಕೆ ಹೊಂದಿಕೊಂಡಂತೆ ಪಕ್ಕದಲ್ಲಿರುವ ಕೊಠಡಿಯಲ್ಲಿ ಅವಳು ವಾಸಿಸುತ್ತಾಳೆ. ವಾಸ ಬೇರೆಯಷ್ಟೇ. ಅಡಿಗೆ—ಊಟ ಎಲ್ಲ ಒಟ್ಟಿಗೇ."

"ಎಷ್ಟು ಒಳ್ಳೆಯ ಹೆಣ್ಣು! "

"ಅವಳು ಬಂದಿದ್ದರಿಂದ ನನ್ನ ಹುಡುಗರಿಗೆ ತಾಯಿಯಿಲ್ಲದ ಕೊರತೆ ಮಾಯವಾಯಿತು. ಈ ಮಕ್ಕಳೆಂದರೆ ಅವಳಿಗೆ ಅದೆಷ್ಟು ಪ್ರೇಮವೋ! ಅವಳು ಬರುವ ಮುನ್ನ ಈ ಮಕ್ಕಳನ್ನು ನೋಡಿದರೆ ನನ್ನ ಮಕ್ಕಳೆಂದು ಹೇಳಲೇ ನಾಚಿಗೆಯಾಗುವಂತೆ ನರಪೇತಲಗಳಾಗಿದ್ದವು. ಈಗ ಆ ಮಕ್ಕಳನ್ನು ನೋಡಿದರೆ ಹೆಮ್ಮೆಯಾಗುತ್ತದೆ."

"ಮಕ್ಕಳ ಯೋಗಕ್ಷೇಮವೆಲ್ಲಾ ಅವರದ್ದೇ ಅಲ್ಲವೇ."

"ಹೌದು!....ಬಟ್ಟೆ ಬರೆ ಸ್ನಾನ ಊಟ ಯಾವುದಕ್ಕೂ ಅವಕ್ಕೆ ಕೊರತೆಯಿಲ್ಲ. ಆ ಹುಡುಗರೂ ಅಷ್ಟೆ ಒಂದು ಕ್ಷಣವೂ ಅವಳನ್ನು ಬಿಟ್ಟಿರಲಾರವು! ಸ್ಕೂಲಿಗೆ ಹೋಗುವಾಗ ಗಂಡುಮಕ್ಕಳಿಬ್ಬರನ್ನು ಅವರ ಶಾಲೆಗೆ ಕಳಿಸಿ—ನನ್ನ ಚಿಕ್ಕ ಮಗು ಅವಳಿಗಿನ್ನೂ ಮೂರು ವರುಷ—ಅದನ್ನು ತನ್ನ

ಜೊತೆಯಲ್ಲೇ ಕರೆದುಕೊಂಡು ಹೋಗುತ್ತಾಳೆ."

"ಮಧ್ಯಾಹ್ನ ಮನೆಗೆ ಬರುತ್ತಾರೆಯೇ?"

"ಇಲ್ಲ. ಹತ್ತು ಗಂಟೆಗೆ ಅಡಿಗೆ ಮಾಡಿ, ಹುಡುಗರಿಗೆಲ್ಲಾ ಬಡಿಸಿ—ತಾನೂ ಊಟಮಾಡಿ ಹೋದರೆ ತಿರುಗಿ ಬರುವುದು ಸಾಯಂಕಾಲವೇ. ಮಧ್ಯಾಹ್ನದ ಹೊತ್ತಿಗಾಗಿ ಹುಡುಗರಿಗೆ ಸ್ವಲ್ಪ ತಿಂಡಿ ಕಟ್ಟಿಕೊಂಡು ಹೋಗುತ್ತಾಳೆ. ನನಗೆ ಊಟ ಮುಚ್ಚಿಟ್ಟಿರುತ್ತಾಳೆ."

"ತುಂಬು ವಾತ್ಸಲ್ಯದ ಹೃದಯ ಅದು."

—ಶ್ರೀಧರನ ಕಣ್ಣುಗಳಲ್ಲಿ ಅಭಿಮಾನದಿಂದ ನೀರು ತುಳುಕುತ್ತಿತ್ತು. ವೆಂಕಟೇಶಯ್ಯನ ಕಣ್ಣಿನ ಅಂಚುಗಳೂ ತೇವವಾಗಿದ್ದುವು.

"ಲಲಿತಳೂ ನಾಟಕದ ಹೆಣ್ಣು! ಅನಸೂಯಳೂ ನಾಟಕದ ಹೆಣ್ಣು! ಈ ಎರಡು ಹೃದಯಗಳಲ್ಲಿ ಅದೆಷ್ಟು ಅಂತರವಿದೆ?"

"ಒಂದು ನಿಜವಾದ ಹೂವು, ಮತ್ತೊಂದು ಕಾಗದದ ಹೂವು."

"ಕಾಗದದ ಹೂವೇ ಇಂದು ಮೆರೆದಾಡುತ್ತಿದೆ."

"ಅದು ತಪ್ಪು ಕಲ್ಪನೆ ಶ್ರೀಧರ! ಕಾಗದದ ಹೂವು ಮೇಜಿನ ಮೇಲೆ ಎಷ್ಟು ದಿನವಿದ್ದರೂ ಅದು ಕಾಗದವೇ. ನಿಜವಾದ ಹೂವು ಕ್ಷಣ ಕಾಲ ವಿದ್ದು ಮರೆಯಾದರೂ, ಅದು ತನ್ನ ನೆನಪನ್ನು ಬಿಟ್ಟು ಹೋಗಿರುತ್ತೆ."

"ಪ್ರಕೃತಿ ನಿಯಮವೇ ವಿಚಿತ್ರ. ಒಂದು ಕಡೆ ಪರ್ವತ! ಮತ್ತೊಂದು ಕಡೆ ಪ್ರಪಾತ! ಇವುಗಳ ಮಧ್ಯೆ ಈ ಜೀವಿಗಳು ಸೃಷ್ಟಿಸಲ್ಪಟ್ಟಿವೆ."

* * * *

ಎಲೆ ಹಾಕಿ ಬಡಿಸಿದರು ವೆಂಕಟೇಶಯ್ಯ.

"ನೀವೂ ಕುಳಿತುಕೊಳ್ಳಿ"—ಎಂದ ಶ್ರೀಧರ.

"ನಿನಗೆ ಊಟವಾಗಲಿ."

"ನನಗೆ ಮರೆತೇ ಹೋಗಿತ್ತು ಅನ್ನ ಸಾಕಾಗುತ್ತದೆಯೇ?"

"ಅವಳು ತುಂಬಾ ಬುದ್ಧಿವಂತೆ. ಮಧ್ಯಾಹ್ನದ ಹೊತ್ತು ಒಬ್ಬರಿಗಾಗು ವಷ್ಟು ಹೆಚ್ಚಾಗಿಯೇ ಮಾಡಿರುತ್ತಾಳೆ. ಯಾರಾದರೂ ಬಂದರೆ ಆಯಿತು, ಇಲ್ಲದಿದ್ದರೆ ಇದು ರಾತ್ರಿಗೆ ಅವಳ ಪಾಲು. ನಾನೆಷ್ಟು ಬೇಡಿದರೂ ನನಗಾಗಲೀ ಹುಡುಗರಿಗಾಗಲೀ ಅದನ್ನವಳು ಬಡಿಸುವುದಿಲ್ಲ. ಬಿಸಾಡುವುದೂ

ಇಲ್ಲ...."

"ಆದರ್ಶ ಗೃಹಿಣಿ. ಇದು ಹೇಳಿಕೊಟ್ಟರೆ ಬರುವ ಪಾಠಗಳಲ್ಲ; ಹುಟ್ಟಿನೊಡನೆ ಬರುವ ಸಂಸ್ಕೃತಿ."

ವೆಂಕಟೇಶಯ್ಯನನ್ನೂ ಕುಳಿತುಕೊಳ್ಳುವಂತೆ ಬಲಾತ್ಕರಿಸಿದ ಶ್ರೀಧರ. ಇಬ್ಬರೂ ಊಟಕ್ಕೆ ಕುಳಿತರು. ಊಟದ ನಡುವೆ ಕೇಳಿದ ಶ್ರೀಧರ—

"ಅವರು ಮದುವೆ ಮಾಡಿಕೊಳ್ಳಬಹುದಿತ್ತು."

"ನಾನು ಬಹಳವಾಗಿ ಹೇಳಿದೆ. ಅವಳ ಮನಸ್ಸಿನಲ್ಲಿ ಏನಿದೆಯೋ–ಆ ವಿಚಾರವನ್ನೇ ಎತ್ತಬೇಡಿರೆಂದು ಖಡಾಖಂಡಿತವಾಗಿ ಹೇಳುತ್ತಾಳೆ."

ಶ್ರೀಧರ ಬೆಚ್ಚಿಬಿದ್ದ.

ಊಟ ಸಾಗುತ್ತಿದ್ದಂತೆ ನಾನಾ ಯೋಚನೆಗಳು ಸುಳಿದಾಡಿ ಮಾಯವಾದುವು ಅವನ ಮನಸ್ಸಿನಲ್ಲಿ.

* * * *

ಊಟ ಮುಗಿಯಿತು. ಯಾವ ಯಾವುದೋ ವಿಚಾರಗಳನ್ನು ಕೇಳಿದ ಶ್ರೀಧರ. ತಿಳಿದುಕೊಳ್ಳಬೇಕಾದ ವಿಚಾರ ಬಹಳವಿತ್ತು. ನಾಟಕದ ಕಂಪೆನಿಯವರೆಲ್ಲರನ್ನೂ ತಿಳಿಯುವ ಅಪೇಕ್ಷೆ ಅವನಲ್ಲಿತ್ತು. ಮಾತಿನ ನಡುವೆ ಅವನಿಗೆ ದೊಡ್ಡಣ್ಣನವರ ನೆನಪಾಯಿತು—

"ದೊಡ್ಡಣ್ಣನವರ ಕಂಪೆನಿ ನಿಂತು ಹೋಗಿದ್ದು ಕನ್ನಡದ ದೌರ್ಭಾಗ್ಯ!"

"ಅವರ ಕೊನೆಯ ದಿವಸಗಳನ್ನು ಕೇಳಿದೆಯೇನು?"

"ಅಕಸ್ಮಾತ್ತಾಗಿ ನಿಧನರಾದ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದೆ. ವಿವರ ತಿಳಿಯಲಿಲ್ಲ."

"ದೊಡ್ಡಣ್ಣನವರಂತಹ ಕಲಾವಿದರನ್ನು ಕಳೆದುಕೊಂಡಿದ್ದು ನಮ್ಮ ದುರದೃಷ್ಟ."

"ಪ್ರತಿಭಾವಂತರು! ಉನ್ನತ ಕಲಾವಿದರು! ಮಾತು ಸ್ವಲ್ಪ ಬಿರುಸು ಅಷ್ಟೆ, ಇದು ನನ್ನ ಅನುಭವ"

—ಎಂದ ಶ್ರೀಧರ.

"ಅದು ಅವರ ತಪ್ಪಲ್ಲ. ಸದಾ ನೋವನ್ನನುಭವಿಸಿದ ಮನಸ್ಸು ಅದು. ಜೀವನದ ಕಹಿ ಏಟಿನಿಂದ ಜಡ್ಡುಕಟ್ಟಿ ಹೋಗಿತ್ತು ಅವರ ಹೃದಯ."

"ಅನೇಕ ವರುಷ ಕಂಪೆನಿ ನಡೆಸಿ ಮೆರೆದಾಡಿದರು."

"ದೂರದವರಿಗೆ ಕಾಣುವುದು ಹಾಗೇನೇ. ಅವರು ತಮ್ಮ ಜೀವಮಾನದಲ್ಲಿ ಎಂದೂ ಸುಖವಾಗಿರಲಿಲ್ಲ. ಸುಖವನ್ನು ಕಾಣಲು ಅನ್ಯ ಮಾರ್ಗವನ್ನವಲಂಬಿಸಿ ತಮ್ಮನ್ನು ತಾವು ಮರೆಯಲೆತ್ನಿಸುತ್ತಿದ್ದರು."

"ಹೌದು. ಅವರಿಗೆ ಅದೊಂದು ಅಭ್ಯಾಸವಿತ್ತು. ನನಗೆ ಅವರನ್ನು ಕಂಡ ಮೊದಲ ದಿನವೇ ಅರಿವಾಯಿತು."

"ಅವರ ಮೃತ್ಯುವಿಗೂ ಅದೇ ಕಾರಣವಾಯಿತು. ಕೊನೆ ಕೊನೆಗೆ ಅದನ್ನು ಬಿಟ್ಟಿರಲು ಸಾಧ್ಯವಾಗದೇ, ಅದಕ್ಕೇ ಬಲಿಯಾಗಿ ಹೋದರು. ನಮ್ಮ ಕನ್ನಡ ರಂಗಭೂಮಿಯಲ್ಲಿ ಅವರ ಸ್ಥಳ ಭರ್ತಿಯಾಗಲು ಇನ್ನೂ ಬಹಳ ವರ್ಷಗಳು ಬೇಕು. ಭರ್ತಿಯಾಗದಿದ್ದರೂ ಆಶ್ಚರ್ಯವಲ್ಲ."

—ಸಂಕಟದಿಂದ ಕಣ್ಣೊರೆಸಿಕೊಂಡರು ವೆಂಕಟೇಶಯ್ಯ.

"ಬಹಳ ದಿನಗಳಿಂದ ನಡೆದು ಬರುತ್ತಿದ್ದ ಕಂಪೆನಿಯೊಂದು ಅವರೊಡನೆಯೇ ಮುಳುಗಿ ಹೋಯಿತು. ಕನ್ನಡಮ್ಮನ ಮುಡಿಯ ಹೂವೊಂದು ಕಳಚಿ ಬಿತ್ತು."

—ದುಃಖಿತನಾದ ಶ್ರೀಧರ

* * * *

"ಮುದ್ದೂರಾಯರು ಏನು ಮಾಡುತ್ತಿದ್ದಾರೆ ?"

"ಅವನೂ ಒಬ್ಬ ನತದೃಷ್ಟ. ಇಲ್ಲಿಯೇ ಇದ್ದಾನೆ."

"ಕಂಪೆನಿಗಳಿಗೆ ಹೋಗುತ್ತಿಲ್ಲವೇ ?"

"ಹೇಗೆ ಹೋದಾನು? ಕೆಮ್ಮು ಉಬ್ಬಸ ಅಂಟಿಕೊಂಡುಬಿಟ್ಟಿದೆ. ಪಾರ್ಟು ಮಾಡುವ ಚೈತನ್ಯ ಉಡುಗಿ ಹೋಗಿದೆ."

"ಅವರಿಗಿನ್ನೂ ವಯಸ್ಸು ಮೀರಿಲ್ಲ."

"ಈ ದೇಹದಲ್ಲಿ ಏನಿದೆಯೆಂದು ತಿಳಿದಿದ್ದೀಯೆ. ಬರಿ ಬೆಡಗು ಅಷ್ಟೆ. ನಿತ್ಯವೂ ನಿದ್ರೆಗೆಟ್ಟು ಬೆಂಡಾದ ದೇಹ, ಸ್ವಲ್ಪ ಅಸ್ವಸ್ಥವಾದರೆ ಸಾಕು.... ನಿಷ್ಪ್ರಯೋಜಕವಾಗುತ್ತೆ."

"ಅವರು ಆರೋಗ್ಯವಾಗಿದ್ದರು."

"ನಂತರ ಖಾಯಿಲೆ ಪ್ರಾರಂಭವಾಯಿತು. ಸರಿಯಾಗಿ ಕೆಲಸಮಾಡುವ

ತ್ರಾಣವೇ ಉಳಿಯಲಿಲ್ಲ."

"ಮತ್ತೆ ಜೀವನ!"

"ಅವನ ವಿಚಾರ ಗೊತ್ತಿದೆಯಲ್ಲ ನಿನಗೆ. ನಾಟಕದ ಪ್ರತಿಯೊಂದು ಭಾಗದ ಪರಿಚಯವೂ ಅವನಿಗಿದೆ. ಆಗಾಗ ಹಳ್ಳಿಗಳಿಗೆ ಹೋಗಿ ನಾಟಕ "ಪ್ರಾಕ್ಟೀಸು" ಮಾಡಿಸುತ್ತಾನೆ. ಒಂದು ನಾಟಕ ಕಲಿಸಿದರೆ ನೂರು ನೂರೈವತ್ತು ರೂಪಾಯಿ ಸಿಗುತ್ತದೆ."

"ಅಷ್ಟೇ ಸಾಕಾಗುತ್ತೇನು ?"

"ಎಲ್ಲಿ ಸಾಕು. ಬೀಡಿ ಖರ್ಚು ಕಾಫಿ ಖರ್ಚು ಹೇಗೂ ಮೊದಲಿನಿಂದಲೂ ಇನ್ನೊಬ್ಬರದೇ. ನಾಟಕದ ದಿನ ದೊಡ್ಡ ದೊಡ್ಡ ಕುಳವಾರಿಗಳನ್ನು ಹಿಡಿದು ಅವರ ಮುಖಕ್ಕೆ ಬಣ್ಣ ಬಳಿಯೋದಕ್ಕೂ ಹಿಂದಾಗೊಲ್ಲ. "ಮೇಕಪ್" ಮಾಡ್ತಾ ಮಾಡ್ತಾ ನಿಧಾನವಾಗಿ ತನ್ನ ಕಷ್ಟವನ್ನೆಲ್ಲಾ ಅವರೆದುರು ತೋಡಿಕೊಳ್ಳುತ್ತಾನೆ. ತಮ್ಮ ಮುಖ ಕನ್ನಡಿಯಲ್ಲಿ ಅಂದವಾಗಿ ಕಂಡಾಗ ಅವರಿಗೆ ಇವನ ಮೇಲೆ ಅಭಿಮಾನ ಮೂಡುತ್ತೆ. ಇದೇ ಸಮಯವನ್ನೇ ಕಾದು 'ಭೋಜನಂ ದೇಹಿ ರಾಜೇಂದ್ರ! ....' ಎನ್ನುವಂತೆ ಅವರೆದುರು ಕೈಯೊಡ್ಡುತ್ತಾನೆ. ಹತ್ತು ಸೇರು ಅಕ್ಕಿ ; ನಾಲ್ಕು ಕುಂಬಳಕಾಯಿ, ಎಂಟು ನೀರುಳ್ಳಿಗೆಡ್ಡೆ, ಪಾವು ಹಸಿಮೆಣಸು, ಕೊಟ್ಟದ್ದನ್ನೆಲ್ಲಾ ಬಿಡದೇ ತುಂಬಿಕೊಂಡು ಮನೆಗೆ ಬರುತ್ತಾನೆ. ಇದು ಅವನ ಜೀವನ !...."

"ಅವರ ಸ್ಥಿತಿ ನೋಡಿದರೆ ಪಾಪ! ಎನ್ನಿಸುತ್ತೆ. ಅವರ ನಡತೆ ನೆನೆಸಿಕೊಂಡರೆ ಸಿಟ್ಟುಬರುತ್ತೆ."

"ಅತಿ ಒಳ್ಳೆಯವರು ಈ ಪ್ರಪಂಚದಲ್ಲಿ ಯಾರೂ ಇಲ್ಲ ಶ್ರೀಧರ ! ಎಲ್ಲರಲ್ಲೂ ಒಂದಲ್ಲ ಒಂದು ಕುಂದು ಇದ್ದೇ ಇದೆ ಗುಲುಗುಂಜಿಯ ಮೇಲಿನ ಕಪ್ಪಿನಂತೆ."

"ನಾನು ಕರೆದರೆ ಕಂಪೆನಿಗೆ ಬರುವುದಿಲ್ಲವೇ."

"ಅಷ್ಟು ದೂರ ಪ್ರಯಾಣ ಮಾಡುವ ಶಕ್ತಿಯೇ ಅವನಿಗಿಲ್ಲ. ರಾತ್ರಿ ....ಥಂಡಿಯಲ್ಲಿ ನಿದ್ರೆಗೆಟ್ಟರೆ ಮರುದಿನವೇ ಮಲಗಿಬಿಡುತ್ತಾನೆ."

"ಕೈಲಾಗದ ಸಮಯದಲ್ಲಿ ಸಹಾಯವಾಗುವಂತೆ ವಿರಾಮವೇತನವಿಲ್ಲ. ಆಪದ್ಧನವೂ ಇಲ್ಲ. ದುಡಿಮೆಯ ದಿನ ಕಳೆಯಿತೆಂದರೆ ನಾಯಿನರಿಗಳ

ಗಿಂತಲೂ ಕಡೆಯಾಗುತ್ತಿದ್ದಾರೆ ನಾಟಕದವರು."

"ಯಾರಿಗೆ ಹೇಳಿಕೊಳ್ಳುವುದು ಇದನ್ನೆಲ್ಲ. ಇರಲಿ. ಮುಂದೊಂದು ದಿನ ಈ ಕಷ್ಟದ ಕಾಲ ಕಳೆದು ಸುಖದ ದಿನ ಬರುತ್ತೆಂದು ನಿರೀಕ್ಷಿಸೋಣ."

"ಅದರಲ್ಲಿ ನನಗೆ ನಂಬಿಕೆಯಿಲ್ಲ."

"ಮನುಷ್ಯ ಆಶಾವಾದಿಯಾಗಿರಬೇಕು. ಇಂದಿದ್ದಂತೆ ನಾಳೆ ಇರುವುದಿಲ್ಲ. ಈ ತೊಡಕುಗಳು ಪರಿಹಾರವಾಗಿ ನಮ್ಮ ರಂಗಭೂಮಿಯೂ ಪುನರುಜ್ಜೀವನಗೊಂಡು ಬೆಳಗುವ ಕಾಲವೊಂದು ಬಂದೇ ಬರುತ್ತದೆ. ಸಂಕೀರ್ಣ ಕಾಲಚಕ್ರದಲ್ಲಿ ಇಂದು ರಂಗಭೂಮಿ ಕೆಳಗೆ ಬಿದ್ದಿದೆ. ನಾಳೆ ಮೇಲೆ ಬರಲೇಬೇಕು."

* * * *

ಮಾತು ಆಡಿದಷ್ಟೂ ಬೆಳೆಯುತ್ತಿತ್ತು. ವೆಂಕಟೇಶಯ್ಯ ಅಂಗಡಿಗೆ ಹಿಂದಿರುಗಬೇಕಿತ್ತು.

"ನಿನಗೆ ಆಯಾಸವಾಗಿರಬಹುದು, ಮಲಗಿಕೊಂಡುಬಿಡು. ನಾನು ಅಂಗಡಿಗೆ ಹೋಗಿ ಬರುತ್ತೇನೆ."

—ಎಂದರು ವೆಂಕಟೇಶಯ್ಯ.

ಶ್ರೀಧರ ಬಹಳ ಬಳಲಿದ್ದ. ಮಲಗಿದರೆ ಸಾಕೆನ್ನುವಂತಾಗಿತ್ತು—

"ನೀವು ಬರುವುದು ಬಹಳ ಹೊತ್ತಾಗುತ್ತೆ. ನಾನೂ ಬಂದುಬಿಡುತ್ತೇನೆ. ಹೋಟೆಲಿನಲ್ಲೇ ಮಲಗುತ್ತೇನೆ."

"ಮತ್ತೇಕೆ ಹೋಟೆಲು; ನಿನ್ನ ಪದಾರ್ಥಗಳನ್ನೂ ತರಿಸಿಬಿಡು."

"ನಾನು ಹೆಚ್ಚು ದಿನ ಇರುವಂತಿಲ್ಲ ಬೇಗ ಹೊರಡಬೇಕು."

"ನಾಲ್ಕು ದಿನ ಇದ್ದು ಹೋಗದಿದ್ದರೆ ಬಿಡುವವರು ಬೇಕಲ್ಲ. ಈಗೇಕೆ ಮಾತು.ಮಲಗಿಕೋ ಸುಮ್ಮನೆ. ಬೇಕಾದರೆ ನನ್ನ ಹಾಸಿಗೆಯಿದೆ ಬಿಡಿಸಿಕೋ."

ವೆಂಕಟೇಶಯ್ಯ ಮನೆಯ ಬೀಗದ ಕೈಯನ್ನು ಶ್ರೀಧರನ ಕೈಗಿತ್ತು ಬಾಗಿಲು ಸರಿದುಕೊಂಡು ಹೊರಟುಹೋದರು.

ಶ್ರೀಧರ ಚಾಪೆಯ ಮೇಲೆ ಉರುಡಿಕೊಂಡ. ಹೆಗಡೆಗೆ ಏನು ಉತ್ತರ ಹೇಳುವುದೆಂದು ಮನಸ್ಸು ಹೊಯ್ದಾಡುತ್ತಿತ್ತು.

ಬಳಲಿದ ದೇಹ ವಿಶ್ರಾಂತಿಯನ್ನು ಬಯಸಿತು. ನಿದ್ರೆ ಹತ್ತಿತ್ತು.

## ೪೦

ಸಾಯಂಕಾಲ ಹುಡುಗರೊಂದಿಗೆ ಮನೆಗೆ ಹಿಂದಿರುಗಿದಳು ಲಲಿತ. ಬಾಗಿಲು ಸರಿದಂತಿತ್ತು:

ವೆಂಕಟೇಶಯ್ಯ ಬಂದಿರಬಹುದೇ? ಅಂಗಡಿಯಿಂದ ಇಷ್ಟು ಬೇಗ ಅವರೆಂದೂ ಬಂದಿಲ್ಲ. ಮತ್ತೆ ಯಾರಿರಬಹುದು?

ಅನುಮಾನದಿಂದ ಬಾಗಿಲು ಓರೆಮಾಡಿ ಒಳಗೆ ಬಂದಳು. ಶ್ರೀಧರ ಗೋಡೆಯ ಕಡೆ ತಿರುಗಿಕೊಂಡು ಮಲಗಿದ್ದ. ಗುರುತು ಸಿಗಲಿಲ್ಲ. ಮತ್ತೂ ಸಮೀಪಕ್ಕೆ ಬಂದು ನೋಡಿದಳು.

ಶ್ರೀಧರ....

ಸಟ್ಟನೆ ಎರಡು ಹೆಜ್ಜೆ ಹಿಂದಿಟ್ಟಳು.

ಹಿಂದುಗಡೆಯಿಂದ ಬಂದ ಹುಡುಗರು ಗಲಾಟೆ ಮಾಡುತ್ತಾ ಒಳಗೆ ನುಗ್ಗಿದರು.

"ಶ್!...." ಎಂದು ಬಾಯಿನ ಮೇಲೆ ಬೆರಳಿಟ್ಟು ಸೂಚಿಸಿದಳು ಲಲಿತ. ಶಿಸ್ತಿನ ಸಿಪಾಯಿಗಳಂತೆ ಹುಡುಗರು ಸ್ತಬ್ಧರಾದರು.

ಆದರೂ ಈ ಗಲಾಟೆಯಲ್ಲಿ ಎಚ್ಚರವಾಯಿತು ಶ್ರೀಧರನಿಗೆ. ರಾತ್ರಿ ನಿದ್ರೆಯಿಲ್ಲದ ದೂರ ಪ್ರಯಾಣದಿಂದ ಇಷ್ಟು ಹೊತ್ತೂ ಮಲಗಿದ ಪರಿವೆಯೇ ಇರಲಿಲ್ಲ ಅವನಿಗೆ. ಕಣ್ಣುಬಿಟ್ಟು ನೋಡಿದ.

ಹುಡುಗರು ಹೊರಟುಹೋಗಿದ್ದರು. ಲಲಿತ ಪುನಃ ಬಾಗಿಲು ಸರಿದುಕೊಂಡು ಹೊರಗೆ ದಾಟಿದ್ದಳು.

ಎದ್ದು ಕುಳಿತ ಶ್ರೀಧರ.

ಹುಡುಗರು ಬಂದಿರಬೇಕು! ಲಲಿತಳೂ ಬಂದಿರಬೇಕು! ಮತ್ತೇಕೆ ಹೊರಟುಹೋದರು?

ಶ್ರೀಧರ ಹೊರಗೆ ಬಂದ. ಮನೆಗೇ ಹೊಂದಿಕೊಂಡಂತಿದ್ದ ಪಕ್ಕದ ಕೊಠಡಿಯ ಬಾಗಿಲಿನಲ್ಲಿ ಹುಡುಗರು ನಿಂತಿದ್ದರು, ಕುತೂಹಲದಿಂದ ಶ್ರೀಧರನನ್ನೇ ನೋಡುತ್ತಾ.

ಶ್ರೀಧರ ನಲ್ಲಿಯ ಬಳಿ ಹೋದ. ಮುಖ ತೊಳೆದ. ಪುನಃ ಬಂದು

ಚಾಪೆಯ ಮೇಲೆ ಕುಳಿತ.

ಲಲಿತ ಬರಲಿಲ್ಲ. ನಾನು ಎದ್ದಿರುವುದು ಗೊತ್ತಾಗಲಿಲ್ಲವೇ? ಅಥವಾ ನನ್ನ ಮೇಲೆ ಕೋಪವೇ? ನಾನೇನು ಮಾಡಲು ಸಾಧ್ಯವಿತ್ತು? ಬಹುಶಃ ನಾಚಿಗೆಯಾಗಿರಬೇಕು!

ನಾನೇ ಹೋಗಿ ಮಾತನಾಡಿಸಲೇ?

ಎಂಥ ಅಕಾರ್ಯವಾಯಿತು! ಮಲಗದೇ ವೆಂಕಟೇಶಯ್ಯನೊಡನೆ ಹೊರಟುಹೋಗಿ ರಾತ್ರಿ ಅವನೊಡನೆ ಬಂದಿದ್ದರೆ ಈ ಯಾವ ತಾಪತ್ರಯವೂ ಇರಲಿಲ್ಲ.

ಏನೇ ಆಗಲಿ ನಾನೇ ಹೋಗಿ ಮಾತನಾಡಿಸಿ ಬಿಡುತ್ತೇನೆ.

ಶ್ರೀಧರ ಲಲಿತಳ ಕೊಠಡಿಯ ಬಾಗಿಲಿಗೆ ಹೋದ. ಸ್ವಲ್ಪ ಹೊತ್ತು ಹೊರಗಡೆ ನಿಂತ. ಲಲಿತ "ಬನ್ನಿ" ಎನ್ನಲೂ ಇಲ್ಲ. "ಹೋಗಿ" ಎನ್ನಲೂ ಇಲ್ಲ. ಸುಮ್ಮನೆ ನಿಂತುಬಿಟ್ಟಿದ್ದಳು.

"ಒಳಗೆ ಬರಬಹುದೇ?"

—ಸಂಕೋಚದಿಂದ ಕೇಳಿದ ಶ್ರೀಧರ. ಈ ಪ್ರಶ್ನೆಯನ್ನು ನಿರೀಕ್ಷಿಸಿರಲಿಲ್ಲ ಲಲಿತ.

"ಭಯವಾಗುವುದೇನು?"—ಅವಳೆಂದಳು.

ಈ ಉತ್ತರವನ್ನೂ ನಿರೀಕ್ಷಿಸಿರಲಿಲ್ಲ ಶ್ರೀಧರ.

"ಭಯವೇಕೆ?"

"ಮತ್ತೆ ಈ ಪ್ರಶ್ನೆ ಏಕೆ?"

"ಕೇಳಿದ್ದು ತಪ್ಪಾಯಿತೇ?"

"ತಪ್ಪು ಒಪ್ಪುಗಳನ್ನು ತಿದ್ದಲು ನಾನು ಯಾರು?"

ತೇವವಾಗಿದ್ದುವು ಅವಳ ಕಣ್ಣುಗಳು. ಅಪರಾಧಿಯಂತೆ ಒಳಗೆ ದಾಟಿದ ಶ್ರೀಧರ.

ಲಲಿತ ಚಾಪೆಯನ್ನು ಬಿಡಿಸಿದಳು. ಕುಳಿತುಕೊಂಡು ಸುತ್ತಲೂ ನೋಡಿದ ಶ್ರೀಧರ. ಕೊಠಡಿ ಚಿಕ್ಕದಾಗಿದ್ದರೂ ಯಾವ ಹೆಚ್ಚಿನ ಸಲಕರಣೆಗಳೂ ಇಲ್ಲದೇ ಬರಿದಾಗಿತ್ತು.

ಒಂದು ಟ್ರಂಕು, ಮೂರು ನಾಲ್ಕು ಹಾಸಿಗೆ, ಚಾಪೆಗಳು ಹೊರತಾಗಿ

ಮತ್ತೇನೂ ಇರಲಿಲ್ಲ.

"ಯಾವಾಗ ಬಂದಿರಿ ?"—ಲಲಿತ.

"ಬೆಳಗ್ಗೆ."

"ಊಟ !"

"ಇಲ್ಲಿಯೇ ಮಾಡಿದೆ. ವೆಂಕಟೇಶಯ್ಯ ಅಂಗಡಿಗೆ ಹೋದರು, ನಾನು ಮಲಗಿಕೊಂಡೆ. ಸಾಯಂಕಾಲವಾದದ್ದೇ ಗೊತ್ತಾಗಲಿಲ್ಲ."

"ವಾಕಿಂಗ್ ಹೋಗೋ ಕಾಲ ಆಗಿದ್ರೆ ಸಂಜೆಗೆ ಎಚ್ಚರವಾಗ್ತಾ ಇತ್ತು."

"ಈಗ ಗದ್ದೆ ಹೂಡೋ ಕಾಲ ಬಂದಿದೆ."

—ನಕ್ಕು ಹೇಳಿದ ಶ್ರೀಧರ.

"ಸುಖವಾಗಿದ್ದೀರಲ್ಲ, ಯಾವ ಕೆಲಸ ಆದರೇನು ?"

ಸ್ವಲ್ಪ ಹೊತ್ತು ಇಬ್ಬರಿಗೂ ಮಾತು ಒದಗಲಿಲ್ಲ. ಪ್ರಯತ್ನದಿಂದ ಮಾತನಾಡಬೇಕಾಯಿತು ಶ್ರೀಧರ—

"ಇದೇನು, ಇಷ್ಟು ಹಾಸಿಗೆ ಇಟ್ಟಿದ್ದೀರಲ್ಲ ಇಲ್ಲಿ ?"

"ಈ ಹುಡುಗರೆಲ್ಲ ಇಲ್ಲಿಯೇ ಮಲಗುತ್ತಾರೆ."

ಬಾಗಿಲಿನಲ್ಲಿ ನಿಂತ ಹುಡುಗರ ಕಡೆ ಅವನ ದೃಷ್ಟಿ ಹರಿಯಿತು.

ಅವರ ಬಗೆಗಣ್ಣಿನ ನೋಟ! ಶುಭ್ರವದನ! ಅಚ್ಚುಕಟ್ಟಾದ ತೊಡಿಗೆ! ಮುಗ್ಧಮನೋಭಾವ!....ಶ್ರೀಧರನನ್ನು ಆಕರ್ಷಿಸಿದುವು—

"ಈ ಮಕ್ಕಳನ್ನು ಕಂಡಾಗ ಹುಲುಸಾಗಿ ಬೆಳೆದ ಪೈರನ್ನು ನೋಡಿದಷ್ಟು ಆನಂದವಾಗುತ್ತಿದೆ ನನಗೆ. ಅಷ್ಟು ಚೆನ್ನಾಗಿ ನೋಡಿಕೊಂಡಿದ್ದೀರಿ ನೀವು. ನಮ್ಮಲ್ಲೂ ಕೆಲವರು ಹೆಂಗಸರಿದ್ದಾರೆ, ಇವರಿಗೆ ಮಕ್ಕಳನ್ನು ಹೆರುವುದು ಮಾತ್ರ ಗೊತ್ತು. ನಂತರ ಶಿವನೇ ಕಾಪಾಡಬೇಕು. ಅವುಗಳ ಮುಖವನ್ನು ನೋಡಲೂ ಅಸಹ್ಯವಾಗಿರುತ್ತೆ."

ಅಭಿಮಾನದ ಮುಗುಳ್ನಗೆ ಹೊರಟಿತು ಲಲಿತಳ ಮುಖದಲ್ಲಿ.

ವೆಂಕಟೇಶಯ್ಯನ ಮೂರು ವರ್ಷದ ಚಿಕ್ಕ ಹುಡುಗಿಯನ್ನು ಕುರಿತು ಹೇಳಿದ ಶ್ರೀಧರ—

"ಇಲ್ಲಿ ಬಾ....ಮ್ಮ."

ಇಷ್ಟೂ ಹೊತ್ತು ಬೆರಗುಗಣ್ಣಿಂದ ಆಗಂತುಕನನ್ನು ನೋಡುತ್ತಿದ್ದ ಅವಳ ಮುದ್ದು ಮುಖ ಅರಳಿತು. ಕೂಡಲೇ ಮುಂದೆ ಬಂದಳು.

ಮತ್ತೇನು ತೋರಿತೋ ಏನೋ ಅಲ್ಲಿಯೇ ನಿಂತಳು. ಅನುಮಾನ ದಿಂದ ಲಲಿತಳ ಮುಖ ನೋಡಿದಳು.

"ಹೋಗಮ್ಮ...." —ಎಂದಳು ಲಲಿತ ನಗುತ್ತಾ.

ಅವಳ ಧ್ವನಿಯಲ್ಲಿನ ವಾತ್ಸಲ್ಯ ಶ್ರೀಧರನ ಹೃದಯಕ್ಕೂ ಹತ್ತಿರ ದ್ದಾಗಿತ್ತು.

ಮಗು ಓಡಿ ಬಂದಳು. ಮಗುವನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡ ಶ್ರೀಧರ. ಹಣೆಯನ್ನು ಮುಸುಕಿಕೊಂಡ ಅವಳ ಮುಂಗುರು ಳನ್ನು ಹಿಂದಕ್ಕೆ ಸರಿಸುತ್ತಾ....ಅವಳ ಹಾಲ್ಗೆನ್ನೆಗಳನ್ನು ತನ್ನ ಕೆನ್ನೆಗಳಿಗೆ ಒತ್ತಿಕೊಂಡ. ಮಮತೆಯಿಂದ ಮೈದಡವುತ್ತಾ ಕೇಳಿದ ಶ್ರೀಧರ—

"ನಿನ್ನ ಹೆಸರೇನಮ್ಮಾ?"

"ಜಾಲಾ."

"ಜ್ವಾಲಾ! ಅನ್ನಮ್ಮ!" ಎಂದು ತಿದ್ದಿ ಹೇಳಿದಳು ಲಲಿತ.

"ಜ್ವಾಲಾ!....ಎಷ್ಟು ಚೆನ್ನಾಗಿದೆ ನಿನ್ನ ಹೆಸರು! ನಿನಗೆ ಯಾರಮ್ಮ ಈ ಹೆಸರಿಟ್ಟವರು?"

"ಅಕ್ಕ! ...."—ಎಂದು ಲಲಿತಳ ಕಡೆ ತಿರುಗಿದಳು ಜ್ವಾಲಾ.

ಶ್ರೀಧರ ಲಲಿತಳನ್ನು ನೋಡಿದ—

"ನೀವು ಬರುವ ಮುಂಚೆ ಈ ಮಗುವಿಗೆ ಹೆಸರಿಟ್ಟಿರಲಿಲ್ಲವೇ?"

"ಇಟ್ಟಿದ್ದರು."

"ಏನಂತ?"

"ಬೇಬಿ....ಅಂತ."

"ಆಸ್ಪತ್ರೆಯ ದಾದಿಯರು ಇಡುವ ಹೆಸರು ಅದು."

ಮುಗುಳು ನಕ್ಕಳು ಲಲಿತ—

"ಮಗುವಿನೊಡನೆ ಮಾತನಾಡುತ್ತಿರಿ. ಈಗ ಬರುತ್ತೇನೆ"—ಎಂದು ಹೊರಗೆ ಹೊರಟುಹೋದಳು.

ಶ್ರೀಧರ ಉಳಿದಿಬ್ಬರು ಹುಡುಗರನ್ನೂ ಬಳಿ ಕೂರಿಸಿಕೊಂಡು ಮಾತ

ನಾಡಿಸಿದ.

ಲಲಿತ ಕಾಫಿ ಮಾಡಿ ತಂದುಕೊಟ್ಟಳು.

"ನೀವು ಬದಲಾಯಿಸಿಲ್ಲ. ಅಂದು ಇದ್ದ ಹಾಗೇ ಇದ್ದೀರಿ."

—ಎಂದ ಶ್ರೀಧರ ಕಾಫಿಯನ್ನು ಹೀರುತ್ತಾ.

"ಗಂಡಸರಷ್ಟು ಬೇಗ ಹೆಂಗಸರು ಬದಲಾಯಿಸೊಲ್ಲ."

—ಎಂದಳು ಲಲಿತ. ಈ ಮಾತು ಅವನನ್ನಿರಿಯಿತು.

"ನನ್ನ ಮೇಲೆ ನಿಮಗೆ ಬೇಸರವೇ?"

"ಏಕೆ?"

"ನಾನೊಂದು ತಪ್ಪು ಮಾಡಿದೆ. ಕೆಲವು ವಿಚಾರಗಳನ್ನು ಸ್ಪಷ್ಟವಾಗಿ ತಿಳಿಯಬೇಕಾಗಿತ್ತು."

"ಹಿಂದಿನ ವಿಚಾರಗಳನ್ನು ಈಗ ಜ್ಞಾಪಿಸಬೇಡಿ. ಆ ಕಾಲ ಕಳೆದು ಹೋಯಿತು. ಈಗ ಅದನ್ನೆಲ್ಲಾ ಯೋಚಿಸಲೇಬಾರದು."

"ನಿಮಗೆ ತೊಂದರೆಯಾಯಿತೇ?"

"ನನಗೇನು ತೊಂದರೆ? ನಾನೀಗ ಸುಖವಾಗಿದ್ದೇನೆ."

"ಹೊರಗಡೆ ಹಾಗೆ ಹೇಳುತ್ತಿದ್ದೀರಿ."

"ಮನಸ್ಸಿನ ಮುಂದೆ ಯಾವುದೂ ಇಲ್ಲ. ನನಗೀಗ ಯಾವುದಕ್ಕೆ ಕಡಿಮೆಯಾಗಿದೆಯೆಂದು ಯೋಚಿಸಬೇಕು? ತಂದೆಯಂತೆ ಮಮತೆಯಿಂದ ಆಶ್ರಯಕೊಟ್ಟಿದ್ದಾರೆ ವೆಂಕಟೇಶಯ್ಯ. ಮುತ್ತಿನಂತಹ ಈ ಮಕ್ಕಳನ್ನು ಕೈಮೇಲಿಟ್ಟಿದ್ದಾರೆ. ಇದೇ ನನ್ನ ಮನೆ! ಇದೇ ನನ್ನ ಸಂಸಾರ!

ಪ್ರಪಂಚವನ್ನೇ ಮರೆಸುವ ಶಕ್ತಿಯಿದೆ ಈ ಮುದ್ದು ಮುಖಗಳಿಗೆ. ಶಾಲೆಗೆ ಹೋದಾಗ ಆ ಎಳೆ ಕಂದಮ್ಮಗಳೆಲ್ಲಾ ನನ್ನವರೇ ಎನ್ನುವಷ್ಟು ಅಭಿಮಾನ ಬರುತ್ತಿದೆ."

"ನಿಮ್ಮದೊಂದು ಬೃಹತ್ಸಂಸಾರ! ನಿಮ್ಮಂತಹ ಹೆಂಗಸರು ನಮ್ಮಲ್ಲಿ ವಿರಳ. ಮಾಡಿತೋರಿಸುವವರಿಗಿಂತಾ ಆಡಿತೋರಿಸುವವರೇ ಹೆಚ್ಚಾಗಿದ್ದಾರೆ ಈಗ."

ಇಷ್ಟು ಹೊತ್ತೂ ಮಾತಿನಲ್ಲಿದ್ದ ಬಿಕ್ಕಟ್ಟು ಈಗ ಸಡಿಲಾಯಿತು. ಇಬ್ಬರ ಹೃದಯಗಳೂ ಹಗುರಾಗಿ ಹಿಂದಿನಂತೆ ಸರಳವಾಗಿ ಮಾತುಗಳು

ಹೊರಟೆವು.

*　　*　　*　　*

"ನೀವು ಇಲ್ಲೇ ಇರುತ್ತೀರಾ, ನಾನು ಮಾರ್ಕೆಟ್ಟಿಗೆ ಹೋಗಿ ಬರುತ್ತೇನೆ. ಆಮೇಲಿಂದ ಕತ್ತಲಾಗಿ ಬಿಡುತ್ತೆ."

"ಇಲ್ಲಿದ್ದು ನಾನೇನು ಮಾಡಲಿ?"

"ನೀವು ಇರುವುದಾದಲ್ಲಿ ಈ ಹುಡುಗರನ್ನು ಬಿಟ್ಟು ಹೋಗುತ್ತೇನೆ. ನನಗೆ ಮಾರ್ಕೆಟ್ಟಿನಲ್ಲಿ ಕೆಲಸವಿದೆ."

ಹಿಂದಿನ ಕಾಲವಾಗಿದ್ದರೆ ನಾನೂ ಬರುತ್ತೇನೆ ಎಂದು ಹೊರಡುತ್ತಿದ್ದ ಶ್ರೀಧರ. "ಬನ್ನಿ" ಎಂದು ಮೊದಲೇ ಕರೆಯುತ್ತಿದ್ದಳು ಲಲಿತ.

"ನೀವು ಹುಡುಗರನ್ನು ಕರೆದುಕೊಂಡು ಹೋಗಿ. ನಾನು ವೆಂಕಟೇಶಯ್ಯನವರಿದ್ದಲ್ಲಿಗೆ ಹೋಗುತ್ತೇನೆ."

"ರಾತ್ರಿ ಊಟಕ್ಕೆ ಬರಬೇಕು."

"ಬರದಿದ್ದರೆ ಅವರು ಬಿಡಬೇಕಲ್ಲ!"

"ಬರದಿದ್ದರೆ ನಾನೂ ಸುಮ್ಮನಿರುವುದಿಲ್ಲ."

"ಬರದೇ ಇರೋದಕ್ಕೆ ನನಗೂ ಸಾಧ್ಯವಿಲ್ಲ."

"ನೀವು ಬೇಡ ಬೇಡವೆಂದರೂ ನಾನಾಗಿಯೇ ಬಂದು ಎಲೆಯ ಮುಂದೆ ಕುಳಿತು ಬಿಡುತ್ತೇನೆ."

ಬಹಳ ದಿವಸಗಳನಂತರ ಮೊದಲಿನಂತೆ ನಕ್ಕಳು ಲಲಿತ.

# ೪೧

ಕತ್ತಲು ಕತ್ತಲಾಗುತ್ತ ಬಂದಿತ್ತು. ರಸ್ತೆಯ ದೀಪಗಳು ಹತ್ತಿಕೊಂಡಿದ್ದುವು. ವೆಂಕಟೇಶಯ್ಯನ ಅಂಗಡಿಯ ಕಡೆ ಹೋಗುವಾಗ ಶ್ರೀಧರನಿಗೆ "ವಿನೋದ" ಪತ್ರಿಕೆಯ ನೆನಪಾಯಿತು.

ಕೆಲಸ ಕೇಳುವುದಕ್ಕೆ ಹೋಗಿ, ಸಂಪಾದಕರಿಂದ ಮುಖಭಂಗ ಮಾಡಿಸಿಕೊಂಡ ನೆನಪಾಯಿತು. ನಾಳೆ ತಾನು ಇರುವುದಿಲ್ಲ. ಅವರೀಗ ಹೇಗಿದ್ದಾರೋ ನೋಡಿ ಮಾತನಾಡಿಸಿಕೊಂಡು ಹೋಗೋಣವೆಂದು ಪತ್ರಿಕೆಯ ಆಫೀಸು ಇದ್ದ ಬೀದಿಯ ಕಡೆ ತಿರುಗಿದ.

ಅದೇ ಬೀದಿ, ಅದೇ ಮನೆ, ಅದೇ ಮಹಡಿ, ಎಲ್ಲವೂ ಹಾಗೆಯೇ ಇದೆ. ಆದರೆ ಮನೆಯೆದುರು ಮಹಡಿಯ ಕಟಕಟೆಯ ಮೇಲೆ ನೇತಾಡುತ್ತಿದ್ದ "ವಿನೋದ—ಸಚಿತ್ರ ಸಾಪ್ತಾಹಿಕ"ದ–ಬೋರ್ಡು ಮಾಯವಾಗಿತ್ತು.

ಅದರ ಗತಿ ಮುಗಿದಿರಬೇಕು. ಅಂದೇ ಅರವತ್ತುಮೂರು ಜನ ಚಂದಾದಾರರಿದ್ದರು. ಆ ಮೇಲೆ ನಲವತ್ತುಮೂರು ಆಗಿರಬೇಕು—ಅಂದುಕೊಂಡ ಶ್ರೀಧರ.

ಗಲ್ಲಿಯಿಂದ ತೂರಿ ಮಹಡಿಯ ಮೇಲೆ ನೋಡಿದ. ಬಾಗಿಲು ಬೀಗ ಹಾಕಿತ್ತು.

ಕೆಳಗಿಳಿದು ಬಂದು ಎದುರಿನಿಂದ ಮನೆಯನ್ನು ಪ್ರವೇಶಿಸಿದ.

ಆ ವಿಶಾಲವಾದ ನಡುಮನೆ ಮೊದಲಿಗಿಂತಲೂ ಭಯಂಕರವಾಗಿತ್ತು. ದೀಪವಿಲ್ಲದೆ ಬಾಗಿಲು ದಾಟಲೂ ಭಯವಾಗುವಂತಿತ್ತು.

ಇಲ್ಲಿ ನಿಂತು ಕೂಗಿದರೆ ಹೇಗೋ ಎಂದು ಸ್ವಲ್ಪ ಹೊತ್ತು ನಿರೀಕ್ಷಿಸಿ ಒಳಗೆ ಕಾಲಿಟ್ಟ. ಶ್ರೀಧರನ ಹೆಜ್ಜೆಯ ಸಪ್ಪಳ ಒಳಗೆ ಕೇಳಿರಬೇಕು—

"ಯಾರಪ್ಪ ಅದು?"

—ಪುನಃ ಹಿಂದೆ ಕೇಳಿದ್ದೇ ಧ್ವನಿ. ಹಿಂದಿನಷ್ಟು ಸ್ಫುಟವಾಗಿರಲಿಲ್ಲ. ಮತ್ತೂ ಕ್ಷೀಣಿಸಿತ್ತು ಈ ಗೂರಲು ಸ್ವರ.

"ವಿನೋದ ಪತ್ರಿಕೆ ಆಫೀಸು ಈಗ ಎಲ್ಲಿದೆ ಅಂತ ಗೊತ್ತಿದೆಯೆ?"

"ಬೆಂಕಿ ಹಾಕಿತು ಅವನ ಆಫೀಸಿಗೆ. ಎರಡು ವರ್ಷದ ಬಾಡಿಗೇನೂ

ಚಕ್ಕರ್ ಹಾಕಿ ಓಡಿಹೋದ. ಮಹಡಿ ಮೇಲೆ ಹಳೆ ಕಾಗದದ ಕಂತೆ ಕೆಲ ವಿದೆ....ಜಪ್ತಿ ಮಾಡಿದ್ರೆ ಇರ್ಲಿ ಅಂತ ಬಿಟ್ಟು ಹೋಗಿದ್ದಾನೆ ಮನೆ ಹಾಳ!"

ಮತ್ತೆ ಮಾತಾಡುವ ಅಗತ್ಯವಿರಲಿಲ್ಲ. ಹೋದ ದಾರಿಗೆ ಸುಂಕ ಕೊಡದೇ ಹೊರಟುಬಂದ.

ಕಲಾಸೇವೆಗಾಗಿಯೇ ಮೀಸಲಾದ, "ವಿನೋದ! ....ಸಚಿತ್ರ ಸಾಪ್ತಾಹಿಕ" ಮರೆಯಾಗಿ ಬಹಳ ದಿನಗಳಾಗಿ ಹೋಗಿತ್ತು.

# ೪೨

"ನಿದ್ರೆ ಚೆನ್ನಾಗಿ ಬಂತೆ?"

—ಎಂದು ಕೇಳಿದರು ವೆಂಕಟೇಶಯ್ಯ ಶ್ರೀಧರ ಸಮೀಪಿಸಿದಾಗ.

"ಸಾಯಂಕಾಲದವರೆಗೂ ಮಲಗಿಬಿಟ್ಟೆ."

"ಲಲಿತ ಬಂದಿದ್ದಳೇನು?"

"ಹೌದು! ಇಷ್ಟು ಹೊತ್ತು ಮಾತನಾಡುತ್ತಾ ಕುಳಿತಿದ್ದೆವು."

"ಅಲ್ಲಿಗೆ ನನ್ನ ಜವಾಬ್ದಾರಿ ಮುಗಿಯಿತು. ಮುಂದೆಲ್ಲ ಅವಳೇ ನೋಡಿಕೊಳ್ಳುತ್ತಾಳೆ. ನಿನ್ನ ಸಾಮಾನುಗಳನ್ನು ತರಿಸು."

"ಇರುವ ಒಂದು ರಾತ್ರೆಗಾಗಿ ಏಕೆ ತರಬೇಕು. ರೈಲ್ವೆ ಸ್ಟೇಷನ್ನಿಗೂ ಹೋಟಲು ಹತ್ತಿರದಲ್ಲಿದೆ. ರಾತ್ರಿ ಅಲ್ಲೇ ಉಳಿದು ಬೆಳಗ್ಗೆ ಮುಂಚೆ ರೈಲಿಗೆ ಹೊರಟುಬಿಡುತ್ತೇನೆ."

"ಇಷ್ಟು ಬೇಗ ಹೋಗಲು ಬಿಡಬೇಕಲ್ಲ."

"ನಾನು ಬಂದ ಕೆಲಸ ನಡೆಯಲಿಲ್ಲ. ನಡೆಯುವಂತೆಯೂ ಇಲ್ಲ. ಇಲ್ಲಿ ದಿನಗಳೆದರೆ ಅಲ್ಲಿ ದಿನ ಒಂದರ ನಲವತ್ತು ಐವತ್ತು ರೂಪಾಯಿಗಳು ವೃಥಾ ನಷ್ಟ. ನಷ್ಟದ ಕಂಪೆನಿ ವಿಚಾರ ನಿಮಗೆ ತಿಳಿದಿಲ್ಲವೇ?"

"ಅದೇನೋ ನಿಜ. ಹಣ ಹೋಗತೊಡಗಿದರೆ ದಿಕ್ಕಾಪಾಲಾಗಿ ಹರಿದುಹೋಗುತ್ತದೆ."

"ಅದಕ್ಕಾಗಿ ನಾನು ನಾಳೆ ಬೆಳಗ್ಗೆಯೇ ಹೊರಡಬೇಕು. ರಾತ್ರಿಯೇ ಹಿಂದಿರುಗುತ್ತಿದ್ದೆ, ನಿಮಗೆ ಬೇಸರವಾದೀತೆಂದು ಉಳಿದುಕೊಳ್ಳುವ ಮನಸ್ಸು ಮಾಡಿದೆ."

"ರಾತ್ರಿಯಾದರೂ ಉಳಿಯುವ ಮನಸ್ಸು ಮಾಡಿದೆಯಲ್ಲ. ಕಷ್ಟ ಎಲ್ಲರಿಗೂ ಒಂದೆ. ಇದನ್ನೆಲ್ಲಾ ತಲೆ ತೊಳೆದುಕೊಂಡು ವಿರಾಮವಾದಾಗ ಮತ್ತೆ ಬಾ—ಕೆಲವು ದಿನಗಳು ಇದ್ದು ಹೋಗು."

ನಮ್ಮ ನಿಮ್ಮ ಬಂಧನ ಕಡಿಯುವಂತೆಯೇ ಇಲ್ಲ. ನೀವು ನನ್ನನ್ನು ಆಹ್ವಾನಿಸಬೇಕಾದ ಅಗತ್ಯವೇ ಇಲ್ಲ.

"ಬಾ ಮೇಲೆ ಕುಳಿತುಕೋ."

* * * *

ಜನಸಂದಣಿ ದಟ್ಟವಾಗಿತ್ತು. ವ್ಯಾಪಾರವೂ ಬಿರುಸಾಗಿತ್ತು. ಕೆಲಸ ವಿದ್ದೋ ಇಲ್ಲದೆಯೋ ಅಲೆದಾಡುವ ನಾನಾ ರೀತಿಯ ಜನ, ನಡೆ, ನುಡಿಗಳನ್ನು ವೀಕ್ಷಿಸುತ್ತಾ ಕುಳಿತುಕೊಂಡ ಶ್ರೀಧರ. ಗಂಟೆ ಎಂಟರ ಮೇಲಾಯಿತು.

"ಬಾಗಿಲು ಹಾಕುತ್ತೇನೆ ಮನೆಗೆ ಹೋಗೋಣ."

"ಇಷ್ಟು ಬೇಗ ಬಾಗಿಲು ಹಾಕುತ್ತೀರಾ! "

"ವ್ಯಾಪಾರ ನಿತ್ಯ ಇರುವುದೇ. ನೀನು ಬರುವುದೇ ಅಪರೂಪ. ಅದಕ್ಕಾಗಿ ಬೇಗ ಬಾಗಿಲು ಹಾಕುತ್ತೇನೆ."

* * * *

ಮನೆಯ ಬಾಗಿಲು ದಾಟುವಾಗಲೇ ಮೇಲೋಗರದ ಸವಿಗಂಪು ಹೊಡೆಯುತ್ತಿತ್ತು.

ಲಲಿತ ಎಲ್ಲ ಕೆಲಸಗಳನ್ನೂ ಮುಗಿಸಿ, ಪದಾರ್ಥಗಳನ್ನೆಲ್ಲಾ ಅಚ್ಚುಗಟ್ಟಾಗಿ ಬದಿಗಿರಿಸಿ, ಶ್ರೀಧರ ವೆಂಕಟೇಶಯ್ಯನ ಬರವನ್ನೇ ನಿರೀಕ್ಷಿಸುತ್ತಿದ್ದಳು.

"ಹುಡುಗರೆಲ್ಲ ಎಲ್ಲಿ ?"—ಎಂದು ಕೇಳಿದರು ವೆಂಕಟೇಶಯ್ಯ.

"ವಿಪರೀತ ಗಲಾಟೆ ಮಾಡುತ್ತಿದ್ದರು. ಬೇಗ ಊಟಕ್ಕೆ ಬಡಿಸಿದೆ. ಎಲ್ಲ ಮಲಗಿದ್ದಾರೆ." ಲಲಿತಳ ಕಾರ್ಯದಕ್ಷತೆಯನ್ನು ಕಂಡು ವಿಸ್ಮಿತನಾದ ಶ್ರೀಧರ.

"ಕಾಲು ತೊಳೆದುಕೊಂಡು ಬನ್ನಿ ಅಡಿಗೆಯಾಗಿದೆ" ಎಂದಳು ಲಲಿತ.

ವೆಂಕಟೇಶಯ್ಯ ಶ್ರೀಧರ ಕಾಲು ತೊಳೆದುಕೊಂಡು ಬಂದು ಊಟಕ್ಕೆ ಕುಳಿತರು. ಲಲಿತ ಅಕ್ಕರೆಯಿಂದ ಬಡಿಸುತ್ತಿದ್ದಳು. ಆತ್ಮೀಯತೆಯ ಮಾತುಕತೆಗಳ ವಿನಿಮಯದಿಂದ ಸಂಸಾರ ಸ್ವರ್ಗವಾಗಿತ್ತು.

ಬೀನ್ಸ್‌ಕಾಯಿನ ಹುಳಿಯನ್ನ ಅತ್ಯಂತ ಮಧುರವಾಗಿತ್ತು.

"ನಿಮ್ಮ ಹುಳಿಯನ್ನ ನನಗೆ ಅಯ್ಯಂಗಾರರ ಮನೆಯ ಪುಳಿಯೋಗರೆಯ ನೆನಪು ಕೊಡುತ್ತಿದೆ" —ಎಂದ ಶ್ರೀಧರ.

"ಅಯ್ಯಂಗಾರರ ಮನೆಯ ಬಳಕೆ ನಿಮಗಿದೆಯೋ ?"

—ಎಂದು ಕೇಳಿದಳು ಲಲಿತ.

"ನನ್ನ ಆಪ್ತರಲ್ಲಿ ಕೆಲವರು ಅಯ್ಯಂಗಾರರಿದ್ದಾರೆ. ಮರೆಯಲಾರದಂತಹ ಊಟ ಮಾಡಿದ್ದೇನೆ ಅಲ್ಲಿ. ಎಲ್ಲಿ ಹೋದರೂ ನನಗೆ ಅದೇ ನೆನಪು!"

"ಅಷ್ಟು ರುಚಿ ಪುಳಿಯೋಗರೆ!"

—ಲಲಿತ ನಗುತ್ತಾ ಅಂದಳು. ಮತ್ತೆ ಕೇಳಿದಳು—

"ಬೀನ್ಸ್‌ಕಾಯಿ ನಿಮಗೆ ಬಹಳ ಇಷ್ಟ ಅಲ್ಲವೇ?"

"ಹೌದು! ಅದು ನಿಮಗೆ ಹೇಗೆ ಗೊತ್ತು?"

"ನಾಟಕದ ಕಂಪೆನಿಯಲ್ಲಿ, ಭಟ್ಟ ಬದ್ನೆಕಾಯಿ ಹುಳಿ ಮಾಡಿದಾಗ ರೇಗಾಡ್ತಾ ಇದ್ರಿ. 'ಇದನ್ನು ಬಿಟ್ಟು ಬೇರೆ ತರಕಾರೀನೇ ಇಲ್ಲವೇನೋ ಪೇಟೇಲಿ' ಅಂತ ಅವನನ್ನು ಗದರಿಸಿ, ನೀವೇ ಹೋಗಿ ಬೀನ್ಸ್ ಕಾಯಿ ತಂದು ಕೊಡುತ್ತಿದ್ದಿರಿ."

ತನ್ನನ್ನೆಷ್ಟು ಸೂಕ್ಷ್ಮವಾಗಿ ಅರಿತಿದ್ದಾಳೆ ಇವಳು! ತನ್ನ ಪ್ರತಿಯೊಂದು ನಡೆನುಡಿಗಳನ್ನೂ ತಿಳಿದುಕೊಂಡಿದ್ದಾಳೆ!–ಎಂದುಕೊಂಡು ಕೇಳಿದ ಶ್ರೀಧರ–

"ಇದು ಬೀನ್ಸಿನ ಕಾಲವಲ್ಲ."

"ನಿಮಗೆ ಬೀನ್ಸ್‌ಕಾಯಿ ತರೋದೇ ತುಂಬಾ ತಾಪತ್ರಯ ಆಗಿ ಹೋಯಿತು. ಎಲ್ಲೂ ಇರಲಿಲ್ಲ. ಹುಡುಕಿ ಹುಡುಕಿ ಕೊನೆಗೊಂದು ಮೂಲೆಯಲ್ಲಿ ಸ್ವಲ್ಪ ಉಳಿದಿತ್ತು. ನನ್ನ ಅದೃಷ್ಟ! ಅದನ್ನೇ ತೆಗೆದುಕೊಂಡು ಬಂದೆ."

ಕೃತಜ್ಞತೆಯಿಂದ ತುಂಬಿಹೋಯಿತು ಶ್ರೀಧರನ ಹೃದಯ.

ಈ ವಿಶ್ವಾಸಕ್ಕೆ ಪ್ರತಿಯಾಗಿ ನಾನವಳಿಗೆ ಏನು ಮಾಡಿದ್ದೇನೆ? ಏನು ಮಾಡಲು ಸಾಧ್ಯ?

ಏನೂ ಮಾಡಲು ಸಾಧ್ಯವಿಲ್ಲ.

ಬೆಳಕನ್ನು ಕೊಡುವ ಸೂರ್ಯನಂತೆ ಅವಳ ಪ್ರೇಮಮಯ ಹೃದಯ!

ಸೂರ್ಯನ ಉಪಕಾರಕ್ಕೆ ಪ್ರತಿಯಾಗಿ ನಾವೇನು ಮಾಡಬಲ್ಲೆವು?

ಕೃತಜ್ಞತೆಯಿಂದ ನಮಸ್ಕರಿಸಬಲ್ಲೆವು. ಹೌದು ಅಷ್ಟೆ. ಈ ಹೃದಯಕ್ಕೆ ನಮ್ಮ ತಲೆ ಬಾಗಲೇಬೇಕು.

* * * *

ಎಲ್ಲರ ಊಟವಾದನಂತರ ಲಲಿತಳೂ ಊಟಮಾಡಿದಳು. ಕೆಲ ಹೊತ್ತು ಸಂತೋಷವಾಗಿ ಕಾಲ ಕಳೆಯಿತು. ವೆಂಕಟೇಶಯ್ಯ—ಲಲಿತ

ಮನಬಿಚ್ಚಿ ಮಾತನಾಡಿದರು. ಶ್ರೀಧರ ಎಂದ—

"ಇನ್ನು ನಾನು ಹೊರಡುತ್ತೇನೆ, ಬೆಳಗ್ಗೆ ಮುಂಚಿತವಾಗಿ ರೈಲಿಗೆ ಹೋಗಬೇಕು."

"ಕೆಲವು ದಿನ ಇದ್ದು ಹೋಗಿ"—ಎಂದಳು ಲಲಿತ.

"ನನ್ನ ಸ್ಥಿತಿ ನಿಮಗೆ ತಿಳಿದಿದೆ. ಇಷ್ಟು ಹೊತ್ತೂ ಎಲ್ಲ ವಿಚಾರಗಳನ್ನೂ ಹೇಳಿದ್ದೇನೆ. ನಾನು ನಿಂತರೆ ಹೆಗಡೆಗೆ ದ್ರೋಹ ಮಾಡಿದಂತಾಗುತ್ತೆ."

"ಹೊರಡಲಿ ಬಿಡು—ಮತ್ತೆ ಬರುತ್ತಾನೆ."

—ಎಂದರು ವೆಂಕಟೇಶಯ್ಯ.

"ಮನೆಗೆ ಹೋದ ಮೇಲೆ ಮತ್ತೆ ಬರುವುದು ಎಂದೋ? ಸದ್ಯ ಬರುತ್ತೇನೆ ಅಂತ ನಾಟಕದ ಕಂಪೆನಿ ಬಿಟ್ಟು ಹೋದವರು ಇವತ್ತು ನಮ್ಮ ಕಣ್ಣಿಗೆ ಕಂಡಿದ್ದಾರೆ."

—ಎಂದಳು ಲಲಿತ.

"ಅಂದ ಹಾಗೆ ಈಗ ನೆನಪಾಯಿತು. ನಿಮಗೆ ಹೇಳಬೇಕೆಂದು ಬಹಳ ದಿನಗಳಿಂದ ಮನಸ್ಸು ಮಾಡಿದ್ದೆ. ನೀವು "ಸುಖವಿರಾಮ" ಎಂದು ಬರೆದು ಕೊಟ್ಟ ದಿಂಬಿನ ಕವರು, ನನಗೆ ಸುಖವಿರಾಮವನ್ನೇ ಕೊಟ್ಟಿತು."

ತೃಪ್ತಿಯಿಂದ ನಕ್ಕಳು ಲಲಿತ—

"ಮನೆಗೆ ಹೋದ ಮೇಲೆ ನಿಮ್ಮ ಮನೆಯವರಿಗೆ ನನ್ನ ನಮಸ್ಕಾರ ತಿಳಿಸಿ."

"ಆಗಲಿ"—ಎಂದ ಶ್ರೀಧರ.

"ಅರ್ಥವಾಯಿತೇ? ಮನೆಯವರು ಅಂದರೆ."

"ತಿಳಿಯಿತು."

"ಮತ್ತೆ ನೀವು ಬರುವಾಗ ಕರೆದುಕೊಂಡು ಬನ್ನಿ."

"ಖಂಡಿತವಾಗಿ ಕರೆದುಕೊಂಡು ಬರುತ್ತೇನೆ."

"ನೀವಿಬ್ಬರೇ ಅಲ್ಲ."

"ಮತ್ತೆ ಯಾರು ಬರಬೇಕು?"

"ನಿಮ್ಮ ಪುಟ್ಟ ಮಗುವಿನ ಸಹಿತ."

—ಅಕ್ಕರೆಯಿಂದ ಹೇಳಿದಳು ಲಲಿತ.

"ಮುಂದಾಗುವ ಬಗ್ಗೆ ಈಗಲೇ ಸೂಚನೆ ಕೊಡುತ್ತಿದ್ದೀಯೆ."

—ನಕ್ಕು ನುಡಿದರು ವೆಂಕಟೇಶಯ್ಯ.

* * * *

ಶ್ರೀಧರ ಹೋಗುತ್ತಿರುವುದನ್ನೇ ನೋಡುತ್ತಾ ಮನೆಯೆದುರೇ ನಿಂತಿದ್ದರು ವೆಂಕಟೇಶಯ್ಯ—ಲಲಿತ. ಕಳಿಸಿಕೊಡುವಾಗ ದುಃಖ ಬಂದಿತ್ತು ಅವರಿಗೆ. ಶ್ರೀಧರನಿಗೂ ಅಳು ಬರುವಷ್ಟು ವೇದನೆಯಾಗುತ್ತಿತ್ತು. ಅವರನ್ನು ತಿರುಗಿ ತಿರುಗಿ ನೋಡುತ್ತಾ ಮುಂದೆ ನಡೆದ—

ಕೊನೆಗೊಮ್ಮೆ ತಿರುಗಿ ನೋಡಿದ—

ಕತ್ತಲಿನಲ್ಲಿ ಮುಸಕು ಮುಸಕಾಗಿ ಕಾಣುತ್ತಿದ್ದರು, ವೆಂಕಟೇಶಯ್ಯ—ಲಲಿತ. ಹಿಂಬದಿ ನಿರ್ಮಲವಾದ ಆಕಾಶ ಗೋಚರಿಸುತ್ತಿತ್ತು. ಅಲ್ಲಿ ಅತಿ ದೂರದಲ್ಲಿ ಮಿನುಗುತ್ತಿದ್ದುವು ಎರಡು ತಾರೆಗಳು.

## ೪೩

ಬೆಳಗ್ಗೆ ಬೇಗನೆ ಎದ್ದ. ಹೋಟಲಿನವರಿಗೆ ಬೀಗದ ಕೈಯನ್ನು ಹಿಂದಿರುಗಿಸಿದ. ರೈಲ್ವೆ ಸ್ಟೇಷನ್ನಿನ ಕಡೆ ಹೊರಟ. ಕೂಲಿಯವನೊಬ್ಬ ಬೆಡ್ಡಿಂಗ್ ತರುತ್ತಿದ್ದ.

ಫುಟ್‌ಪಾತಿನ ಮೇಲೆ ಅವಸರದಿಂದ ಹೋಗುವಾಗ ಪರಿಚಯದ ಮುಖವೊಂದು ಎದುರಾಯಿತು.

ಹರಕು ಬಟ್ಟೆ, ಕೊಳಕಾದ ದೇಹ, ಗಡ್ಡ ಬೆಳೆದ ಮುಖ, ಕೆದರಿದ ಕೂದಲು.

"ನರೇಂದ್ರ ! ........"—ಶ್ರೀಧರ ಅಚ್ಚರಿಯಿಂದ ನೋಡಿದ.

"ಶ್ರೀಧರ ರಾ....ಯ....ರು ; ನಮಸ್ಕಾರ ! "

— ಎಂದು ಕೈ ಮುಗಿದ ನರೇಂದ್ರ.

ಅವನ ಬಾಯಿಂದ ಅಕ್ಷರಗಳು ಶಿಥಿಲವಾಗಿ ಹೊರಡುತ್ತಿದ್ದುವು. ಇಷ್ಟರಮಟ್ಟಿನ ಜ್ಞಾಪಕಶಕ್ತಿಯಿರುವವನಿಗೆ ಹುಚ್ಚನೆಂದು ಹೇಳುವವರಿಗೆ ಹುಚ್ಚಿರಬೇಕು.

"ಆರೋಗ್ಯವಾಗಿದ್ದೀಯಾ? "—ಶ್ರೀಧರ ಕೇಳಿದ.

"ನನಗೇನಾಗಿದೆ? "

"ನಿನಗೇನಾಗಿದೆ? ಏನೂ ಆಗಿಲ್ಲ. ಏನಾದರೂ ಆಗಿದ್ದರೆ ಅದು ನಮಗೆ ಆಗಿರಬೇಕು"—ಎಂದುಕೊಂಡ ಶ್ರೀಧರ.

ನರೇಂದ್ರ ಅಲ್ಲಿ ನಿಲ್ಲದೇ ಮುಂದೆ ಹೊರಟು ಹೋಗಿದ್ದ, ಶ್ರೀಧರ ಅವನನ್ನು ಹಿಂಬಾಲಿಸಿ ಹೋದ—

"ಸ್ವಲ್ಪ ನಿಲ್ಲು."

ನರೇಂದ್ರ ನಿಂತುಕೊಂಡ.

ಶ್ರೀಧರನಿಗೆ ಏನು ಹೇಳಬೇಕು? ಏನು ಮಾಡಬೇಕು? ತಿಳಿಯಲಿಲ್ಲ. ಜೇಬಿಗೆ ಕೈ ಹಾಕಿದ. ಬೆಳ್ಳಿಯ ರೂಪಾಯಿಯೊಂದು ಸಿಕ್ಕಿತು. ಅದನ್ನು ತೆಗೆದು ಅವನ ಕೈಮೇಲಿಟ್ಟ.

'ಯಾವ ಪ್ರತಿಮನೋಭಾವವನ್ನೂ ತೋರ್ಪಡಿಸದೇ ನರೇಂದ್ರ ಮತ್ತೆ

ಮುಂದೆ ನಡೆದ.

"ಈ ರೂಪಾಯನ್ನೇನು ಮಾಡುತ್ತಿ ನರೇಂದ್ರ?"

—ಶ್ರೀಧರ ಪುನಃ ಕೇಳಿದ.

"ಹಾ! ತುಂಬು ಬಟ್ಟಲನು, ತಾರಿಲ್ಲಿ ಮತ್ತೊಂದನ್;
ಅದರೊಳಾ ದುರುಳತೆಯ ನೆನಪ ಮುಳುಗಿಪೆನು."

—ನಂರೇಂದ್ರ ಮರೆಯಾಗಿ ಹೋದ. ದೂರದಿಂದಲೇ ಈ ಹಾಡಿನೊಂದಿಗೆ ಅವನ ನಗುವಿನ ಶಬ್ದ ಕೇಳಿಬರುತ್ತಿತ್ತು.

ಹುಚ್ಚನ ಬಾಯಲ್ಲೂ ಉಮರನ ವಾಕ್ಯಗಳು!

ಅವನು ಹುಚ್ಚನಾದರೇನಾಯಿತು? ಹುಚ್ಚು ಹಿಡಿಯದವರಿಗಿಂತಲೂ ಸಂತಸದಿಂದಿದ್ದಾನೆ. ಈ ಪ್ರಪಂಚದ ಬೇನೆ, ಬೇಗೆಗಳಾವುವೂ ಅವನಿಗೀಗ ತಟ್ಟುತ್ತಿಲ್ಲ.

ಸಂಕಟಮಯ ಸಂಸಾರದಲ್ಲಿ ಸುಖ ಸಿಕ್ಕುವುದು ಹುಚ್ಚು ಹಿಡಿದಾಗ! ದುಃಖದಿಂದ ವಿಮುಕ್ತಿ ಹೊಂದಲು ದೇವರು ಕೊಡುವ ವರ ಹುಚ್ಚು!

ಹೌದು! ಈ ಪ್ರಪಂಚದಲ್ಲಿ ಸುಖವಾಗಿರುವವರು ಹುಚ್ಚರು! .... ಹುಚ್ಚರು ಮಾತ್ರ!!

# ೪೪

ಶ್ರೀಧರನ ಬರವನ್ನೇ ನಿರೀಕ್ಷಿಸುತ್ತಿದ್ದ ಹೆಗಡೆಗೆ, ಅವನ ಕಳೆಯಿಲ್ಲದ ಮುಖವನ್ನು ನೋಡಿದೊಡನೆಯೇ ನಿರಾಶೆಯಾಯಿತು.

"ಕಂಪೆನಿ ನಡೆಯುವುದು ಸಾಧ್ಯವೇ ಇಲ್ಲವೇ?"

"ನನಗೆ ಎಳ್ಳಷ್ಟೂ ಭರವಸೆಯಿಲ್ಲ."

"ಮತ್ತೇನು ಮಾಡಬೇಕು?"

"ಬಾಯಿಬಿಟ್ಟು ಹೇಳಬೇಕೇ? ಅದನ್ನು ನನ್ನ ಬಾಯಿಂದಲೇ ಕೇಳಬೇಕೇ?"

"ನಾಲ್ಕು ಒಳ್ಳೆಯ ನಾಟಕಗಳನ್ನು ಆಡಿಸುವ ಯೋಗ್ಯತೆಯೂ ನನಗಿಲ್ಲದೇ ಹೋಯಿತು."

"ಎಂಥೆಂಥವರಿಗೂ ಹೀಗೆ ಆಗುತ್ತಿರುವಾಗ ನಿಮಗೆ ಆಗುವುದು ಆಶ್ಚರ್ಯವಲ್ಲ."

* * * *

ಹೆಗಡೆಯ ಕಂಪೆನಿ ನಿಲ್ಲುವ ಸಮಾಚಾರ ಕೂಡಲೇ ಊರಲ್ಲೆಲ್ಲಾ ಹಬ್ಬಿತು. ಹೆಗಡೆ ಹೇಳದೇ ಕೇಳದೆ ಎಲ್ಲಿ ಓಡಿಹೋಗುವನೋ ಎಂಬ ಸಂಶಯದಿಂದ, ಹಾಲಿನವರು, ಮೊಸರಿನವರು, ಪ್ರೆಸ್ಸಿನವರು, ಸೌದೆಯವರು ತಮ್ಮ ಬಾಕಿಗಾಗಿ ಕಂಪೆನಿ ಮನೆಯೆದುರು "ಝುಂಡ" ಹೊಡೆದರು.

ಹಣ ಕೊಟ್ಟು ಕೊಟ್ಟು ಕೈ ಸೋತುಹೋಯಿತು ಹೆಗಡೆಗೆ. ಲೆಕ್ಕ ಬರೆಯಲೂ ಅವಕಾಶವಿಲ್ಲದಂತೆ ಹಣ ಕರಗಿತು.

"ಈ ಸಾಮಾನುಗಳನ್ನು ಕಟ್ಟಿಕೊಂಡು ನನಗೇನಾಗಬೇಕು. ಈ ದುಃಖದ ಸಂಕೇತವನ್ನೂ ಇಟ್ಟುಕೊಳ್ಳುವ ಮನಸ್ಸಿಲ್ಲ. ಇಲ್ಲೇ ಗಿರಾಕಿಯಾದರೆ ಬಂದಷ್ಟಕ್ಕೆ ಕೊಟ್ಟುಬಿಡುತ್ತೇನೆ."

—ಎಂದ ಹೆಗಡೆ.

ಬಳ್ಳಾರಪ್ಪನವರು ಕಂಪೆನಿಯ ಸಾಮಾನುಗಳನ್ನು ವಹಿಸಿಕೊಳ್ಳಲು ಮುಂದೆ ಬಂದರು.

ಹಳ್ಳಿಯ ನಾಟಕಗಳಿಗೆ ಪರದೆ ಸೀನರಿಗಳನ್ನು ಬಾಡಿಗೆಗೆ ಕೊಟ್ಟು,

ಆ ಉತ್ಪತ್ತಿಯಿಂದ ತಮ್ಮ ಜೀವನವನ್ನು ನಡೆಸುತ್ತಿದ್ದಳು ಬಳ್ಳಾರಪ್ಪ. ಅವರಿಗಿದು ಸುಸಮಯವಾಯಿತು. ಅಗ್ಗಕ್ಕೆ ಸಿಕ್ಕಿದಾಗಲೇ ಹೊಡೆದು ಹಾಕೋಣವೆಂದು ಮುಂದೆ ಬಂದರು.

ದೊರೆಸ್ವಾಮಿಗೆ ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟು.... ಕುರ್ಚಿಯನ್ನೂ ಹಿಂದಿರುಗಿಸಿ, ಸಾಗಿಸಿಕೊಂಡು ಬಂದ ಈ ಪದಾರ್ಥಗಳ ಬೆಲೆ.... ಎರಡೇ ಸಾವಿರವೆಂದು ತೀರ್ಮಾನಿಸಿದ ಬಳ್ಳಾರಪ್ಪ.

ಅಷ್ಟಾದರಷ್ಟೆ. ಕೈಬಿಟ್ಟರೆ ಸಾಕಾಗಿತ್ತು. ಕಂತಿನಮೇಲೆ ಹಣ ತೆಗೆದುಕೊಳ್ಳುವುದಾಗಿ ನಂಬಿಕೆ ಪತ್ರ ಬರೆಸಿಕೊಂಡ ಹೆಗಡೆ

* * * *

ಅಂದು ಸಂತೆ! ಹೆಗಡೆ ಕಂಪೆನಿಯ ಕೊನೆಯ ನಾಟಕ!

ಕಡೆಯ ನಾಟಕವೆಂಬ ಕುತೂಹಲದಿಂದ, ಕನಿಕರದಿಂದ, ಜನ ಹೆಚ್ಚಾಗಿ ಸೇರಿದರು. ನಟರು ದಕ್ಷತೆಯಿಂದ ಕೆಲಸ ಮಾಡಿದರು. ಎಂದಿಗಿಂತಲೂ ಯಶಸ್ವಿಯಾಗಿ ನಡೆಯಿತು ನಾಟಕ,....ನಂದುವ ದೀಪದ ಕೊನೆಯ ಪ್ರಕಾಶದಂತೆ.

ಹೆಗಡೆ ಬೆಳಗಿನಿಂದಲೂ ಉದ್ವಿಗ್ನನಾಗಿದ್ದ. ಇನ್ನೊಂದು ಗಳಿಗೆಯಲ್ಲಿ ನಾಟಕ ಮುಗಿಯುತ್ತದೆ. ತನ್ನ ಕಂಪೆನಿ ಮುಕ್ತಾಯವಾಗುತ್ತದೆ. ತಾನು ನೆಟ್ಟ ಗಿಡ ತನ್ನೆದುರೇ ಬಾಡಿ, ತಾನು ಸಾಕಿದ ಮಗು ಕಣ್ಣೆದುರಿನಲ್ಲೇ ಮರಣ ಸಂಕಟಕ್ಕೀಡಾಗಿದೆ.

ಅದು ಸಾಯುತ್ತಿದೆ. ಅದಕ್ಕೀಗ ಯಾವ ಮದ್ದೂ ನಾಟುವುದಿಲ್ಲ. ಇನ್ನೊಂದು ಕ್ಷಣ!....ಪ್ರಾಣ ಪಕ್ಷಿ ಹಾರಿಹೋಗುತ್ತದೆ.

ಅವನ ಹೃದಯ ಒಡೆಯಿತು. ದುಃಖ ಉಮ್ಮಳಿಸಿ ಬಂತು.

ಮೇಲಕ್ಕೆದ್ದ ಹೆಗಡೆ. ಕೊನೆಯ ದೃಶ್ಯವೊಂದು ಮಾತ್ರ ಉಳಿದಿತ್ತು. ರಂಗಭೂಮಿಯ ಮೇಲೆ ನುಗ್ಗಿದ.

ಏನೋ ಹೇಳಬೇಕು? ಏನೋ ಕೇಳಬೇಕು? ತನ್ನ ಅಂತರಂಗದ ದುಗುಡವನ್ನು ಜನರ ಮುಂದಿಟ್ಟು, ಅವರೆದುರು ಅತ್ತು, ತನ್ನ ಹೃದಯವನ್ನು ಹಗುರಾಗಿಸಿಕೊಳ್ಳಬೇಕು.

ಪ್ರೇಕ್ಷಕರು ಸ್ತಬ್ಧರಾಗಿ ನೋಡಿದರು.

"ಕಲಾಭಿಮಾನಿಗಳೇ! ........"

ಹೆಗಡೆ ಮಾತನಾಡಲು ಬಾಯೆತ್ತಿದ. ಮಾತು ನಿಂತುಹೋಯಿತು. ನಾಲಿಗೆ ತಡೆಯಿತು. ಕಂಠ ಬಿಗಿದು ಬಂತು. ದುಃಖ ಉಮ್ಮಳಿಸಿ ಕಣ್ಣೀರು ಕೋಡಿಯಾಗಿ ಹರಿಯಲಾರಂಭಿಸಿತು.

ಗಭೀರ ಮೌನವಾವರಿಸಿತು ರಂಗಭೂಮಿಯ ಮೇಲೆ.

ಸಿದ್ದಯ್ಯ ಸುಂದರವಾಗಿ ಕಟ್ಟಿದ ಮಲ್ಲಿಗೆಯ ಹಾರವನ್ನು ಹಿಡಿದು, ಪ್ರವೇಶಿಸಿದ. ನಟರ ಪರವಾಗಿ, ಊರಿನವರ ಪರವಾಗಿ, ಹೆಗಡೆಯವರ ಕಲಾಸೇವೆಯನ್ನು ಪ್ರಶಂಸಿಸಿ, ನಾಲ್ಕು ಕೃತಜ್ಞತೆಯ ಮಾತುಗಳನ್ನಾಡಬೇಕೆಂದು ಪ್ರವೇಶಿಸಿದ.

ಅವನಿಗೂ ದಿಕ್ಕು ತೋರಲಿಲ್ಲ.

ಹಾರವನ್ನು ಹಿಡಿದ ಕೈ ನಡುಗಿತು. ಮಾತನಾಡುವ ಬಾಯಿ ತೊದಲಿತು. ಅಳುವಿನ ಮಧ್ಯೆ ಪ್ರಯಾಸದಿಂದ ಎರಡುಮಾತನಾಡಿದ ಕಂಬದಂತೆ ನಿಂತಿದ್ದ ಹೆಗಡೆ ಕಣ್ಣೀರು ಸುರಿಸುತ್ತಾ.

ಅವನ ಕೊರಳಿಗೆ ಮಲ್ಲಿಗೆಯ ಹಾರವನ್ನು ಹಾಕಿದ ಸಿದ್ದಯ್ಯ.

ಕೈಯೆತ್ತಿದರು ಜನ, ಚಪ್ಪಾಳೆ ತಟ್ಟಲಿಕ್ಕಾಗಿ. ಎತ್ತಿದ ಕೈಗಳು ಅಲ್ಲಿಯೇ ನಿಂತುವು.

ಏತಕ್ಕಾಗಿ ಚಪ್ಪಾಳೆ ತಟ್ಟಬೇಕು ?

ತಮ್ಮ ಕಣ್ಣೆದುರು ಕಂಪೆನಿಯೊಂದು ಮುಳುಗುತ್ತಿದೆಯೆಂದೇ ? ರಂಗಭೂಮಿಯ ದೌರ್ಭಾಗ್ಯಕ್ಕಾಗಿ ಸಂತೋಷಪಡುತ್ತಿದ್ದೇವೆಂದೇ ?

ಎತ್ತಿದ ಕೈಗಳು ಕೆಳಗಿಳಿದವು. ದುಃಖದ ಕಣ್ಣುಗಳಲ್ಲಿ ಹನಿ ಮೂಡಿತು.

ಅದೊಂದು ಕ್ಷಣ ಶ್ಮಶಾನ ಶಾಂತಿಯಾವರಿಸಿತು.

ಕೊನೆಯ ದೃಶ್ಯವನ್ನಭಿನಯಿಸುವ ಶಕ್ತಿ ಉಡುಗಿಹೋಗಿತ್ತು ನಾಟಕದವರಿಗೆ. ನೋಡುವ ಉತ್ಸಾಹ ಅಳಿದುಹೋಗಿತ್ತು ಪ್ರೇಕ್ಷಕರಿಗೆ. ಹಿಮ್ಮೇಳದವರು ಕೊನೆಯ ಬಾರಿ ಶ್ರುತಿ ಹಿಡಿದರು.

ಹೆಗಡೆಯ ಕಂಪೆನಿ ಮಂಗಳ ಹಾಡಿತು.

## ೪೫

ಮರುದಿನ........

"ನಾನಿನ್ನು ಹೊರಡುತ್ತೇನೆ"—ಎಂದ ಶ್ರೀಧರ.

"ಹಂಪೆಗೆ ಹೋಗಿಬರೋಣ."

"ಯಾವುದೂ ಬೇಡ. ನನಗಿನ್ನು ಇಲ್ಲಿ ನಿಲ್ಲುವುದೇ ಸಾಧ್ಯವಿಲ್ಲ."

"ಹಂಪೆಯನ್ನು ತೋರಿಸುತ್ತೇನೆಂದು ನಾನು ನಿಮ್ಮನ್ನು ಕರೆದುಕೊಂಡು ಬಂದೆ. ನೀವು ನೋಡಿಯೇ ಹೋಗಬೇಕು."

ಕಾರು ಹಂಪೆಯನ್ನು ತಲುಪಿತು.

* * * *

ಹಂಪೆ! ಹಾಳು ಹಂಪೆ! ಕಾಲು ನಡೆದಲ್ಲೆಲ್ಲಾ ಹಾಳು! ಕಣ್ಣು ಹಾದಲ್ಲೆಲ್ಲಾ ಹಾಳು!

ಪಾಳು ಗುಡಿ! ಮುರುಕು ಮಂಟಪ! ಭಗ್ನ ವಿಗ್ರಹ!

ವಿಜಯನಗರದರಸರ ಅಂದಿನ ವೈಭವವೆಲ್ಲಿ ಹೋಯಿತು? ಕನ್ನಡ ಕುಲರಸಿಕರ ಕಟ್ಟಡಗಳೇನಾಯಿತು ?

ಕಾಲಚಕ್ರದ ಅಡಿಯಲ್ಲಿ ಸಿಕ್ಕಿ, ಭಿನ್ನ ಭಿನ್ನವಾಯಿತು! ನುಚ್ಚು ನೂರಾಯಿತು!

ಕನ್ನಡ ಸಾಮ್ರಾಜ್ಯವಳಿಯಿತು! ಕನ್ನಡ ನಾಡು ಒಡೆಯಿತು! ಕನ್ನಡದ ಸಂಪತ್ತು ನಾಶವಾಯಿತು!

ಇದಕ್ಕಾಗಿ ಕಣ್ಣೀರಿಡಬೇಕೇ ?—ಕೆಚ್ಚಿನಿಂದ ಹೋರಾಡಬೇಕೇ ?

ಹೋರಾಟ! .... ಅದೇ ಜೀವನ !

ನಮ್ಮ ನಾಡು ಒಂದಾಗ ಬೇಕು ! ನಮ್ಮ ನುಡಿ ಬಲಿಯಬೇಕು ! ನಮ್ಮ ಕಲೆ ಬೆಳಗಬೇಕು ! ಕನ್ನಡಮ್ಮನ ಭಾಗ್ಯದ ಬಾವುಟ ಮತ್ತೂ ಮೇಲೇರಬೇಕು !

ವಿರೂಪಾಕ್ಷನೆದುರು ಬಂದು ನಿಂತ ಶ್ರೀಧರ—

ಕತ್ತಲಿನಲ್ಲಿ ಕುಳಿತ ವಿರೂಪಾಕ್ಷನೆದುರು ಉರಿಯುತ್ತಿದ್ದ ಜೋಡು ನಂದಾದೀಪಗಳಲ್ಲಿ ಒಂದು ಕ್ಷೀಣಿಸುತ್ತಿತ್ತು. ಈಗಲೋ ಆಗಲೋ ಆರಿಹೋ

ಗುವಂತೆ ಮಂಕಾಗಿತ್ತು.

ನಾವು ಬಂದಾಗ ನಮ್ಮ ಕಣ್ಣೆದುರೇ ಈ ನಂದಾದೀಪವಾರಬೇಕೇ?

“ದೀಪವನ್ನು ಬೆಳಗಿಸಿ—ಆರಿಹೋಗುತ್ತಿದೆ.”

ಪರಿಚಾರಕ ದೀಪಸ್ತಂಭಕ್ಕೆ ಎಣ್ಣೆಯನ್ನು ಸುರಿದ. ಬತ್ತಿಯನ್ನು ಮುಂದೆ ಮಾಡಿದ. ಮತ್ತೆ ಮೊದಲಿನಂತೆ ಪ್ರಕಾಶಮಾನವಾಗಿ ಉರಿಯ ತೊಡಗಿತು ನಂದಾದೀಪ!

ಕಲಾದೇವಿಯೆದುರಿನ ದಿವ್ಯ ಜ್ಯೋತಿಗಳಲ್ಲೊಂದು ನಮ್ಮ ಕನ್ನಡ ರಂಗಭೂಮಿ. ಅದು ಇಂದು ಕ್ಷೀಣಿಸುತ್ತಿದೆ.

ಪರಿಚಾರಕರು ಎಣ್ಣೆ ಹಾಕಬೇಕು! ಬತ್ತಿ ಮುಂದೆ ಮಾಡಬೇಕು! ಜ್ಯೋತಿಯನ್ನು ಬೆಳಗಿಸಬೇಕು!

ಕನ್ನಡ ರಂಗಭೂಮಿ!—ಮತ್ತೆ ಬೆಳಗೀತು!
ಕನ್ನಡ ಕಲಾಪ್ರತಿಭೆ!—ಸುತ್ತ ಹರಿದೀತು!

ಕನ್ನಡನಾಡಿಗೆ ಜಯವಾಗಲಿ! ಕನ್ನಡ ನುಡಿಗೆ ಜಯವಾಗಲಿ! ಕನ್ನಡದ ಕಲೆಗೆ ಜಯವಾಗಲಿ!

---

# ಪ್ರೇಮ ಪ್ರಕರಣ

ಕ. ಶಂಕರ

ಪುಟ, ೩೦೧ ಬೆಲೆ ರೂ. ೧—೮—೦

This book contains a story and a novel. The story under the caption "Seremaneyalli" has as its background the last Satyagraha movement of the Mysore Congress and it depicts the jail life of a political prisoner.

The novel is named "Prema Prakarana" and it describes the life and love affairs of a few members of a travelling dramatic group.

A reading of the novel gives the impression that the author has first hand knowledge of the activities of the dramatic parties. With his love for and knowledge of dramatic art, he has been able to give an intimate pen picture of some actors and actresses of the Kannada stage.

His style is simple, attractive and quite effective. His description of romantic situations is full of subtle humour.

—The Sunday Standard.

ಶ್ರೀ ಶಂಕರರು ಹೊಸಬರಾದರೂ ಜೀವನವನ್ನು ಸೂಕ್ಷ್ಮವಾಗಿ ನೋಡುವ, ಮಾನವ ಹೃದಯ ಸ್ಪಂದನವನ್ನು ಗುರುತಿಸುವ ಕಲೆಯನ್ನು ಪಳಗಿಸಿಕೊಂಡಿದ್ದಾರೆ. ಒಳ್ಳೆಯ ಮಾತುಗಾರಿಕೆ. ಅದಕ್ಕೆ ಒಪ್ಪುವಂತೆ ಕುಂಟದೆ ಹರಿಯುವ ಶೈಲಿ ಅವರಿಗೆ ದಕ್ಕಿದೆ. ಆದ್ದರಿಂದಲೇ ಈ ಕಾದಂಬರಿಯಲ್ಲಿ ಮುಗ್ಧಪ್ರಣಯಿಯೊಬ್ಬನ ಭಗ್ನಚಿತ್ರವನ್ನವರು ರಸವತ್ತಾಗಿ ಚಿತ್ರಿಸಲು ಸಮರ್ಥರಾಗಿದ್ದಾರೆ.

ನಟಶೇಖರನೆಂದು ಖ್ಯಾತನಾದ ಶೇಖರನೇ ಕಥೆಯ ನಾಯಕ. ಆತ ತನ್ನೊಂದಿಗೆ ಸಹಪಾತ್ರಧಾರಿಯಾಗಿ ದುಡಿಯುತ್ತಿದ್ದ ಸುಮಿತ್ರಳನ್ನು ಜೀವನದ ಸಹಯಾತ್ರಿಯನ್ನಾಗಿ ಮಾಡಿಕೊಳ್ಳಲು ಆಕೆಯೊಡನೆ ನಾಟ್ಯ ರಂಗದಿಂದ ಜೀವನ ರಂಗವನ್ನು ಪ್ರವೇಶಿಸುವನು. ಆದರೆ ಆತನು ಬದುಕಿನಲ್ಲಿ ಜೇನುಣ್ಣುವುದನ್ನು ಕಂಡು ನಾರಾಯಣರಾಯನು ತೂರಿದ ಹಾಲಾಹಲದಿಂದ ಕೋಲಾಹಲವುಂಟಾಗುತ್ತದೆ. ಪ್ರೇಮ ಗಂಗಾಪ್ರವಾಹದಿಂದ ಸುಮಿತ್ರೆ ದಿವ್ಯಸಂಸ್ಕಾರಗಳನ್ನು ಪಡೆಯಬೇಕಿತ್ತಾದರೂ, ನಾಟಕ ಪ್ರಪಂಚದಿಂದ ಕಲಿತ—ಬಲಿತ ನೋಟದಿಂದಲೇ ಆಕೆ ಶೇಖರನನ್ನು ನೋಡ ಬಯಸಿದಳು.

ಹಾಗಿದ್ದರಿಂದಲೇ ಸುಮಿತ್ರೆ ತಮ್ಮ ಪ್ರೇಮಪೂಜೆಯ ಪ್ರಸಾದದಂತಿರುವ ಕೂಸನ್ನೂ ಹಿಡಿದುಕೊಂಡು, ಶೇಖರನಿಂದ ಸಿಡಿದುನಿಂತು, ಬದುಕಿನ ಮಾಧುರ್ಯವನ್ನು ಶೇಖರನಿಗೂ ನೀಡಿಲ್ಲ; ತಾನೂ ಉಂಡಿಲ್ಲ.

ಇಲ್ಲಿ ಚಿತ್ರಿತವಾಗಿರುವ ಎಲ್ಲ ಪಾತ್ರಗಳೂ ಸಜೀವವಾಗಿವೆ. ಸಂದರ್ಭಗಳು ಯಥಾರ್ಥವಾಗಿವೆ. **—ಪ್ರಕಾಶಿನೀ.**

ಪ್ರತಿಭಾವಂತ ಹೊಸಲೇಖಕರೊಬ್ಬರನ್ನು, ಅವರ ಎರಡು ಕೃತಿಗಳನ್ನು ಒಂದು ಪುಸ್ತಕರೂಪದಲ್ಲಿ ಪ್ರಕಟಿಸುವ ಮೂಲಕ ಕಾವ್ಯಾಲಯದವರು ಬೆಳಕಿಗೆ ತಂದಿದ್ದಾರೆ..............ಕತೆಯ ಓಟ ಮತ್ತು ಸನ್ನಿವೇಶ ಚಿತ್ರಣಗಳು ನಿಜಕ್ಕೂ ಸೊಗಸಾಗಿವೆ. "ಸೆರೆಯಮನೆಯಲ್ಲಿ" ಎಂಬುದು ಮೈಸೂರಿನ ರಾಜಕೀಯ ಕೈದಿಗಳ ಸೆರೆಮನೆಯ ವಾಸದ ಒಂದು ಅನುಭವವನ್ನು ವಿವರಿಸುತ್ತದೆ. ಇಲ್ಲಿಯ ಪ್ರಾರಂಭ ಮುಕ್ತಾಯಗಳೆರಡೂ ಚೆನ್ನಾಗಿವೆ.

**—ನವಯುಗ.**

Yes, he has a fine way oi writing a story indeed. —ಪು. ತಿ. ನ.

ಮೊದಲನೆ ಕಥೆಗಿಂತ ಎರಡನೆಯದು ಎಲ್ಲ ದೃಷ್ಟಿಯಿಂದಲೂ ಉತ್ತಮವಾಗಿದೆ. ಆದು ಮೇಲುನೋಟಕ್ಕೆ ಸಿನಿಮಾ ಕಥೆಯಂತೆ ಕಂಡರೂ, ಅನುಭವದ ಆಧಾರದ ಮೇಲೆ ಬರೆದಿರುವುದರಿಂದ ಅದಕ್ಕೆ ಹೆಚ್ಚಿನ ಬೆಲೆಯಿದೆ.

ಈಗ್ಗೆ ಹಲವು ವರ್ಷಗಳ ಕೆಳಗೆ ಶ್ರೀ ಕಾರಂತರು ಬಗೆಬಗೆಯ ಕ್ಷುಬ್ಧ ಜೀವನ ಜೀವಿಸಿ "ಮರಳಿ ಮಣ್ಣಿಗೆ" ಬಂದದ್ದನ್ನು ಇದು ನನಗೆ ಜ್ಞಾಪಕಕ್ಕೆ ತರುತ್ತದೆ. **—ಎ. ಆರ್. ಕೃಷ್ಣಶಾಸ್ತ್ರೀ.**

ಜೈಲಿನ ಕಠೋರ ಜೀವನದ ಹಿನ್ನೆಲೆಯಲ್ಲಿ ನಾರಾಯಣ ಮತ್ತು ಪ್ರೇಮರ ಕರುಣಾಪೂರ್ಣವಾದ ಪ್ರೇಮ ಕಥೆಯನ್ನು 'ಸೆರೆಯ ಮನೆಯಲ್ಲಿ' ಎಂಬ ಕಥೆಯಲ್ಲಿ ಚಿತ್ರಿಸಲಾಗಿದೆ. ಕಥೆ ಆಕರ್ಷಕವಾಗಿಯೂ, ಕುತೂಹಲ ಕರವಾಗಿಯೂ ಪರಿಣಮಿಸಿದೆ ಎಂಬುದು ಖಂಡಿತ. ಸರಳವಾದ ಸಂಭಾಷಣೆ ಹಿತಮಿತವಾದ ನಿರೂಪಣೆ ಈ ಕಥೆಯ ಸೊಗಸನ್ನು ಹೆಚ್ಚಿಸಿವೆ.

ಈ ಕಥೆಯ ('ಪ್ರೇಮಪ್ರಕರಣ'ದ) ಮೂಲಕ ಪ್ರೇಮದ ಒಂದು ಸ್ವರೂಪವನ್ನು ಕಾದಂಬರಿಕಾರರು ಸ್ಪಷ್ಟಪಡಿಸಲು ಪ್ರಯತ್ನಿಸಿದ್ದಾರೆ.

ಹೆಚ್ಚಿನ ದೀರ್ಘವರ್ಣನೆಗಳಿಗೆ ಹೋಗದೆ ಸರಳವಾದ ಸಂವಾದ ವನ್ನು ಬೆರೆಸಿ ಆಕರ್ಷಕವಾದ ಪ್ರೇಮ ಕಥೆಯನ್ನು ತಮ್ಮ ಮೊದಲನೆಯ ಕೃತಿಯಲ್ಲಿಯೇ ನಿರೂಪಿಸಿರುವ ಕಾದಂಬರಿಕಾರರು ಇನ್ನೂ ಉತ್ತಮ ಕೃತಿ ಗಳನ್ನು ನೀಡಬಲ್ಲ ಸಾಮರ್ಥ್ಯವುಳ್ಳವರೆಂದು ಹೇಳಬಹುದು.

**—ಪ್ರಬುದ್ಧ ಕರ್ಣಾಟಕ.**

## **ನೌಕಾಘಾತ**—ರವೀಂದ್ರನಾಥ ಠಾಕೂರ್

(ಅನು: ಎಚ್. ವಿ. ಸಾವಿತ್ರಮ್ಮ.)

ಪುಟಗಳು ೨೩೧ ಬೆಲೆ, ರೂ. ೧—೪—೦

ಇಲ್ಲಿನ ಭಾಷೆ ನಯವಾಗಿದೆ, ಸೊಗಸಾಗಿದೆ. **—ನವಯುಗ.**

ರವೀಂದ್ರರ ಮಹಾವಾಣಿ ಸಾವಿತ್ರಮ್ಮನವರ ಅನುವಾದದಲ್ಲಿ ಚೆನ್ನಾಗಿ ವ್ಯಕ್ತವಾಗಿದೆ. **—ಯುಗಪುರುಷ.**

The translation has been well done in simple enchanting language. **—Sunday Standard.**

....ವಿಶ್ವಕವಿಯ ಗ್ರಂಥವನ್ನು ಅನುವಾದಿಸುವ ಸಾಹಸಕ್ಕೆ ಕೈಹಾಕಿ ಶ್ರೀಮತಿ ಸಾವಿತ್ರಮ್ಮನವರು ಜಯಶೀಲರಾಗಿದ್ದಾರೆಂದರೆ ತಪ್ಪಾಗಲಾರದು. ಅನುವಾದ ಸರಳವಾಗಿ, ಮನೋಹರವಾಗಿದೆ. **—ಕನ್ನಡನುಡಿ.**

ಒಂದರ ಮೇಲೊಂದು ಅನಿರೀಕ್ಷಿತ ಘಟನೆಗಳು ಜರುಗುತ್ತ ಓದುಗರ ಮನಸ್ಸನ್ನ ಸೆರೆಹಿಡಿವ ಶಕ್ತಿಯನ್ನುಳ್ಳದ್ದು ಈ ಕಾದಂಬರಿಯ ವಸ್ತು....ಮುಂದೆ ಏನು ಮುಂದೆ ಏನು ಎಂದು ಓದುಗನ ಕುತೂಹಲ ಕೆರಳುವುದಕ್ಕೆ ಕಥಾ ನಿರೂಪಣೆಯೂ ಸಹಾಯಮಾಡುತ್ತದೆ....ಘಟನಾ ಪರಂಪರೆಗಳ ನಡುವೆ ಜೀವನದ ಸುಳಿಗೆ ಸಿಕ್ಕಿ ಪಾತ್ರಗಳು ನಮ್ಮ ಮನಸ್ಸನ್ನು ಸೂರೆಗೊಳ್ಳುತ್ತವೆ.

ಶ್ರೀಮತಿ ಸಾವಿತ್ರಮ್ಮನವರು ತಮ್ಮ ಇತರ ಕೃತಿಗಳಲ್ಲಿ ಮೆರೆದಿರುವ ಸಹಜ ಸರಳತೆಯನ್ನು ಅನುವಾದದಲ್ಲಿಯೂ ಉಳಿಸಿಕೊಂಡಿದ್ದಾರೆ. ಅನುವಾದ ಮಾಡಿದ ಕೃತಿಯನ್ನು ಓದುತ್ತಿದ್ದೇವೆಂಬ ಭಾವನೆ ಬರದೇ ಸಹಜ ಸ್ವತಂತ್ರ ಕೃತಿಯ ಓಟವಿರುವುದು ಈ ಅನುವಾದದ ಸೊಗಸು.

**—ಪ್ರಬುದ್ಧ ಕರ್ಣಾಟಕ.**

## ಮನೆ–ಜಗತ್ತು–ರವೀಂದ್ರನಾಥ ಠಾಕೂರ್

(ಅನು: ಎಚ್. ವಿ. ಸಾವಿತ್ರಮ್ಮ)

ಪುಟಗಳು ೨೫೦ ಬೆಲೆ, ೧–೮–೦

'ಮನೆ–ಜಗತ್ತು' ಕಾದಂಬರಿಯಲ್ಲಿ ದಿ. ರವೀಂದ್ರನಾಥ ಠಾಕೂರರು ಅತ್ಯಂತ ಶಕ್ತಿಯುತವಾದ ರೀತಿಯಲ್ಲಿ ಕಥೆ ಹೇಳಿದ್ದಾರೆ....ಒಂದು ಸಂಸಾರದ ಜೀವನ ಕಥೆ ಇದರಲ್ಲಿರುವಂತೆ ಸಾಮಾಜಿಕ, ರಾಜಕೀಯ ವಿಷಯಗಳ ಚರ್ಚೆಯೂ ಇದರಲ್ಲಿದೆ. ಅನುವಾದವು ಚೆನ್ನಾಗಿದೆ. **—ಕರ್ಮವೀರ.**

ಕವಿಯ ಅದ್ಭುತ ಪ್ರತಿಭೆ ಸಾಸಿರ ಮುಖವಾಗಿ ಹೊರಹೊಮ್ಮಿದೆ ಈ ಕೃತಿಯಲ್ಲಿ. ವರ್ಣನೆ ದಿಗ್ದಿಗಂತಗಳನ್ನು ಮೀರಿ, ಮನದಾಳವನ್ನೆಲ್ಲ ಕಲಕಿ, ಭಾವ ಸಂಪತ್ತನ್ನೇ ತಂದೊಡ್ಡಿದೆ. ದಿವ್ಯದೀಪ್ತಿಯನ್ನು ಮೆರೆದಾಡಿ, ಓದುಗನ ಮೇಲೆ ಪ್ರಭಾವೀ ಪರಿಣಾಮವನ್ನುಂಟು ಮಾಡುತ್ತದೆ. ಸ್ವದೇಶೀ ಚಳುವಳಿಯ ಹಿನ್ನೆಲೆಯಲ್ಲಿ....ಉಜ್ವಲ ಕೃತಿಯನ್ನು ರಚಿಸಿದ್ದಾರೆ.

ವಿನೂತನ ಕಥನ ಕ್ರಮ ಇದರ ಹೆಗ್ಗಳಿಕೆ....ಇದರಲ್ಲಿ ಚರ್ಚಿತವಾಗಿರುವ ನಾನಾ ವಿಷಯಗಳಲ್ಲಿನ ಪ್ರಖರತೆ, ಸೂಕ್ಷ್ಮಪ್ರಭೇದ, ನಿಶಿತ ವಿಚಾರ ಲಹರಿ, ಇವುಗಳ ಸೊಗಸು ಓದಿ ಅನುಭವಿಸಬೇಕು.

....ಇಲ್ಲಿಯ ಕನ್ನಡ ಎಷ್ಟು ಸುಂದರವಾಗಿ, ಭಾವಬಂಧುರವಾಗಿ, ಹೃದಯ ಮಿಡಿಯುವಂತೆ, ಕವಿಗೆ ನ್ಯಾಯ ಸಲ್ಲುವೋಪಾದಿಯಲ್ಲಿ ಗ್ರಂಥದುದ್ದಕ್ಕೂ ಹರಿದು ಬಂದಿದೆ....ಕವಿ ರವೀಂದ್ರರ ಕೃತಿಯ ಓಜಸ್ಸನ್ನು ಕನ್ನಡದಲ್ಲಿ ಹಿಡಿದು ಹಾಕುವುದು ಸಾಮಾನ್ಯ ಕೆಲಸವಲ್ಲ. ಇದನ್ನು ಶ್ರೀಮತಿ ಸಾವಿತ್ರಮ್ಮನವರು ಹತ್ತು ಜನ ಮೆಚ್ಚುವಂತೆ ಒಪ್ಪವಾಗಿ ಮಾಡಿದ್ದಾರೆ....

....ಈ ಕಾದಂಬರಿ ವಾಚಕರಿಗೆ ಒಂದು ರಸದೂಟ. —**ಜನಪ್ರಗತಿ**

ಅರ್ಥದಿಂದ ಗಂಭೀರವೂ ರಸದಿಂದ ಮಧುರವೂ ಆದ ರವೀಂದ್ರಬಾಬುಗಳ ಉಜ್ವಲ ಕಾವ್ಯ ಶೈಲಿಯೆ ಕಾದಂಬರಿಯ ಜೀವಾಳ. ಶ್ರೀಮತಿಯವರು ಮೂಲದ ಸೊಗಸನ್ನು ಎಲ್ಲಿಯೂ ಕೆಡಿಸದೆ ಹಿತವಾಗಿ ಅನುವಾದಿಸಿದ್ದು ಶ್ಲಾಘ್ಯವಾಗಿದೆ. —**ಪ್ರಕಾಶಿನೀ**

ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರು....ಉತ್ತಮ ಸಾಹಿತ್ಯವನ್ನು ಕನ್ನಡ ಜನತೆಗೆ ನೀಡಿದ್ದಾರೆ. —**ರಾಷ್ಟ್ರಮತ**

ವಿಷಯ ಜಿಜ್ಞಾಸೆಯನ್ನು ನಿರೂಪಿಸುವಲ್ಲಿ ಎಚ್. ವಿ. ಸಾವಿತ್ರಮ್ಮನವರು ಯಶಸ್ವಿಯಾಗಿದ್ದಾರೆ. —**ರಾಯಭಾರಿ**

ಎಲ್ಲರೂ ಸುಲಭದಲ್ಲಿ ಓದಬಹುದಾದ ಸರಳ ಭಾಷೆಯನ್ನು ಅನುವಾದಕಿಯರು ಬಳಸಿದ್ದರೂ ಮೂಲದ ಸ್ವಾರಸ್ಯ ಎಳ್ಳಷ್ಟೂ ಕೆಟ್ಟಿಲ್ಲದಿರುವುದು ಸಮಾಧಾನಕರವಾದ ವಿಷಯ. ವಸ್ತು, ತಂತ್ರ ಮತ್ತು ನಿರೂಪಣೆಯ ಕ್ಷೇತ್ರದಲ್ಲಿ ಹೊಸ ಪ್ರಯೋಗವೆನಿಸಬಹುದಾದ ಈ ಕಾದಂಬರಿಯನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಪ್ರಕಾಶಕರ ಉತ್ಸಾಹ ಅಭಿನಂದನೀಯ.

—**ನವಯುಗ**

## **ಮೂಲಾನಕ್ಷತ್ರ**-ಶೇಷನಾರಾಯಣ

**ಪುಟಗಳು ೨೩೧** ಬೆಲೆ, ರೂ. ೧-೪-೦

## **ಗಂಗಾವತಾರ**-ಜನಾರ್ದನ ಗುರ್ಕಾರ್

**ರೂ. ೧-೪-೦** (ಬರಲಿದೆ)

## ವಿನೋದಿನಿ (ಕಣ್ಣು ಬೇನೆ) - ರವೀಂದ್ರನಾಥ ಠಾಕೂರ್

ಪುಟಗಳು ೩೩೧ (ಅನುವಾದಕ: ಎ. ಶಂಕರ್) ಬೆಲೆ ೧-೮-೦

ಈ ಕತೆಯನ್ನು ಕಟ್ಟಿರುವ ರೀತಿ ಚೆನ್ನಾಗಿದೆ....ಕತೆಯ ಆರಂಭದಲ್ಲಿ ಬಂಕಿಮ ಚಂದ್ರರ ವಿಷವೃಕ್ಷದ ನೆನಪು ಬರುತ್ತದೆ;....ಆದರೆ ಕತೆ ಮುಂದೆ ತನ್ನದೇ ಆದ ದಾರಿಯನ್ನು ಅನುಸರಿಸುತ್ತದೆ; ಕತೆಯ ಒಂದು ವಿಶೇಷ ಗುಣ ಅದು ಬಹುಮಟ್ಟಿಗೆ ಸಂಭಾಷಣೆಯಲ್ಲಿ ಕಾಣುವುದು. ಕತೆಗಿಂತ ಹೆಚ್ಚಾಗಿ ನಾಟಕವೆಂಬಂತೆ ಇದರಲ್ಲಿ ಸಂಭಾಷಣೆ ಬೆಳೆದಿದೆ....ಕತೆಯ ಸಂಗತಿ ನಮ್ಮ ಮನಸ್ಸನ್ನು ಪಟ್ಟಾಗಿ ಹಿಡಿಯುತ್ತದೆ. ಕಥನ ಸರಾಗವಾಗಿ ಸಹಜವಾಗಿ ಸಾಗುತ್ತದೆ....ಬಾಳ ಹಾಸ್ಯವೂ ಮುದ್ದಾಗಿ ರೂಪುಗೊಳ್ಳುತ್ತದೆ....ಎಲ್ಲ ಪಾತ್ರಗಳೂ ಕತೆಯಲ್ಲಿ ಸ್ಫುಟವಾದ ಆಕಾರದಿಂದ ಕಾಣುತ್ತವೆ.

— ಮಾಸ್ತಿ ವೆಂಕಟೇಶ ಅಯ್ಯಂಗಾರ್

## ಗೋರಾ--ರವೀಂದ್ರನಾಥ ಠಾಕೂರ್

(ಅನು: ಎಚ್ ವಿ. ಸಾವಿತ್ರಮ್ಮ)

ರವೀಂದ್ರನಾಥ ಠಾಕೂರರ ಕಾದಂಬರಿಗಳಲ್ಲೆಲ್ಲಾ ದೊಡ್ಡದು ಮತ್ತು ಬಹು ಪ್ರಸಿದ್ಧವಾದದ್ದು.

ದೊಡ್ಡ ಆಕಾರದ ೪೧೬ ಪುಟಗಳು ರೂ. ೨-೪-೦

## ಮಮತೆಯ ಸುಳಿ— ಶ್ರೀನಿವಾಸರಾವ್ ಕೊರಟಿ

ಪುಟಗಳು ೨೨೦ ಬೆಲೆ, ರೂ. ೧-೪-೦